ವಿಶ್ವವಾಣಿ
ವಿಶ್ವಾಸವೇ ವಿಶ್ವ

ಚಾಮುಂಡಿ ದರ್ಶನಕ್ಕೆ ಭಕ್ತರ ಪ್ರವಾಹ

ಗುರುವಾರ ಹೊಸ ವರ್ಷಾಚರಣೆ ನಿಮಿತ್ತ ಮೈಸೂರಿನ ಚಾಮುಂಡಿ ದೇವಸ್ಥಾನಕ್ಕೆ ಭಕ್ತರ ಪ್ರವಾಹವೇ ಹರಿದುಬಂದಿತ್ತು. ಎಲ್ಲ ಕಡೆ ಜನರು ತುಂಬಿಕೊಂಡು ಕಾಲಿಡಲು ಸಾಧ್ಯವಿಲ್ಲದ ಪರಿಸ್ಥಿತಿ ನಿರ್ಮಾಣವಾಗಿದೆ. ಸಾವಿರಾರು ಮಂದಿಗೆ ದೇವಿಗೆ ಪೂಜೆ ಸಲ್ಲಿಸಿ, ಹೊಸವರ್ಷವನ್ನು ಸ್ವಾಗತಿಸಿದರು.

ನಮಗೆ ಮನೆ ಕೊಡಿ ಎಂದು ನಿರ್ವಸಿತರಿಂದ ಹೈಕೋರ್ಟ್‌ಗೆ ಅರ್ಜಿ
ಅಕ್ರಮ ನಿವಾಸಿಗಳಿಗೆ ಮನೆ ಕೊಟ್ಟರೆ ಕೋರ್ಟ್‌ಗೆ: ಬಿಜೆಪಿ ಎಚ್ಚರಿಕೆ
ತೆರವಾಗಿರುವುದು 167 ಮನೆ, ಅರ್ಜಿ 250 ಮನೆಗೆ: ಹಲವು ಶಂಕೆ

ಕೋಗಿಲು ಕೂಗು ಕೋರ್ಟ್‌ಗೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಕೋಗಿಲು ಬಡಾವಣೆ ನಿರಾಶ್ರಿತರಿಗೆ ಸೂರು ನೀಡಿಯೇ ಸೈ ಎಂದಿರುವ ಸರಕಾರದ ಕ್ರಮಕ್ಕೆ ಸಡ್ಡು ಹೊಡೆದಿರುವ ಬಿಜೆಪಿ, ಮನೆ ನೀಡಿದರೆ ರಾಜ್ಯಪಾಲರು ಹಾಗೂ ನ್ಯಾಯಾಲಯದ ಮೆಟ್ಟಿಲೇರಲು ಮುಂದಾಗಿದೆ. ಈ ನಡುವೆ ಜಿಬಿಎ ಅಧಿಕಾರಿಗಳು ತೆರವುಗೊಳಿಸಿದ್ದ 167 ಮನೆಗಳಾದರೂ, 250ಕ್ಕೂ ಹೆಚ್ಚು ಅರ್ಜಿ ಬಂದಿರುವುದು ಹಲವು ಅನುಮಾನಗಳಿಗೆ ಕಾರಣವಾಗಿದೆ.

ತೀವ್ರ ವಿರೋಧದ ನಡುವೆ ನಿರಾಶ್ರಿತರಿಗೆ ರಾಜ್ಯ ಸರಕಾರ ಪರ್ಯಾಯ ವ್ಯವಸ್ಥೆ ಮಾಡಲು ತೀರ್ಮಾನಿಸಿತ್ತು. ಅರ್ಹರು ಸೂಕ್ತ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಲು ಸರಕಾರ ಸೂಚನೆ ನೀಡಿತ್ತು. ಇದೀಗ ತೆರವಾಗಿರುವುದು 167 ಮನೆಗಳಾದರೂ 250ಕ್ಕೂ ಹೆಚ್ಚು ಮಂದಿ ಅರ್ಜಿ ಸಲ್ಲಿಸಿದ್ದಾರೆ ಎನ್ನುವ ವಿಷಯ ಬಹಿರಂಗವಾಗಿದೆ. ತೆರವಾಗಿರುವ ಒಂದೇ ಮನೆಯ ವಿಳಾಸದಿಂದ ಇಬ್ಬರು, ಮೂವರು ಮನೆಗಾಗಿ ಅರ್ಜಿ ಸಲ್ಲಿಸಿರುವ ಪ್ರಕರಣಗಳು ಬೆಳಕಿಗೆ ಬಂದಿವೆ. ಇದಿಷ್ಟೇ ಅಲ್ಲದೇ, ಕೋಗಿಲು ಲೇಔಟ್‌ನ ನಿವಾಸಿಗಳೇ ಅಲ್ಲದವರೂ ಮನೆಗಾಗಿ ಅರ್ಜಿ ಹಾಕಿರುವುದಾಗಿ ಬೆಳಕಿಗೆ ಬಂದಿದೆ.

ಈ ಹಿಂದೆ ಜಮೀರ್ ಅಹ್ಮದ್ ಅವರು ಶುಕ್ರವಾರ ಮನೆಗಳನ್ನು ಅರ್ಹರಿಗೆ ವಿತರಿಸುವುದಾಗಿ ಹೇಳಿದ್ದರು. ಆದರೆ ದಾಖಲೆಗಳಲ್ಲಿನ ಗೊಂದಲ ನಿವಾರಣೆಯಾಗದಿರುವುದರಿಂದ ಮತ್ತೆ ಮುಂದಕ್ಕೆ ಹೋಗುವ ಸಾಧ್ಯತೆಯಿದೆ ಎನ್ನಲಾಗಿದೆ. ಮನೆ ಹಂಚಿಕೆ ಸಂಬಂಧ ಅಧಿಕಾರಿಗಳು ಕನ್ನಡಿಗರು ಹಾಗೂ ಪರಭಾಷಿಕರು ಎಂಬ ಎರಡು ಪ್ರತ್ಯೇಕ ಪಟ್ಟಿಗಳನ್ನು ಸಿದ್ಧಪಡಿಸಿದ್ದಾರೆ. ಎಲ್ಲಾ ಅರ್ಜಿಗಳ ಪರಿಶೀಲನೆ ಮುಗಿದ ನಂತರ ವಸತಿ ಇಲಾಖೆ ಮನೆ ಹಂಚಿಕೆ ಕುರಿತ ಅಂತಿಮ ಪಟ್ಟಿಯನ್ನು ಪ್ರಕಟಿಸಲಿದೆ ಎಂದು ಮೂಲಗಳು ತಿಳಿಸಿವೆ.

ರಾಜ್ಯಪಾಲರಿಗೆ ದೂರು: ನಿರಾಶ್ರಿತರಲ್ಲಿ ಬಾಂಗ್ಲಾದೇಶದ ಮೂಲದವರು ಎಂದು ಆರೋಪಿಸಿರುವ ಬಿಜೆಪಿ ನಾಯಕರು, ಕೇರಳಕ್ಕಿಂತ ಬಿಹಾರ ಹಾಗೂ ಪಶ್ಚಿಮ ಬಂಗಾಳದ ಅಲ್ಪಸಂಖ್ಯಾತರೇ ಹೆಚ್ಚಿರುವುದು ತಿಳಿದು ಬಂದಿದೆ. → 4



ಮನೆ–ಗುಡಿಸಲುಗಳ ನೆಲಸಮ ಕುರಿತ ಸತ್ಯಾಸತ್ಯತೆ ತಿಳಿಯಲು ರಾಜ್ಯ ಬಿಜೆಪಿ ರಚಿಸಿರುವ ಸತ್ಯಶೋಧನಾ ತಂಡ ಸಭೆ ನಡೆಸಿತು. ಸಭೆಯಲ್ಲಿ ಶಾಸಕ ಎಸ್.ಆರ್.ವಿಶ್ವನಾಥ್, ವಿಧಾನ ಪರಿಷತ್ತಿನ ಸದಸ್ಯ ಕೆ.ಎಸ್.ನವೀನ್, ಪಕ್ಷದ ತಮ್ಮೇಶ್ ಗೌಡ, ನಿವೃತ್ತ ಐಪಿಎಸ್ ಅಧಿಕಾರಿ ಭಾಸ್ಕರ್ ರಾವ್, ಎಸ್.ಹರೀಶ್ ಭಾಗವಹಿಸಿದ್ದರು.

ಬಾಂಗ್ಲಾದೇಶದವರು ಹೇಗೆ ಬೆಂಗಳೂರಿನಲ್ಲಿ ಇರಲು ಸಾಧ್ಯ? ಹಾಗೇನಾದರೂ ಅವರು ಬಾಂಗ್ಲಾದೇಶದವರಾಗಿದ್ದರೆ ಸಾಬೀತುಪಡಿಸಲಿ. ಅದನ್ನು ಬಿಟ್ಟು ಬಾಯಿಗೆ ಬಂದಂತೆ ಮಾತನಾಡಬಾರದು. ಉರ್ದು ಮಾತನಾಡುವವರಿಗೂ ಮನೆ ಕೊಡಲ್ಲ. ಆಧಾರ್ ಕಾರ್ಡ್, ಬಿಪಿಎಲ್ ಕಾರ್ಡ್, ವೋಟರ್ ಐಡಿ ಇರಬೇಕು. ಎಲ್ಲಾ ದಾಖಲೆಗಳು ಇದ್ದರೆ ಮಾತ್ರ ಅವರಿಗೆ ಮನೆ ಕೊಡುತ್ತೇವೆ.

–ಜಮೀರ್ ಅಹ್ಮದ್, ವಸತಿ ಸಚಿವ

ಬೆಂಗಳೂರು ನಗರ ಜಿಲ್ಲಾಧಿಕಾರಿಯಿಂದ ನಮಗೆ ಪಟ್ಟಿ ಬರಬೇಕಾಗಿದೆ. ಆ ಬಳಿಕವೇ ಪರಿಶೀಲಿಸಿ ನಾವು ಮನೆಗಳ ಹಂಚಿಕೆಪತ್ರ ನೀಡಬೇಕು ಎಂದು ತಿಳಿಸಲಾಗಿದೆ.

–ಪರಶುರಾಮ್ ಶಿನ್ನಾಳ್ಕರ್, ರಾಜೀವ್ ಗಾಂಧಿ ವಸತಿ ನಿಗಮದ ಎಂಡಿ

ಇದುವರೆಗೆ ನಡೆದಿದ್ದು

- ಕೋಗಿಲು ಲೇಔಟ್‌ನ ಅಕ್ರಮ ಒತ್ತುವರಿದಾರರನ್ನು ತೆರವುಗೊಳಿಸಿದ್ದ ಜಿಬಿಎ ಅಧಿಕಾರಿಗಳು
- ಅರ್ಹರಿಗೆ ಮನೆ ನೀಡಲು ನಿರ್ಧಾರ, ದಾಖಲೆಗಳಲ್ಲಿ ಗೊಂದಲ: ಹಂಚಿಕೆ ವಿಳಂಬ ಸಾಧ್ಯತೆ
- ಸತ್ಯಶೋಧನಾ ಸಮಿತಿ ರಚಿಸಿದ ಬಿಜೆಪಿ, ಯಲಹಂಕ ಶಾಸಕ ವಿಶ್ವನಾಥ್ ನೇತೃತ್ವದಲ್ಲಿ ವರದಿ
- ಮನೆ ಕಳೆದುಕೊಂಡವರು ಬಾಂಗ್ಲಾದವರೆಂದು ಸಾಬೀತುಪಡಿಸಿ: ಸಚಿವ ಜಮೀರ್ ಸವಾಲು
- ಕೇರಳ ಸಿಎಂ ಟ್ವೀಟಿಂದ ಶುರುವಾದ ವಿವಾದ, ಈಗ ಇನ್ನಷ್ಟು ಜಟಿಲ, ಪ್ರಕರಣವೇ ಗೋಜಲು

ಕ್ರಾನ್ಸ್ ಮೊಂಟಾನಾದ ರೆಸಾರ್ಟ್‌ನಲ್ಲಿ ಹೊಸ ವರ್ಷಾಚರಣೆ ವೇಳೆ ಘಟನೆ
ಅನಾಹುತಕ್ಕೆ ಕಾರಣ, ಸತ್ತವರ ಅಧಿಕೃತ ಸಂಖ್ಯೆ ಅಸ್ಪಷ್ಟ | ಹಲವು ರೀತಿ ತನಿಖೆ

ಸ್ವಿಸ್‌ನಲ್ಲಿ ಬೆಂಕಿ ದುರಂತ: 40 ಮಂದಿ ದುರ್ಮರಣ

ಲೆನ್ಸ್ (ಸ್ವಿಜರ್ಲೆಂಡ್): ಹೊಸವರ್ಷದ ಮೊದಲ ದಿನವೇ ಇಡೀ ಸ್ವಿಜರ್ಲೆಂಡ್ ಆಘಾತಕ್ಕೊಳಗಾಗಿದೆ. ಆಲ್ಪ್ಸ್ ಪರ್ವತಶ್ರೇಣಿ ಯಲ್ಲಿ ಬರುವ ಕ್ರಾನ್ಸ್ ಮೊಂಟಾನಾ ಪಟ್ಟಣದಲ್ಲಿರುವ ಸ್ಕೀ ರೆಸಾರ್ಟ್ ಲೇ ಕಾನ್‌ಸ್ಟೆಲ್ಲೇಶನ್ ಎಂಬ ಬಾರ್‌ನಲ್ಲಿ ಭಾರತೀಯ ಕಾಲಮಾನ ಗುರುವಾರ ಮುಂಜಾನೆ 6 ಗಂಟೆಗೆ ಬೆಂಕಿ ದುರಂತ ಸಂಭವಿಸಿ 40 ಮಂದಿ ಸಾವನ್ನಪ್ಪಿದ್ದಾರೆ. 100ಕ್ಕೂ ಅಧಿಕ ಮಂದಿ ಗಾಯಗೊಂಡಿದ್ದಾರೆ. ಆದರೆ ಸಾವಿನ ಸಂಖ್ಯೆ ಇನ್ನೂ ಅಧಿಕೃತಗೊಂಡಿಲ್ಲ. ಕೆಲವು ಮೂಲಗಳು 12ಕ್ಕೂ ಅಧಿಕ ಸಾವು ಸಂಭವಿಸಿದೆ ಎಂದಿವೆ. ಅನಾಹುತಕ್ಕೆ ಕಾರಣವೂ ಖಚಿತವಾಗಿ ತಿಳಿದಿಲ್ಲ. ರೆಸಾರ್ಟ್‌ನೊಳಕ್ಕೆ ಯಾರೋ ಕೆಲವರು ಪಟಾಕಿ ಸಿಡಿಸಿದ್ದೇ ದುರಂತಕ್ಕೆ ಕಾರಣವಿರಬಹುದು ಎಂದು ಊಹಿಸಲಾಗಿದೆ.

ಇದು ಭಯೋತ್ಪಾದಕ ಕೃತ್ಯ ಅಲ್ಲವೆಂದು ಪೊಲೀಸ್ ಮೂಲಗಳು ಹೇಳಿದ್ದರೂ, ಅಧಿಕೃತ ಕಾರಣ ಇನ್ನೂ ಸ್ಪಷ್ಟವಾಗಿಲ್ಲದೇ ಇರುವುದರಿಂದ ಎಲ್ಲ ಕೋನಗಳಲ್ಲಿ ತನಿಖೆ ನಡೆಯುತ್ತಿದೆ. ಸ್ಫೋಟದ ನಂತರ ಪೊಲೀಸರು ಮತ್ತು ತುರ್ತು ಸೇವಾ ತಂಡಗಳು ಸ್ಥಳಕ್ಕೆ ಆಗಮಿಸಿ ರಕ್ಷಣಾ ಕಾರ್ಯಾಚರಣೆಯನ್ನು ಪ್ರಾರಂಭಿಸಿದವು. ಗಾಯಾಳುಗಳನ್ನು ಹತ್ತಿರದ ಆಸ್ಪತ್ರೆಗಳಿಗೆ ದಾಖಲಿಸಲಾಗಿದೆ ಮತ್ತು ಭದ್ರತಾ ಕಾರಣಗಳಿಗಾಗಿ ಇಡೀ ಪ್ರದೇಶವನ್ನು ಸುತ್ತುವರಿದಿದ್ದು, ತನಿಖೆ ನಡೆಯುತ್ತಿದೆ. ಪೊಲೀಸರ ಪ್ರಕಾರ, ರೆಸಾರ್ಟ್‌ನಲ್ಲಿ ಹೊಸ ವರ್ಷದ ಮುನ್ನಾದಿನದ ಪಾರ್ಟಿಗಳು ನಡೆಯುತ್ತಿರುವಾಗ ಸ್ಫೋಟ ಸಂಭವಿಸಿದೆ. ಬೆಳಗಿನ ಜಾವ 1:30ರ ಸುಮಾರಿಗೆ ಜನರು ಸಂಭ್ರಮಾಚರಣೆಯಲ್ಲಿ ಮುಳುಗಿದ್ದಾಗ ಸ್ಫೋಟ ಸಂಭವಿಸಿದೆ. ಸ್ಥಳೀಯ ಮಾಧ್ಯಮಗಳ ಪ್ರಕಾರ, ಬಾರ್ ಇರುವ ಕಟ್ಟಡವು ಅಗ್ನಿಗೆ ಆಹುತಿಯಾಗಿದೆ. ಈ ಘಟನೆಯ ನಂತರ, ಪೊಲೀಸರು ಇಡೀ ಪ್ರದೇಶವನ್ನು ಸೀಲ್ ಮಾಡಿದ್ದಾರೆ ಮತ್ತು ರೆಸಾರ್ಟ್‌ನಲ್ಲಿ ಬೆಂಕಿ ಹೇಗೆ ಪ್ರಾರಂಭವಾಯಿತು ಎಂಬುದರ ಕುರಿತು ತನಿಖೆ ನಡೆಸುತ್ತಿದ್ದಾರೆ. ಬಾರ್‌ನಲ್ಲಿ ಬೆಂಕಿ ಕಾಣಿಸಿಕೊಂಡ ಕಾರಣ, ಅಲ್ಲಿ ಏನೋ ಸಂಭವಿಸಿದೆ ಎಂದು ನಂಬಲಾಗಿದೆ.

ಕ್ರಾನ್ಸ್ ಮೊಂಟಾನಾ ಯಾಕೆ ಜನಪ್ರಿಯ?

ಈ ಘಟನೆ ನಡೆದ ಪ್ರದೇಶವಾದ ಕ್ರಾನ್ಸ್ ಮೊಂಟಾನಾ, ಸ್ವಿಜರ್ಲೆಂಡ್‌ನ ಪ್ರಸಿದ್ಧ ಮತ್ತು ಅತ್ಯಂತ ಐಷಾರಾಮಿ ಗಿರಿಧಾಮವಾಗಿದೆ. ದೇಶದ ನೈಋತ್ಯ ಭಾಗದಲ್ಲಿರುವ ವಲಾಯಿಸ್ ಕ್ಯಾಂಟನ್‌ನಲ್ಲಿರುವ ಕ್ರಾನ್ಸ್ ಮೊಂಟಾನಾ, ಅದರ ಸ್ಕೀ ರೆಸಾರ್ಟ್‌ಗಳು, ಸುಂದರವಾದ ದೃಶ್ಯಾವಳಿಗಳು ಮತ್ತು ಉನ್ನತ ಮಟ್ಟದ ಜೀವನಶೈಲಿಗೆ ವಿಶೇಷವಾಗಿ ಹೆಸರುವಾಸಿಯಾಗಿದೆ. ಕ್ರಾನ್ಸ್ ಮೊಂಟಾನಾ ಸಮುದ್ರಮಟ್ಟದಿಂದ ಸುಮಾರು 1,500 ಮೀಟರ್ ಎತ್ತರದಲ್ಲಿದೆ ಮತ್ತು ಆಲ್ಪ್ಸ್ ಪರ್ವತ ಶ್ರೇಣಿಯ ಅದ್ಭುತ ನೋಟಗಳನ್ನು ನೀಡುತ್ತದೆ. ಚಳಿಗಾಲದಲ್ಲಿ, ಇದು ಸ್ಕೀಯಿಂಗ್, ಸ್ನೋಬೋರ್ಡಿಂಗ್ ಮತ್ತು ಇತರ ಚಳಿಗಾಲದ ಕ್ರೀಡೆಗಳಿಗಾಗಿ ಪ್ರಪಂಚದಾದ್ಯಂತದ ಪ್ರವಾಸಿಗರನ್ನು ಆಕರ್ಷಿಸುತ್ತದೆ. ಬ್ರಿಟಿಷರು ಅತಿಹೆಚ್ಚು ಪ್ರಮಾಣದಲ್ಲಿ ವಾಸವಾಗಿದ್ದಾರೆ.

ಏನಾಯ್ತು? ಹೇಗಾಯ್ತು?

- ಸ್ವಿಜರ್ಲೆಂಡ್‌ನ ಆಲ್ಪ್ಸ್ ಪರ್ವತಶ್ರೇಣಿಯಲ್ಲಿ ಬರುವ ಕ್ರಾನ್ಸ್ ಮೊಂಟಾನಾದಲ್ಲಿನ ಲೇ ಕಾನ್‌ಸ್ಟೆಲ್ಲೇಶನ್ ಬಾರ್‌ನಲ್ಲಿ ದುರಂತ
- ಭಾರತೀಯ ಕಾಲಮಾನ ಗುರುವಾರ ಬೆಳಗ್ಗೆ 6ರ ಸುಮಾರಿಗೆ ಹೊತ್ತಿ ಉರಿದ ಬಾರ್, 100ಕ್ಕೂ ಅಧಿಕ ಮಂದಿಗೆ ತೀವ್ರ ಗಾಯ
- ಘಟನೆಗೆ ಉಗ್ರಕೃತ್ಯವೇ, ಪಟಾಕಿ ಸಿಡಿದಿದ್ದು ಕಾರಣವೇ? ಖಚಿತವಿಲ್ಲ. ಕಾರಣ ಪತ್ತೆಗೆ ತನಿಖೆ, ಸತ್ತವರನ್ನು ಗುರ್ತಿಸಲು ಪರದಾಟ

ಸೊಂಪಾದ ಪುಟಗಳು

ಪೇಟೆಯ ಬದುಕಿಗೆ ಜೀನ್ಸ್ ಬದಲಿಸಿಕೊಂಡ ಶಿಕಾಗೋ ಗಿಡುಗ
ಶಿಶಿರಕಾಲ
ಶಿಶಿರ್ ಹೆಗಡೆ 6

ಆಂಗ್ಲರು ಇದಕ್ಕೆ ಇಟ್ಟಿದ್ದಾರೆ ಆಕರ್ಷಕ ಹೆಸರು!
ಶಶಾಂಕಣ
ಶಶಿಧರ ಹಾಲಾಡಿ 7

ದಾರಿದೀಪೋಕ್ತಿ



ವ್ಯವಹಾರದಲ್ಲಿ ಯಶಸ್ಸು ಎನ್ನುವುದು ಕೇವಲ ಅದೃಷ್ಟವಲ್ಲ, ಅದು ನಿರಂತರ ಪರಿಶ್ರಮ ಮತ್ತು ಸೋಲಿನಿಂದ ಕಲಿಯುವ ಹಠದ ಫಲ. ಸಣ್ಣದಾಗಿ ಆರಂಭಿಸಿದರೂ ಪರವಾಗಿಲ್ಲ, ಆದರೆ ನಿಮ್ಮ ಗುರಿ ಆಕಾಶದಷ್ಟಿರಲಿ. ಬದಲಾವಣೆಗೆ ಹೊಂದಿಕೊಳ್ಳುವ ಮತ್ತು ಗ್ರಾಹಕರ ನಂಬಿಕೆ ಗಳಿಸುವ ಉದ್ಯಮಿ ಎಂದಿಗೂ ಸೋಲಲಾರ.

ವಕ್ರತುಂಡೋಕ್ತಿ

ಕೆಲಸ ಮಾಡುವುದನ್ನು ತಪ್ಪಿಸಿಕೊಳ್ಳಲು ಎಲ್ಲರೂ ಸೇರಿ ಮಾಡುವ ಒಂದು ಸೀರಿಯಸ್ ಪ್ಲಾನ್‌ಗೆ ಮೀಟಿಂಗ್ ಎನ್ನಬಹುದು.

ಪಿಕಪ್ ಟೈರ್ ಸಿಡಿತ: ಮೂವರು ಸಾವು

ಹಾಸನ: ಬೊಲೆರೋ ಪಿಕಪ್ ಟೈರ್ ಸ್ಫೋಟಗೊಂಡ ಪರಿಣಾಮ ವಾಹನ ಪಲ್ಟಿಯಾಗಿದ್ದು, ಸ್ಥಳದಲ್ಲೇ ಮೂವರು ಸಾವನ್ನಪ್ಪಿದ ಘಟನೆ ಅರಸೀಕೆರೆಯ ಚಿಕ್ಕಾರಹಳ್ಳಿ ಗೋಶಾಲೆ ಬಳಿ ಗುರುವಾರ ನಡೆದಿದೆ. ಕಡೂರು ತಾಲೂಕಿನ ತಂಗ್ಲಿ ಗ್ರಾಮದ ಶಬ್ಬೀರ್ (55), ತಿಮ್ಮಣ್ಣ (53), ಸಂಜಯ್ (45) ಮೃತರು. ಹಸಿ ಅಡಿಕೆ ಸಾಗಿಸುತ್ತಿದ್ದ ವೇಳೆ ಟೈರ್ ಆಗಿದೆ. ಸ್ಥಳಕ್ಕೆ ಬಾಣಾವರ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಹಿಂಡಲಗಾ ಜೈಲೊಳಗೆ ಡ್ರಗ್ಸ್, ಮೊಬೈಲ್ ಎಸೆದ ಮುಸುಕುಧಾರಿ ವ್ಯಕ್ತಿ

ಬೆಳಗಾವಿ: ಹಿಂಡಲಗಾ ಕೇಂದ್ರ ಕಾರಾಗೃಹ ಅವಾಂತರಗಳು ಮುಂದುವರೆದಿವೆ. ಕಳೆದ ಕೆಲ ದಿನಗಳ ಹಿಂದೆಯಷ್ಟೇ ನಾಲ್ಕು ಮೊಬೈಲ್ ಹಾಗೂ ಗಾಂಜಾ ವಶಪಡಿಸಿಕೊಂಡ ಪ್ರಕರಣ ಬೆನ್ನಲ್ಲೇ ಜೈಲಿನ ಹೊರಗಿನಿಂದ ಒಳಾಂಗಣಕ್ಕೆ ಮೊಬೈಲ್ ಹಾಗೂ ಡ್ರಗ್ಸ್ ಎಸೆದಿರುವ ಘಟನೆ ಬೆಳಕಿಗೆ ಬಂದಿದ್ದು ಸಿಸಿಟಿವಿ ದೃಶ್ಯಗಳು ವೈರಲ್ ಆಗಿವೆ. ನಗರದ ಹೊರವಲಯದಲ್ಲಿರುವ ಹಿಂಡಲಗಾ ಕೇಂದ್ರ ಕಾರಾಗೃಹದ ಹೊರಗಿನಿಂದ ಮುಸುಕುಧಾರಿ ವ್ಯಕ್ತಿ ಮೊಬೈಲ್ ಹಾಗೂ ಡ್ರಗ್ಸ್ ಎಸೆದಿರುವ ದೃಶ್ಯಗಳು ಸಿಸಿಟಿವಿಯಲ್ಲಿ ಸೆರೆಯಾಗಿವೆ. ಮೂರಕ್ಕೂ ಅಧಿಕ ಸ್ಥಳದಲ್ಲಿ ಈ ರೀತಿಯಲ್ಲಿ ಹೊರಗಿನಿಂದ ವಸ್ತುಗಳನ್ನು ಎಸೆಯಲಾಗಿದ್ದು ಭದ್ರತಾ ಸಿಬ್ಬಂದಿಗಳ ನಿರ್ಲಕ್ಷ್ಯ ಎದ್ದು ಕಾಣುತ್ತಿದೆ. ಪ್ರಕರಣ ಬೆಳಕಿಗೆ ಬರುತ್ತಿದ್ದಂತೆ ಗುರುವಾರ ಮಧ್ಯಾಹ್ನ ನಗರ ಪೊಲೀಸ್ ಆಯುಕ್ತ ಭೂಷಣ್ ಗುಲಾಬರಾವ್ ಬೋರಸೆ ಕೇಂದ್ರ ಕಾರಾಗೃಹಕ್ಕೆ ಭೇಟಿ ನೀಡಿದರು.

ಫೆ.1ರಿಂದ ಪ್ರತಿ ಸಿಗರೆಟ್ ಬೆಲೆ 3 ರುಪಾಯಿ ಹೆಚ್ಚಳ

ನವದೆಹಲಿ: ಫೆಬ್ರವರಿ 1ರಿಂದ ತಂಬಾಕು ಉತ್ಪನ್ನಗಳ ಮೇಲೆ ಶೇ.22ರಿಂದ ಶೇ.28ರವರೆಗೆ ಹೆಚ್ಚುವರಿ ಅಬಕಾರಿ ಸುಂಕ ಮತ್ತು ಪಾನ್ ಮಸಾಲಾ ಮೇಲೆ ಹೊಸ ಸೆಸ್ ವಿಧಿಸಲಾಗುವುದು ಎಂದು ಕೇಂದ್ರ ಸರಕಾರ ಅಧಿಸೂಚನೆ ಹೊರಡಿಸಿದೆ. ಈಗಾಗಲೇ ಅನಾರೋಗ್ಯಕಾರಿ ಉತ್ಪನ್ನಗಳು ಎಂಬ ಕಾರಣಕ್ಕೆ ತಂಬಾಕು ಉತ್ಪನ್ನಗಳ ಮೇಲೆ ಶೇ.40 ಜಿಎಸ್‌ಟಿ ಇದೆ. ಹೊಸ ಸೆಸ್‌ನಿಂದ ಪ್ರತಿ ಸಿಗರೆಟ್ ಬೆಲೆ 3 ರು. ಹೆಚ್ಚಳವಾಗುವ ನಿರೀಕ್ಷೆಯಿದೆ. ಅರ್ಥಾತ್ 1000 ಸಿಗರೆಟ್‌ಗಳಿಗೆ ಅವುಗಳ ಉದ್ದದ ಆಧಾರದ ಮೇಲೆ 2050 ರು.ನಿಂದ 8500 ರು. ಬೆಲೆ ಹೆಚ್ಚಾಗಲಿದೆ. 75 ಎಂಎಂನಿಂದ 85 ಎಂಎಂವರೆಗಿನ ಉದ್ದದ ಸಿಗರೆಟ್‌ಗಳಿಗೆ ಈ ಬೆಲೆ ಅನ್ವಯವಾಗಲಿದೆ. ಈ ಏರಿಕೆಯಿಂದ ದೇಶದ 10 ಕೋಟಿ ಧೂಮಪಾನಿಗಳು ಹೆಚ್ಚಿನ ಬೆಲೆ ತೆರಬೇಕಾಗುತ್ತದೆ.

19 ಕೆಜಿ ತೂಕದ ಸಿಲಿಂಡರ್ ಬೆಲೆ 111 ರುಪಾಯಿ ಏರಿಕೆ

ದೆಹಲಿ: 2026ರ ಹೊಸ ವರ್ಷದ ಆರಂಭದಲ್ಲೇ ಎಲ್‌ಪಿಜಿ ಗ್ರಾಹಕರಿಗೆ ಆಘಾತಕಾರಿ ಸುದ್ದಿ ಸಿಕ್ಕಿದೆ. ತೈಲ ಕಂಪನಿಗಳು ವಾಣಿಜ್ಯ ಎಲ್‌ಪಿಜಿ 19 ಕೆಜಿ ವಾಣಿಜ್ಯ ಸಿಲಿಂಡರ್‌ಗಳ ಬೆಲೆಯನ್ನು 111 ರು. ಹೆಚ್ಚಿಸಿವೆ. ಪರಿಣಾಮ ದೇಶಾದ್ಯಂತ ಹೋಟೆಲ್‌ಗಳಲ್ಲಿ ಬೆಲೆಯೇರಿಕೆಯಾಗುವ ಸಾಧ್ಯತೆಯಿದೆ. ಪ್ರಸ್ತುತ ಬೆಂಗಳೂರಿನಲ್ಲಿ 1753 ರು.ಗೆ ಮುಟ್ಟಿದೆ ಅರ್ಥಾತ್ ಕರ್ನಾಟಕ ರಾಜಧಾನಿಯಲ್ಲಿ 99.50 ರು. ಏರಿಕೆಯಾಗಿದೆ. ದೆಹಲಿಯಿಂದ ಹೈದರಾಬಾದ್‌ವರೆಗಿನ ಎಲ್ಲಾ ಪ್ರಮುಖ ನಗರಗಳಲ್ಲಿ ಈ ಹೆಚ್ಚಿದ ಬೆಲೆಗಳು ಜಾರಿಗೆ ಬಂದಿವೆ. ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ಹಿಂದೆ 1,580.50 ರು. ಇದ್ದ ಸಿಲಿಂಡರ್‌ನ ಬೆಲೆ ಇಂದಿನಿಂದ 1691.50 ರು.ಗೆ ತಲುಪಿದೆ. ಆದರೆ ಗೃಹಬಳಕೆಯ 14 ಕೆಜಿ ಸಿಲಿಂಡರ್ ಬೆಲೆಯಲ್ಲಿ ಯಾವುದೇ ವ್ಯತ್ಯಾಸವಾಗಿಲ್ಲ.

ಬಾಂಗ್ಲಾ: ಹಿಂದೂ ವ್ಯಕ್ತಿಗೆ ಪೆಟ್ರೋಲ್ ಸುರಿದು ಬೆಂಕಿ

ಢಾಕಾ: ಬಾಂಗ್ಲಾದೇಶದಲ್ಲಿ ಹಿಂದೂಗಳ ಮೇಲೆ 2 ವಾರಗಳಲ್ಲಿ 4ನೇ ದಾಳಿಯ ವರದಿಯಾಗಿದೆ. ಉದ್ಯಮಿ ಖೋಕನ್ ಚಂದ್ರ ದಾಸ್ (50) ಎಂಬವರು ಪವಾಡ ಸದೃಶವಾಗಿ ಜೀವ ಉಳಿಸಿಕೊಂಡಿದ್ದಾರೆ. ಶರಿಯತ್‌ಪುರ ಜಿಲ್ಲೆಯ ಪ್ರದೇಶವೊಂದರಲ್ಲಿ ಫಾರ್ಮಸಿ ಮುಚ್ಚಿ ಬುಧವಾರ ರಾತ್ರಿ 9 ಗಂಟೆ ಸುಮಾರಿಗೆ ಮನೆ ಕಡೆ ಬರುತ್ತಿದ್ದ ಖೋಕನ್ ಮೇಲೆ ಕಿಡಿಗೇಡಿಗಳು ಮಾರಣಾಂತಿಕ ಹಲ್ಲೆ ಮಾಡಿದ್ದಾರೆ. ಹಲವು ಬಾರಿ ಹೊಟ್ಟೆಗೆ ಇರಿದು, ಪೆಟ್ರೋಲ್ ಹಾಕಿ ಬೆಂಕಿ ಹಚ್ಚಿದ್ದಾರೆ. ಅದೃಷ್ಟವಶಾತ್ ಪಕ್ಕದಲ್ಲೇ ಇದ್ದ ನೀರಿದ್ದ ಹಳ್ಳವೊಂದಕ್ಕೆ ಜಿಗಿದ ಖೋಕನ್ ಪ್ರಾಣ ಉಳಿಸಿಕೊಂಡಿದ್ದಾರೆ. ನಂತರ ಕೆಲ ಸ್ಥಳೀಯರು ರಕ್ಷಿಸಿ ಆಸ್ಪತ್ರೆಗೆ ದಾಖಲಿಸಿದ್ದಾರೆ. ಖೋಕನ್ ಪರಿಸ್ಥಿತಿ ತುಂಬಾ ಗಂಭೀರವಾಗಿದ್ದು ಢಾಕಾ ವೈದ್ಯಕೀಯ ಕಾಲೇಜು ಆಸ್ಪತ್ರೆಗೆ ಚಿಕಿತ್ಸೆ ಪಡೆಯುತ್ತಿದ್ದಾರೆ. ನಮಗೆ ನ್ಯಾಯ ಬೇಕು ಎಂದು ಪತ್ನಿ ಆಗ್ರಹಿಸಿದ್ದಾರೆ.

ಅಕ್ರಮ ಗಣಿಗಾರಿಕೆ ಬಂಡೆ ಸ್ಫೋಟ: 4 ಚಿರತೆ ಸಾವು

ಬೆಂಗಳೂರು: ಅಕ್ರಮ ಗಣಿಗಾರಿಕೆಗೆ ಬಂಡೆಗಳನ್ನು ಸ್ಫೋಟಿಸಿದ ಪರಿಣಾಮ ನಾಲ್ಕು ಚಿರತೆಗಳು ಸಾವನ್ನಪ್ಪಿರುವ ಘಟನೆ ಯಶವಂತಪುರ ಕ್ಷೇತ್ರದ ಚಿಕ್ಕನಹಳ್ಳಿಯಲ್ಲಿ ನಡೆದಿದೆ. ಚಿಕ್ಕನಹಳ್ಳಿ ವ್ಯಾಪ್ತಿಯಲ್ಲಿ ಅವ್ಯಾಹತವಾಗಿ ಅಕ್ರಮ ಗಣಿಗಾರಿಕೆ ನಡೆಸುತ್ತಿರುವ ಆರೋಪ ಕೇಳಿ ಬಂದಿದ್ದು, ಬಂಡೆಗಳನ್ನು ಸ್ಫೋಟಿಸಿದ ಪರಿಣಾಮ ನಾಲ್ಕು ಚಿರತೆಗಳು ಸಾವನ್ನಪ್ಪಿವೆ ಎಂದು ಶಾಸಕ ಎಸ್.ಟಿ.ಸೋಮಶೇಖರ್ ಅವರು ಆರೋಪಿಸಿದ್ದಾರೆ. ಈ ಸಂಬಂಧ ನಗರದಲ್ಲಿ ಶಾಸಕ ಸೋಮಶೇಖರ್ ಮಾತನಾಡಿ, ಕೆಂಗೇರಿ ಹೋಬಳಿಯ ಚಿಕ್ಕನಹಳ್ಳಿ ಸೇರಿ ಸುತ್ತಲಿನ ಗ್ರಾಮಗಳ ಹಲವು ಸರ್ವೆ ನಂಬರ್‌ಗಳಲ್ಲಿ ಅಕ್ರಮವಾಗಿ ಕಲ್ಲುಗಳ ಕ್ರಷರ್ ನಡೆಯುತ್ತಿದ್ದು, ಬಂಡೆ ಒಡೆಯಲು ಸಿಡಿಮದ್ದುಗಳ ಬಳಕೆ ಮಾಡುತ್ತಿದ್ದಾರೆ. ಇದರಿಂದ ಗ್ರಾಮಸ್ಥರಿಗೆ ತೊಂದರೆ ಆಗಿದೆ. ಸರಕಾರ ಕ್ರಮ ವಹಿಸದಿದ್ದರೆ ಹೋರಾಟ ಮಾಡಲಾಗುತ್ತದೆ ಎಂದು ಎಚ್ಚರಿಕೆ ನೀಡಿದ್ದಾರೆ.

ಶಿಕ್ಷಣಕ್ಷೇತ್ರದಲ್ಲಿ ಮಹತ್ವದ ಪರಿವರ್ತನೆ ಮಾಡಿದ್ದ ಸಾಧಕ

ನಿಟ್ಟೆ ಶಿಕ್ಷಣ ಸಂಸ್ಥೆ ಸಂಸ್ಥಾಪಕ ವಿನಯ್ ಹೆಗ್ಡೆ ವಿಧಿವಶ

ಮಂಗಳೂರು: ನಿಟ್ಟೆ ಸಮೂಹ ಶಿಕ್ಷಣ ಸಂಸ್ಥೆಗಳ ಸಂಸ್ಥಾಪಕ, ಕೆ.ಎಸ್.ಹೆಗ್ಡೆ ಹಾಸ್ಪಿಟಲ್ ವ್ಯವಸ್ಥಾಪಕ ನಿರ್ದೇಶಕ ಎನ್.ವಿನಯ್ ಹೆಗ್ಡೆ (86) ಸೋಮವಾರ ಮಂಗಳೂರಿನ ಕದ್ರಿಯ ಶಿವಭಾಗ್ ನಿವಾಸದಲ್ಲಿ ನಿಧನರಾಗಿದ್ದಾರೆ. ಉಡುಪಿ ಜಿಲ್ಲೆಯ ಕಾರ್ಕಳ ತಾಲೂಕಿನ ನಿಟ್ಟೆ ಮೂಲದ ವಿನಯ್ ಹೆಗ್ಡೆ ಅವರು ಕಳೆದ ಕೆಲವು ದಿನಗಳಿಂದ ವಯೋಸಹಜ ಕಾಯಿಲೆಗಳಿಂದ ಬಳಲುತ್ತಿದ್ದರು. ಅವರು ಸುಪ್ರೀಂಕೋರ್ಟ್ ನಿವೃತ್ತ ನ್ಯಾಯಮೂರ್ತಿ ಕೆ.ಎಸ್.ಹೆಗ್ಡೆ ಅವರ ದ್ವಿತೀಯ ಪುತ್ರ ಮತ್ತು ನಿವೃತ್ತ ಲೋಕಾಯುಕ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ ಸಹೋದರರಾಗಿದ್ದಾರೆ.

ವಿನಯ್ ಹೆಗ್ಡೆ ಅವರು ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರದಲ್ಲಿ ಕ್ರಾಂತಿಕಾರಿ ಬದಲಾವಣೆ ತಂದಿದ್ದರು. ಗ್ರಾಮೀಣ ಪ್ರದೇಶವಾಗಿದ್ದ ನಿಟ್ಟೆಯನ್ನು ಅಂತಾರಾಷ್ಟ್ರೀಯ ಮಟ್ಟದ ಶೈಕ್ಷಣಿಕ ಕೇಂದ್ರವಾಗಿ ಪರಿವರ್ತಿಸಿದ ಶಿಕ್ಷಣ ತಜ್ಞರಾಗಿ ದ್ದಾರೆ. ನಿಟ್ಟೆ ಯೂನಿವರ್ಸಿಟಿ ರೂವಾರಿಯಾ ಗಿದ್ದರು. ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರದಲ್ಲಿ ಮಹತ್ವದ ಬೆಳವಣಿಗೆಗೆ ಕಾರಣವಾಗಿದ್ದರು. ಗ್ರಾಮೀಣ ಪ್ರದೇಶದಲ್ಲಿರುವ ನಿಟ್ಟೆ ಸಂಸ್ಥೆಯನ್ನು ಅಂತಾರಾಷ್ಟ್ರೀಯ ಮಟ್ಟದ ಶೈಕ್ಷಣಿಕ ಕೇಂದ್ರವಾಗಿ ಪರಿವರ್ತಿಸಿದ ಶಿಕ್ಷಣ ತಜ್ಞ ವಿನಯ್ ಹೆಗ್ಡೆ ಅವರಾಗಿದ್ದಾರೆ. ನಿಟ್ಟೆ ಎಂಜಿನಿಯರಿಂಗ್ ಕಾಲೇಜು ಸೇರಿದಂತೆ ಅನೇಕ ಶಿಕ್ಷಣ ಸಂಸ್ಥೆಗಳನ್ನು ವಿನಯ ಹೆಗ್ಡೆ ಮುನ್ನಡೆಸುತ್ತಿದ್ದರು. ವಿನಯ್ ಹೆಗ್ಡೆ ಅವರು ನಿಟ್ಟೆ ಡೀಮ್ಡ್ ಯೂನಿವರ್ಸಿಟಿಯ ಚಾನ್ಸಲರ್ (ಕುಲಾಧಿಪತಿ) ಕೂಡ ಆಗಿದ್ದರು. ಬೆಂಗಳೂರು, ಉಡುಪಿ ಸೇರಿದಂತೆ ವಿವಿಧೆಡೆ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ ವಿದ್ಯಾದಾನ ಮಾಡುತ್ತಿದ್ದರು.

3 ದಿನದಲ್ಲಿ ಅಬಕಾರಿ ಇಲಾಖೆಗೆ 587 ಕೋಟಿ ರು. ಆದಾಯ

3 ವರ್ಷಗಳಲ್ಲೇ ಗರಿಷ್ಠ ಮದ್ಯ ಮಾರಾಟ

ಬೆಂಗಳೂರು: ಹೊಸ ವರ್ಷ 2026ರ ಸ್ವಾಗತದ ಅಬ್ಬರದಲ್ಲಿ ಕರ್ನಾಟಕದ ಮದ್ಯಪ್ರಿಯರು ಹಳೆಯ ಎಲ್ಲಾ ದಾಖಲೆಗಳನ್ನು ಅಳಿಸಿ ಹಾಕಿದ್ದಾರೆ. ಕಳೆದ ಮೂರು ವರ್ಷಗಳಲ್ಲೇ ಈ ಬಾರಿ ಅತಿ ಹೆಚ್ಚು ಮದ್ಯ ಮಾರಾಟವಾಗಿದ್ದು, ಮೂರು ದಿನಗಳಲ್ಲಿ ಎಂಎಸ್‌ಐಎಲ್‌ನಲ್ಲಿ ರಾಜ್ಯ ಅಬಕಾರಿ ಇಲಾಖೆಯ ಖಜಾನೆಗೆ ಬರೋಬ್ಬರಿ 587.51 ಕೋಟಿ ರು. ಹರಿದುಬಂದಿದ್ದು, ಇಡೀ ವರ್ಷ 745.84 ಕೋಟಿ ರು. ಆದಾಯ ಗಳಿಸಿದೆ.

ಡಿಸೆಂಬರ್ 29ರಿಂದ 31ರವರೆಗಿನ ಕೇವಲ ಮೂರು ದಿನಗಳಲ್ಲಿ ರಾಜ್ಯಾದ್ಯಂತ ಮದ್ಯದ ಹೊಳೆ ಹರಿದಿದೆ. ಎಂಎಸ್‌ಐಎಲ್‌ನಲ್ಲಿಯೇ ಈ ಅವಧಿಯಲ್ಲಿ ಒಟ್ಟು 9.84 ಲಕ್ಷ ಬಾಕ್ಸ್ ಐಎಂಎಲ್ ಮತ್ತು 6.64 ಲಕ್ಷ ಬಾಕ್ಸ್ ಬಿಯರ್ ಮಾರಾಟವಾಗುವ ಮೂಲಕ ಇಲಾಖೆಯ ನಿರೀಕ್ಷೆಯನ್ನು ಮೀರಿಸಿದೆ. → 4

ವರ್ಷ	ಐಎಂಎಲ್ (ಲಕ್ಷ ಬಾಕ್ಸ್)	ಬಿಯರ್ (ಲಕ್ಷ ಬಾಕ್ಸ್)	ಒಟ್ಟು ಆದಾಯ (ಕೋಟಿ ರು.)
2023	9.44	6.16	499.55
2024	8.25	5.03	540.86
2025	9.84	6.64	745.84

ಮೂರು ದಿನಗಳ ಮಾರಾಟದ ಅಂಕಿ

ಡಿ.29: 122.32 ಕೋಟಿ ರು.
ಡಿ.30: 261.09 ಕೋಟಿ ರು.
ಡಿ.31: 204.10 ಕೋಟಿ ರು.
ಒಟ್ಟು: 587.51 ಕೋಟಿ ರು.

ಮನೆ ಮುಂದೆ ವಾಲ್ಮೀಕಿ ಬ್ಯಾನರ್ ಹಾಕದಂತೆ ತಡೆದ ರೆಡ್ಡಿ ಆಪ್ತರು
ಸಿಟ್ಟಾದ ಗುಂಪು, ಗುಂಡು ಹಾರಿಸಿದ ಜನಾರ್ದನ್ ಗನ್‌ಮ್ಯಾನ್

ರೆಡ್ಡಿ ಮನೆಯೆದುರು ಫೈರಿಂಗ್, ವ್ಯಕ್ತಿ ಬಲಿ

ಬಳ್ಳಾರಿ: ಕೊಪ್ಪಳ ಶಾಸಕ ಗಾಲಿ ಜನಾರ್ದನ ರೆಡ್ಡಿ ಮನೆ ಮುಂದೆ ಬ್ಯಾನರ್ ವಿಚಾರಕ್ಕೆ ಗಲಾಟೆ ನಡೆದು ಕಲ್ಲು ತೂರಾಟ ನಡೆದಿದೆ. ಜನವರಿ 3ರಂದು ವಾಲ್ಮೀಕಿ ಪುತ್ಥಳಿ ಅನಾವರಣ ಕಾರ್ಯಕ್ರಮದ ಹಿನ್ನೆಲೆಯಲ್ಲಿ ಬಳ್ಳಾರಿಯ ಹವಂಬಾವಿ ನಗರದಲ್ಲಿರುವ ಜನಾರ್ದನ ರೆಡ್ಡಿ ಮನೆ ಮುಂಭಾಗ ಬ್ಯಾನರ್ ಅಳವಡಿಕೆ ಮಾಡಲು ಒಂದು ಗುಂಪು ಗುರುವಾರ ಮುಂದಾಗಿತ್ತು. ಬ್ಯಾನರ್ ಹಾಕದಂತೆ ರೆಡ್ಡಿ ಅಪ್ತರು ಅಡ್ಡಿಪಡಿಸಿದ್ದಾರೆ. ಈ ವೇಳೆ ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾಗಿದ್ದರಿಂದ ರೆಡ್ಡಿ ಗನ್‌ಮ್ಯಾನ್ ಗುಂಡು ಹಾರಿಸಿದ್ದಾರೆ. ಕಾಂಗ್ರೆಸ್ ಕಾರ್ಯಕರ್ತ ಬಲಿಯಾಗಿದ್ದಾರೆ.

ಬ್ಯಾನರ್ ಕಟ್ಟುವುದಕ್ಕೆ ರೆಡ್ಡಿ ಆಪ್ತರು ಅಡ್ಡಿಪಡಿಸಿದ ವೇಳೆ ಮಾತಿನ ಚಕಮಕಿ ನಡೆದು ಪರಸ್ಪರ ಕಲ್ಲು ತೂರಿದ್ದಾರೆ. ಉದ್ವಿಗ್ನ ವಾತಾವರಣ ನಿರ್ಮಾಣವಾದ ಬೆನ್ನಲ್ಲೇ ಸ್ಥಳಕ್ಕೆ ಮಾಜಿ ಸಚಿವ ಶ್ರೀರಾಮುಲು ಆಗಮಿಸಿದ್ದಾರೆ. ಕಾಂಗ್ರೆಸ್ ಶಾಸಕ ನಾರಾ ಭರತ್ ರೆಡ್ಡಿ ಆಪ್ತ ಸತೀಶ್ ರೆಡ್ಡಿ ಕೂಡಾ ಘಟನಾ ಸ್ಥಳಕ್ಕೆ ಬಂದಿದ್ದಾರೆ. ಎರಡೂ ಕಡೆ ನಾಯಕರು ಜಮಾವಣೆಯಾದ ಕೂಡಲೇ ತಳ್ಳಾಟ, ನೂಕಾಟ ನಡೆದಿದೆ. ಗಲಾಟೆ ವೇಳೆ ಶ್ರೀರಾಮುಲು ಅವರನ್ನು ಗುಂಪು ತಳ್ಳಿದೆ. ಗಲಾಟೆಯಾಗುತ್ತಿದ್ದಂತೆ ಸ್ಥಳಕ್ಕೆ ಆಗಮಿಸಿದ ಪೊಲೀಸರು ಲಾಠಿ ಪ್ರಹಾರ ಮಾಡಿ ಪರಿಸ್ಥಿತಿ ನಿಯಂತ್ರಣ ಮಾಡಿದ್ದಾರೆ. ಜನಾರ್ದನ ರೆಡ್ಡಿ ಮನೆ ಮುಂದೆ ಬಿಜೆಪಿ ಕಾರ್ಯಕರ್ತರು, ಮುಖಂಡರು, ಜಮಾಯಿಸಿದ್ದರು.

ವಾಣಿಜ್ಯ ಕಂಪನಿಗಳ ಸಮಾಜ ಕಲ್ಯಾಣ ನಿಧಿ ರಾಜ್ಯದಲ್ಲೇ ಬಳಕೆಯಾಗುವಂತೆ ಮಾಡಲು ಸಿಎಂ ಸಭೆ
ಕೇಂದ್ರ ಸರಕಾರಕ್ಕೆ ಸಡ್ಡು? ರಾಜ್ಯದ ಸರಕಾರಿ ಶಾಲೆಗಳ ಅಭಿವೃದ್ಧಿಗೆ ಸಿಎಸ್‌ಆರ್ ನಿಧಿ ಬಳಸಲು ಚಿಂತನೆ

ಇಂದು ಸಿಎಸ್‌ಆರ್ ನಿಧಿ ನೀತಿ ನಿರ್ಧಾರ?

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ವಾಣಿಜ್ಯ ಕಂಪನಿಗಳು ಸಾಮಾಜಿಕ ಕಾರ್ಯಗಳಿಗಾಗಿ ಎತ್ತಿಡುವ ಸಿಎಸ್‌ಆರ್ ಅನುದಾನವನ್ನು ಬಳಸಿಕೊಂಡು ಸರಕಾರಿ ಶಾಲೆಗಳ ಅಭಿವೃದ್ಧಿಗೆ ಮುಂದಾಗಿದ್ದ ಸರಕಾರ ಇದೀಗ ಇದಕ್ಕಾಗಿ ಪ್ರತ್ಯೇಕ ನೀತಿಯನ್ನೇ ತರುವ ಲೆಕ್ಕಾಚಾರದಲ್ಲಿದೆ. ಸಮುದಾಯ ಮತ್ತು ಕಾರ್ಪೋರೆಟ್ ಸಾಮಾಜಿಕ ಹೊಣೆಗಾರಿಕೆ (ಸಿಎಸ್‌ಆರ್)ನಲ್ಲಿ ಸರಕಾರಿ ಶಾಲೆಗಳ ಅಭಿವೃದ್ಧಿ ಹಾಗೂ ಕೆಪಿಎಸ್ ಶಾಲೆಗಳನ್ನು ನಿರ್ಮಿಸುವುದಾಗಿ ಸರಕಾರ ಘೋಷಿಸಿತ್ತು. ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಖಾಸಗಿ ಸಂಸ್ಥೆಗಳೊಂದಿಗೆ ಚರ್ಚಿಸಿ ಸಿಎಸ್‌ಆರ್ ಅನುದಾನ ಹಂಚಿಕೆಗೆ ಮುಂದಾಗಿದ್ದರು. ಆದರೆ ಶಾಲೆಗಳ ಅಭಿವೃದ್ಧಿಗೆ ನಿರೀಕ್ಷಿತ ಪ್ರಮಾಣದಲ್ಲಿ ಸಿಎಸ್‌ಆರ್‌ನಿಂದ ನಿಧಿ ಬಾರದಿರುವುದರಿಂದ ಇದೀಗ ಸಿಎಸ್‌ಆರ್ ನೀತಿಯನ್ನು ಜಾರಿಗೊಳಿಸಲು ಮುಂದಾಗಿದೆ.

ಶುಕ್ರವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ನಡೆಯಲಿರುವ ಸಚಿವ ಸಂಪುಟ ಸಭೆಯಲ್ಲಿ ಈ ನೀತಿಗೆ ಅನುಮೋದನೆ ಸಿಗುವ ಸಾಧ್ಯತೆಯಿದೆ. ಈ ನೀತಿಯಲ್ಲಿ ಪ್ರಮುಖವಾಗಿ ಕರ್ನಾಟಕದಲ್ಲಿರುವ ಉದ್ಯಮಿಗಳ ಸಿಎಸ್‌ಆರ್ ಅನುದಾನವನ್ನು ಸರಕಾರಿ ಶಾಲೆಗಳ ಅಭಿವೃದ್ಧಿಗೆ ಬಳಸಿಕೊಳ್ಳಬೇಕು. ಇತರೆ ರಾಜ್ಯಗಳಿಗೆ ಈ ನಿಧಿ ಬಳಕೆಯಾಗದ ರೀತಿಯಲ್ಲಿ ನಿರ್ಬಂಧ ವಿಧಿಸಲು ಚಿಂತಿಸಲಾಗಿದೆ. ಇಲ್ಲವೇ ಕಡ್ಡಾಯವಾಗಿ ಇಂತಿಷ್ಟು ಹಣವನ್ನು ಕರ್ನಾಟಕದಲ್ಲಿರುವ ಶಾಲೆಗಳ ಅಭಿವೃದ್ಧಿಗೆ ಬಳಸಬೇಕು ಎನ್ನುವ ಅಂಶವನ್ನು ಸೇರಿಸುವ ಸಾಧ್ಯತೆಯಿದೆ ಎಂದು ಮೂಲಗಳು ತಿಳಿಸಿವೆ.

ಶಾಲಾ ಶಿಕ್ಷಣ ಇಲಾಖೆಯಿಂದ ಈ ನೀತಿಯನ್ನು ಜಾರಿಗೊಳಿಸುವ ಬಗ್ಗೆ ಚರ್ಚೆಗಳು ನಡೆದಿದೆ. ಈ ಹಿಂದಿನ ಸಚಿವ ಸಂಪುಟ ಸಭೆಗಳಲ್ಲಿ ಈ ಬಗ್ಗೆ ಪ್ರಸ್ತಾಪಿಸಿದ್ದರೂ, ಹೆಚ್ಚಿನ ಚರ್ಚೆ ನಡೆಸಬೇಕಿದ್ದರಿಂದ ಮುಂದೂಡಲಾಗಿತ್ತು. ಆದರೀಗ, ಶುಕ್ರವಾರ ನಡೆಯಲಿರುವ ಸಂಪುಟ ಸಭೆಯಲ್ಲಿ ಈ ಬಗ್ಗೆ ಅಂತಿಮ ತೀರ್ಮಾನ ಕೈಗೊಳ್ಳುವ ಸಾಧ್ಯತೆಯಿದೆ ಎನ್ನಲಾಗಿದೆ.

ಸರಕಾರದ ವಾದವೇನು?: ರಾಜ್ಯದಲ್ಲಿ ಸಾವಿರಾರು ಕೈಗಾರಿಕೆಗಳಿವೆ. ಈ ಎಲ್ಲ ಉದ್ಯಮಿಗಳು ತಮ್ಮ ಸಂಸ್ಥೆಗಳ ಲಾಭಾಂಶದ ಇಂತಿಷ್ಟು ಹಣವನ್ನು ಸಿಎಸ್‌ಆರ್ ಫಂಡ್ ರೀತಿ ಬಳಸುತ್ತಿವೆ. ಆದರೆ ಬಹುತೇಕ ಕಂಪನಿಗಳು ತಮ್ಮ ಸಿಎಸ್‌ಆರ್ ಅನುದಾನವನ್ನು ಪ್ರಧಾನ ಮಂತ್ರಿಗಳ ಪರಿಹಾರ ನಿಧಿಗೆ ಅಥವಾ ಇತರೆ ರಾಜ್ಯಗಳಲ್ಲಿನ ಕಾರ್ಯಗಳಿಗೆ ಬಳಸುತ್ತಿವೆ. ಕರ್ನಾಟಕದಲ್ಲಿ ಯಶಸ್ವಿ ಉದ್ಯಮ ನಡೆಸುತ್ತಿರುವುದರಿಂದ ಈ ಲಾಭಾಂಶದ ಲಾಭ ಕರ್ನಾಟಕಕ್ಕೆ ಸಿಗಲಿ. ಇದರೊಂದಿಗೆ ಸರಕಾರಿ ಶಾಲೆಗಳಲ್ಲಿನ ಮೂಲ ಸೌಕರ್ಯ, ಕೆಪಿಎಸ್ ಶಾಲೆಗಳ ಅಭಿವೃದ್ಧಿಗೆ ಬಳಸಿದರೆ ರಾಜ್ಯದಲ್ಲಿರುವ ಸರಕಾರಿ ಶಾಲೆಗಳ ಸರ್ವತೋಮುಖ ಅಭಿವೃದ್ಧಿಗೆ ಸಹಾಯವಾಗಲಿದೆ ಎನ್ನುವುದು ರಾಜ್ಯ ಸರಕಾರದ ವಾದವಾಗಿದೆ.

ಕೇಂದ್ರ ಸರಕಾರದ ನಿಯಮಗಳು ಅಡ್ಡಿ?

ಕರ್ನಾಟಕದ ಸರಕಾರಿ ಶಾಲೆಗಳ ಮೂಲಸೌಕರ್ಯ ಹೆಚ್ಚಿಸುವ ಉದ್ದೇಶದಿಂದ ಸಿಎಸ್‌ಆರ್ ಅನುದಾನವನ್ನು ಕೇಂದ್ರ ಸರಕಾರದ ಬದಲಿಗೆ ಕರ್ನಾಟಕದಲ್ಲಿಯೇ ಉಳಿಸುವುದಕ್ಕೆ ಈ ರೀತಿಯ ನೀತಿ ತರಲು ರಾಜ್ಯ ಸರಕಾರ ಚಿಂತಿಸಿದೆ. ಆದರೆ ಸಿಎಸ್‌ಆರ್ ಅನುದಾನದ ನಿಯಮಗಳನ್ನು ರೂಪಿಸುವುದಕ್ಕೆ ಕೇಂದ್ರದ ಬಳಿ ಅಧಿಕಾರ ಇರುವುದರಿಂದ, ರಾಜ್ಯದ ಕೈಗಾರಿಕೆಗಳ ಅನುದಾನ ರಾಜ್ಯದಲ್ಲಿಯೇ ಉಳಿಯಬೇಕು ಎನ್ನುವ ನಿಯಮ ರೂಪಿಸುವುದಕ್ಕೆ ಸಮಸ್ಯೆಯಾಗುವ ಸಾಧ್ಯತೆಯಿದೆ. ಆದ್ದರಿಂದಲೇ ಪ್ರತ್ಯೇಕ ಕಾಯಿದೆಯ ಬದಲಿಗೆ ನೀತಿಯನ್ನು ರೂಪಿಸಲು ಚಿಂತನೆ ನಡೆಸಲಾಗುತ್ತಿದೆ. ಸಚಿವ ಸಂಪುಟ ಸಭೆಯಲ್ಲಿ ನಿರ್ಧಾರವಾಗುತ್ತದೆ ಎಂದು ಸಚಿವರೊಬ್ಬರು ಹೇಳಿದ್ದಾರೆ.

ಫನ್‌ತರಂಗ

- ರಘುಪತಿ ಶೃಂಗೇರಿ -

ಹೊಸ ವರ್ಷಕ್ಕೆ ಕಿಕ್ ಕೊಟ್ಟ ಎಣ್ಣೆ. ಅಬಕಾರಿ ಇಲಾಖೆಗೆ ಭರ್ಜರಿ ಆದಾಯ
ಸುದ್ದಿ



ಸಮಾಚಾರ ಸಣ್ಣದಲ್ಲ

ಶಾಲಾ ವಾರ್ಷಿಕೋತ್ಸವ ಸಮಾರಂಭ ಇಂದು

ದಾವಣಗೆರೆ: ಶ್ರೀ ಸಿದ್ಧಿ ವಿನಾಯಕ ಸಾಂಸ್ಕೃತಿಕ ಸಂಘದ ಶ್ರೀಮತಿ ಪಾರ್ವತಮ್ಮ ರೇವಣಸಿದ್ದಪ್ಪ ನರ್ಸರಿ ಶಾಲೆ, ಶ್ರೀ ಯಜಮಾನ್ ಬೆಳ್ಳೊಡಿ ಕರಿಶೆಟ್ಟಪ್ಪ ಬಸಮ್ಮ ಹಿರಿಯ ಪ್ರಾಥಮಿಕ ಶಾಲೆ, ಶ್ರೀ ಯಜಮಾನ್ ಬೆಳ್ಳೊಡಿ ಸೋಮಶೇಖರಪ್ಪ ಗೌರಮ್ಮ ಪ್ರೌಢಶಾಲೆಗಳ ಪ್ರಸಕ್ತ ಸಾಲಿನ ಶಾಲಾ ವಾರ್ಷಿಕೋತ್ಸವ ಸಮಾರಂಭವನ್ನು ಜ. 2ರಂದು ಸಂಜೆ 5 ಗಂಟೆಗೆ ಶಾಲಾ ಆವರಣದಲ್ಲಿ ಏರ್ಪಡಿಸಲಾಗಿದೆ. ಶ್ರೀ ಸಿದ್ಧಿ ವಿನಾಯಕ ಸಾಂಸ್ಕೃತಿಕ ಸಂಘದ ಅಧ್ಯಕ್ಷ ಮಾಜಿ ಸಚಿವ ಎಸ್.ಎ ರವೀಂದ್ರನಾಥ್ ಅಧ್ಯಕ್ಷತೆಯಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಭಾಗವಹಿಸಿರುವ ಗಣ್ಯರಿಂದ ಉದ್ಘಾಟನೆ ನೆರವೇರಲಿದೆ ರಾಜ್ಯಮಟ್ಟದಲ್ಲಿ ಸಾಧನೆ ಮಾಡಿರುವ ನರ್ಸರಿಯಿಂದ ಪ್ರೌಢಶಾಲೆವರೆಗಿನ ವಿದ್ಯಾರ್ಥಿಗಳಿಗೆ ಬಹುಮಾನ ವಿತರಣೆ ನಡೆಯಲಿದೆ.

ಮಕ್ಕಳೊಂದಿಗೆ ಸಂವಾದ ಕಾರ್ಯಕ್ರಮ ಇಂದು

ದಾವಣಗೆರೆ : ಜ.2 ರಂದು ಬೆಳಗ್ಗೆ 10.30ಕ್ಕೆ ನಗರದ ಎ.ವಿ.ಕೆ ಕಾಲೇಜು ರಸ್ತೆಯ ಗುರುಭವನದಲ್ಲಿ ನಿಮ್ಮ ಹಕ್ಕು ನಮ್ಮ ಧ್ವನಿ ಕಾರ್ಯಕ್ರಮದಡಿ ಮಕ್ಕಳೊಂದಿಗೆ ಸಂವಾದ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಕಾರ್ಯಕ್ರಮವನ್ನು ಮಕ್ಕಳ ರಕ್ಷಣಾ ನಿರ್ದೇಶನಾಲಯ, ರಾಜ್ಯ ಮಕ್ಕಳ ಆಯೋಗ ಬೆಂಗಳೂರು, ಜಿಲ್ಲಾಡಳಿತ, ಜಿ ಪಂ, ಜಿಲ್ಲಾ ಪೊಲೀಸ್ ಇಲಾಖೆ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಸಾರ್ವಜನಿಕ ಶಿಕ್ಷಣ ಇಲಾಖೆ ಮತ್ತು ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಸಹಯೋಗದಲ್ಲಿ ಆಯೋಜಿಸಲಾಗಿದೆ. ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯರಾದ ಅಪರ್ಣಾ.ಎಂ.ಕೊಳ್ಳಾ ಉದ್ಘಾಟಿಸುವರು. ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಅಧ್ಯಕ್ಷ ಗಂಗಾಧರಸ್ವಾಮಿ.ಜಿ.ಎಂ ಅಧ್ಯಕ್ಷತೆ ವಹಿಸುವರು.ಅತಿಥಿಗಳಾಗಿ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಮಹಾವೀರ ಮ ಕರೆಣ್ಣನವರ, ಜಿಪಂ ಸಿಇಓ ಗಿತ್ತೆ ಮಾಧವ್ ವಿಠ್ಠಲ್ ರಾವ್, ಎಸ್ಪಿ ಉಮಾ ಪ್ರಶಾಂತ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ರಾಜಾನಾಯ್ಕ, ಜಿಲ್ಲಾ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಉಪನಿರ್ದೇಶಕ ಕೆ.ಬಿ.ಕೊಟ್ರೇಶ್ ಉಪಸ್ಥಿತರಿರುವರು. ಆರ್.ಟಿ.ಇ ಪೋಕ್ಸೋ, ಬಾಲ್ಯ ವಿವಾಹ ನಿಷೇಧ ಕಾಯ್ದೆ ಮತ್ತು ಬಾಲನ್ಯಾಯ ಕಾಯ್ದೆಗಳ ಕುರಿತು ಶಾಲಾ ಮಕ್ಕಳಿಗೆ ಅರಿವು ಕಾರ್ಯಕ್ರಮ; ಜ.3 ರಂದು ಬೆಳಗ್ಗೆ 9 ಗಂಟೆಗೆ ನಗರದ ಎ.ವಿ.ಕೆ ಕಾಲೇಜು ರಸ್ತೆಯ ಗುರುಭವನದಲ್ಲಿ ಆರ್.ಟಿ.ಇ ಪೋಕ್ಸೋ, ಬಾಲ್ಯ ವಿವಾಹ ನಿಷೇಧ ಕಾಯ್ದೆ ಮತ್ತು ಬಾಲನ್ಯಾಯ ಕಾಯ್ದೆಗಳ ಕುರಿತು ಶಾಲಾ ಮಕ್ಕಳಿಗೆ ಅರಿವು ಕಾರ್ಯಕ್ರಮ ಆಯೋಜಿಸಲಾಗಿದೆ.

ಉಚಿತ ಯೋಗ, ಪ್ರಕೃತಿ ಚಿಕಿತ್ಸಾ ಶಿಬಿರ

ಹರಿಹರ : ಜ.4ರ ಭಾನುವಾರ ಉಚಿತ ಯೋಗ ಮತ್ತು ಪ್ರಕೃತಿ ಚಿಕಿತ್ಸಾ ಶಿಬಿರವನ್ನು ನಗರದ ಶ್ರೀ ರಾಘವೇಂದ್ರ ಸ್ವಾಮಿ ಮಠದ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಹರಿಹರ ಚೇಂಬರ್‌ಆಫ್ ಕಾಮರ್ಸ್ ಅಂಡ್ ಇಂಡಸ್ಟ್ರೀಸ್ ನ ಅಧ್ಯಕ್ಷ ಶಂಕರ್‌ಖಟಾವಾಕರ್ ತಿಳಿಸಿದರು.ಪತ್ರಿಕಾ ಗೋಷ್ಠಿ ಯಲ್ಲಿ ಮಾತನಾಡಿ, ಹರಪನಹಳ್ಳಿಯ ಜನನಿ ಯೋಗ - ಪ್ರಕೃತಿ ಚಿಕಿತ್ಸಾ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರ, ನಗರದ ಚೇಂಬರ್‌ಆಫ್ ಕಾಮರ್ಸ್ ಅಂಡ್ ಇಂಡಸ್ಟ್ರೀಸ್,ಶ್ರೀ ರಾಘವೇಂದ್ರಬೃಂದಾವನ ಟ್ರಸ್ಟ್ ಮತ್ತು ಹರಿಹರದ ಧನ್ವಂತರಿ ಪತಂಜಲಿ ಯೋಗ ಆರೋಗ್ಯ ಕೇಂದ್ರ ಆಶ್ರಯದಲ್ಲಿ ಈ ಶಿಬಿರ ಹಮ್ಮಿಕೊಳ್ಳಲಾಗಿದೆ ಎಂದರು. ಮಾಹಿತಿಗಾಗಿ ಮೊ; 83173 63097 - 9353063097 ನಂಬರ್‌ಗಳಿಗೆ ಸಂಪರ್ಕಿಸಲು ಕೋರಿದರು. ಪತ್ರಿಕಾಗೋಷ್ಠಿಯಲ್ಲಿ ಚೇಂಬರ್‌ಆಫ್ ಕಾಮರ್ಸ್ ಕಾರ್ಯದರ್ಶಿ ಹೆಚ್ ಬಸವರಾಜಪ್ಪ, ನಿರ್ದೇಶಕ ಎಚ್. ಎಸ್ ಶ್ರೀಧರ ಮೂರ್ತಿ,ಧನ್ವಂತರಿ ಪತಂಜಲಿ ಯೋಗ ಕೇಂದ್ರದ ನಿರಂಜನ್ ಉಪಸ್ಥಿತರಿದ್ದರು.

ಅರ್ಜಿ ಸಲ್ಲಿಕೆ ಅವಧಿ ಜ.9 ರವರೆಗೆ ವಿಸ್ತರಣೆ

ಚಿತ್ರದುರ್ಗ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಸಾಮಾನ್ಯ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಉಪಯೋಜನೆಯಡಿ ವಿವಿಧ ಧನಸಹಾಯಕ್ಕೆ ಅರ್ಜಿ ಆಹ್ವಾನಿಸಲಾಗಿದ್ದು, ಅರ್ಜಿ ಸಲ್ಲಿಕೆ ಅವಧಿಯನ್ನು 2026ರ ಜ.9 ರವರೆಗೆ ವಿಸ್ತರಿಸಲಾಗಿದೆ. ಅರ್ಜಿಯನ್ನು ಆನ್ಲೈನ್ ಮೂಲಕ ಮಾತ್ರ ಸಲ್ಲಿಸುವಂತೆ ತಿಳಿಸಲಾಗಿದೆ. ಕಲಾಕೃತಿಗಳ ಪ್ರದರ್ಶನಕ್ಕೆ ಸಹಾಯಧನ ನೀಡಲು 2025-26ನೇ ಸಾಲಿನ ಸಾಮಾನ್ಯ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಉಪಯೋಜನೆಯಡಿ ಸೇವಾಸಿಂಧು sevasindhu.karnataka.gov.in ಮುಖಾಂತರ ಅರ್ಜಿ ಆಹ್ವಾನಿಸಲಾಗಿದ್ದು, ಅರ್ಜಿ ಸಲ್ಲಿಕೆಗೆ ಡಿ. 30 ಕೊನೆಯ ದಿನವನ್ನಾಗಿ ನಿಗದಿ ಪಡಿಸಲಾಗಿತ್ತು. ಇದೀಗ ಅರ್ಜಿ ಸಲ್ಲಿಕೆಯ ಅವಧಿಯನ್ನು 10 ದಿನಗಳ ಕಾಲ ವಿಸ್ತರಿಸಿದ್ದು, ಜನವರಿ 9 ರವರೆಗೆ ಅರ್ಜಿ ಸಲ್ಲಿಸಲು ಕಾಲಾವಕಾಶ ನೀಡಲಾಗಿದೆ.

{ಪರಮೇಶ್ವರ್ } ಗೃಹ ಸಚಿವ

ಇನಾಂ ವೀರಾಪುರ ಗ್ರಾಮದಲ್ಲಿ ನಡೆದಿರುವ ಕೊಲೆ ಪ್ರಕರಣವನ್ನು ವಿಶೇಷ ಪ್ರಕರಣವೆಂದು ಪರಿಗಣಿಸುವ ಕುರಿತು ಚರ್ಚಿಸಲಾಗುವುದು. ಈ ಪ್ರಕರಣಕ್ಕೆ ವಿಶೇಷ ವಕೀಲರನ್ನು ನೇಮಕ ಮಾಡಲಾಗುವುದು. ವಿಶೇಷ ಪ್ರಕರಣ ಎಂದು ತೆಗೆದುಕೊಳ್ಳುವ ಬಗ್ಗೆ ಮುಖ್ಯಮಂತ್ರಿಗಳ ಜೊತೆ ಚರ್ಚಿಸಿ, ತೀರ್ಮಾನ ಕೈಗೊಳ್ಳಲಾಗುತ್ತದೆ.

ನಿರ್ಗತಿಕರಿಗೆ ಬಡವರಿಗೆ ಸಹಾಯ ಹಸ್ತ | ನೆರವಿನ ಹಣಕ್ಕೆ ಏಳು ಜನರ ಸಮಿತಿ ರಚನೆ: ಶಾಸಕ ದೇವೇಂದ್ರಪ್ಪ

ನೊಂದವರ ನೆರವಿಗೆ ಜೋಳಿಗೆ ಹಾಕಿ ಭಿಕ್ಷೆ ಬೇಡುವೆ

ಜಗಳೂರು: ನೊಂದವರ ನೆರವಿಗಾಗಿ ಜೋಳಿಗೆ ಹಿಡಿದು ಭಿಕ್ಷೆ ಬೇಡುವೆ ಎಂದು ಶಾಸಕ ಬಿ ದೇವೇಂದ್ರಪ್ಪ ಹೇಳಿದರು.

ಪಟ್ಟಣದ ವಾಲ್ಮೀಕಿ ಭವನದಲ್ಲಿ ನೊಂದವರಿಗೆ ನೆರವು ಕಾರ್ಯಕ್ರಮ ಉದ್ಘಾಟಿಸಿ ಗುರುವಾರ ಮಾತನಾಡಿ, ಸಮಾಜದಲ್ಲಿ ಉಳ್ಳವರಿಗಿಂತ ಆರ್ಥಿಕವಾಗಿ ಹಿಂದುಳಿದವರೆ ಹೆಚ್ಚಾಗಿದ್ದಾರೆ. ನಾನು ಬಡತನದಲ್ಲಿಯೇ ಅರಳಿ ಜವಾನನಿಂದ ಹಿಡಿದು ಶಾಸಕನಾಗಿ ಆಯ್ಕೆಯಾದವನು. ಆದ್ದರಿಂದ ಬಡವರ ಬವಣೆ ತಳಮಟ್ಟದಿಂದ ಅರಿತಿದ್ದೇನೆ. ನಿರ್ಗತಿಕರಿಗೆ ಬಡವರಿಗೆ ಸಹಾಯಸ್ತ ಚಾಚುವ ನಿಟ್ಟನಲ್ಲಿ ನೊಂದವರ ನೆರವು ಕಾರ್ಯಕ್ರಮಕ್ಕೆ ಚಾಲನೆ ನೀಡಲಾಗಿದೆ ಎಂದರು.

ಬಡವರ ಕಣ್ಣೋರೆಸುವುದಕ್ಕೆ ಬಿಕ್ಷೆ ಎತ್ತುವ ಕಾರ್ಯಕ್ಕೆ ಮುಂದಾಗಿದ್ದು, ಅಲ್ಲದೆ ತಿಂಗಳ ಸಂಬಳದಲ್ಲಿ ಒಂದು ಲಕ್ಷ ಹಣವನ್ನು ನೊಂದವರಿಗೆ ನೆರವು ಕಾರ್ಯಕ್ರಮಕ್ಕೆ ನೀಡಲಾಗುವುದು. ಎಲ್ಲಾರಿಗೂ ಕೊಡಲೇಬೇಕು ಎಂಬ ಆದೇಶವಿಲ್ಲ ಒತ್ತಾಯವಿಲ್ಲ, ಇಷ್ಟವಿದ್ದರು ಕೊಡಬಹುದು. ಇದ್ದವರೂ ಕೊಡುವುದಕ್ಕಿಂತ ಆರ್ಥಿಕವಾಗಿ ಹಿಂದುಳಿದವರು ದಾನ ನೀಡುವುದು ಸಂತಸ ತಂದಿದೆ ಎಂದರು.

ಬಿಕ್ಷೆಯಲ್ಲಿ ಬಂದ ಹಣದಿಂದ ತಂದೆ ತಾಯಿ ಕಳೆದುಕೊಂಡ ಮಕ್ಕಳಿಗೆ, ನಿರ್ಗತಿಕರಿಗೆ, ಅಪಘಾತಕ್ಕೆ ತುತ್ತಾಗಿ ವಿಶೇಷಚೇತನರಿಗೆ,ರೋಗಿಷ್ಟರಿಗೆ, ಪ್ರತಿಭಾವಂತ ವಿದ್ಯಾರ್ಥಿಗಳಿಗೆ, ಪೂರಕ ದಾಖಲೆಗಳು ಒದಗಿಸಿದವರಿಗೆ , ಶೋಚನಿಯ ಬದುಕು ಬದುಕುವವರಿಗೆ ಪಾರದರ್ಶಕವಾಗಿ ಚೆಕ್ ಮೂಲಕವಾಗಿ ಹಣ ನೀಡಲಾಗುವುದು. ಅಲ್ಲದೆ ನೊಂದವರ ನೆರವಿನ ಹಣಕ್ಕೆ ಏಳು ಜನರ ಸಮಿತಿ ರಚನೆ ಮಾಡಲಾಗುವುದು ಎಂದರು.

ಕಾಂಗ್ರೆಸ್ ಮುಖಂಡ ಕೆ ಪಿ ಪಾಲಯ್ಯ ಮಾತನಾಡಿ, ನೊಂದವರಿಗೆ ನೆರವು ನೀಡುವ ಕಾರ್ಯಕ್ರಮ ಪ್ರಸ್ತುತ ಸಮಾಜಕ್ಕೆ ಅವಶ್ಯಕ. ಶಾಸಕ ದೇವೇಂದ್ರಪ್ಪ ರಾಜ್ಯದಲ್ಲಿ ವಿನೂತನ ಕಾರ್ಯಕ್ರಮಕ್ಕೆ ಕೈ ಹಾಕಿರುವುದು ಸಂತಸ ತಂದಿದೆ. ಹೀಗೆ ಸಹಾಯಸ್ತ ಚಾಚುವ ತುಡಿತ ಹೊಂದಿರುವ ಶಾಸಕರ ನಡೆ ಸುಗಮವಾಗಿ ಸಾಗಲಿ ಎಂದರು.

ಬ್ರಾಹ್ಮಣ ಅಭಿವೃದ್ಧಿ ನಿಗಮದ ಅಧ್ಯಕ್ಷ ಅಸಗೋಡು ಜಯಸಿಂಹ ಮಾತನಾಡಿ, ಜಾತ್ಯಾತೀತ ಕ್ಷೇತ್ರ ಜಗಳೂರು ಶಾಸಕ ದೇವೇಂದ್ರಪ್ಪ ಆಡಳಿತ ಚುಕ್ಕಾಣಿ ಹಿಡಿದಾಗಿನಿಂದ ಕ್ಷೇತ್ರ ಸರ್ವತೋಮುಖವಾಗಿ ಅಭಿವೃದ್ಧಿಯತ್ತ ಸಾಗುತ್ತಿದೆ. ರಾಜ್ಯದಲ್ಲಿಯೇ ವಿನೂತನ ಕಾರ್ಯಕ್ರಮವಾಗಿದ್ದು, ನೊಂದವರ ನೆರವು ಕಾರ್ಯಕ್ರಮಕ್ಕೆ ನಾನೂ ಒಂದು ಲಕ್ಷ ರೂ.ಗಳ ಚೆಕ್ ನೀಡುತ್ತೀದ್ದೆನೆ ಎಂದರು. ಕೆಪಿಸಿಸಿ ಸದಸ್ಯ ಕಲ್ಲೇಶ್ ರಾಜ್ ಪಾಟೀಲ್, ಮಹೇಶ್ವರಪ್ಪ, ಎಂ ಎಸ್ ಪಾಟೀಲ್, ಶಿವನಗೌಡ, ವಾಮಣ್ಣ, ತಿಪ್ಪೇಸ್ವಾಮಿ ಗೌಡ, ಬಸವರಾಜ್, ಪರ್ವಿಜ್, ಬರ್ಕತ್, ಎರ್ರಿಸ್ವಾಮಿ, ಲುಕ್ಮಾನ್, ಶಿವಲಿಂಗಪ್ಪ, ಕಾಂತರಾಜ್, ನಾಗೇಂದ್ರರೆಡ್ಡಿ, ಪತ್ರಕರ್ತರ ಸಂಘದ ಅಧ್ಯಕ್ಷ ಲೋಕೇಶ್ ಐಹೊಳೆ ಇದ್ದರು.

ಜಗಳೂರು ಪಟ್ಟಣದ ವಾಲ್ಮೀಕಿ ಭವನದಲ್ಲಿ ನೊಂದವರಿಗೆ ನೆರವು ಕಾರ್ಯಕ್ರಮಕ್ಕೆ ಶಾಸಕ ಬಿ ದೇವೇಂದ್ರಪ್ಪ ಚಾಲನೆ ನೀಡಿದರು

ನೊಂದವರಿಗೆ ನೆರವು ಕಾರ್ಯಕ್ರಮದಲ್ಲಿ ತಟ್ಟೆ ಹಿಡಿದು ನಿಧಿ ಸಂಗ್ರಹದಲ್ಲಿ ಬಂದ ಹಣದಲ್ಲಿ ಕ್ಷೇತ್ರದ ನೊಂದವರ ಬಾಳಿಗೆ ಮಾತ್ರ ಮೊದಲ ಹಂತದಲ್ಲಿ ಸಹಾಯಸ್ತ ಚಾಚುವುದಕ್ಕೆ ಸೀಮಿತವಾಗಿರುತ್ತದೆ. ಮುಂದೆ ರಾಜ್ಯಾದ್ಯಂತ ವಿಸ್ತರಿಸುವ ಯೋಚನೆ ಮಾಡಲಾಗುವುದು.
-ಬಿ ದೇವೇಂದ್ರಪ್ಪ, ಶಾಸಕ

ಒಂದೇ ದಿನ ಐದು ಲಕ್ಷ ರು. ಸಂಗ್ರಹ

ಜಗಳೂರು ಪಟ್ಟಣದ ವಾಲ್ಮೀಕಿ ಭವನದಲ್ಲಿ ನೊಂದವರಿಗೆ ನೆರವು ಕಾರ್ಯಕ್ರಮ ಉದ್ಘಾಟಿಸಲಾಗಿದ್ದು, ಕಾರ್ಯಕ್ರಮದಲ್ಲಿಯೇ ಶಾಸಕ ದೇವೇಂದ್ರಪ್ಪ ತಟ್ಟೆ ಹಿಡಿದು ನೊಂದವರ ನೆರವಿಗಾಗಿ ನಿಧಿ ಸಂಗ್ರಹಿಸಿದರು. ದಾನಿಗಳಿಂದ ಶಾಸಕರ ಜೋಳಿಗೆಗೆ ಒಂದೆ ದಿನದ ಕಾರ್ಯಕ್ರಮದಲ್ಲಿ 5,68, 300 ರು. ಸಂಗ್ರಹವಾಗಿದೆ.

ಸಮಾಜದ ಸುರಕ್ಷೆಗೆ ಪರಿಸರ ಬೆಳೆಸಿ

ಹಿರಿಯೂರು: ಸಮಾಜದಲ್ಲಿ ಪ್ರತಿಯೊಬ್ಬರು ಪರಿಸರ ಉಳಿಸಿ ರಕ್ಷಿಸಿ ಎಂದು ಹಿರಿಯ ಸಿವಿಲ್ ನ್ಯಾಯಾಧೀಶರಾದ ಸುಜಾತ ಸುವರ್ಣ ಅವರು ಹೇಳಿದರು.

ನಗರದ ವಲಯ ಅರಣ್ಯಾಧಿಕಾರಿಗಳ ಕಚೇರಿಯಲ್ಲಿ ಕಾನೂನು ಸೇವಾ ಸಮಿತಿ , ವಕೀಲರ ಸಂಘ ಅಭಿಯೋಜನ ಇಲಾಖೆ, ಅರಣ್ಯ ಇಲಾಖೆ ಇವರುಗಳ ಸಂಯುಕ್ತ ಆಶ್ರಯದಲ್ಲಿ ಪರಿಸರ ಕಾನೂನು ಸಾಕ್ಷರತೆ ಮತ್ತು ಸಮುದಾಯ ಸಂರಕ್ಷಣಾ ಉಪಕ್ರಮದ ಅಂಗವಾಗಿ ಜಾಗೃತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ವಕೀಲರ ಸಂಘದ ಅಧ್ಯಕ್ಷ ರಂಗೇನಹಳ್ಳಿ ರಾಮಚಂದ್ರಪ್ಪ, ಮಾತನಾಡಿ ,ನಮಗೂ ಹಾಗೂ ಮುಂದಿನ ಪೀಳಿಗೆಗೆ ಉತ್ತಮ ಆರೋಗ್ಯ ವಾತಾವರಣ ನಿರ್ಮಾಣವಾಗಬೇಕಾದರೆ ಪರಿಸರ ಅತ್ಯಂತ ಮುಖ್ಯ ಇದನ್ನು ಸಂರಕ್ಷಣೆ ಮಾಡುವುದು ನಮ್ಮೆಲ್ಲರ ಜವಾಬ್ದಾರಿ ಎಂದು ಹೇಳಿದರು.

ಈ ಸಂದರ್ಭದಲ್ಲಿ ವಕೀಲರ ಸಂಘದ ಅಧ್ಯಕ್ಷ ರಂಗೇನಹಳ್ಳಿ ರಾಮಚಂದ್ರಪ್ಪ, ವಲಯ ಅರಣ್ಯಾಧಿಕಾರಿಗಳಾದ ಬಾಬು, ಪ್ರಧಾನ ಸಿವಿಲ್ ನ್ಯಾಯಾಧೀಶರಾದ ಶ್ರೀಧರ್,ಕಾನೂನು ನೆರವು ಅಭಿರಕ್ಷಕರು ಸೋಮು, ವಕೀಲರ ಸಂಘದ ಪ್ರಧಾನ ಕಾರ್ಯದರ್ಶಿ ಚಿತ್ರಲಿಂಗಪ್ಪ, ವೆಂಕಟೇಶ್ ಅರಣ್ಯ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿಗಳು ಸೇರಿದಂತೆ ಇತರರಿದ್ದರು.

ಪರಿಸರ ಕಾನೂನು ಸಾಕ್ಷರತೆ ಮತ್ತು ಸಮುದಾಯ ಸಂರಕ್ಷಣಾ ಉಪಕ್ರಮದ ಅಂಗವಾಗಿ ಜಾಗೃತಿ ಕಾರ್ಯಕ್ರಮದಲ್ಲಿ ಹಿರಿಯ ಸಿವಿಲ್ ನ್ಯಾಯಾಧೀಶರಾದ ಸುಜಾತ ಸುವರ್ಣ ಮಾತನಾಡಿದರು.

ರಸ್ತೆ ವಿಸ್ತರಣೆಗೆ ಅಳತೆ ವ್ಯತ್ಯಾಸದ ಹಕ್ಕು ಇಲ್ಲ

ಹೊನ್ನಾಳಿ: ಕೆ-ಶಿಪ್ ಅಧಿಕಾರಿಗಳು ಎಸ್ಟಿಮೇಟ್ನಲ್ಲಿರುವಂತೆ ರಸ್ತೆ ಅಗಲೀಕರಣದ ಕಾಮಗಾರಿ ಮಾಡುತ್ತಿದ್ದು ವಿರೋಧ ಪಕ್ಷಗಳು ಆಧಾರ ರಹಿತವಾಗಿ ಅಪಪ್ರಚಾರ ಮಾಡುತ್ತಿದ್ದಾರೆ ಎಂದು ಶಾಸಕ ಡಿ.ಜಿ.ಶಾಂತನಗೌಡ ತಿಳಿಸಿದರು.

ಪಟ್ಟಣದ ಎಸಿ ಕಚೇರಿಯಲ್ಲಿ ಉಪವಿಭಾಗಾಧಿಕಾರಿ ಎಚ್.ಬಿ.ಚನ್ನಪ್ಪ ಅವರ ಅಧ್ಯಕ್ಷತೆ ಯಲ್ಲಿ ಗದಗ-ಹೊನ್ನಾಳಿ ರಸ್ತೆಗೆ ಸಂಬಂಧ ಪಟ್ಟಂತೆ ಕರೆಯಲಾಗಿದ್ದ ಅಧಿಕಾ ರಿಗಳ ಸಭೆ ನಂತರ ಸ್ಥಳ ಪರಿಶೀಲಿಸಿ ಅವರು ಮಾತನಾಡಿದರು.ಒಂದಿಂಚೂ ವ್ಯತ್ಯಾಸ ಮಾಡಿ ಕಾಮಗಾರಿ ಮಾಡುವ ಅಧಿಕಾರ ನನಗೂ ಸೇರಿದಂತೆ ಯಾರಿಗೂ ಇರುವುದಿಲ್ಲ, ಸಂಬಂಧಪ' ಟ್ಟವರಿಗೆ ಕಾನೂನು ರೀತ್ಯಾ ಪರಿಹಾರ ನೀಡಿ ಗುಣಮಟ್ಟದ ಕಾಮಗಾರಿ ಮಾಡಲಾಗುತ್ತಿದೆ ಎಂದು ಸ್ಪಷ್ಟಪಡಿಸಿದರು.

2017ರಲ್ಲಿ ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಗದಗ-ಹೊನ್ನಾಳಿ ರಸ್ತೆ ಕಾಮಗಾರಿಗೆ ಅನುಮೋದನೆ ದೊರೆತಿದ್ದು, ಪ್ರೊಜೆಕ್ಟ್ ಪ್ಲಾನ್‌ಗೆ ಅನುಮತಿ ದೊರೆತ ನಂತರ ಯುಜಿಡಿ ಕೆಲಸ ಮಾಡಲಾಗಿದ್ದು ಆದ ಕಾರಣ ಕೆಲ ಗೊಂದಲಗಳಾಗಿವೆ ಸರಿಪಡಿಸಲು ತಿಳಿಸಲಾಗಿದೆ ಎಂದು ಮಾಹಿತಿ ನೀಡಿದರು.ರಸ್ತೆ ಅಗಲೀಕರಣಕ್ಕೆ ವಿದ್ಯುತ್ ಸಮಸ್ಯೆ ಬಗೆಹರಿಸಲು ಬೆಸ್ಕಾಂ ಇಲಾಖಾಧಿಕಾರಿಗಳಿಗೆ ಸೂಚನೆ ನೀಡಲಾಗಿ ದ್ದು, ಪುರಸಭಾ ಮುಖ್ಯಾಧಿಕಾರಿ ಟಿ.ಲೀಲಾವತಿ,ಎಂಜಿನಿಯರ್‌ದೇವರಾಜ್ ಅವರಿಗೆ ಯುಜಿಡಿ ಅಧಿಕಾರಿ ಗಳನ್ನು ಈ ಕೂಡಲೇ ಸ್ಥಳಕ್ಕೆ ಕರೆಯಿಸಿ ಕೊಂಡು ಎದುರಾಗಿರುವ ಎಲ್ಲಾ ಸಮಸ್ಯೆಗಳನ್ನು ಬಗೆಹರಿಸುವಂತೆ ಸೂಚನೆ ನೀಡಿದರು.

ಪಟ್ಟಣದ ಎಸಿ ಕಚೇರಿಯಲ್ಲಿ ಉಪವಿಭಾಗಾಧಿಕಾರಿ ಎಚ್.ಬಿ.ಚನ್ನಪ್ಪ ಅವರ ಅಧ್ಯಕ್ಷತೆಯಲ್ಲಿ ಗದಗ-ಹೊನ್ನಾಳಿ ರಸ್ತೆಗೆ ಸಂಬಂಧಪಟ್ಟಂತೆ ಕರೆಯಲಾಗಿದ್ದ ಅಧಿಕಾರಿಗಳ ಸಭೆ ನಂತರ ಶಾಸಕ ಡಿ.ಜಿ.ಶಾಂತನಗೌಡ ಸ್ಥಳ ಪರಿಶೀಲಿಸಿದರು.

ಎಚ್.ಬಿ.ಮಂಜಪ್ಪ ಎಂಪಿಆರ್‌ಗೆ ಸವಾಲು

ಬಯಲು ಸೀಮೆ ಪ್ರದೇಶಾಭಿವೃದ್ಧಿ ಮಂಡಳಿಯ ಅಧ್ಯಕ್ಷ ಎಚ್.ಬಿ.ಮಂಜಪ್ಪ ಅವರು ಮಾತನಾಡಿ ಮಾಜಿ ಸಚಿವ ಎಂ.ಪಿ.ರೇಣುಕಾಚಾರ್ಯ ಕಾಮಗಾರಿ ಸ್ಥಳ ಪರಿಶೀಲಿಸಿ ಟೇಪ್ ಹಿಡಿದು ಅಳತೆ ಮಾಡಿಸಿ ಕಾಮಗಾರಿ ಕಳಪೆ ಎಂದು ಸುಳ್ಳು ಆರೋಪ ಮಾಡುತ್ತಿದ್ದು, ನೀನು ಯಾವ ಎಂಜಿನಿಯರಿಂಗ್ ಕಾಲೇಜಿನಲ್ಲಿ ಎಂಜಿನಿಯರಿಂಗ್ ಮಾಡಿದ್ದೀಯಾ ತಿಳಿಸುವಂತೆ ಲೇವಡಿ ಮಾಡಿದರು. ಬೇಲಿಮಲ್ಲೂರು ಜಿಪಂ ಚುನಾವಣೆಯಲ್ಲಿ ನನ್ನ ಪತ್ನಿಯನ್ನು ಚುನಾವಣೆಗೆ ನಿಲ್ಲಿಸಿ ನಿನ್ನ ಸಹೋದರನ ಪತ್ನಿಯನ್ನು ಸೋಲಿಸಿ ನನ್ನ ಶಕ್ತಿಯನ್ನು ಈಗಾಗಲೇ ನಿನಗೆ ತೋರಿಸಿದ್ದು, ಮುಂಬರುವ ವಿಧಾನಸಭಾ ಚುನಾವಣೆಯಲ್ಲೂ ನಿನ್ನನ್ನು ಸೋಲಿಸುವ ಮೂಲಕ ನನ್ನ ಶಕ್ತಿಯನ್ನು ಪ್ರದರ್ಶಿಸಲು ತಯಾರಾಗಿದ್ದೇನೆ ಎಂದು ಬಹಿರಂಗವಾಗಿ ಸವಾಲ್ ಹಾಕಿದರು.

ನೂತನ ವರ್ಷಕ್ಕೆ ದಾಖಲೆಯ ಮದ್ಯ ಸೇಲ್

ದಾವಣಗೆರೆ: ಜಿಲ್ಲೆಯಲ್ಲಿ ಹೊಸ ವರ್ಷದ ಸಂಭ್ರಮಾಚರಣೆ ಜೋರಾಗಿದ್ದು, ಕಳೆದ ವರ್ಷಕ್ಕೆ ಹೋಲಿಸಿದರೆ ಈ ಬಾರಿ ಮದ್ಯ ಮತ್ತು ಬಿಯರ್‌ಮಾರಾಟವು ದಾಖಲೆಯಾಗಿದೆ.ಮದ್ಯ ಮತ್ತು ಬಿಯರ್‌ಮಾರಾಟದಲ್ಲಿ ಆಗಿರುವ ಗಣನೀಯ ಏರಿಕೆಯು, ಜಿಲ್ಲೆಯಲ್ಲಿ ಈ ಸಲ ಹೊಸ ವರ್ಷದ ಸಂಭ್ರಮಾಚರಣೆಗೆ ಎಣ್ಣೆ ಕಿಕ್ ಎಷ್ಟರ ಮಟ್ಟಿಗೆ ಇತ್ತು ಎಂಬುದಕ್ಕೆ ಸಾಕ್ಷಿಯಾಗಿದೆ. ವರ್ಷಾಂತ್ಯದ ದಿನ ಬೆಳಗ್ಗೆಯಿಂದ ರಾತ್ರಿ ವರೆಗೆ ಜಿಲ್ಲೆಯ ಎಂಎಸ್‌ಐಎಲ್ ಹಾಗೂ ಎಂಆರ್‌ಪಿ ಮದ್ಯ ಮಾರಾಟ ಮಳಿಗೆ, ಬಾರ್‌ಅ್ಯಂಡ್ ರೆಸ್ಟೋರೆಂಟ್ಗಳು ತುಂಬಿ ತುಳುಕಿದವು.ದಾಖಲೆ ಮಾರಾಟ: ವರ್ಷಾಂತ್ಯದ ದಿನ ಇರಬಹುದಾದ ಬೇಡಿಕೆಯನ್ನು ಆಧರಿಸಿ ಕರ್ನಾಟಕ ರಾಜ್ಯ ಪಾನೀಯ ನಿಗಮದ ಉಗ್ರಾಣದಿಂದ ಮದ್ಯ ಮಾರಾಟಗಾರರು ಮದ್ಯ ಖರೀದಿಸುತ್ತಾರೆ. ಅದರಂತೆ, ಒಂದೇ ದಿನ ಮಾರಾಟಗಾರರು ನಿಗಮದಿಂದ ಮದ್ಯ ಮತ್ತು ಬಿಯರ್‌ಬಾಕ್ಸ್‌ಗಳನ್ನು ಎತ್ತುವಳಿ ಮಾಡಿದ್ದರು. ವರ್ಷಾಂತ್ಯದ ಕೊನೆಯ ದಿನ 23,638 ಬಾಕ್ಸ್ ಮದ್ಯ ಹಾಗೂ 10,642 ಬಿಯರ್‌ಬಾಕ್ಸ್ ಸೇರಿ ಒಟ್ಟು 34,280 ಬಾಕ್ಸ್ ಮಾರಾಟವಾಗಿದೆ.

ಸರಕಾರಿ ನೌಕರರ ಸಂಘದ ಕ್ಯಾಲೆಂಡರ್‌ಬಿಡುಗಡೆ

ರಾಜ್ಯ ಸರಕಾರಿ ನೌಕರರ ಸಂಘದ ರಾಜ್ಯಾಧ್ಯಕ್ಷ ಷಡಕ್ಷರಿ ಅವರು ರಾಜ್ಯದ ಪ್ರತಿಯೊಬ್ಬ ಸರಕಾರಿ ನೌಕರರಿಗೆಂದು ನೀಡಲು ಸಿದ್ಧಪಡಿಸಿರುವ 2026ನೇ ವರ್ಷದ ಕ್ಯಾಲೆಂಡರ್ನ್‌ನು ಉಪವಿಭಾಗಾಧಿಕಾರಿಗಳ ಕಚೇರಿಯಲ್ಲಿ ಎಸಿ ಎಚ್.ಬಿ.ಚನ್ನಪ್ಪ ಬಿಡುಗಡೆ ಮಾಡಿದರು.

ಹೊನ್ನಾಳಿ: ರಾಜ್ಯ ಸರಕಾರಿ ನೌಕರರ ಸಂಘದ ರಾಜ್ಯಾಧ್ಯಕ್ಷ ಷಡಕ್ಷರಿ ಅವರು ರಾಜ್ಯದ ಪ್ರತಿಯೊಬ್ಬ ಸರಕಾರಿ ನೌಕರರಿಗೆಂದು ನೀಡಲು ಸಿದ್ಧಪಡಿಸಿರುವ 2026ನೇ ವರ್ಷದ ಕ್ಯಾಲೆಂಡನ್ ್ನು ಉಪವಿಭಾ ಗಾಧಿಕಾರಿಗಳ ಕಚೇರಿಯಲ್ಲಿ ಎಸಿ ಎಚ್.ಬಿ.ಚನ್ನಪ್ಪ ಬಿಡುಗಡೆ ಮಾಡಿದರು. ಸರಕಾರಿ ನೌಕರರು ಕಷ್ಟದ ಸಮಯದಲ್ಲಿರುವಾಗ ನಿರ್ಭೀತಿಯಿಂದ ನೌಕರರ ಸಂಘದ ಪದಾಧಿಕಾರಿಗಳು ಸಹಾಯಕ್ಕೆ ಧಾವಿಸಬೇಕೆಂದು ಸಲಹೆ ನೀಡಿದರು. ಅವರಿಗೆ ಸರಕಾರದಿಂದ ಸಿಗಬಹುದಾದ ಸವಲತ್ತುಗಳನ್ನು ಸಕಾಲದಲ್ಲಿ ಒದಗಿಸಿಕೊಡುವ ನಿಟ್ಟಿನಲ್ಲಿ ಪ್ರಾಮಾಣ ಕವಾಗಿ ಕಾರ್ಯ ಪ್ರವೃತ್ತರಾಗಬೇಕೆಂದು ತಿಳಿಸಿದರು.

ಹೊನ್ನಾಳಿ ತಾಲ್ಲೂಕು ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಅರುಣ್ ಮಾತನಾಡಿ, ತಾವು ಅಧ್ಯಕ್ಷರಾಗಿ ಆಯ್ಕೆಯಾದ ನಂತರ ನಿವೃತ್ತಿ ಮತ್ತು ಪದೋನ್ನತಿ ಹೊಂದಿದ ಸರಕಾರಿ ನೌಕರರನ್ನು ಆದರದಿಂದ ಗೌರವಿಸಿ ಸನ್ಮಾನಿಸುವ ಕಾರ್ಯವನ್ನು ಎಲ್ಲಾ ಸರಕಾರಿ ನೌಕಕರ ಪದಾಧಿಕಾರಿಗಳ ಸಹಕಾರ ಪಡೆದು ಮಾಡುತ್ತಿರುವುದಾಗಿ ಮಾಹಿತಿ ನೀಡಿದರು.

ರಾಜ್ಯ ಪರಿಷತ್ ಸದಸ್ಯ ಧರ್ಮಪ್ಪ, ಗೌರವಾಧ್ಯಕ್ಷರಾದ ಚಂದ್ರಶೇಖರ್ ,ಜಿಲ್ಲಾ ಸಂಘಟನಾ ಕಾರ್ಯದರ್ಶಿ ದೊಡ್ಡೇಶ್, ಸಂಘಟನಾ ಕಾರ್ಯದರ್ಶಿಗಳಾದ ಪ್ರಕಾಶ್ ನಾಯ್ಕ್, ಹಿರಿಯ ಉಪಾಧ್ಯಕ್ಷ ವೀರಯ್ಯ, ಸಿದ್ದಪ್ಪ ಉಪಸ್ಥಿತರಿದ್ದರು.

ದೇವಾಂಗ ಸಂಘದ ಶತಮಾನದ ಜ್ಯೋತಿಗೆ ಸ್ವಾಗತ

ಹೊಸದುರ್ಗ: ಬೆಂಗಳೂರಿನ ಅರಮನೆ ಮೈದಾನದ ಗಾಯಿತ್ರಿ ವಿಹಾರದಲ್ಲಿ ಇದೇ ಜ.4ರ ಭಾನುವಾರ ನಡೆಯಲಿರುವ ದೇವಾಂಗ ಸಂಘದ ಶತಮಾನೋತ್ಸವ ಆಚರಣೆಯ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವ ಜ್ಯೋತಿಯು ಗುರುವಾರ ಬೆಳಗ್ಗೆ ಹೊಸದುರ್ಗ ಪಟ್ಟಣಕ್ಕೆ ಆಗಮಿಸಿದಾಗ ಇಲ್ಲಿನ ದೇವಾಂಗ ಸಮಾಜದವರು ಅದ್ದೂರಿಯಾಗಿ ಸ್ವಾಗತಿಸಿದರು.

ಈ ವೇಳೆ ದೇವಾಂಗ ಸಂಘದ ಚಿತ್ರದುರ್ಗ ಜಿಲ್ಲಾ ಅಧ್ಯಕ್ಷ ಗೋ.ತಿಪ್ಪೇಶ್ ಮಾತನಾಡಿ, 1924ರಲ್ಲಿ ಬೆಂಗಳೂರಿನಲ್ಲಿ ಸ್ಥಾಪನೆಯಾಗಿದ್ದ ದೇವಾಂಗ ಸಂಘವು ಶತಮಾನೋತ್ಸವ ಅಚರಿಸಿಕೊಳ್ಳುತ್ತಿರುವುದು ಎಲ್ಲರಿಗೂ ಹರ್ಷ ತಂದಿದೆ. ಈ ಶತಮಾನೋತ್ಸವ ಆಚರಣೆಯು ಯಶಸ್ವಿಯಾಗಬೇಕು ಎಂಬ ಸದುದ್ದೇಶದಿಂದ ಈ ಬಗ್ಗೆ ನಮ್ಮ ಸಮುದಾಯದವರಲ್ಲಿ ಜಾಗೃತಿ ಮೂಡಿಸಿ, ಹೆಚ್ಚು ಜನರನ್ನು ಬರಮಾಡಿಕೊಳ್ಳುವ ಉದ್ದೇಶದಿಂದ ರಾಜ್ಯದೆಲ್ಲೆಡೆ ಶತಮಾನೋತ್ಸವ ದೇವಾಂಗ ಜ್ಯೋತಿ ಸಂಚರಿಸುತ್ತಿದೆ ಎಂದರು. ಹೊಸದುರ್ಗ ದೇವಾಂಗ ಸಮಾಜದ ಅಧ್ಯಕ್ಷ ಗೋವಿಂದರಾಜು ಮಾತನಾಡಿ, ಈ ಬಾರಿ ಬನದ ಹುಣ್ಣಿಮೆಯು ಜ.3ರ ಶನಿವಾರ ಬಂದಿದ್ದು, ಈ ಹಬ್ಬವನ್ನು ನಮ್ಮ ಸಮಾಜ ದವರು ಶ್ರದ್ಧಾಭಕ್ತಿಯಿಂದ ಆಚರಿಸಬೇಕು. ಭಾನುವಾರ ಬೆಂಗಳೂರಿನಲ್ಲಿ ನಡೆಯುವ ದೇವಾಂಗ ಸಂಘದ ಶತಮಾ ನೋತ್ಸವ ಆಚರಣೆಯ ಬೃಹತ್ ಸಮಾವೇಶಕ್ಕೆ ನಮ್ಮ ತಾಲೂಕಿನಿಂದ ಜನರು ಹೋಗಿ, ಬರಲಿಕ್ಕೆ 15 ಬಸ್ಸಿನ ವ್ಯವಸ್ಥೆ ಮಾಡಲಾಗಿದೆ. ಹಾಗಾಗಿ ಅಂದು ಒಂದು ದಿನ ತಮ್ಮ ವೈಯಕ್ತಿಕ ಕೆಲಸ ಕಾರ್ಯವನ್ನು ನಿಲ್ಲಿಸಿ, ಸಮಾಜದ ಬಗೆಗಿನ ಸಂಘಟನೆ, ಅಭಿವೃದ್ಧಿ ಪರ ಚಿಂತನೆಯ ಈ ಸಮಾವೇಶಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ಯಶಸ್ವಿಗೊಳಿಸಬೇಕು ಎಂದು ಕರೆ ನೀಡಿದರು.

ಈ ವೇಳೆ ಬನಶಂಕರಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಕಮಲ್ ರಾಮಚಂದ್ರ, ಗೌಡ್ರು ರಂಗನಾಥ್, ಮುಖಂಡರಾದ ಶಾಂತಮೂರ್ತಿ,ಕೃಷ್ಣಮೂರ್ತಿ,ಎಸ್.ಸುರೇಶ್ ನೀರಗುಂದ, ನಾಗರಾಜು ಸೇರಿದಂತೆ ಸಮಾಜದ ಇನ್ನಿತರ ಮುಖಂಡರು ಹಾಜರಿದ್ದರು.

ಜನರಲ್ಲಿ ಜಾಗೃತಿ ಮೂಡಿಸುವ ಜ್ಯೋತಿಯು ಗುರುವಾರ ಬೆಳಗ್ಗೆ ಹೊಸದುರ್ಗ ಪಟ್ಟಣಕ್ಕೆ ಆಗಮಿಸಿದಾಗ ಇಲ್ಲಿನ ದೇವಾಂಗ ಸಮಾಜದವರು ಅದ್ದೂರಿಯಾಗಿ ಸ್ವಾಗತಿಸಿದರು.

ದೇವಾಂಗ ಸಂಘದ ಶತಮಾನೋತ್ಸವ ಆಚರಣೆಯ ಸಮಾವೇಶಕ್ಕೆ ರಾಜ್ಯದೆಲ್ಲೆಡೆಯಿಂದ ಸಹಸ್ರಾರು ಸಂಖ್ಯೆಯಲ್ಲಿ ದೇವಾಂಗ ಸಮಾಜದವರು ಆಗಮಿಸಿ ಈ ಸಮಾರಂಭವನ್ನು ಯಶಸ್ವಿಗೊಳಿಸಬೇಕು.
-ಗೋ.ತಿಪ್ಪೇಶ್, ಅಧ್ಯಕ್ಷರು ಚಿತ್ರದುರ್ಗ ಜಿಲ್ಲಾ ದೇವಾಂಗ ಸಂಘ

ಜಂಟಿ ಕೃಷಿ ನಿರ್ದೇಶಕರ ಕಚೇರಿಯಲ್ಲಿ ಕೃಷಿ ಇಲಾಖೆಯಿಂದ ಸಿರಿಧಾನ್ಯ ಮೇಳ | ಜಿಪಂ ಸಿಇಓ ಗಿತ್ತೆ ಮಾಧವ ವಿಠಲರಾವ್ ಹೇಳಿಕೆ

ಮಹಿಳೆಯರು ಆರ್ಥಿಕವಾಗಿ ಸಬಲರಾಗಿ ಮುನ್ನಡೆಯಲಿ

ದಾವಣಗೆರೆ: ರುಚಿ ರುಚಿಯಾದ ವಿವಿಧ ಸಿರಿಧಾನ್ಯ ಪಾಕಗಳನ್ನು ಸವಿದಿದ್ದು, ಪ್ರತಿಯೊಂದು ಪದಾರ್ಥಗಳು ರುಚಿಕರವಾಗಿದ್ದು ಬಾಯಿಯಲ್ಲಿ ನೀರೂರಿಸಿದವು ಎಂದು ಜಿಪಂ ಸಿಇಓ ಗಿತ್ತೆ ಮಾಧವ ವಿಠಲರಾವ್ ತಿಳಿಸಿದರು.

ಅವರು ಜಂಟಿ ಕೃಷಿ ನಿರ್ದೇಶಕರ ಕಚೇರಿಯಲ್ಲಿ ಕೃಷಿ ಇಲಾಖೆಯಿಂದ ಆಯೋಜಿಸಲಾದ ಸಿರಿಧಾನ್ಯ ಮತ್ತು ಸಾವಯವ ಅಂತಾರಾಷ್ಟ್ರೀಯ ವಾಣಿಜ್ಯ ಮೇಳ-2026ರ ಅಂಗವಾಗಿ ರಾಜ್ಯಮಟ್ಟದ ಸಿರಿಧಾನ್ಯ ಮತ್ತು ಮರೆತುಹೋದ ಖಾದ್ಯಗಳ ಪಾಕ ಸ್ಪರ್ಧೆ ಜಿಲ್ಲಾ ಮಟ್ಟದ ಸಿರಿಧಾನ್ಯ ಪಾಕ ಸ್ಪರ್ಧೆ ಉದ್ಘಾಟಿಸಿ ಮಾತನಾಡಿದರು.

ಸೇವಾ ಅವಧಿಯಲ್ಲಿ ನಾನು ಅನೇಕ ಪಂಚತಾರಾ ಹೋಟೆಲ್‌ಗಳಲ್ಲಿ ವಿವಿಧ ಪದಾರ್ಥ ಸವಿದಿದ್ದೇನೆ, ಆದರೆ ಇಷ್ಟು ರುಚಿಕರವಾದ ಪದಾರ್ಥಗಳನ್ನು ಸವಿದಿರಲಿಲ್ಲ. ಇಂದಿನ ಪದಾರ್ಥಗಳು ಯಾವ ಪಂಚತಾರಾ ಹೋಟೆಲ್ಗಳಿಗಿಂತ ರುಚಿಯಲ್ಲಿ ಕಡಿಮೆ ಇರಲಿಲ್ಲ. ಇಲ್ಲಿನ ಪದಾರ್ಥಗಳನ್ನು ಸವಿಯುವಾಗ ನನಗೆ ನನ್ನ ಬಾಲ್ಯದ ಪದಾರ್ಥಗಳನ್ನು ಸವಿಯುತ್ತಿದ್ದ ನೆನಪಿಗೆ ಬಂದವು. ಸಿರಿಧಾನ್ಯದಲ್ಲಿ ಇಷ್ಟು ಬಗೆಯ ಆಹಾರ ಖಾದ್ಯಗಳನ್ನು ತಯಾರಿಸಿರುವುದು ಹೆಮ್ಮೆ ಎನಿಸುತ್ತಿದೆ. ಇಲ್ಲಿ ಭಾಗವಹಿಸಿದ್ದ ಪ್ರತಿಯೊಬ್ಬರು ವಿಜೇತರೆ, ಬಹುಮಾನ ಪಡೆದವರು ಮಾತ್ರ ವಿಜೇತರಲ್ಲ ಎಂದರು.ಜಿಲ್ಲೆಯಲ್ಲಿ ಅನೇಕ ಮಹಿಳೆಯರು ತಮ್ಮ ಕೈಚಳಕದೊಂದಿಗೆ ಗುಣಮಟ್ಟದ ಖಾದ್ಯ ತಯಾರಿಸುತ್ತಿದ್ದೀರಿ. ಇದು ಕೇವಲ ಹವ್ಯಾಸಕ್ಕೆ ಬಳಕೆಯಾಗದೇ, ಪ್ರತಿಯೊಬ್ಬರು ಆರ್ಥಿಕವಾಗಿ ಸಬಲರಾಗಬೇಕು. ಸಿರಿಧಾನ್ಯ ಬಳಸಿ ತಯಾರಿಸಲಾದ ಉಪ್ಪಿನಕಾಯಿ, ಹಪ್ಪಳ, ಚಟ್ನಿಪುಡಿ, ಸಿಹಿ ಪದಾರ್ಥಗಳು, ಖಾರ ಪದಾರ್ಥಗಳು ಹಾಗೂ ಸಜ್ಜೆ ರೊಟ್ಟಿ, ಸಜ್ಜೆ ಕಡುಬು ಸೇರಿದಂತೆ ವಿವಿಧ ರೀತಿಯ ಆಹಾರ ಪದಾರ್ಥ ತಯಾರಿಸುತ್ತಿದ್ದಾರೆ. ಆದರೆ ಅವರಿಗೆ ಸರಿಯಾಗಿ ಮಾರುಕಟ್ಟೆ ಪ್ರವೇಶ ಮಾಡುವುದು ತಿಳಿದಿರುವುದಿಲ್ಲ, ಇದನ್ನು ದೃಷ್ಟಿಯಾಗಿಟ್ಟುಕೊಂಡು ಜಿಲ್ಲೆಯಲ್ಲಿ ಪದಾರ್ಥಗಳನ್ನು ತಯಾರಿಸುವವರ ಹೆಸರುಗಳು ಅವರು ಮಾಡುವ ಖಾದ್ಯದ ವಿವರಗಳೊಂದಿಗೆ ಜಿಲ್ಲಾ ಪಂಚಾಯಿತಿ ಅಂತರ್ಜಾಲದಲ್ಲಿ ಪ್ರಕಟಿಸಲಾಗುವುದು. ಇದರಿಂದ ಅವರು ಇಡೀ ರಾಜ್ಯ, ದೇಶದಲ್ಲಿ ಹೆಸರು ಗಳಿಸಲು ಮತ್ತು ಮಾರುಕಟ್ಟೆ ಪ್ರವೇಶ ಮಾಡಲು ಅನುಕೂಲವಾಗುತ್ತದೆ ಎಂದರು.

ಕೃಷಿ ಜಂಟಿ ನಿರ್ದೇಶಕ ಜಿಯಾವುಲ್ಲಾ ಪ್ರಸ್ತಾವಿಕ ಮಾತನಾಡಿ, ಸಿರಿಧಾನ್ಯ ಪಾಕ ಸ್ಪರ್ಧೆಯಲ್ಲಿ ಜಿಲ್ಲೆಯ 7 ತಾಲ್ಲೂಕುಗಳಿಂದ ಒಟ್ಟು 70 ಜನರು ಭಾಗವಹಿಸಿದ್ದಾರೆ. ಇತ್ತೀಚೆಗೆ ಜಿಲ್ಲೆಯಲ್ಲಿ ಅಡಿಕೆಯನ್ನು ಹೆಚ್ಚು ಬೆಳೆಯಲಾಗುತ್ತಿದೆ. ಆದ್ದರಿಂದ ಜಿಲ್ಲೆಯು ತೋಟಗಾರಿಕೆ ಜಿಲ್ಲಾಯಾಗುತ್ತಿದ್ದು, ಅಲ್ಲದೆ ಜಿಲ್ಲೆಯಲ್ಲಿ ರಾಗಿ, ಭತ್ತ ಬೆಳೆಯಲಾಗುತ್ತಿದೆ. ಅದರ ಜೊತೆಗೆ ಸಿರಿಧಾನ್ಯ ಬೆಳೆಯಬೇಕು, ಸಿರಿಧಾನ್ಯ ಸೇವನೆಯಿಂದ ಆರೋಗ್ಯ ಜೀವನ ನಡೆಸಬಹುದು ಎಂದರು.

ಉಪ ಕೃಷಿ ನಿರ್ದೇಶಕ ಅಶೋಕ್, ತಿಪ್ಪೇಸ್ವಾಮಿ, ರೇವಣ್ಣ ಸಿದ್ದೇಶ್ವರ್,ಸಹಾಯಕ ನಿರ್ದೇಶಕರುಗಳಾದ ಶ್ರೀಧರ್ಮೂರ್ತಿ, ತೀರ್ಪುಗಾರರಾಗಿ ಮೀನಾಕ್ಷಿ ಜೋತ್ಸನಾ ಶ್ರೀಕಾಂತ್, ಸುಧಾ, ಸುಪ್ರಿಯ, ಕೃಷಿಕ್ ಸಮಾಜದ ಶಾಮನೂರು ಶಿವಣ್ಣ ಉಪಸ್ಥಿತರಿದ್ದರು.

ರಾಜ್ಯಮಟ್ಟದ ಸಿರಿಧಾನ್ಯ ಮತ್ತು ಮರೆತುಹೋದ ಖಾದ್ಯಗಳ ಪಾಕ ಸ್ಪರ್ಧೆನಲ್ಲಿ ವಿಜೇತರಾದವರಿಗೆ ಜಿಪಂ ಸಿಇಓ ಗಿತ್ತೆ ಮಾಧವ ವಿಠಲರಾವ್ ಬಹುಮಾನ ವಿತರಿಸಿದರು.

ಬಹುಮಾನ ವಿತರಣೆ

ಸಿರಿಧಾನ್ಯ ಸಿಹಿ ಖಾದ್ಯದಲ್ಲಿ ಹೊನ್ನಾಳಿ ಮಂಗಳಾ ಕೋಂ ಸೂರ್ಯನಾರಾಯಣ ಪ್ರಥಮ ಬಹುಮಾನ ಪಡೆದರು. ಜಗಳೂರಿನ ಸುನಂದಮ್ಮ ಕೋಂ ನಾಗೇಂದ್ರಪ್ಪ ದ್ವಿತೀಯ ಬಹುಮಾನ ಪಡೆದರು. ದಾವಣಗೆರೆಯ ಪೂಜಾ ಕೋಂ ಪ್ರಶಾಂತ್ ಎಂ.ವಿದ್ಯಾ ತೃತೀಯ ಬಹುಮಾನ ಪಡೆದರು. ಮರೆತುಹೋದ ಖಾದ್ಯದಲ್ಲಿ ಜಗಳೂರಿನ ವೀರಮ್ಮ ಕೋಂ ಬಸವರಾಜಪ್ಪ ಪ್ರಥಮ ಬಹುಮಾನ ಪಡೆದರು. ನ್ಯಾಮತಿಯ ನೇತ್ರಾವತಿ ಕೋಂ ತಿಮ್ಮೇಶಪ್ಪ ದ್ವಿತೀಯ ಬಹುಮಾನ ಪಡೆದರು. ಜಗಳೂರಿನ ಕೆ.ಬಿ.ಮಂಗಳಮ್ಮ ಕೋಂ ಮಂಜುನಾಥ್ ತೃತೀಯ ಬಹುಮಾನ ಪಡೆದರು. ಸಿರಿಧಾನ್ಯ ಖಾರ ಖಾದ್ಯದಲ್ಲಿ ದಾವಣಗೆರೆಯ ಪೂರ್ಣಿಮ ಕೋಂ ರಮೇಶ್ ಬಾಬು ಪ್ರಥಮ, ದಾವಣಗೆರೆಯ ಸಿಂಧುಕುಮಾರಿ ದ್ವಿತಿಯ ಹಾಗೂ ದಾವಣಗೆರೆಯ ಸುನಂದ ವರ್ಣೇಕರ್ ತೃತೀಯ ಬಹುಮಾನ ಪಡೆದರು.

ಸಮಾಚಾರ ಸಣ್ಣದಲ್ಲ

ರಸ್ತೆ ಅಭಿವೃದ್ಧಿಗೆ ಶಾಸಕರ ಸೂಚನೆ

ಶಿವಮೊಗ್ಗ: ನಗರದ ಮಲ್ನಾಡ್ ಕೌಂಟಿ, ಸರಕಾರಿ ನೌಕರರ ನೀಲಮ್ಮ ಜ್ಞಾನೇಶ್ವರ, ಸಾನ್ವಿ ಬಡಾವಣೆಗಳಲ್ಲಿನ ಸಂಪೂರ್ಣ ಹದಗೆಟ್ಟ ರಸ್ತೆ ಸಂಪರ್ಕ ಮತ್ತು ಅಸಮರ್ಪಕ ಯುಜಿಡಿ ವ್ಯವಸ್ಥೆ ತಕ್ಷಣ ಸರಿಪಡಿಸುವಂತೆ ಶಾಸಕ ಎಸ್.ಎನ್. ಚನ್ನಬಸಪ್ಪ ಪಾಲಿಕೆ ಅಧಿಕಾರಿಗಳಿಗೆ ತಾಕೀತು ಮಾಡಿದರು. ಅವರು ಇಂದು ಮೇಲ್ಕಾಣಿಸಿದ ಬಡಾವಣೆಗಳಿಗೆ ಭೇಟಿನೀಡಿ, ವಾಸ್ತವ ಸ್ಥಿತಿಯನ್ನು ಪರಿಶೀಲಿಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದರು. ಈ ಬಡಾವಣೆಗಳು ಅಸ್ಥಿತ್ವಕ್ಕೆ ಬಂದು ನಾಲ್ಕೈದು ವರ್ಷಗಳು ಕಳೆದರೂ ಇಲ್ಲಿನ ನಿವಾಸಿಗಳು ಯುಜಿಡಿ ಸಮಸ್ಯೆಯಿಂದ ಬಳಲುತ್ತಿದ್ದಾರೆ. ಅಲ್ಲದೆ ರಸ್ತೆಗಳು ಸಂಪೂರ್ಣ ಹೊಂಡ-ತಗ್ಗುಗಳಿಂದ ಆವರಿಸಲ್ಪಟ್ಟಿದೆ. ಕಾಲ್ನಡಿಗೆಯಲ್ಲಿ ಓಡಾಡಲು ದುಸ್ತರವಾಗಿದೆ ಎಂಬುದನ್ನು ಸ್ಥಳೀಯ ನಿವಾಸಿಗಳು ತಮ್ಮ ಗಮನಕ್ಕೆ ತಂದಿದ್ದು ಈ ಸಮಸ್ಯೆಗಳನ್ನು ತಕ್ಷಣ ಪರಿಹರಿಸುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದ್ದಾಗಿ ತಿಳಿಸಿದರು. ಸಾನ್ವಿ ಲೇಔಟ್ನಲ್ಲಿ ಕೇವಲ ನಿವಾಸಿಗಳಲ್ಲದೆ ಇತ್ತೀಚೆಗೆ ಸರಕಾರಿ ನರ್ಸಿಂಗ್ ವಿದ್ಯಾರ್ಥಿನಿ ವಸತಿ ನಿಲಯವೂ ತಲೆ ಎತ್ತಿದೆ. ಅಲ್ಲಿ ಸುಮಾರು 250 ವಿದ್ಯಾರ್ಥಿನೀಯರು ವಾಸಿಸುತ್ತಿದ್ದಾರೆ. ಇದರಿಂದಾಗಿ ಒಂದೆಡೆ ಸಕಾರಿ ನೌಕರರ ಬಡಾವಣೆ ಕಡೆಯಿಂದ ಇನ್ನೊಂದೆಡೆ ಬೊಮ್ಮನಕಟ್ಟೆ ಕಡೆಯಿಂದ ಯುಜಿಡಿ ತ್ಯಾಜ್ಯ ಸಾನ್ವಿಲೇಔಟ್ನ ತಗ್ಗಿಗೆ ಬಂದು ಸೇರುತ್ತಿದೆ. ಈ ಯುಜಿಡಿ ಮಾರ್ಗ ಸಾನ್ವಿ ಲೇಔಟ್ನಲ್ಲಿಯೇ ಸ್ಥಗಿತಗೊಂಡಿದ್ದು, ಮುಂದೆ ಹೋಗದೆ ಚರಂಡಿ ನೀರೆಲ್ಲಾ ರಸ್ತೆಯ ಮೇಲೆ ಹರಿಯುತ್ತಿದೆ. ಅಧಿಕಾರಿಗಳು ಕಳೆದು ನಾಲ್ಕು ವರ್ಷಗಳಿಂದ ಇದನ್ನು ಗಮನಿಸುತ್ತಿದ್ದರೂ ದುರಸ್ತಿಗೆ ಮುಂದಾಗದೆ ಇರುವುದಕ್ಕೆ ಅಧಿಕಾರಿಗಳ ವಿರುದ್ಧ ಕೆಂಡಾಮಂಡಲವಾದರು.

ಶ್ರದ್ಧೆ, ಭಕ್ತಿಯಿಂದ ಜರುಗಿದ ತೆಪ್ಪೋತ್ಸವ

ಶಿವಮೊಗ್ಗ: ನಗರದ ಕೋಟೆ ರಸ್ತೆಯಲ್ಲಿರುವ ಕೋರ್ಪಲಯ್ಯನ ಛತ್ರ (ತುಂಗಾ ಮಂಟಪ)ದಲ್ಲಿ ಲೋಕ ಕಲ್ಯಾಣಾರ್ಥವಾಗಿ ಅತ್ಯಂತ ಭವ್ಯವಾಗಿ ಆಯೋಜಿಸಲಾದ ತುಂಗಾರತಿ'''' ಹಾಗೂ ಪರಮಪೂಜ್ಯ ಶ್ರೀ ಮಾತಾ ಅಪ್ಪಾಜಿ ಅವರ ದಿವ್ಯ ಸಾನಿಧ್ಯದಲ್ಲಿನ ತೆಪ್ಪೋತ್ಸವ'''' ಕಾರ್ಯಕ್ರಮವನ್ನು ಅಪಾರ ಶ್ರದ್ಧೆ-ಭಕ್ತಿಯಿಂದ ಆಚರಿಸಲಾಯಿತು. ನಮ್ಮ ಸನಾತನ ಸಂಸ್ಕೃತಿಯಲ್ಲಿ ನದಿಗಳಿಗೆ ದೈವತ್ವದ ಸ್ಥಾನವಿದ್ದು, ಜೀವನದಾಯಕಿಯಾದ ತುಂಗಾ ನದಿಯ ಪಾವಿತ್ರ್ಯವನ್ನು ಎತ್ತಿ ಹಿಡಿಯುವ ಸಂಕಲ್ಪದೊಂದಿಗೆ ಹಾಗೂ ನಾಡಿನ ಸಮಸ್ತ ಜನತೆಗೆ ಸುಖ-ಶಾಂತಿ, ಆರೋಗ್ಯ ಮತ್ತು ಸಮೃದ್ಧಿ ಲಭಿಸಲಿ ಎಂಬ ಮಹದಾಶಯದಿಂದ ಈ ತುಂಗಾರತಿ ನೆರವೇರಿತು. ದೀಪಾರಾಧನೆ, ಮಂತ್ರೋಚ್ಚಾರಣೆ ಮತ್ತು ಭಕ್ತಿಗೀತಗಳೊಂದಿಗೆ ನಡೆದ ಈ ಪಾವನ ಕ್ಷಣಗಳು ಮನಸ್ಸಿಗೆ ಅಪಾರ ಶಾಂತಿ ಮತ್ತು ಆತ್ಮತೃಪ್ತಿಯನ್ನು ನೀಡಿದವು. ವೀರ ಸನ್ಯಾಸಿ ಸ್ವಾಮಿ ವಿವೇಕಾನಂದರ ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಂಡು, ತಾಯಿ ಭಾರತಮಾತೆಯ ಸೇವೆಯೇ ಪರಮ ಧ್ಯೇಯವೆಂದು ನಡೆದುಕೊಳ್ಳುತ್ತಿರುವ ಶ್ರೀ ಮಾತಾ ಅಪ್ಪಾಜಿ ಅವರ ದಿವ್ಯ ಅನುಗ್ರಹದೊಂದಿಗೆ, ಈ ಪವಿತ್ರ ಕಾರ್ಯಕ್ರಮ ಅತ್ಯಂತ ಶ್ರದ್ಧೆ-ಭಕ್ತಿಯೊಂದಿಗೆ ಸುಸಂಪನ್ನವಾಗಿ ನೆರವೇರಿದ್ದು, ಭಕ್ತರ ಮನದಲ್ಲಿ ಆತ್ಮಶಾಂತಿ, ಭಕ್ತಿಭಾವ ಮತ್ತು ಸಕಾರಾತ್ಮಕ ಶಕ್ತಿಯನ್ನು ತುಂಬಿದ ಸ್ಮರಣೀಯ ಧಾರ್ಮಿಕ ಉತ್ಸವವಾಗಿ ರೂಪುಗೊಂಡಿತು. ತುಂಗಾ ತೀರದಲ್ಲಿ ನಡೆದ ಈ ದಿವ್ಯ ಆಚರಣೆ ಶಿವಮೊಗ್ಗದ ಧಾರ್ಮಿಕ, ಸಾಂಸ್ಕೃತಿಕ ಪರಂಪರೆಯನ್ನು ಮತ್ತಷ್ಟು ಶ್ರೀಮಂತಗೊಳಿಸಿ, ಭಕ್ತರ ಹೃದಯದಲ್ಲಿ ಭಕ್ತಿ, ಶ್ರದ್ಧೆ ಮತ್ತು ಆತ್ಮಶುದ್ಧಿಯ ದೀಪವನ್ನು ಬೆಳಗಿಸಿದ ಪಾವನ ಅನುಭವವಾಗಿ ಸಾವಿರಾರು ಭಕ್ತರು ತುಂಗಾತೀರದಲ್ಲಿ ನಿಂತು ಭಕ್ತಿಯಿಂದ ಕಣ್ತುಂಬಿಕೊಂಡರು. ಶಾಸಕ ಎಸ್.ಎನ್. ಚನ್ನಬಸಪ್ಪ ಸೇರಿದಂತೆ ಅಪಾರ ಭಕ್ತವೃಂದ ಪಾಲ್ಗೊಂಡಿತ್ತು.

ಅಮೃತ-2 ಯೋಜನೆ ಕೆರೆಗಳಿಗೆ ಕಾಯಕಲ್ಪ

ಶಿವಮೊಗ್ಗ: ಶಿವಮೊಗ್ಗ ಮಹಾನಗರ ಪಾಲಿಕೆಯ ವ್ಯಾಪ್ತಿಗೊಳಪಡುವ ಪುರಲೆ, ನವಿಲೆ, ಗೋಪಶೆಟ್ಟಿಕೊಪ್ಪ ಮತ್ತು ತ್ಯಾವರಚಟ್ನಳ್ಳಿಯ ಕೆರೆಗಳನ್ನು ಕೇಂದ್ರ ಪುರಸ್ಕೃತ ಅಮೃತ-2.0 ಯೋಜನೆಯಡಿ ಜಲಮೂಲಗಳ ಪುನಶ್ಚೇತನ ಕಾಮಗಾರಿಗಳನ್ನು ತ್ವರಿತಗತಿಯಲ್ಲಿ ಆರಂಭಿಸಿ ಸಕಾಲದಲ್ಲಿ ಪೂರ್ಣಗೊಳಿಸುವಂತೆ ಜಿಲ್ಲಾಧಿಕಾರಿ ಗುರುದತ್ತ ಹೆಗಡೆ ಅವರು ನಗರ ಯೋಜನಾ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದರು. ಅವರು ತಮ್ಮ ಕಚೇರಿ ಸಭಾಂಗಣದಲ್ಲಿ ಶಿವಮೊಗ್ಗ ಮಹಾನಗರಪಾಲಿಕೆ ಮತ್ತು ಭದ್ರಾವತಿ ನಗರಸಭೆ ವ್ಯಾಪ್ತಿಯಲ್ಲಿನ ಜಲಮೂಲಗಳ ಅಭಿವೃದ್ಧಿ ಕಾಮಗಾರಿಗಳ ಕುರಿತು ಏರ್ಪಡಿಸಲಾಗಿದ್ದ ವಿಸ್ತೃತ ಯೋಜನಾ ವರದಿಗಳ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದರು. ಮುಂದಿನ ಎರಡು ದಶಕಗಳ ಅವಧಿಯಲ್ಲಿ ಏರುತ್ತಿರುವ ಜನಸಂಖ್ಯೆಗೆ ಅನುಗುಣವಾಗಿ ಸದರಿ ಪ್ರದೇಶದಲ್ಲಿ ಕೈಗೊಳ್ಳಬಹುದಾದ ಸಂಭಾವ್ಯ ಕಾಮಗಾರಿಗಳನ್ನು ಗಮನದಲ್ಲಿಟ್ಟುಕೊಂಡು ಕ್ರಿಯಾಯೋಜನೆಯನ್ನು ರೂಪಿಸುವಂತೆ ಅವರು ಅಧಿಕಾರಿಗಳಿಗೆ ಸಲಹೆ ನೀಡಿದರು. ಪ್ರತಿ ಕೆರೆಯ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವ ಮುನ್ನ ಕೆರೆಯ ಸುತ್ತಲು ಇರುವ ಒಳಚರಂಡಿ ಜಾಲ ಸಮರ್ಪಕವಾಗಿ ಕಾರ್ಯನಿರ್ವಹಿಸುವಂತೆ ಅಭಿವೃದ್ಧಿಪಡಿಸಲು ಪಾಲಿಕೆಯ ಅಭಿಯಂತರರಿಗೆ ಸೂಚಿಸಿದರು. ಅಸ್ತಿತ್ವದಲ್ಲಿರುವ ಕೆರೆಗಳ ಏರಿ ಅಭಿವೃದ್ಧಿ ಕೈಗೊಳ್ಳುವ ಸಂದರ್ಭದಲ್ಲಿ ಸಾಧ್ಯವಾದಷ್ಟು ಗ್ರಾವೆಲ್/ಮುದ್ರಮ್ ನ್ನು ಉಪಯೋಗಿಸುವಂತೆ ಸೂಚಿಸಿದ ಅವರು, ಸದರಿ 04ಕಾಮಗಾರಿಗಳ ಡಿಪಿಆರ್ನ್ನು ಅನುಮೋದಿಸಿ ಮುಂದಿನ ಕ್ರಮಕ್ಕಾಗಿ ಪೌರಾಡಳಿತ ನಿರ್ದೇಶನಾಲಯಕ್ಕೆ ಸಲ್ಲಿಸಲು ಸಭೆಯಲ್ಲಿ ಶಿಫಾರಸ್ಸು ಮಾಡಿ ಆದೇಶಿಸಿದರು.

{ಈಶ್ವರ್ ಖಂಡ್ರೆ } ಸಚಿವ

ರಾಷ್ಟ್ರ ರಾಜಧಾನಿ ನವದೆಹಲಿಯಲ್ಲಿ ವಾಯುಮಾಲಿನ್ಯ ಅತಿಯಾಗಿದ್ದು, ಬೆಂಗಳೂರಿಗೂ ಈ ಸ್ಥಿತಿ ಬಾರದಂತೆ ಎಲ್ಲ ಅಗತ್ಯ ಮುಂಜಾಗರೂಕತಾ ಕ್ರಮಗಳನ್ನು ಕೈಗೊಳ್ಳಬೇಕು. ಸಿಲಿಕಾನ್ ಸಿಟಿ ರಕ್ಷಣೆಗೆ ಕಟಿಬದ್ಧರಾಗಿ, ರಾಜ್ಯ ಸರಕಾರ ಮತ್ತು ಕೇಂದ್ರ ಸರಕಾರ ಪರಿಸರ ಸಂರಕ್ಷಣೆಗಾಗಿ ರೂಪಿಸಿರುವ ಎಲ್ಲ ಕಾಯಿದೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಹಳೇ ಶಿವಪ್ಪನಾಯಕ ಮಾರುಕಟ್ಟೆಯಲ್ಲಿದ್ದ ಹೂವಿನ ವ್ಯಾಪಾರಿಗಳಿಗೆ ಹೊಸ ಕಟ್ಟಡದಲ್ಲಿ ಸಿಗುವ ಜಾಗದ ಕನಸು ನನಸು, ಶಾಸಕ ಚನ್ನಬಸಪ್ಪ ಹೇಳಿಕೆ

ಹೂವು ಮಾರಲು ಹೊಸ ಕಟ್ಟಡದಲ್ಲಿ ಅವಕಾಶ

ಶಿವಮೊಗ್ಗ: ಹಳೇ ಶಿವಪ್ಪನಾಯಕ ಮಾರುಕಟ್ಟೆಯ ಲ್ಲಿದ್ದ ಹೂವಿನ ವ್ಯಾಪಾರಿಗಳಿಗೆ ಹೊಸ ಕಟ್ಟಡದಲ್ಲಿ ಸಿಗುವ ಜಾಗದ ಕನಸು ಈಗ ನನಸಾಗಿದೆ ಎಂದು ಶಾಸಕ ಎಸ್.ಎನ್.ಚನ್ನಬಸಪ್ಪ ತಿಳಿಸಿದರು.

ಅವರು ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕಳೆದ 17 ವರ್ಷಗಳ ಹಿಂದೆ ಶಿವಪ್ಪನಾಯಕ ಮಾರುಕಟ್ಟೆಯ ಜಾಗದಲ್ಲಿ ಹೊಸ ಕಟ್ಟಡ ನಿರ್ಮಾಣಕ್ಕಾಗಿ ಅಲ್ಲಿ ವ್ಯಾಪಾರ ಮಾಡಿಕೊಂಡು ಬರುತ್ತಿದ್ದ 117 ಹೂವಿನ ವ್ಯಾಪಾರಿಗಳು ಹಾಗೂ ಕೆಲವು ಗ್ರಂಥಿಕೆ ವ್ಯಾಪಾರಿಗಳನ್ನು ಅಲ್ಲಿಂದ ತೆರವುಗೊಳಿಸಲಾಗಿತ್ತು. ಈಗ ಅವರಿಗೆ ಮಲ್ಟಿಲೆವೆಲ್ ಪಾರ್ಕಿಂಗ್ ಕಟ್ಟಡದಲ್ಲಿ ಕಟ್ಟಡದಲ್ಲಿ ಅವಕಾಶ ಕಲ್ಪಿಸುವುದರ ಮೂಲಕ ನೆನೆಗುದಿಗೆ ಬಿದ್ದಿದ್ದ ಹೂವಿನ ವ್ಯಾಪಾರಿಗಳ ಬಹುವರ್ಷಗಳ ಕನಸನ್ನು ಮಹಾನಗರಪಾಲಿಕೆ ನನಸಾಗಿಸಿದ್ದು ಜಿಲ್ಲಾಧಿಕಾರಿಗಳು ನಿನ್ನೆ ಆದೇಶ ನೀಡಿದ್ದಾರೆ ಎಂದು ಹೇಳಿದರು.

ಅಂದಿನ ನಗರಸಭೆ, ಜಿಲ್ಲಾಧಿಕಾರಿಗಳು, ರಾಜ್ಯ ಸರ್ಕಾರ ಹಾಗೂ ಅಂದಿನ ಶಾಸಕರೆಲ್ಲರೂ ಸೇರಿ ಈ ಹೂವಿನ ವ್ಯಾಪಾರಿಗಳಿಗೆ ಪುನರ್ವಸತಿ ಕಲ್ಪಿಸುವ ದೃಷ್ಟಿಯಿಂದ ಒಂದು ಹೊಸ ರೂಪಕೊಡುವ ಕೆಲಸ ಮಾಡಲಾಗಿತ್ತು. ಅವರಿಗೆ ಬದಲಿ ವ್ಯವಸ್ಥೆ ಕೊಡುವ ನಿರ್ಧಾರವನ್ನು ಜಿಲ್ಲಾಧಿಕಾರಿಗಳು ಬಾಡಿಗೆ ನಿಗಧಿಮಾಡಿ, ಆದೇಶ ಮಾಡುವುದರ ಮೂಲಕ ನಿನ್ನೆ (31-12-2025) ಸಾಕಾರಗೊಂಡಿದೆ. ಅಂದಿನ ಜಿಲ್ಲಾಧಿಕಾರಿಯಾಗಿದ್ದ ಪಂಕಜ್ಕುಮಾರ್ಪಾಂಡೆ ಅವರ ಅವಧಿಯಲ್ಲಿ ಈ ವ್ಯಾಪಾರಿಗಳಿಗೆ ಬದಲಿ ವ್ಯವಸ್ಥೆ ಕಲ್ಪಿಸುವ ಕಾರ್ಯ ಆರಂಭವಾಗಿತ್ತು. ಹಳೇ ಕಟ್ಟಡದಲ್ಲಿ ಹೂವಿನ ವ್ಯಾಪಾರಿಗಳಲ್ಲದೆ, ಬೇರೆ ಬೇರೆ ಬ್ಯಾಂಕುಗಳು, ರಾಜಕೀಯ ಪಕ್ಷ ಹಾಗೂ ಇನ್ನಿತರ ಸರ್ಕಾರಿ ಕಛೇರಿಗಳೂ ಇದ್ದವು. ಇವರಿಗೆ ಗಾರ್ಡನ್ ಏರಿಯಾದ ಪಾಲಿಕೆಯ ಹೊಸ ವಾಣಿಜ್ಯ ಸಂಕೀರ್ಣದಲ್ಲಿ ಅವಕಾಶ ಮಾಡಿಕೊಡಲಾಗುವುದು ಎಂದ ಅವರು, ಹೂವಿನ ವ್ಯಾಪಾರಿಗಳಿಗೆ 12 ವರ್ಷದ ಒಡಂಬಡಿಕೆಯೊಂದಿಗೆ ಹೊಸ ಕಟ್ಟಡದಲ್ಲಿ ಮಳಿಗೆ ನೀಡಲಾಗುತ್ತದೆ ಮಾಸಿಕ 5337 ರೂ. ಬಾಡಿಗೆ ಹಾಗೂ 1,15,351 ರು. ಠೇವಣಿ ಪಡೆದುಕೊಂಡು ಮಳಿಗೆ ನೀಡಲಾಗುವುದು. 12 ವರ್ಷಗಳ ನಂತರ ಅವರು ಅಂದಿನ ನಿಯಮದ ಪ್ರಕಾರ ಬಾಡಿಗೆ ನವೀಕರಣ ಮಾಡಿಕೊಳ್ಳಬೇಕಾಗುತ್ತದೆ ಎಂದರು. ಈ 117 ವ್ಯಾಪಾರಿಗಳಿಗೆ ನೀಡುವ ಪುನರ್ವಸತಿ ಇದಾಗಿದ್ದು, ಅವರಿಗೆ ಮಳಿಗೆಗಳನ್ನು ಹಂಚಿದ ಬಳಿಕ ಉಳಿಯುವ ಮಳಿಗೆಗಳಿಗೆ ಹರಾಜು ಮೂಲಕ ಅವುಗಳನ್ನು ನೀಡಲಾಗುವುದು. ಹಳೇ ತಾಲ್ಲೂಕು ಕಛೇರಿ ರಸ್ತೆಯಲ್ಲಿ ಈಗಿರುವ ಹೂವಿನ ವ್ಯಾಪಾರಿಗಳು ಇನ್ನು ಮುಂದೆ ಅಲ್ಲಿಂದ ಹೊಸ ಕಟ್ಟಡಕ್ಕೆ ಸ್ಥಳಾಂತರಗೊಳ್ಳಬೇಕು. ಆ ರಸ್ತೆಯಲ್ಲಿ ಯಾವುದೇ ಹೊಸ ಹೂವಿನ ವ್ಯಾಪಾರಿಗಳಿಗಾಗಲಿ, ಹಣ್ಣಿನ ವ್ಯಾಪಾರಿಗಳಿಗಾಗಲಿ ವ್ಯಾಪಾರ ಮಾಡಲು ಅವಕಾಶ ಇರುವುದಿಲ್ಲ. ಈ ನಿಟ್ಟಿನಲ್ಲಿ ಪೊಲೀಸರು ಈಗಾಗಲೇ ಕಾರ್ಯೋನ್ಮುಖರಾಗಿದ್ದು ಆ ರಸ್ತೆಯನ್ನು ಸಾರ್ವಜನಿಕರ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಲಿದ್ದಾರೆ ಎಂದು ತಿಳಿಸಿದರು. ಗೌರವ ಲಾಡ್ಜ್ ಬಳಿ ಇರುವ ಪಾಲಿಕೆ ಕಟ್ಟಡದಲ್ಲಿ ಹಿಂದಿನ ಮಾರುಕಟ್ಟೆ ಕೆಡವಿದಾಗ ಅಲ್ಲಿದ್ದ ಸಂಘ-ಸಂಸ್ಥೆಗಳ ಕಛೇರಿಗಳಿಗೆ ಈ ಕಟ್ಟಡದಲ್ಲಿ ಅವಕಾಶ ನೀಡಲಾಗುವುದು ಎಂದರು.

ಶಿವಪ್ಪನಾಯಕ-ಅಮೀರ್ಅಹ್ಮದ್ ವೃತ್ತದಲ್ಲಿರುವ ಅಂಡರ್ಪಾಸ್ ಬಳಕೆಗೆ ಸಮಸ್ಯೆಗಳಿದ್ದು, ಅವುಗಳನ್ನು ಬಗೆಹರಿಸಿಕೊಳ್ಳಬೇಕಾಗಿದೆ. ಇನ್ನು ಕೆಲವೇ ದಿನಗಳಲ್ಲಿ ಆ ಕುರಿತು ನಿರ್ಧಾರ ಕೈಗೊಳ್ಳಲಾಗುವುದು. ಹರಾಜಿನ ಮೂಲಕ ಮಹಿಳಾ ಬಜಾರ್ಆರಂಭಿಸುವ ಬಗ್ಗೆಯೂ ವಿಚಾರ ವಿನಿಮಯ ನಡೆಯುತ್ತಿದ್ದು, ಕೆಆರ್ಪುರಂನಲ್ಲಿ ಕನ್ಸರ್ವೆನ್ಸಿ ಅಭಿವೃದ್ಧಿಪಡಿಸಿ ಅವರಿಗೆ ಅವಕಾಶ ಕಲ್ಪಿಸಲಾಗುವುದು ಎಂದು ತಿಳಿಸಿದ ಅವರು, ಬಹುವರ್ಷಗಳಿಂದ ನೆನೆಗುದಿಗೆ ಬಿದ್ದ ಹೂವಿನ ವ್ಯಾಪಾರಿಗಳ ಸಮಸ್ಯೆಯನ್ನು ಬಗೆಹರಿಸುವಲ್ಲಿ ಶ್ರಮಿಸಿದ ಪಾಲಿಕೆ ಆಯುಕ್ತ ಮತ್ತು ಜಿಲ್ಲಾಧಿಕಾರಿಗಳನ್ನು ಶಾಸಕರು ಅಭಿನಂದಿಸಿದರು. ಪಾಲಿಕೆಯ ನಿರ್ಮಿತ ಗಾಂಧಿನಗರದ ವಾಣಿಜ್ಯ ಸಂಕೀರ್ಣ ಮತ್ತು ನೂತನವಾಗಿ ನಿರ್ಮಾಣಗೊಂಡ ವಾಣಿಜ್ಯ ಸಂಕೀರ್ಣದ ಹರಾಜು ಪ್ರಕ್ರಿಯೆ ಚಾಲನೆಯಲ್ಲಿದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಬಿಜೆಪಿ ನಗರಾಧ್ಯಕ್ಷ ಮೋಹನ್ರೆಡ್ಡಿ, ಪ್ರಮುಖರಾದ ಜ್ಞಾನೇಶ್ವರ, ದೀನ್ದಯಾಳ್, ಶ್ರೀನಾಗ, ಮುರಳಿ, ವಿಶ್ವನಾಥ್, ಎನ್.ಜೆ. ನಾಗರಾಜ್ ಇದ್ದರು.

ಸುದ್ದಿಗೋಷ್ಠಿಯಲ್ಲಿ ಶಾಸಕ ಎಸ್.ಎನ್.ಚನ್ನಬಸಪ್ಪ ಅವರು ಮಾತನಾಡಿದರು.

ಮಳಿಗೆ ಸಮಸ್ಯೆ ಪರಿಹಾರ

ಹಲವಾರು ವರ್ಷಗಳಿಂದ ನೆನೆಗುದಿಗೆ ಬಿದ್ದಿದ್ದ ಹೂವಿನ ವ್ಯಾಪಾರಿಗಳ ಮಳಿಗೆ ಸಮಸ್ಯೆಯನ್ನು ಬಗೆಹರಿಸಿದ ಶಾಸಕರ ಎಸ್.ಎನ್. ಚನ್ನಬಸಪ್ಪನವರನ್ನು ಶಿವಪ್ಪನಾಯಕ ಹೂವಿನ ಮಾರುಕಟ್ಟೆ ವರ್ತಕರ ಸಂಘದ ಅಧ್ಯಕ್ಷ ಡಿ. ಗೋವಿಂದಣ್ಣ ಅಭಿನಂದಿಸಿದ್ದಾರೆ.

ನಿವೇಶನ ನೀಡಿಕೆ ಸಂವಿಧಾನಬಾಹಿರ

ಶಿವಮೊಗ್ಗ ಬೆಂಗಳೂರಿನ ಕೋಗಿಲುನಲ್ಲಿ ಅಕ್ರಮ ನಿವಾಸಿಗಳಿಗೆ ಸಾರ್ವಜನಿಕರ ತೆರಿಗೆಹಣದಿಂದ ನಿರ್ಮಿಸಲಾದ ವಸತಿ ಸಮುಚ್ಚಯದಲ್ಲಿ ಕಾಂಗ್ರೆಸ್ ಸರಕಾರ ನಿವೇಶನ ನೀಡುತ್ತಿರುವುದು ಸಂವಿಧಾನಬಾಹಿರವಾಗಿದೆ. ಇದನ್ನು ಬಿಜೆಪಿ ತೀವ್ರವಾಗಿ ವಿರೋಧಿಸುತ್ತದೆ ಎಂದು ಶಾಸಕ ಎಸ್.ಎನ್.ಚನ್ನಬಸಪ್ಪ ತಿಳಿಸಿದರು.

ಅವರು ಇಂದು ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಶಿವಮೊಗ್ಗ ಸೇರಿದಂತೆ ಕಳೆದ 30-40 ವರ್ಷಗಳಿಂದ ರಾಜ್ಯದ ಅನೇಕ ಕಡೆ ಬಡವರು ಕಂದಾಯ, ಗಾಂವ್ಠಾಣಾಗಳಲ್ಲಿ ಅತಿಕ್ರಮಣ ಮಾಡಿ ಮನೆ ಕಟ್ಟಿಕೊಂಡು ವಾಸಿಸುತ್ತಿದ್ದಾರೆ. ಬಿಜೆಪಿ ಅವರಿಗೆ ಹಕ್ಕುಪತ್ರಕ್ಕಾಗಿ ಹೋರಾಡುತ್ತಾ ಬಂದಿದೆ. ಸರ್ಕಾರದ ವಿವಿಧ ಕಾಯಿದೆ, ಕಾನೂನು ನಿಯಮಗಳ ತೊಡಕು ಇದ್ದಿದ್ದರಿಂದ ಇನ್ನೂ ಅವರಿಗೆ ಹಕ್ಕುಪತ್ರ ನೀಡಲಾಗಲಿಲ್ಲ. ಆದರೆ ಕೇರಳದಿಂದ ವಲಸೆ ಬಂದು ಕೋಗಿಲುನಲ್ಲಿ ಅಕ್ರಮ ನಿವೇಶನ ನಿರ್ಮಿಸಿ ವಾಸಿಸುತ್ತಿದ್ದ ಮುಸ್ಲಿಂಮರಿಗೆ ಬಯಪ್ಪನಹಳ್ಳಿಯಲ್ಲಿ ಸಾರ್ವಜನಿಕರ ತೆರಿಗೆ ಹಣದಿಂದ ನಿರ್ಮಿಸಲಾದ ವಸತಿ ಸಮುಚ್ಚಯದಲ್ಲಿ ಮನೆ ಕೊಡುತ್ತಿರುವುದು ಮತಬ್ಯಾಂಕ್ ರಾಜಕಾರಣವಲ್ಲದೆ ಮತ್ತೇನು ಅಲ್ಲ. ಕೇರಳದ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರ ಒಂದು ಟ್ವೀಟ್ಗೆ ಕಾಂಗ್ರೆಸ್ನ ಪ್ರಧಾನ ಕಾರ್ಯದರ್ಶಿ ಹಾಗೂ ರಾಜ್ಯ ಉಸ್ತುವಾರಿ ವೇಣುಗೋಪಾಲ್ ಅವರ ಒಂದು ದೂರವಾಣಿಗೆ ಥಟ್ ಅಂಥ ಎದ್ದುನಿಂತು ಅತಿಕ್ರಮಣದಾರರಿಗೆ ತಲಾ 11.20ಲಕ್ಷ ರುಪಾಯಿ ವೆಚ್ಚದ ಮನೆಯನ್ನು ನೀಡುತ್ತಿರುವುದು ಎಷ್ಟರಮಟ್ಟಿಗೆ ಸರಿ ಎಂದು ಪ್ರಶ್ನಿಸಿದರು.

ಕಳೆದ ಹಲವಾರು ವರ್ಷಗಳಿಂದ ವಾಸಿಸುತ್ತಿರುವವರಿಗೆ ಒಂದು ಕಾನೂನು. ಸರಕಾರಿ ಜಾಗದಲ್ಲಿ ಅತಿಕ್ರಮಣ ಮಾಡುವವರಿಗೆ ಇನ್ನೊಂದು ಕಾನೂನು ಮಾಡುತ್ತಿರುವ ಕಾಂಗ್ರೆಸ್ಗೆ ಬಡವರ ಶಾಪ ತಟ್ಟಿದೆ. ಕೋಗಿಲುನಲ್ಲಿ ಅಕ್ರಮ ವಾಸಿಗಳಾಗಿರುವ 187 ಕುಟುಂಬಗಳು ನಿಮ್ಮ ಮೊಮ್ಮಕ್ಕಳಾ ಅಥವಾ ಸರಕಾರದ ಮಕ್ಕಳಾ ಎಂದು ಕಟುವಾಗಿ ಟೀಕಿಸಿದ ಅವರು, ಶಿವಮೊಗ್ಗದಲ್ಲಿ ಬಡವರಿಗೆ , ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರಿಗೆ ಮನೆ ಕೊಡಬೇಕು ಎಂದು ವಸತಿಸಚಿವ ಜಮೀರ್ಅಹ್ಮದ್ಖಾನ್ ಮತ್ತು ಕಂದಾಯ ಸಚಿವ ಕೃಷ್ಣಭೈರೇಗೌಡ ಅವರಲ್ಲಿ ಭಿಕ್ಷೆ ಬೇಡಿದರೂ ಕೂಡ ಇಲ್ಲಿಯವರೆಗೂ 10 ಕೋಟಿ ರುಪಾಯಿ ಕೊಡಲು ಹಣವಿಲ್ಲ. ಇವರು ದ್ವಂದ್ವನೀತಿ ಅನುಸರಿಸುತ್ತಿದ್ದಾರೆ. ಆದರೆ ಕೋಗಿಲು ಅಕ್ರಮ ನಿವಾಸಿಗಳಿಗೆ ಥಟ್ ಅಂತ ಸಿದ್ದವಾದ ಮನೆಯನ್ನೇ ಕೊಡುತ್ತಿರುವುದನ್ನು ಬಿಜೆಪಿ ಖಂಡಿಸುತ್ತದೆ. ಮೊದಲು ಶಿವಮೊಗ್ಗದವರಿಗೆ ಹಕ್ಕುಪತ್ರ ಕೊಡಲಿ. ನಂತರ ನಿಮ್ಮ ಕೆಲಸ ಮಾಡಿಕೊಳ್ಳಿ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಬಿಜೆಪಿ ನಗರಾಧ್ಯಕ್ಷ ಮೋಹನ್ರೆಡ್ಡಿ, ಪ್ರಮುಖರಾದ ಜ್ಞಾನೇಶ್ವರ, ದೀನ್ದಯಾಳ್, ಶ್ರೀನಾಗ, ಮುರಳಿ, ವಿಶ್ವನಾಥ್, ಎನ್.ಜೆ. ನಾಗರಾಜ್ ಇದ್ದರು.

ಕ್ಯಾನ್ಸರ್‌ಗೆ ಆರಂಭಿಕ ಹಂತದಲ್ಲೇ ಚಿಕಿತ್ಸೆ ಪಡೆಯಿರಿ

ಶಿಕಾರಿಪುರ: ಮಾರಕ ಕ್ಯಾನ್ಸರ್ಕಾಯಿಲೆ ಸಮಾಜವನ್ನು ವ್ಯಾಪಕವಾಗಿ ಕಾಡುತ್ತಿದ್ದು, ಹಿಂಜರಿಕೆ ಬಿಟ್ಟು ಆರಂಭಿಕ ಹಂತದಲ್ಲಿಯೇ ಸೂಕ್ತ ಚಿಕಿತ್ಸೆ ಮೂಲಕ ಕಾಯಿಲೆಯಿಂದ ಪಾರಾಗಿ ನೆಮ್ಮದಿಯ ಬದುಕನ್ನು ಅನುಭವಿಸುವಂತೆ ನಾರಾಯಣ ಹೃದಯಾಲಯದ ಅಂಕಾಲಜಿ ತಜ್ಞ ವೈದ್ಯೆ ಡಾ.ಅಪರ್ಣಾ ಶ್ರೀವತ್ಸ ತಿಳಿಸಿದರು.

ಪಟ್ಟಣದ ಸ್ಕಂದ ಮೆಡಿಕಲ್ ಸಭಾಂಗಣದಲ್ಲಿ ಶಿವಮೊಗ್ಗದ ಸಹ್ಯಾದ್ರಿ ನಾರಾಯಣ ಆಸ್ಪತ್ರೆ, ರೋಟರಿ ಕದಂಬ ಶಿಕಾರಿಪುರ ಹಾಗೂ ಸ್ಕಂದ ಮೆಡಿಕಲ್ಸ್ ಮತ್ತು ಜನರಲ್ ಸ್ಟೋರ್ವತಿಯಿಂದ ನಡೆದ ಉಚಿತ ಮ್ಯಾಮೋಗ್ರಫಿ ತಪಾಸಣಾ ಶಿಬಿರ ಹಾಗೂ ಸ್ತನ ಕ್ಯಾನ್ಸರ್(ಬ್ರೆಸ್ಟ್ ಕ್ಯಾನ್ಸರ್) ತಪಾಸಣೆ ಶಿಬಿರ ಉದ್ಘಾಟಿಸಿ ಅವರು ಮಾತನಾಡಿದರು.

ಕ್ಯಾನ್ಸರ್ಮಹಾಮಾರಿ ಅತ್ಯಂತ ವ್ಯಾಪಕವಾಗಿ ಸಮುದಾಯವನ್ನು ಕಾಡುತ್ತಿದ್ದು, ಸ್ತನ ಕ್ಯಾನ್ಸರ್ಸಹಿತ ಎಲ್ಲ ರೀತಿಯ ಕ್ಯಾನ್ಸರ್ಆರಂಭದಲ್ಲಿ ಯಾವುದೇ ರೀತಿಯ ಮುನ್ಸೂಚನೆಯನ್ನು ಪತ್ತೆ ಹಚ್ಚುವುದು ಕಷ್ಟಸಾಧ್ಯ ಎಂದ ಅವರು ಕ್ಯಾನ್ಸರ್ಬಗ್ಗೆ ಆತಂಕಪಡದೆ ಹಿಂಜರಿಕೆ ತೊರೆದು ಆರಂಭಿಕ ಹಂತದಲ್ಲಿಯೇ ಸೂಕ್ತ ಚಿಕಿತ್ಸೆ ಮೂಲಕ ಪಾರಾಗಬಹುದಾಗಿದೆ ಎಂದು ತಿಳಿಸಿದರು.

ಕ್ಯಾನ್ಸರ್ಮಹಾಮಾರಿಯನ್ನು ತಡೆಗಟ್ಟಲು ಜೀವನ ಶೈಲಿ ಬಹು ಮುಖ್ಯವಾಗಿದೆ ಎಂದ ಅವರು ಇತ್ತೀಚಿನ ವರ್ಷದಲ್ಲಿ ಬಹುತೇಕ ಮಹಿಳೆಯರು ಹೊಟ್ಟೆ,ಕರಳು, ಗಂಟಲು ಕ್ಯಾನ್ಸರ್, ಸ್ತನ ಕ್ಯಾನ್ಸರ್ನಿಂದ ಬಳಲುತ್ತಿದ್ದು ಪುರುಷರ ರೀತಿ ಮಹಿಳೆಯರು ತಂಬಾಕು, ಆಲ್ಕೋಹಾಲ್ ಸೇವನೆಯ ದುರಭ್ಯಾಸ ಕ್ಯಾನ್ಸರ್ಕಾಯಿಲೆಗೆ ಬಹು ಮುಖ್ಯ ಕಾರಣವಾಗಿದೆ ಈ ದಿಸೆಯಲ್ಲಿ ಕ್ಯಾನ್ಸರ್ಮಹಾಮಾರಿಯಿಂದ ಪಾರಾಗಲು ಆಧುನಿಕ ಜೀವನಪದ್ಧತಿಯಿಂದ ಹೊರಬಂದು ನಿತ್ಯ ಯೋಗಾಸನ, ಕಡಿಮೆ ಪ್ರಮಾಣದಲ್ಲಿ ಅನ್ನ ಸೇವನೆ ಹೆಚ್ಚು ಹಣ್ಣು ಹಂಪಲು ತರಕಾರಿ ಆಹಾರ ಪದಾರ್ಥ ಸೇವನೆಯಿಂದ ರೋಗ ತಡೆಗಟ್ಟಬಹುದಾಗಿದೆ ಎಂದು ತಿಳಿಸಿದರು.

ಜಿಲ್ಲಾ ಕಾರ್ಯನಿರತ ಪರ್ತಕರ್ತರ ಸಂಘದ ಉಪಾಧ್ಯಕ್ಷ ಕೆ.ಎಸ್ ಹುಚ್ರಾಯಪ್ಪ ಮಾತನಾಡಿದರು.

ಈ ಸಂದರ್ಭದಲ್ಲಿ ತಾಯಿ ಮತ್ತು ಮಕ್ಕಳ ಆಸ್ಪತ್ರೆಯ ಆಡಳಿತ ವೈದ್ಯಾಧಿಕಾರಿ ಡಾ.ಶಿವಾನಂದ್, ಕದಂಬ ರೋಟರಿ ಕ್ಲಬ್ ಅಧ್ಯಕ್ಷ ಶಿವಮೂರ್ತಿ, ಸಂಸ್ಥಾಪಕ ಅಧ್ಯಕ್ಷ ರಘು ಎಂ.ಆರ್,ಸದಸ್ಯ ಸುನೀಲ್ ನ್ಯಾಮತಿ (ಸಿದ್ದು), ಸುಶ್ರುತ ಆಸ್ಪತ್ರೆಯ ವೈದ್ಯ ಡಾ.ಮಹೇಶ್, ತಾ.ಪರ್ತಕರ್ತರ ಸಂಘದ ಸಂಸ್ಥಾಪಕ ಅಧ್ಯಕ್ಷ ಬಿ.ಸಿ ವೇಣುಗೋಪಾಲ್,ಸ್ಕಂದ ಮೆಡಿಕಲ್ಸ್ ಮಾಲಿಕ ನಾಗರಾಜ್,ಸಂತೋಷ್ ಸಕ್ರಿ, ನಾರಾಯಣ ಆಸ್ಪತ್ರೆ ಮಾರುಕಟ್ಟೆ ವಿಭಾಗದ ಗಣೇಶ್ ಮತ್ತಿತರರು ಉಪಸ್ಥಿತರಿದ್ದರು.

ಕ್ಯಾನ್ಸರ್ ತಪಾಸಣೆ ಶಿಬಿರದಲ್ಲಿ ನಾರಾಯಣ ಹೃದಯಾಲಯದ ಅಂಕಾಲಜಿ ತಜ್ಞ ವೈದ್ಯೆ ಡಾ. ಅಪರ್ಣಾ ಶ್ರೀವತ್ಸ ಮಾತನಾಡಿದರು.

4ಕ್ಕೆ ಬನ್ನಂಜೆ 90ರ ವಿಶ್ವ ನಮನ

ಶಿವಮೊಗ್ಗ: ಶ್ರೀಗಂಧ ಸಂಸ್ಥೆ, ಬನ್ನಂಜೆ ಅಭಿಮಾನಿಗಳ ಬಳಗ ಹಾಗೂ ಬೆಂಗಳೂರಿನ ಬನ್ನಂಜೆ ಗೋವಿಂದಾಚಾರ್ಯ ಪ್ರತಿಷ್ಠಾನ, ಈಶ್ವರವನ ಚಾರಿಟೇಬಲ್ ಟ್ರಸ್ಟ್ ಇವರ ಸಂಯುಕ್ತಾಶ್ರಯದಲ್ಲಿ ಜ.4ರ ಸಂಜೆ 4ಗಂಟೆಯಿಂದ ರಾತ್ರಿ 9ರ ವರೆಗೆ ಕುವೆಂಪು ರಂಗಮಂದಿರದಲ್ಲಿ ನಾಡುಕಂಡ ಶ್ರೇಷ್ಠ ಮೇಧಾವಿ, ಸಂಸ್ಕೃತ ವಿದ್ವಾಂಸರು, ಕವಿ ವಿದ್ಯಾವಾಚಾಸ್ಪತಿ ಪದ್ಮಶ್ರೀ ಡಾ.ಬನ್ನಂಜೆ ಗೋವಿಂದಾಚಾರ್ಯರ 90ನೇ ಜನ್ಮದಿನಾಚರಣೆ ಅಂಗವಾಗಿ ಬನ್ನಂಜೆ 90''''ರ ವಿಶ್ವ ನಮನ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ ಎಂದು ಬನ್ನಂಜೆ ಅಭಿಮಾನಿ ಬಳಗದ ಸಂಚಾಲಕ ವಿನಯ್ ಶಿವಮೊಗ್ಗ ತಿಳಿಸಿದರು.

ಅವರು ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಬನ್ನಂಜೆ ಗೋವಿಂದಾಚಾರ್ಯರ ವ್ಯಕ್ತಿತ್ವದ ವಿವಿಧ ಮಜಲುಗಳನ್ನು ಅನಾವರಣಗೊಳಿಸಲು ಮೂರು ವಿಶೇಷ ಉಪನ್ಯಾಸ ಹಮ್ಮಿಕೊಳ್ಳಲಾಗಿದೆ ಎಂದರು.

ಬನ್ನಂಜೆಯವರ ಸಾಂಸ್ಕೃತಿಕ ಪ್ರಜ್ಞೆ ಕುರಿತ ನೀನಾಸಂ ಹೆಗ್ಗೋಡಿನ ನಿರ್ದೇಶಕರಾದ ಕೆ.ವಿ. ಅಕ್ಷರ, ಬನ್ನಂಜೆ ಗೋವಿಂದಾಚಾರ್ಯ ಎಂಬ ವಿಸ್ಮಯ ಕುರಿತು ಮಂಕುತಿಮ್ಮನ ಕಗ್ಗ ಖ್ಯಾತಿಯ ವಿದ್ವಾನ್ ಜಿ.ಎಸ್.ನಟೇಶ್ ಹಾಗೂ ನಾನುಕಂಡ ನನ್ನ ಅಪ್ಪ ಕುರಿತು ಡಾ.ವೀಣಾ ಬನ್ನಂಜೆಯವರು ಮಾತನಾಡಲಿದ್ದಾರೆ ಎಂದರು.

ಶ್ರೀಗಂಧ ಸಂಸ್ಥೆಯ ಅಧ್ಯಕ್ಷ, ಮಾಜಿ ಉಪಮುಖ್ಯಮಂತ್ರಿ, ಕೆ.ಎಸ್.ಈಶ್ವರಪ್ಪ ಕಾರ್ಯಕ್ರಮ ಉದ್ಘಾಟಿಸಲಿದ್ದು, ಬೆಂಗಳೂರಿನ ಬನ್ನಂಜೆ ಗೋವಿಂದಾಚಾರ್ಯ ಪ್ರತಿಷ್ಠಾನದ ಅಧ್ಯಕ್ಷ ಡಾ.ಮಲ್ಲೇಪುರಂ, ಜಿ.ವೆಂಕಟೇಶ್, ಮಾಜಿ ಶಾಸಕ ಕೆ.ಬಿ.ಪ್ರಸನ್ನಕುಮಾರ್, ದುರ್ಗಾ ಲಾಡ್ಜ್ ಮಾಲೀಕರಾದ ಎಸ್.ವಿ. ದತ್ತಾತ್ರೇಯ, ಶ್ರೀ ವೆಂಕಟೇಶ್ವರ ಸ್ವೀಟ್ಸ್ಟಾಲ್ನ ಮಾಲೀಕರು ಉಪಸ್ಥಿತರಿರುವರು.

ಭಾಷೆ, ನೆಲ, ಜಲ ವಿಚಾರದಲ್ಲಿ ಒಗ್ಗಟ್ಟಾಗಿ



ಕನ್ನಡ ರಾಜ್ಯೋತ್ಸವ ಕಾರ್ಯಕ್ರಮವನ್ನು ತಾಯ್ನಾಡು ರಾಘವೇಂದ್ರ ಅವರು ಉದ್ಘಾಟಿಸಿದರು.

ಸೊರಬ: ಕನ್ನಡ ನಾಡು, ನುಡಿ, ಗಡಿ ವಿಷಯದಲ್ಲಿ ತೊಂದರೆಗಳು ಎದುರಾದಾಗ ಪ್ರತಿಯೊಬ್ಬ ಕನ್ನಡಿಗರು ಜಾತಿ, ಮತಗಳ ತೊರೆದು ಒಗ್ಗಟ್ಟಾಗಬೇಕು ಎಂದು ಕರ್ನಾಟಕ ರಕ್ಷಣಾ ವೇದಿಕೆ ಗಜ ಸೇನೆಯ ಸಂಸ್ಥಾಪಕ ಅಧ್ಯಕ್ಷ ತಾಯ್ನಾಡು ರಾಘವೇಂದ್ರ, ಕರೆ ನೀಡಿದರು.

ತಾಲೂಕಿನ ಬಾಡದ ಬೈಲು ಗ್ರಾಮದಲ್ಲಿ ಕರ್ನಾಟಕ ರಕ್ಷಣಾ ವೇದಿಕೆ ಗಜಸೇನೆ ವತಿಯಿಂದ ಆಯೋಜಿಸಲಾಗಿದ್ದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಕನ್ನಡ ರಾಜ್ಯೋತ್ಸವವನ್ನು ನವೆಂಬರ್1ರಂದು ಆಚರಿಸಲಾಗುತ್ತದೆ, ಇದು ರಾಜ್ಯದ ಸ್ಥಾಪನೆಯ ದಿನವಾಗಿದೆ, 1956ರಲ್ಲಿ ಭಾಷಾವಾರು ಪ್ರಾಂತ್ಯಗಳ ಪುನರ್ವಿಂಗಡಣೆಯ ನಂತರ ಕನ್ನಡ ಭಾಷೆ ಮಾತನಾಡುವ ಪ್ರದೇಶಗಳನ್ನು ಒಗ್ಗೂಡಿಸಿ ರಾಜ್ಯವನ್ನು ರಚಿಸಲಾಗಿದ್ದು ಆದರೆ ಶಾಶ್ವತ ಕನ್ನಡ ಹೃದಯದಲ್ಲಿರಲು ವರ್ಷಪೂರ್ತಿ ಕನ್ನಡ ರಾಜ್ಯೋತ್ಸವ ಆಚರಿಸುವಂತಾಗಬೇಕು ಎಂದರು.

ನಮ್ಮ ಕರವೇ ಗಜ ಸೇನೆ ಸಂಘಟನೆಯು ಕನ್ನಡ ಭಾಷೆ ಮತ್ತು ಸಂಸ್ಕೃತಿಯ ಪ್ರಾಮುಖ್ಯತೆಯನ್ನು ಎತ್ತಿ ತೋರಿಸುತ್ತದೆ. ರಾಜ್ಯದ ಏಕೀಕರಣ ಮತ್ತು ಅಭಿವೃದ್ಧಿಗೆ ಅನೇಕ ಹೋರಾಟಗಳನ್ನು ಮಾಡಿದೆ. ಕನ್ನಡಿಗರ ಹೆಮ್ಮೆ ಮತ್ತು ಭಾಷಾ ಪ್ರೇಮವನ್ನು ಉಳಿಸುವಲ್ಲಿ ಹೋರಾಟವನ್ನು ಮಾಡಿದ್ದೇವೆ ಎಂದರು. ಈ ಸಂದರ್ಭದಲ್ಲಿ ಕರವೇ ಗಜ ಸೇನೆ ವತಿಯಿಂದ ಶಾಲಾ ಮಕ್ಕಳಿಗೆ ಉಚಿತ ನೋಟ್ ಬುಕ್, ಉಚಿತ ಪೆನ್ಸಿಲ್ ಪೆನ್ನುಗಳನ್ನು ನೀಡಲಾಯಿತು ಹಾಗೂ ಊರಿನ ಹಿರಿಯ ನಾಗರಿಕರನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದ ಉದ್ಘಾಟನೆಯನ್ನು ಸಮಾಜ ಸೇವಕ ಡಾ. ಎಚ್.ವಿ. ಜ್ಞಾನೇಶ್ ನೆರವೇರಿಸಿದರು. ನಿವೃತ್ತ ಐಎಎಸ್ ಅಧಿಕಾರಿ ಶಿವಪ್ಪ, ರಾಜ್ಯ ಕರವೇ ಕರವೇ ಗಜ ಸೇನೆ ಕಾರ್ಮಿಕ ಘಟಕದ ಅಧ್ಯಕ್ಷ ಕೇಶವ ಮೂರ್ತಿ ಪೆಟ್ಕರ್,ಕಾನೂನು ಘಟಕದ ಅಧ್ಯಕ್ಷ, ಜಗದೀಶ್ ಗೌಡ, ರಾಜ್ಯ ಕರವೇ ಗಜ ಸೇನೆ ಕಾರ್ಯದರ್ಶಿ ಎಚ್. ಆರ್. ತೀರ್ಥೇಶ್, ಜಿಲ್ಲಾ ಕಾರ್ಯದರ್ಶಿ ಗುರುಪ್ರಸಾದ್, ತಿರುಪತಿ, ಅಂಕಿತ್ ಗೌಡ, ಡಾ. ಪ್ರಭು ಕೆ. ಸಾಹುಕಾರ್ ,ಡಾ. ವಾಜಿದ್, ಕರವೇ ಗಜ ಸೇನೆ ಬಾಡದ ಬೈಲು ಅಧ್ಯಕ್ಷ. ಎಂ. ಲೋಕೇಶ್ ಸೇರಿದಂತೆ ಪ್ರಮುಖರಿದ್ದರು.

ವಿದ್ಯಾರ್ಥಿಗಳಿಗೆ ವಿದ್ಯೆ ಜತೆ ಸಂಸ್ಕಾರ ಅವಶ್ಯ

ಶಿವಮೊಗ್ಗ: ವಿದ್ಯಾರ್ಥಿಗಳು ಜೀವನದಲ್ಲಿ ವಿದ್ಯೆ ಜೊತೆಗೆ ಸಂಸ್ಕಾರವನ್ನು ಕಲಿತು ಈ ದೇಶಕ್ಕೆ ಹಾಗೂ ಸಮಾಜಕ್ಕೆ ಶಕ್ತಿಯಾಗಬೇಕು ಆ ನಿಟ್ಟಿನಲ್ಲಿ ಎಲ್ಲರೂ ಪ್ರಯತ್ನಿಸಿ ಎಂದು ಶ್ರೀ ಕ್ಷೇತ್ರ ಹೊರನಾಡಿನ ಧರ್ಮಕರ್ತರಾದ ಜಿ. ಭೀಮೇಶ್ವರ ಜೋಶಿ ಕರೆ ನೀಡಿದರು.

ಅವರು ಇಂದು ಅನುಪಿನಕಟ್ಟೆಯಲ್ಲಿರುವ ಶ್ರೀ ರಾಮಕೃಷ್ಣ ಗುರುಕುಲ ಆಂಗ್ಲ ಮಾಧ್ಯಮ ವಸತಿ ಶಾಲೆಯಲ್ಲಿ ಆಯೋಜಿಸಿದ್ದ ಸತ್ಯನಾರಾಯಣ ಪೂಜೆ ಹಾಗೂ ಜನ್ಮದಾತರಿಗೆ ಪಾದಪೂಜೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ರಾಷ್ಟ್ರ ನಿರ್ಮಾಣದ ಕಾರ್ಯದಲ್ಲಿ ಜ್ಞಾನ ಹಾಗೂ ಭಾಗ್ಯದ ಕ್ಷಣವನ್ನು ಬಳಸಿಕೊಂಡು ದೇಶಕ್ಕೆ ಒಂದು ದೊಡ್ಡ ಶಕ್ತಿಯಾಗಿ ಬೆಳೆಯಬೇಕೆಂದು ವಿದ್ಯಾರ್ಥಿಗಳಿಗೆ ಕರೆ ನೀಡಿದರು. ಇಂದು ನಮಗೆ ಸರಿಯಾದ ಗುರಿಯಿಲ್ಲ, ಗುರು ಇಲ್ಲ ಎಂಬಂತಹ ಪರಿಸ್ಥಿತಿ ಕೆಲವೆಡೆ ನಿರ್ಮಾಣವಾಗಿದೆ ಅದು ನಮ್ಮ ದುರಂತ. ನಾವು ಸರಿಯಾದ ಗುರಿ ಹಾಗೂ ಗುರುವನ್ನು ಹೊಂದಬೇಕು. ಆ ನಿಟ್ಟಿನಲ್ಲಿ ರಾಮಕೃಷ್ಣ ವಿದ್ಯಾಸಂಸ್ಥೆ ಮಾಡುತ್ತಿರುವ ಕಾರ್ಯ ನಿಜಕ್ಕೂ ಸ್ವಾಗತಾರ್ಹ ಎಂದರು.

ಯಾರೇ ಆಗಲಿ ನಿಮ್ಮ ಬದುಕಿನಲ್ಲಿ ನಿಮಗೆ ಸಹಾಯ ಹಾಗೂ ಸಹಕಾರ ಮಾಡಿದವರನ್ನು, ವಿದ್ಯೆ ಕಲಿಸಿದ ಗುರುಗಳನ್ನು, ಜನ್ಮ ನೀಡಿದ ತಂದೆ-ತಾಯಿಯನ್ನು ಮರೆಯಬಾರದು. ನೀವು ಮುಂದೆ ನಿಮ್ಮ ಸ್ವಂತ ಕಾಲ ಮೇಲೆ ನಿಂತಾಗ ಅವರೆಲ್ಲರ ಋಣ ತೀರಿಸುವ ಹೊಣೆಗಾರಿಕೆ ನಿಮ್ಮಲ್ಲಿ ಬೆಳೆಯಬೇಕು. ನಮಗೆ ಈ ಬದುಕನ್ನು ಕಟ್ಟಿಕೊಳ್ಳಲು ಬೆಳೆಸಿದ ಯಾವುದೇ ವ್ಯಕ್ತಿಯನ್ನಾಗಲಿ ಸಂಘ-ಸಂಸ್ಥೆಯನ್ನಾಗಲಿ, ಶಾಲೆಗಳನ್ನಾಗಲಿ, ಶಿಕ್ಷಕರನ್ನಾಗಲಿ ನಾವು ಸದಾ ಸ್ಮರಿಸುವುದು ಅತ್ಯಗತ್ಯ.

ನಾನು ನನ್ನ ಜೀವನದಲ್ಲಿ 33 ವರ್ಷಗಳ ಕಾಲ ಸಾಕಷ್ಟು ಶಾಲಾ- ಕಾಲೇಜುಗಳಿಗೆ ವಿದ್ಯಾ ಸಂಸ್ಥೆಗಳಿಗೆ ಭೇಟಿ ನೀಡಿದ್ದೇನೆ ಆದರೆ ಈ ಗುರುಕುಲದ ವಿಶಿಷ್ಟತೆ ನಿಜಕ್ಕೂ ಶ್ಲಾಘನೀ ಯ ವರ್ಷಗಳಿಂದ ಇಂತಹ ಪಾದಪೂಜೆ ನಡೆಯು ತ್ತಿರುವುದು ಮೆಚ್ಚುಗೆಯ ವಿಷಯ ನಾವು ನಮ್ಮ ಜೀವನದಲ್ಲಿ ತಂದೆ ತಾಯಿಯರ ದೇವರ ಸಮಾಜದ ಹಾಗೂ ಗುರುವಿನ ಋಣವನ್ನು ತೀರಿಸಬೇಕು ಈ ಚತುರ್ಸ್ವರಗಳಲ್ಲಿ ಬದುಕನ್ನು ರೂಪಿಸಿಕೊಂಡಾಗ ಬದುಕು ಪರಿಪೂರ್ಣವಾಗುತ್ತದೆ ಎಂದರು.

ಕಾರ್ಯಕ್ರಮದ ದಿವ್ಯ ಸಾಹಿತ್ಯವರಿಸಿದ್ದ ಆದಿಚುಂಚನಗಿರಿ ಮಹಾ ಸಂಸ್ಥಾನದ ಪ್ರಧಾನ ಕಾರ್ಯದರ್ಶಿ ಶ್ರೀ ಪ್ರಸನ್ನನಾಥ ಸ್ವಾಮೀಜಿ 2026-27ರ ಸಾಲಿನಲ್ಲಿ ರಾಮಕೃಷ್ಣ ವಿದ್ಯಾಸಂಸ್ಥೆ ನಡೆಸಲು ಉದ್ದೇಶಿಸಿರುವ ರಾಮಕೃಷ್ಣ ಪದವಿ ಪೂರ್ವ ಕಾಲೇಜಿನ ನಾಮಫಲಕವನ್ನು ಅನಾವರಣಗೊಳಿಸಿ ಶುಭ ಹಾರೈಸಿದರು.

ಕಾರ್ಯಕ್ರಮದ ಮುಖ್ಯ ರೂವಾರಿಯಾಗಿದ್ದ ರಾಮಕೃಷ್ಣ ವಿದ್ಯಾಸಂಸ್ಥೆಯ ವ್ಯವಸ್ಥಾಪಕ ಟ್ರಸ್ಟಿ ಶೋಭಾ ಆರ್. ವೆಂಕಟರಮಣ ಅವರು ಮಾತನಾಡುತ್ತಾ ಕೇವಲ ಎರಡೇ ಎರಡು ಮಕ್ಕಳಿಂದ ಆರಂಭಗೊಂಡ ವಿದ್ಯಾಸಂಸ್ಥೆ ಈಗ ಸಾವಿರಾರು ಸಂಖ್ಯೆಯ ವಿದ್ಯಾರ್ಥಿಗಳನ್ನು ಬೆಳೆಸುತ್ತಿದೆ. ಇದಕ್ಕೆ ಸಂಸ್ಥಾಪಕರಾದ ಡಿ.ಎಂ. ವೆಂಕಟರಮಣ ಅವರ ಕೊಡುಗೆ ಅಪಾರವಾದದ್ದು.

ಅವರ ಹೆಜ್ಜೆಯ ಹಾದಿಯಲ್ಲಿ ಇಂದು ಸಂಸ್ಥೆ ಪಿಯು ಕಾಲೇಜನ್ನು ಸಹ ಆರಂಭಿಸಲು ಮುಂದಾಗಿದೆ ಎಂದರು.

ವಿಶೇಷವಾಗಿ ಈ ಕಾರ್ಯಕ್ರಮದಲ್ಲಿ ಶಾಲೆಯ ವಿದ್ಯಾರ್ಥಿಗಳು ತಮ್ಮ ಜನ್ಮದಾತರ, ಪೋಷಕರ ಪಾದಪೂಜೆಯನ್ನು ಧಾರ್ಮಿಕ ವಿಧಿ-ವಿಧಾನದೊಂದಿಗೆ ನೆರವೇರಿಸಿದರು. ಇದೇ ರಾಮಕೃಷ್ಣ ವಿದ್ಯಾನಿಕೇತನದ ಹಳೆಯ ಸಾಧಕ ವಿದ್ಯಾರ್ಥಿ ಪ್ರಸ್ತುತ ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ ಹಣಕಾಸು ಮತ್ತು ಲೆಕ್ಕಪತ್ರ ವಿಭಾಗದ ಆಡಳಿತ ಸಹಾಯಕರಾಗಿರುವ ಆಕಾಶ್ ಟಿ.ಎಸ್. ಅವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದು ಅವರನ್ನು ಆತ್ಮೀಯವಾಗಿ ಸನ್ಮಾನಿಸಲಾಯಿತು. .

ಕಾರ್ಯಕ್ರಮದಲ್ಲಿ ಪ್ರಾಸ್ತಾವಿಕವಾಗಿ ಟ್ರಸ್ಟ್ ನ ಸದಸ್ಯ ಡಿ.ಎಂ. ದೇವರಾಜ್ ಮಾತ್ನಾಡಿದರು.

ನಮ್ಮ ಭೂಮಿ ಪವಿತ್ರವಾದದ್ದು ಇಲ್ಲಿನ ಆಧ್ಯಾತ್ಮಿಕ ಸಂಪತ್ತು ಹಾಗೂ ಸಾಂಸ್ಕೃತಿಕ ಪರಂಪರೆ ನಿಜಕ್ಕೂ ನಮ್ಮ ಯುವಶಕ್ತಿಯನ್ನು ಇಡೀ ವಿಶ್ವದಲ್ಲೇ ಅತ್ಯಂತ ಶ್ರೇಷ್ಠವಾಗಿ ಬಳಸುತ್ತಿದೆ ಎಂದರು. ಮಕ್ಕಳು ತಂದೆ-ತಾಯಿ ತಮ್ಮ ಮಕ್ಕಳ ಅಶೋತ್ತರಗಳನ್ನು ಪೂರೈಸುವಲ್ಲಿ ಎಷ್ಟು ಕಷ್ಟಪಟ್ಟಿರುತ್ತಾರೆ ಎಂಬುದನ್ನು ಗಮನಿಸುವ ಅಗತ್ಯವಿರುತ್ತದೆ ಅದನ್ನು ಕಲಿಸಿಕೊಡುವ ನಿಟ್ಟಿನಲ್ಲಿ ಪಾದಪೂಜೆ ಅಂತಹ ಕಾರ್ಯಕ್ರಮ ಒಂದು ಪೂರಕ ಹಾಗೂ ಪ್ರೇರಕ.

-ಜಿ.ಭೀಮೇಶ್ವರ ಜೋಶಿ, ಶ್ರೀ ಕ್ಷೇತ್ರ ಹೊರನಾಡಿನ ಧರ್ಮಕರ್ತ

ಸಾಗರ ಸುತ್ತ ಸಹೃದಯರ ಬಳಗದಿಂದ ಸಾಧಕರಿಗೆ ಸನ್ಮಾನ | ಸಾಮಾಜಿಕ ಪಿಡುಗುಗಳ ವಿರುದ್ಧ ಜನಜಾಗೃತಿ ಕಾರ್ಯಾಗಾರ

ಜ.3ರಿಂದ ಸಾಗರ ಸುತ್ತ ಸಹೃದಯರಿಗೊಂದು ಸಹೃದಯೋತ್ಸವ

ರಮೇಶ್ ಹೆಗಡೆ ಗುಂಡೂಮನೆ

ಸಾಗರ: ಕಳೆದ 25 ವರ್ಷಗಳಿಂದ ವರ್ಷಕ್ಕೊಮ್ಮೆ ನಗಿಸಿ, ಜತೆಗೆ ಇತಿಹಾಸ, ವಿಜ್ಞಾನ ತಿಳಿಸಿ, ಸಾಧಕರನ್ನು ಸನ್ಮಾನಿಸಿ, ಎಳೆಯರನ್ನು ಪ್ರೋತ್ಸಾಹಿಸಿ ಸಹೃದಯರಿಗೆ ಖುಷಿ ಖುಷಿ ಎನಿಸಿ ತಾನೂ ಬೆಳೆದು ಬರುತ್ತಿರುವ ಸಂಸ್ಥೆ ಸಾಗರ ಸುತ್ತ ಸಹೃದಯರ ಬಳಗ. ಪ್ರತಿ ವರ್ಷ ಜನವರಿಯಲ್ಲಿ ಕಾರ್ಯಕ್ರಮ ಮಾಡುವ ಈ ಸಂಸ್ಥೆ ಕೇವಲ ಕಾರ್ಯಕ್ರಮಕ್ಕೆ ಸೀಮಿತವಾಗದೆ ಸಾಮಾಜಿಕ ಕಾಳಜಿಯ ಕಾರ್ಯದಲ್ಲಿಯೂ ತನ್ನನ್ನು ತೊಡಗಿಸಿಕೊಂಡು, ಸಾಮಾಜಿಕ ಪಿಡುಗುಗಳ ವಿರುದ್ದ ಜನಜಾಗೃತಿ ಕಾರ್ಯಾಗಾರ ಏರ್ಪಡಿಸಿ ಅರಿವು ಮೂಡಿಸುತ್ತ ಬಂದಿರುವುದು ಅದರ ಹೆಗ್ಗಳಿಕೆ.

ಲೇಖಕರಾಗಿರುವ ಸಂಸ್ಥೆಯ ಅಧ್ಯಕ್ಷ ಜಿ. ನಾಗೇಶ್ ರಚಿಸಿ ನಿರ್ದೇಶಿಸಿರುವ ರೈತ ಆತ್ಮಹತ್ಯೆ, ಬಹಿಷ್ಕಾರ, ಕುಡಿತದ ಕೆಡಕು, ಕೈ ಕೆಸರಾದರೆ ಬಾಯಿ ಮೊಸರು, ಮುಂತಾದ ನಾಟಕಗಳು ಸಕಾಲಿಕವಾದ ತಿಳಿವು ನೀಡಿ ಗ್ರಾಮೀಣ ಜನರ ಅರಿವು ಹೆಚ್ಚಿಸುವಲ್ಲಿಯೂ ಪಾತ್ರವಹಿಸಿದೆ. ಮಾತ್ರವಲ್ಲ ಜೈಲು ಖೈದಿಗಳ ಮನಪರಿವರ್ತನೆಗೂ ನಾಟಕ ಪ್ರದರ್ಶಿಸಿದಿದೆ ಇಂತಹ ಸಂಸ್ಥೆಯ ರಜತ ಮಹೋತ್ಸವ ಈ ಬಾರಿ ಜನವರಿ 3 ಮತ್ತು 4 ರಂದು ಇಲ್ಲಿನ ಗಾಂಧಿಮೈದಾನದಲ್ಲಿ ನಡೆಯಲಿದೆ.

ಹಿನ್ನೆಲೆ: ಇತಿಹಾಸ ಸಮ್ಮೇಳನದ ಮೂಲಕ ತೆರೆದುಕೊಂಡ ಸಹೃದಯ ಬಳಗ ಕಳೆದ 25 ವರ್ಷಗಳಿಂದ ಸಾಗರೋತ್ಸವದ ಹೆಸರಿನಲ್ಲಿ ಒಂದಿಲ್ಲೊಂದು ಜನಾಕರ್ಷಕ ಕರ್ಯಕ್ರಮ ನೀಡುತ್ತ ಬಂದಿದೆ. ಆರಂಭದ 7 ವರ್ಷ ಇತಿಹಾಸ ವೇದಿಕೆಯೊಂದಿಗೆ ಇತಿಹಾಸ ಸುತ್ತುವರಿದ ಸಮ್ಮೇಳನ ಆಯೋಜಿಸಿ ಕೆಳದಿ ಸೇರಿದಂತೆ ಮಲೆನಾಡ ಭಾಗದ ರಾಜಮನೆತನದ ಇತಿಹಾಸದ ಪರಿಚಯ ಅದನ್ನು ತಿಳಿಯುವ ಅಗತ್ಯವನ್ನು ಜನಮಾನಸಕ್ಕೆ ಮುಟ್ಟಿಸುವ ಕರ್ಯ ಮಾಡಿತ್ತು. ನಂತರ ಒಂದು ಹೆಜ್ಜೆ ಮುಂದೆ ಹೋಗಿ ಖಾದ್ಯ ಮೇಳಗಳ ಮೂಲಕ ಮಲೆನಾಡ ಖಾದ್ಯದ ಮಹತ್ವ ರುಚಿಶುಚಿಯ ಪರಿಚಯ ನೀಡಿತ್ತು. ನಂತರದ ವರ್ಷಗಳಿಂದ ವರ್ಷಕ್ಕೊಮ್ಮೆಯಾದರೂ ನಕ್ಕು ಹಗುರಾಗಿ ಎಂಬ ಆಶಯ ಹೊತ್ತು ಸಾಗರ ಸುತ್ತದ ಸಹೃದಯರಿಗೊಂದು ಸಹೃದಯೋತ್ಸವದ ನಗೆಹಬ್ಬ ಆಚರಿಸುತ್ತಿರುವುದು ವಿಶೇಷವಾಗಿ ನಡೆದು ಬಂತು.

ಅಲ್ಲದೆ ವಿವಿಧ ಕ್ಷೇತ್ರದಲ್ಲಿ ತಮ್ಮ ಶ್ರಮದ ಸಾಧನೆಯ ಮೂಲಕ ದೇಶಕ್ಕೆ ಕೊಡುಗೆ ನೀಡುತ್ತಿರುವವರನ್ನು ಗುರುತಿಸಿ ಸಾಧಕ ಗೌರವ ನೀಡುವ ಕಾರ್ಯ ವನ್ನೂ ಕೂಡ ಸಹೃದಯ ಬಳಗ ಮಾಡುತ್ತ ಬಂದಿದೆ. ಈಗಾಗಲೆ 500 ಕ್ಕೂ ಹೆಚ್ಚು ಬೇರೆಬೇರೆ ಸಾಧಕರನ್ನು ಈ ಅವಧಿಯಲ್ಲಿ ಗೌರವಿಸಿದೆ.

ಕೃಷಿ, ಪಶು ಸಂಗೋಪನೆ, ಪರಿಸರ ಕಾಳಜಿ, ಮಾಹಿತಿ ತಂತ್ರಜ್ಞಾನ, ಉದ್ಯಮ, ರಾಜಕೀಯ, ಸಹಕಾರಿ, ಸಾಂಸ್ಕೃತಿಕ, ಇತಿಹಾಸ, ಸಾಹಿತ್ಯ, ಜಾನಪದ ಮತ್ತು ಯಕ್ಷಗಾನ, ಕ್ರೀಡಾಕ್ಷೇತ್ರ ಅಲ್ಲದೆ ಬಾಲ ಪ್ರತಿಭೆಗಳನ್ನು ಗುರುತಿಸಿ ಸನ್ಮಾನಿಸುತ್ತಿರುವುದು ವೇದಿಕೆಯ ಹಿರಿಮೆ.

ನಗಲು ಬನ್ನಿ... ಇದು ಉಚಿತ:

ಆಧುನಿಕ ಧಾವಂತದ ಬದುಕಿನ ಒತ್ತಡಗಳಲ್ಲಿ ನಗುವುದಕ್ಕೂ ಸಮಯವಿಲ್ಲದ ಸ್ಥಿತಿ ನಿರ್ಮಾಣವಾಗಿದೆ. ಇನ್ನು ಮನರಂಜನೆಗೆ ಹೋಗಬೇಕಾದರೂ ಕಾಸುಕೊಟ್ಟು ಹೋಗಬೇಕು ಇದನ್ನು ಮನಗಂಡ ಬಳಗ ವರ್ಷಕ್ಕೊಮ್ಮೆ ನಕ್ಕು ಹಗುರಾಗುವುದಕ್ಕೆ ಅವಕಾಶ ಕಲ್ಪಿಸುವ ಕರ್ಯಕ್ರಮ ಆಯೋಜಿಸುತ್ತಿದೆ. ಇದು ಉಚಿತ. ಈ ಬಾರಿ ರಜತ ಸಂಭ್ರಮದ ಅಂಗವಾಗಿ ಎರಡು ದಿನ ನಗೆ ಹಬ್ಬ ಏರ್ಪಡಿಸಲಾಗಿದೆ. ಜ. 3ರಂದು ಮನು ಹಂದಾಡಿ ಅವರಿಂದ ನಗೆ ರಸಾಯನ, ಜ. 4ರಂದು ಮಿಮಿಕ್ರಿ ದಯಾನಂದ್, ಪ್ರಹ್ಲಾದ್ ಆಚಾರ್ಯ ಮತ್ತು ಉಮೇಶ್ ಗೌಡ ಅವರಿಂದ ನಗೆಹಬ್ಬ ಇರುತ್ತದೆ.

ಈ ಬಾರಿಯ ಪ್ರಶಸ್ತಿ ಪುರಸ್ಕೃತರು ಸಹೃದಯ ಸಾಹಿತಿ ಡಾ. ಬಿ.ಎಲ್.ನಾಗರಾಜ್ ಮಂಗಳೂರು, ರಾಜಕಾರಣಿ ಗೋಪಾಲಕೃಷ್ಣ ಬೇಳೂರು,ವೇಣುಗೋಪಾಲ್ ಗುರೂಜಿ ಶಿವಮೊಗ್ಗ, ವೈದ್ಯ ಡಾ. ಬಿ.ಎಲ್.ಸುರೇಶ್ ಬೆಂಗಳೂರು, ಕೃಷಿಕ ಡಾ. ಮಂಜುನಾಥ್ ಜಿ.ಎಂ. ದಾವಣಗೆರೆ, ಇತಿಹಾಸ ತಜ್ಞ ಡಾ. ಅಮರೇಶ್ ರಾಯಚೂರು, ಜಾನಪದ ಕಾವಿದೆ ಪುಷ್ಪ ಬಿ.ಕೆ. ಚಿಕ್ಕಮಗಳೂರು, ಸಹಕಾರಿ ಪ್ರಸನ್ನ ಕುಮಾರ್ಶಿವಮೊಗ್ಗ, ನೃತ್ಯ ಗುರು ವಿದ್ವಾನ್ ಗೋಪಾಲ್ ಎಂ.. ಹಾಗೂ ಅಬಸೆ ದಿನೇಶ್ ಕುಮಾರ್ಜೋಷಿ, ಮೇಘನಾ ಮೈಸೂರು, ಟಿ.ಡಿ.ಮೇಘರಾಜ್, ಟಿ.ವಿ.ಪಾಂಡುರಂಗ, ಆರ್. ಶ್ರೀನಿವಾಸ್, ಸುನಂದ, ವೀರಭದ್ರಪ್ಪ ಜಂಬಿಗೆ, ಎಲ್.ಚಂದ್ರಪ್ಪ, ಪುರುಷೋತ್ತಮ, ಮಾಲತೇಶಪ್ಪ, ಕೆ.ವಿ.ಜಯರಾಮ್, ಶಶಿಕಲಾ, ಮಂಜಪ್ಪ. ಇದಲ್ಲದೆ 100 ವರ್ಷದ ಗುಡಿಗಾರರ ಸಹಕಾರ ಸಂಘ,70 ವರ್ಷದ ಟೌನ್ ಹೌಸ್ ಬಿಲ್ಡಿಂಗ್ ಸೊಸೈಟಿ, 50 ವರ್ಷದ ಅಡಿಕೆ ಪರಿಷ್ಕರಣೆ ಮತ್ತು ಮಾರಾಟ ಸಹಕಾರ ಸಂಘ, 25 ವರ್ಷದ ಅಕ್ಷಯಸಾಗರ ಸೌಹಾರ್ದ ಸಹಕಾರಿ ಸಂಘ ಮತ್ತು ಅಂಭ್ರಿಣಿ ಸೌಹಾರ್ದ ಸೊಸೈಟಿ ಹಾಗೂ ಕರ್ನಾಟಕ ರಾಜ್ಯ ನಿವೃತ್ತ ನೌಕರರ ಸಂಘಕ್ಕೆ ಪ್ರಶಸ್ತಿ ನೀಡಲಾಗುತ್ತಿರುವುದು ಸಂಸ್ಥೆಯ ಉತ್ತಮ ಕಾರ್ಯಕ್ಕೆ ಉದಾಹರಣೆ.

ನಗುವುದಕ್ಕೆ ಸಮಯ ವಿಲ್ಲದ ಸ್ಥಿತಿ ನಿರ್ಮಾಣ

ಆಧುನಿಕ ಧಾವಂತದ ಬದುಕಿನ ಒತ್ತಡಗಳಲ್ಲಿ ನಗುವುದಕ್ಕೂ ಸಮಯವಿಲ್ಲದ ಸ್ಥಿತಿ ನಿರ್ಮಾಣವಾಗಿದೆ. ಇನ್ನು ಮನರಂಜನೆಗೆ ಹೋಗಬೇಕಾದರೂ ಕಾಸುಕೊಟ್ಟು ಹೋಗಬೇಕು ಇದನ್ನು ಮನಗಂಡ ಬಳಗ ವರ್ಷಕ್ಕೊಮ್ಮೆ ನಕ್ಕು ಹಗುರಾಗುವುದಕ್ಕೆ ಅವಕಾಶ ಕಲ್ಪಿಸುವ ಕಾರ್ಯಕ್ರಮ ಆಯೋಜಿಸುತ್ತಿದೆ.

ಮೆಕ್ಕೆಜೋಳ ಖರೀದಿ: ದಲ್ಲಾಳಿಗಳಿಂದ ನಷ್ಟ

ಲಕ್ಷಾಂತರ ರೈತರಿಗೆ ಮೋಸ: ಕ್ವಿಂಟಾಲ್‌ಗೆ 400ರಿಂದ 450 ರು. ನಷ್ಟ

- ಮಾರುಕಟ್ಟೆಯಲ್ಲಿ ಮೆಕ್ಕೆಜೋಳ ಬೆಲೆ ಎಂಎಸ್‌ಪಿಗಿಂತ ಕಡಿಮೆ
- ದಿನಕ್ಕೊಂದು ದರ ನಿಗದಿಪಡಿಸುವ ಮಧ್ಯವರ್ತಿಗಳು
- ಎಲೆಕ್ಟ್ರಾನಿಕ್ ತೂಕದ ಯಂತ್ರದಲ್ಲಿ ಪ್ರತಿ ಚೀಲಕ್ಕೆ 2 ರಿಂದ 3 ಕೆ.ಜಿ ಮೋಸ
- ಮೆಕ್ಕೆಜೋಳ ಖರೀದಿಗೆ ನಿಗದಿತ ಮಾನದಂಡ ರೂಪಿಸುವ ಅಗತ್ಯ
- ಕೆಲ ಸಂದರ್ಭದಲ್ಲಿ ಜೋಳ ಖರೀದಿಸಿದ ರೈತರಿಗೆ ಹಣ ನೀಡದೆ ಪರಾರಿ
- ಕೆಲವೊಮ್ಮೆ ಹಣ ಅಥವಾ ಜೋಳವೂ ಇಲ್ಲದೆ ರೈತರ ಪರದಾಟ
- ಬೆಲೆ ಕುಸಿತದಿಂದ ಅನ್ನದಾತರು ಕಂಗಾಲು

ಬೆಂಗಳೂರು: ಅತಿವೃಷ್ಟಿ ಮತ್ತು ಅನಾವೃಷ್ಟಿ ಸವಾಲು ಗೆದ್ದು ಈ ಬಾರಿ ಮೆಕ್ಕೆಜೋಳ ಬೆಳೆದಿರುವ ರಾಜ್ಯದ ಲಕ್ಷಾಂತರ ರೈತರಿಗೆ, ಖಾಸಗಿ ದಲ್ಲಾಳಿಗಳಿಂದ ಅನ್ಯಾಯವಾಗುತ್ತಿದೆ.

ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ಯೋಜನೆಯಲ್ಲಿ ಪ್ರತಿ ಕ್ವಿಂಟಾಲ್‌ಗೆ 2,400 ರು.ನಂತೆ ಮೆಕ್ಕೆಜೋಳ ಖರೀದಿಸಲು ಈಗಾಗಲೇ ಸರಕಾರ ಆದೇಶ ಹೊರಡಿಸಿದೆ. ಪ್ರತಿ ರೈತರಿಂದ ಗರಿಷ್ಠ 50ಕ್ವಿಂಟಾಲ್‌ವರೆಗೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು (ಪ್ಯಾಕ್), ಕರ್ನಾಟಕ ಹಾಲು ಒಕ್ಕೂಟ (ಕೆಎಂಎಫ್) ಮತ್ತು ಅದರ ಅಧೀನದ ಸಂಸ್ಥೆಗಳು ಹಾಗೂ ಕೃಷಿ ಉತ್ಪನ್ನ ಸಹಕಾರ ಮಾರಾಟ ಸಂಘಗಳಿಗೆ(ಟಿಎಪಿಸಿಎಂಸ್) ಖರೀದಿಸುವ ಜವಾಬ್ದಾರಿ ನೀಡಲಾಗಿದೆ. ಗ್ರಾಮೀಣ ಭಾಗದ ರೈತರಿಂದ ಖಾಸಗಿ ಮಧ್ಯವರ್ತಿಗಳು, ಪ್ರತಿ ಕ್ವಿಂಟಾಲ್‌ಗೆ 2,300 ಅಥವಾ 2,400 ರು.ಗೆ ಖರೀದಿಸಬೇಕಿತ್ತು. ಆದರೆ, ಪ್ರತಿ ಕ್ವಿಂಟಾಲ್‌ಗೆ 1,900 ಅಥವಾ 1,950 ರು.ನಂತೆ ಮೆಕ್ಕೆಜೋಳ ಖರೀದಿಸುತ್ತಿದ್ದಾರೆ. ಇದರಿಂದ ರೈತರಿಗೆ ಪ್ರತಿ ಕ್ವಿಂಟಾಲ್‌ಗೆ 400 ರಿಂದ 450 ರು.ನಷ್ಟವಾಗುತ್ತಿದೆ. ದಿನದಿಂದ ದಿನಕ್ಕೆ ದರ ತಗ್ಗಿಸುತ್ತಿರುವ ದಲ್ಲಾಳಿಗಳು, ಸರಕಾರದ ನಿಗದಿಪಡಿಸಿದ್ದ ಎಂಎಸ್‌ಪಿಗಿಂತ ಕಡಿಮೆ ದರದಲ್ಲಿ ಖರೀದಿಸಿ ರೈತರಿಗೆ ಮೋಸ ಮಾಡುತ್ತಿದ್ದಾರೆ.

54.74 ಲಕ್ಷ ಟನ್ ಉತ್ಪಾದನೆ: ಜಾಗತಿಕವಾಗಿ ಮೆಕ್ಕೆಜೋಳ ಉತ್ಪಾದನೆಗೆ ಭಾರತ ಪ್ರಮುಖ ಪಾಲು ನೀಡುತ್ತಿದೆ. ದೇಶದಲ್ಲೇ ಅತಿ ಹೆಚ್ಚು ಮೆಕ್ಕೆಜೋಳ ಬೆಳೆಯುವ ರಾಜ್ಯ ಕರ್ನಾಟಕವಾಗಿದೆ. ರಾಷ್ಟ್ರ ಮಟ್ಟದಲ್ಲಿ ಕರ್ನಾಟಕಕ್ಕೆ ಮಹಾರಾಷ್ಟ್ರ ಪೈಪೋಟಿ ನೀಡುತ್ತಿದೆ. ಈ ಬಾರಿ ರಾಜ್ಯದಲ್ಲಿ 20 ಲಕ್ಷ ಹೆಕ್ಟೇರ್ ಪ್ರದೇಶಗಳಲ್ಲಿ ಬೆಳೆ ಬೆಳೆಯಲಾಗಿದ್ದು, 54.74 ಲಕ್ಷ ಟನ್ ಮೆಕ್ಕೆಜೋಳ ಉತ್ಪಾದಿಸಲಾಗಿದೆ. ರಾಜ್ಯದ ಇತರ ಜಿಲ್ಲೆಗಳಗಿಂತ ದಾವಣಗೆರೆಯಲ್ಲಿ ಅತಿ ಮೆಕ್ಕೆಜೋಳ ಜಿಲ್ಲೆವಾಗಿದೆ. ಚಾಮರಾಜನಗರ,ಮೈಸೂರು, ಹಾಸನ, ಚಿಕ್ಕಮಗಳೂರು, ಚಿಕ್ಕಬಳ್ಳಾಪುರ, ಚಿತ್ರದುರ್ಗ, ಹಾವೇರಿ, ಬಳ್ಳಾರಿ, ಧಾರವಾಡ, ಬಾಗಲಕೋಟೆ, ಬೆಳಗಾವಿ ಹಾಗೂ ಶಿವಮೊಗ್ಗ ಸೇರಿ ರಾಜ್ಯದ ಶೇ.40 ಕೃಷಿ ಭೂಮಿಯಲ್ಲಿ ಈ ಬೆಳೆಯನ್ನು ಬೆಳೆಯಲಾಗುತ್ತಿದೆ. ಮಳೆಯಾಶ್ರಿತ ಬೆಳೆಯಾಗಿರುವ ಕಾರಣ ದಾವಣಗೆರೆ, ಹಾವೇರಿ, ಚಿತ್ರದುರ್ಗ ಜಿಲ್ಲೆಗಳಲ್ಲಿ ಅತಿ ಹೆಚ್ಚು ಮೆಕ್ಕೆಜೋಳ ಬಿತ್ತನೆಯಾಗುತ್ತದೆ. ಕೆಲ ಜಿಲ್ಲೆಗಳಲ್ಲಿ ನೀರಾವರಿ ಆಶ್ರಯದಲ್ಲಿ ಬೆಳೆ ಬೆಳೆಯುಲಾಗುತ್ತಿದೆ. ಪ್ರತಿ ಬಾರಿಯೂ ಬೆಂಕಿ ರೋಗದಿಂದ ಬೆಳೆ ಉಳಿಸಿಕೊಂಡು ಬರುತ್ತಿರುವ ರೈತರಿಗೆ ಸೂಕ್ತ ಬೆಲೆ ಸಿಗದೆ ಪರದಾಡುತ್ತಿದ್ದಾರೆ.

ಮಧ್ಯವರ್ತಿಗಳ ಕಳ್ಳಾಟ: ಪ್ರತಿ ವರ್ಷ ಮುಂಗಾರು ಹಂಗಾಮಿನಲ್ಲಿ ರೈತರು ಮೆಕ್ಕೆಜೋಳ ಬಿತ್ತನೆ ಮಾಡುತ್ತಾರೆ. ಇದು 4 ತಿಂಗಳು ಬೆಳೆಯಾಗಿದೆ. ನವೆಂಬರ್‌ನಿಂದ ಮಾರುಕಟ್ಟೆಯಲ್ಲಿ ಮೆಕ್ಕೆಜೋಳ ಮಾರಾಟ ಮಾಡಲು ಕೆಲ ರೈತರು ಮುಂದಾಗುತ್ತಾರೆ. ಮಾರುಕಟ್ಟೆಗೆ ಕೊಂಡೊಯ್ಯಲು ಬಾಡಿಗೆ, ಚೀಲ ಮತ್ತು ಕಾರ್ಮಿಕರಿಗೆ ಅಧಿಕ ವೆಚ್ಚ ತಗಲುವುದರಿಂದ ಗ್ರಾಮೀಣ ಭಾಗದ ಶೇ.80 ರೈತರು, ಖಾಸಗಿ ಮಧ್ಯವರ್ತಿಗಳಿಗೆ ಜೋಳ ಮಾರಾಟ ಮಾಡುತ್ತಾರೆ. ಪ್ರಸ್ತುತ ಮಾರುಕಟ್ಟೆಯಲ್ಲಿರುವ ದರಗಿಂತ ಕಡಿಮೆ ದರದಲ್ಲೇ ಜೋಳ ಖರೀದಿಸುವ ದಲ್ಲಾಳಿಗಳು, ಹೆಚ್ಚಿನ ಬೆಲೆಗೆ ಮಾರುಕಟ್ಟೆಯಲ್ಲಿ ಮಾರಾಟ ಮಾಡಿ ಹಣ ಮಾಡಿಕೊಳ್ಳುವ ದಂಧೆಯಲ್ಲಿ ತೊಡಗಿದ್ದಾರೆ. ಅಲ್ಲದೆ, ಬಿತ್ತನೆ ಬೀಜ, ನಿರ್ವಹಣೆ, ಕೂಲಿ ಸೇರಿ ಬೆಳೆಗಾಗಿ ಸಾವಿರಾರು ರು. ಖರ್ಚಾಗುತ್ತದೆ. ಖರೀದಿ ಕೇಂದ್ರಗಳಲ್ಲಿ ಬೆಂಬಲ ಬೆಲೆ ಯೋಜನೆಯಡಿ ಕೃಷಿ ಉತ್ಪನ್ನ ಖರೀದಿಸುವರೆಗೂ ಫಸಲು ದಾಸ್ತಾನು ಮಾಡಿಟ್ಟುಕೊಳ್ಳಲು ಬಹುತೇಕ ರೈತರಿಗೆ ಕಷ್ಟಸಾಧ್ಯ. ಹಾಗಾಗಿ, ಸಣ್ಣ ಹಾಗೂ ಮಧ್ಯಮ ರೈತರು ತುರ್ತು ಹಣ ಅಗತ್ಯಪೂರೈಸಲು ಸಿಕ್ಕ ಬೆಲೆಗೆ ಜೋಳ ಮಾರಾಟ ಮಾಡುತ್ತಿರುವುದು ಕಂಡುಬಂದಿದೆ.

ಹಿಂಡಲಗಾ ಜೈಲಿನೊಳಗೆ ತೂರಿಬಂದ ಡ್ರಗ್ಸ್, ಮೊಬೈಲ್

ಜೈಲು ಹೊರಗಡೆಯಿಂದ ಎಸೆದಿರುವುದು ವಿಡಿಯೊದಲ್ಲಿ ಸೆರೆ

ಬೆಳಗಾವಿ: ಹಿಂಡಲಗಾ ಕೇಂದ್ರ ಕಾರಾಗೃಹ ಅವಾಂತರಗಳು ಮುಂದುವರೆದಿವೆ. ಕಳೆದ ಕೆಲ ದಿನಗಳ ಹಿಂದೆಯಷ್ಟೇ ನಾಲ್ಕು ಮೊಬೈಲ್ ಹಾಗೂ ಗಾಂಜಾ ವಶಪಡಸಿಕೊಂಡ ಪ್ರಕರಣ ಬೆನ್ನಲ್ಲೇ ಜೈಲಿನ ಹೊರಗಿನಿಂದ ಮೊಬೈಲ್ ಹಾಗೂ ಡ್ರಗ್ಸ್ ಎಸೆದಿರುವ ಘಟನೆ ಬೆಳಕಿಗೆ ಬಂದಿದ್ದು ಸಿಸಿಟಿವಿ ದೃಶ್ಯಗಳು ವೈರಲ್ ಆಗಿವೆ.

ನಗರದ ಹೊರವಲಯದಲ್ಲಿರುವ ಹಿಂಡಲಗಾ ಕೇಂದ್ರ ಕಾರಾಗೃಹದ ಹೊರಗಿನಿಂದ ಮುಸುಕುಧಾರಿ ಮೊಬೈಲ್ ಹಾಗೂ ಡ್ರಗ್ಸ್ ಎಸೆದಿರುವ ದೃಶ್ಯಗಳು ಸಿಸಿಟಿವಿಯಲ್ಲಿ ಸೆರೆಯಾಗಿವೆ. ಮೂರಕ್ಕೂ ಅಧಿಕ ಸ್ಥಳದಲ್ಲಿ ಈ ರೀತಿಯಲ್ಲಿ ಹೊರಗಿನಿಂದ ವಸ್ತುಗಳನ್ನು ಎಸೆಯಲಾಗಿದ್ದು ಭದ್ರತಾ ಸಿಬ್ಬಂದಿಗಳ ನಿರ್ಲಕ್ಷ್ಯ ಎದ್ದು ಕಾಣುತ್ತಿದೆ.

ಪ್ರಕರಣ ಬೆಳಕಿಗೆ ಬರುತ್ತಿದ್ದಂತೆ ಗುರುವಾರ ಮಧ್ಯಾಹ್ನ ನಗರ ಪೊಲೀಸ್ ಆಯುಕ್ತ ಭೂಷಣ್ ಗುಲಾಬರಾವ್ ಬೋರಸೆ ಕೇಂದ್ರ ಕಾರಾಗೃಹಕ್ಕೆ ಭೇಟಿ ನೀಡಿದರು. ಈ ವೇಳೆ ಮಾತನಾಡಿದ ಅವರು, ಜೈಲು ಭದ್ರತೆ ಮೇಲ್ವಿಚಾರಣೆಯನ್ನು ಕೆಐಎಸ್‌ಎಫ್ ಸಿಬ್ಬಂದಿ ನೋಡಿಕೊಳ್ಳುತ್ತಿದ್ದಾರೆ. ವಿಡಿಯೊ ಪರಿಶೀಲನೆಯ ಬಳಿಕ ಸತ್ಯಾಸತ್ಯತೆ ಹೊರಬರುತ್ತದೆ. ಇಂತಹ ಘಟನೆಗಳು ಮರುಕಳಿಸದಂತೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು.



ಮೊಬೈಲ್, ಗಾಂಜಾ ವಶಕ್ಕೆ: ಕಳೆದ ಕೆಲ ದಿನಗಳ ಹಿಂದೆಯಷ್ಟೇ ರಾಜ್ಯ ಕಾರಾಗೃಹ ಮತ್ತು ಸುಧಾರಣಾ ಸೇವೆಗಳ ಇಲಾಖೆ ಮಹಾನಿರ್ದೇಶಕ ಅಲೋಕ್ ಕುಮಾರ್ ನೇತೃತ್ವದಲ್ಲಿ ಹಿಂಡಲಗಾ ಜೈಲಿನ ಮೇಲೆ ನಡೆದ ದಾಳಿಯ ವೇಳೆ ನಾಲ್ಕು ಮೊಬೈಲ್ ಫೋನ್ ಹಾಗೂ ಗಾಂಜಾ ಪತ್ತೆಯಾಗಿತ್ತು. ಈ ಕುರಿತು ಬೆಳಗಾವಿ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು ತನಿಖೆ ಮುಂದುವರಿದಿದೆ.

ನಿಷೇಧಿತ ವಸ್ತುಗಳ ಪತ್ತೆ ಹಚ್ಚಿದ ಸಿಬ್ಬಂದಿಗಳಿಗೆ 12 ಸಾವಿರ ನಗದು ಬಹುಮಾನ ನೀಡಲಾಗಿತ್ತು. ಸದ್ಯ ಈ ಪ್ರಕರಣ ತನಿಖೆ ಹಂತದಲ್ಲಿ ಇರುವಾಗಲೇ ಮೊಬೈಲ್ ಹಾಗೂ ಮಾದಕ ವಸ್ತುಗಳನ್ನು ಎಸೆದಿರುವುದು ಬೆಳಕಿಗೆ ಬಂದಿದ್ದು ಜೈಲಿನ ಭದ್ರತೆ ಸೇರಿದಂತೆ ಅಧಿಕಾರಿಗಳ ಕಾರ್ಯವೈಖರಿಯನ್ನು ಜನ ಅನುಮಾನದಿಂದ ನೋಡುವಂತಾಗಿದೆ.

15ರಂದು ಹರಜಾತ್ರೆ ಸಂಭ್ರಮಕ್ಕೆ ನಿರ್ಧಾರ

ಚಿತ್ರದುರ್ಗ: ಹರಿಹರದ ವೀರಶೈವ ಲಿಂಗಾಯತ ಪಂಚಮಸಾಲಿ ಗುರುಪೀಠದ ಆವರಣದಲ್ಲಿ ಜ.15ರಂದು ಹರಜಾತ್ರೆ ನಡೆಸಲು ನಿರ್ಧರಿಸಲಾಗಿದೆ. ಈ ವರ್ಷ ಸಮಾಜದ ವಿವಿಧ ಕ್ಷೇತ್ರದಲ್ಲಿ ಸಾಧನೆಗೈದಿರುವ ಸಾಧಕರನ್ನು ಗುರುತಿಸಿ, ಅವರುಗಳಿಗೆ ವೀರ ರಾಣಿ ಕಿತ್ತೂರು ಚನ್ನಮ್ಮ ಹೆಸರಿನಲ್ಲಿ ಪ್ರಶಸ್ತಿ ನೀಡಲಾಗುತ್ತದೆ ಎಂದು ಪಂಚಮಸಾಲಿ ಗುರುಪೀಠದ ವಚನಾನಂದ ಸ್ವಾಮೀಜಿ ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಸೂರ್ಯ ಪಥ ಬದಲಿಸುವ ಮಕರ ಸಂಕ್ರಾಂತಿಯಂದು ಹರಜಾತ್ರೆ, ಕಿತ್ತೂರು ರಾಣಿ ಚನ್ನಮ್ಮಾಜೀ ದ್ವಿ-ಶತಮಾನ ವಿಜಯೋತ್ಸವ ಸಮಾರೋಪ ಸಮಾರಂಭ ಹಾಗೂ ಡಾ.ಮಹಾಂತ ಶಿವಾಚಾರ್ಯ ಸ್ವಾಮೀಜಿಯ 13ನೇ ವರ್ಷದ ಪುಣ್ಯ ಸ್ಮರಣೋತ್ಸವ ಆಯೋಜಿಸಲಾಗಿದೆ. ಇದೇ ವೇಳೆ ವಚನಾನಂದ ಸ್ವಾಮೀಜಿಯ ಅಷ್ಟಮ ವಾರ್ಷಿಕ ಪೀಠಾರೋಹಣ ನಡೆಯಲಿದೆ ಎಂದು ವಿವರಿಸಿದರು. ವೀರರಾಣಿ ಕಿತ್ತೂರು ಚನ್ನಮ್ಮಾಜಿ ಅವರ ದ್ವಿ ಶತಮಾನೋತ್ಸವ ಸಂಭ್ರಮಾಚರಣೆಯ ಸವಿನೆನಪಿಗೆ ಅವರ ಹೆಸರಿನಲ್ಲಿ ₹ 200 ಮುಖಬೆಲೆಯ ನಾಣ್ಯವನ್ನು ಬಿಡುಗಡೆಗೊಳಿಸಬೇಕೆಂದು ಕೇಂದ್ರ ಸರಕಾರಕ್ಕೆ ಮನವಿ ಮಾಡಲಾಗಿತ್ತು. ಇದಕ್ಕೆ ಸ್ಪಂದಿಸಿರುವ ಕೇಂದ್ರ ಸರಕಾರ ನಾಣ್ಯವನ್ನು ಬಿಡುಗಡೆಗೊಳಿಸಿದ್ದು ಸಂತಸದ ವಿಷಯ ಎಂದರು.

ನಿಟ್ಟೆ ಶಿಕ್ಷಣ ಸಮೂಹ ಸಾರಥಿ ವಿನಯ ಹೆಗ್ಡೆ ಇನ್ನಿಲ್ಲ

ಮಂಗಳೂರು: ಕರಾವಳಿಯ ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರದ ಧ್ರುವತಾರೆ, ನಿಟ್ಟೆ ಪರಿಗಣಿತ ವಿಶ್ವವಿದ್ಯಾಲಯದ ಕುಲಪತಿ ಹಾಗೂ ಹಿರಿಯ ಉದ್ಯಮಿ ಎನ್. ವಿನಯ ಹೆಗ್ಡೆ (86) ಅವರು ವಿಧಿವಶರಾಗಿದ್ದಾರೆ.

ವಯೋಸಹಜ ಅನಾರೋಗ್ಯದಿಂದ ಬಳಲುತ್ತಿದ್ದ ಅವರು ಗುರುವಾರ ಇಹಲೋಕ ತ್ಯಜಿಸಿದ್ದು, ಶಿಕ್ಷಣ ಕ್ಷೇತ್ರದ ಒಂದು ಸುದೀರ್ಘ ಪರ್ವ ಅಂತ್ಯಗೊಂಡಂತಾಗಿದೆ. ಮೃತದೇಹದ ಸಾರ್ವಜನಿಕ ದರ್ಶನಕ್ಕೆ ಇಲ್ಲಿನ ಶಿವಭಾಗ್‌ನಲ್ಲಿರುವ ಅವರ ನಿವಾಸದಲ್ಲಿ ಬೆಳಗ್ಗೆ 8.30ರಿಂದ ಮಧ್ಯಾಹ್ನ 3 ಗಂಟೆಯವರೆಗೆ ಹಾಗೂ ದೇರಳಕಟ್ಟೆಯ ನಿಟ್ಟೆ ಕ್ಯಾಂಪಸ್‌ನಲ್ಲಿ ಸಂಜೆ 4.30ರಿಂದ 6 ರವರೆಗೆ ಅವಕಾಶ ಕಲ್ಪಿಸಲಾಗಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸುಪ್ರೀಂ ಕೋರ್ಟ್ ಮಾಜಿ ನ್ಯಾಯಮೂರ್ತಿ ದಿ. ಕೆ.ಎಸ್. ಹೆಗ್ಡೆ ಅವರ ಎರಡನೇ ಪುತ್ರ ವಿನಯ್ ಹೆಗ್ಡೆ ಅವರು ದಕ್ಷಿಣ ಕನ್ನಡ ಜಿಲ್ಲೆಯ ಶೈಕ್ಷಣಿಕ ಕ್ಷೇತ್ರಕ್ಕೆ ನೀಡಿರುವ ಕೊಡುಗೆ ದೊಡ್ಡದು. ಅವರು ಸ್ಥಾಪಿಸಿರುವ ನಿಟ್ಟೆ ಶಿಕ್ಷಣ ಸಂಸ್ಥೆಯಲ್ಲಿ ವೈದ್ಯಕೀಯ, ಎಂಜಿನಿಯರಿಂಗ್ ಹಾಗೂ ಇನ್ನಿತರ ಕೋರ್ಸ್ ಗಳು ಇವೆ. ಇತ್ತೀಚೆಗೆ ನಿಟ್ಟೆ ಶಿಕ್ಷಣ ಸಂಸ್ಥೆಗೆ ಪರಿಗಣಿತ ವಿವಿ ಮಾನ್ಯತೆ ದೊರೆತಿದೆ.

ಸರಳತೆಯ ಸಾಕಾರಮೂರ್ತಿ: ಅಸಂಖ್ಯಾತ ಸಂಸ್ಥೆಗಳ ಒಡೆಯರಾಗಿದ್ದರೂ, ವಿನಯ ಹೆಗ್ಡೆ ಅವರು ತಮ್ಮ ಹೆಸರಿನಂತೆಯೇ ಸರಳತೆ ಮತ್ತು ವಿನಯವಂತಿಕೆಗೆ ಹೆಸರಾಗಿದ್ದರು. ಉದ್ಯಮ ರಂಗದ ಜೊತೆಗೆ ಕರಾವಳಿಯ ಸಾಂಸ್ಕೃತಿಕ, ಧಾರ್ಮಿಕ ಚಟುವಟಿಕೆಗಳಿಗೆ ಇವರು ನೀಡುತ್ತಿದ್ದ ಬೆಂಬಲ ಅಪಾರ. ಇವರ ನಿಧನಕ್ಕೆ ರಾಜಕೀಯ, ಶೈಕ್ಷಣಿಕ ಹಾಗೂ ಉದ್ಯಮ ರಂಗದ ಗಣ್ಯರು ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ.

ಕೋಗಿಲು ಕೂಗು ಕೋರ್ಟಿಗೆ

← ಮೊದಲಪುಟದಿಂದ

ಇದರ ನಡುವೆ ಬಾಂಗ್ಲಾದವರೆಂದು ಸಾಬೀತುಪಡಿಸಿ ಎಂದು ವಸತಿ ಸಚಿವರು ಹೇಳಿದ್ದು, ಪ್ರಕರಣ ಹೈಕೋರ್ಟ್ ಮೆಟ್ಟಿಲೇರಿದೆ. ಅತಿವೃಷ್ಟಿ , ಅನಾವೃಷ್ಟಿ ಸೇರಿದಂತೆ ಹಲವು ಪ್ರಕರಣದಲ್ಲಿ ಮನೆ ಕಳೆದುಕೊಂಡು ದಶಕಗಳೇ ಉರುಳಿದರೂ ರಾಜ್ಯದ ಅನೇಕ ಕಡೆಗಳಲ್ಲಿ ಅರ್ಹ ಸಂತ್ರಸ್ತರತ್ತ ಸರಕಾರ ಗಮನ ಹರಿಸಿಲ್ಲ ಎಂದು ಸಾರ್ವಜನಿಕವಾಗಿ ಆಕ್ರೋಶ ವ್ಯಕ್ತವಾಗಿದೆ. ಈಗ ರಾಜೀವ್ ಗಾಂಧಿ ವಸತಿ ನಿಗಮದಿಂದ ನಿರ್ಮಿಸಲಾದ ಫ್ಲಾಟ್ ಅನ್ನು ಜ.2 ರಂದು ನೀಡಲು ಸಿದ್ದತೆ ನಡೆಸಿದ್ದರೂ, ಜಿಲ್ಲಾಧಿಕಾರಿಯಿಂದ ಇಲ್ಲಿಯವರೆಗೆ ಯಾವುದೇ ಅಧಿಕೃತ ಮಾಹಿತಿ ಬಂದಿಲ್ಲ ಎನ್ನಲಾಗಿದೆ. ಇದರೊಂದಿಗೆ ಕೋಗಿಲು ಲೇಔಟ್ ಪ್ರಕರಣದಲ್ಲಿ ಬಿಜೆಪಿಯು ಸತ್ಯಶೋಧನೆಗೆ ಮುಂದಾಗಿದೆ. ಯಲಹಂಕ ಶಾಸಕ ವಿಶ್ವನಾಥ್ ನೇತೃತ್ವದಲ್ಲಿ ಸಮಿತಿ ರಚನೆ ಮಾಡಲಾಗಿದ್ದು ಶಾಸಕ ಮುನಿರಾಜು, ಪರಿಷತ್ ಸದಸ್ಯ ನವೀನ್ ಸೇರಿ 7 ನಾಯಕರನ್ನು ಒಳಗೊಂಡ ಸಮಿತಿ ರಚನೆ ಮಾಡಿರುವ ರಾಜ್ಯಾಧ್ಯಕ್ಷ ವಿಜಯೇಂದ್ರ, ಒಂದು ವಾರದಲ್ಲಿ ವರದಿ ನೀಡುವಂತೆ ಸೂಚಿಸಿದ್ದಾರೆ.

ಹೈಕೋರ್ಟ್ ಮೆಟ್ಟಿಲೇರಿದ ಪ್ರಕರಣ: ಅಕ್ರಮ ವಸತಿಗಳ ತೆರವು ಪ್ರಕರಣ ಸಂಬಂಧ ಒಂದೆಡೆ ರಾಜಕೀಯ ಜಟಾಪಟಿಗಳು ನಡೆಯುತ್ತಿದ್ದರೆ ಮತ್ತೊಂದೆಡೆ ಪುನರ್ವಸತಿ ಮತ್ತು ಪರಿಹಾರ ಕೋರಿ ಹೈಕೋರ್ಟ್‌ಗೆ ಸಾರ್ವಜನಿಕ ಹಿತಾಸಕ್ತಿ ಅರ್ಜಿ (ಪಿಐಎಲ್) ಸಲ್ಲಿಕೆಯಾಗಿದೆ. ಜೈಬಾ ತಬಸ್ಸುಮ್ ಮತ್ತಿತರರು ಹೈಕೋರ್ಟ್‌ಗೆ ಅರ್ಜಿ ಸಲ್ಲಿಕೆ ಮಾಡಿದ್ದು, ಹಲವು ಬೇಡಿಕೆಗಳನ್ನು ಅರ್ಜಿಯಲ್ಲಿ ಮುಂದಿಟ್ಟಿದ್ದಾರೆ. ಅರ್ಜಿಯಲ್ಲಿ ಸೂಕ್ತ ರೀತಿಯಲ್ಲಿ ನೋಟಿಸ್ ನೀಡಿಲ್ಲ, ಸುಪ್ರೀಂ ಕೋರ್ಟ್ ಆದೇಶವನ್ನು ಪಾಲಿಸಿಲ್ಲ. ಆದ್ದರಿಂದ ಈ ಪ್ರಕರಣದಲ್ಲಿ ಸರಕಾರ ಹಾಗೂ ಅಧಿಕಾರಿಗಳನ್ನು ಪ್ರತಿವಾದಿಗಳನ್ನಾಗಿ ಮಾಡಬೇಕು ಎಂದು ಮನವಿ ಮಾಡಿರುವುದು ಇದೀಗ ಇಡೀ ಪ್ರಕರಣಕ್ಕೆ ಹೊಸ ತಿರುವು ನೀಡಿದೆ.

30 ವರ್ಷಗಳಿಂದ ಇಲ್ಲಿ 3 ಸಾವಿರ ಜನರು ವಾಸಿಸುತ್ತಿದ್ದಾರೆ. ವಸೀಮ್, ಫಕೀರ್ ಕಾಲೋನಿಗಳ ತೆರವಿನಿಂದ ವಸತಿರಹಿತರಾಗಿದ್ದು, ಎಸ್‌ಡಿಪಿಐ ಮತ್ತು ಎಂಐಎಂ ಪಕ್ಷಗಳು ಈಗ ನೆರವು ಒದಗಿಸುತ್ತಿವೆ. ಸರಕಾರ 5 ಕಿ.ಮೀ. ಅಂತರದಲ್ಲೇ ಮರುವಸತಿ ಕಲ್ಪಿಸಬೇಕು ಮತ್ತು ಅಲ್ಲಿಯವರೆಗೆ 3 ಹೊತ್ತಿನ ಪೌಷ್ಟಿಕಾಂಶಯುತ ಆಹಾರ ಒದಗಿಸಬೇಕು. 300 ಪ್ರತ್ಯೇಕ ಟೆಂಟ್, ಶೌಚಾಲಯದ ವ್ಯವಸ್ಥೆ ಕಲ್ಪಿಸಬೇಕು. ವೈದ್ಯಕೀಯ ವ್ಯವಸ್ಥೆ ಕಲ್ಪಿಸಿ ಆರೋಗ್ಯ ತಪಾಸಣೆ ಮಾಡಬೇಕು. ಜೊತೆಗೆ ಕಟ್ಟಡ ತೆರವಿಗೆ ಪರಿಹಾರ ನೀಡಬೇಕೆಂದು ಅರ್ಜಿಯಲ್ಲಿ ತಿಳಿಸಲಾಗಿದೆ.

ರಾಜ್ಯಪಾಲರಿಗೆ ದೂರು: ಶಾಸಕ ಎಸ್.ಆರ್.ವಿಶ್ವನಾಥ್

ಕೋಗಿಲು ಅಕ್ರಮ ಗುಡಿಸಲು- ಮನೆ ತೆರವು ಪ್ರಕರಣದ ಹೊರದೇಶದವರಿಗೆ ಮನೆ ನೀಡಿದರೆ ಅದನ್ನು ನ್ಯಾಯಾಲಯದಲ್ಲಿ ಪ್ರಶ್ನಿಸುತ್ತೇವೆ. ಇದರ ವಿರುದ್ಧ ಮಾನ್ಯ ರಾಜ್ಯಪಾಲರಿಗೆ ಮನವಿ ನೀಡುತ್ತೇವೆ ಎಂದು ಶಾಸಕ ಎಸ್.ಆರ್.ವಿಶ್ವನಾಥ್ ಹೇಳಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿ, ಪ್ರಕರಣವನ್ನು ನ್ಯಾಯಾಲಯಕ್ಕೆ ಹೋಗಿ ಪ್ರಶ್ನೆ ಮಾಡುವುದಲ್ಲದೇ, ರಾಜ್ಯಪಾಲರಿಗೆ ಇದರ ಬಗ್ಗೆ ಮನವಿ ಕೊಡುತ್ತೇವೆ. ಮನೆಗಳ ಹಂಚಿಕೆ ಮಾಡಲು ಸರಕಾರ ಸಿದ್ದತೆ ನಡೆಸಿದೆ. ಹಲವು ವರ್ಷದಿಂದ ಇದ್ದಾರೆ ಎನ್ನುವುದು ಸೇರಿದಂತೆ 18 ದಾಖಲೆ ಕೊಡಬೇಕು. ಕಾಂಗ್ರೆಸ್ ಹೈಕಮಾಂಡ್ ಹೇಳಿದೆ. ಕೇರಳದ ಸಿಎಂ ಹೇಳಿದರು. ಪಾಕಿಸ್ತಾನದವರು ಹೇಳಿದರು. ಅಂದ ತಕ್ಷಣ ಕಾಂಗ್ರೆಸ್ ಸರಕಾರ ಮನೆ ಕೊಡುತ್ತಿದೆ. ಪಾಕಿಸ್ತಾನ, ಬಾಂಗ್ಲಾದಿಂದ ಬಂದಿರುವ ಹಿಂದೂ ಕ್ರಿಶ್ಚಿಯನ್ ಸಿಖ್ಖರು ಸೇರಿ ಅನೇಕ ಅಲ್ಪಸಂಖ್ಯಾತರು ಬೀದಿಬೀದಿಗಳಲ್ಲಿ ಅಲೆಯುತ್ತಿದ್ದಾರೆ. ಅವರಿಗೆ ಇಲ್ಲಿವರೆಗೂ ಮನೆ ಕೊಟ್ಟಿಲ್ಲ. ಅವರಿಗೆ ಅವರಿಗೆ ಪೌರತ್ವ ಕೊಡಬೇಕು ಎಂದರೆ ಕಾಂಗ್ರೆಸ್ ಹಾಗೂ ಕಮ್ಯುನಿಸ್ಟ್ ಪಕ್ಷದವರು ಹೋರಾಟ ಮಾಡುತ್ತಾರೆ. ಆದರೆ ಇವತ್ತು ಬೇರೆ ದೇಶದಿಂದ ಬಂದಿರುವವರಿಗೆ ತುರ್ತು ಏನಿದೆ ಎಂದು ಪ್ರಶ್ನಿಸಿದ್ದಾರೆ.

3 ವರ್ಷಗಳಲ್ಲೇ ಗರಿಷ್ಠ ಮದ್ಯ ಮಾರಾಟ

← ಮೊದಲಪುಟದಿಂದ

ಕಳೆದ 2024ನೇ ವರ್ಷಕ್ಕೆ ಹೋಲಿಸಿದರೆ, ಈ ಬಾರಿ ಐಎಂಎಲ್ ಮಾರಾಟದಲ್ಲಿ 1.59 ಲಕ್ಷ ಬಾಕ್ಸ್ ಮತ್ತು ಬಿಯರ್ ಮಾರಾಟದಲ್ಲಿ 1.61 ಲಕ್ಷ ಬಾಕ್ಸ್ ಏರಿಕೆಯಾಗಿದೆ.

ವಿಶೇಷವೆಂದರೆ, ಹೊಸ ವರ್ಷದ ಹಿಂದಿನ ದಿನವಾದ ಡಿಸೆಂಬರ್ 31ಕ್ಕಿಂತಲೂ, ಡಿಸೆಂಬರ್ 30ರಂದು ಅತಿ ಹೆಚ್ಚು ಮಾರಾಟ ದಾಖಲಾಗಿದೆ. ಅಂದು ಒಂದೇ ದಿನ 261.09 ಕೋಟಿ ರು. ಮೌಲ್ಯದ ಮದ್ಯ ಮಾರಾಟವಾಗಿದೆ. 31ರಂದು ಪಾರ್ಟಿ ಮಾಡುವ ಉದ್ದೇಶದಿಂದ ಜನರು ಒಂದು ದಿನ ಮುಂಚಿತವಾಗಿಯೇ ಸಂಗ್ರಹ ಮಾಡಿಕೊಂಡಿದ್ದರಿಂದ ಈ ಏರಿಕೆ ಕಂಡುಬಂದಿದೆ ಎಂದು ಹೇಳಲಾಗುತ್ತಿದೆ. ಮದ್ಯ ಮಾರಾಟವು ಈ ಭಾರೀ ಏರಿಕೆಯು ರಾಜ್ಯದ ಆರ್ಥಿಕತೆಗೆ ದೊಡ್ಡ ಮಟ್ಟದ ಶಕ್ತಿ ನೀಡಿದೆಯಾದರೂ, ಸಾರ್ವಜನಿಕ ಸುರಕ್ಷತೆಯ ಬಗ್ಗೆ ಕಳವಳ ವ್ಯಕ್ತವಾಗಿದೆ. ಹೊಸ ವರ್ಷದ ಸಂಭ್ರಮದಲ್ಲಿ ಅಹಿತಕರ ಘಟನೆಗಳು ನಡೆಯದಂತೆ ತಡೆಯಲು ಪೊಲೀಸರು ಡ್ರಂಕ್ ಆ್ಯಂಡ್ ಡ್ರೈವ್ ತಪಾಸಣೆಯನ್ನು ತೀವ್ರಗೊಳಿಸಿದ್ದರು. ಮದ್ಯಸೇವನೆಯಲ್ಲಿ ಎಚ್ಚರಿಕೆ ವಹಿಸಿ, ಸುರಕ್ಷಿತವಾಗಿ ಆಚರಣೆ ಮಾಡುವಂತೆ ಅಬಕಾರಿ ಅಧಿಕಾರಿಗಳು ಜನರಲ್ಲಿ ಮನವಿ ಮಾಡಿದ್ದರು.

ಇಳಿದ ಬಿಯರ್ ಕಿಕ್

ರಾಜ್ಯದಲ್ಲಿ ಸತತ 8 ತಿಂಗಳು ಬಿಯರ್ ಮಾರಾಟ ಕುಸಿತವಾಗಿದೆ. ಅಲ್ಲದೆ, ಇಂಡಿಯನ್ ಮೇಡ್ ಲಿಕ್ಕರ್ (ಐಎಂಎಲ್) ನಲ್ಲಿಯೂ ಆದಾಯ ಇಳಿಮುಖವಾಗಿರುವುದು ಇಲಾಖೆ ನೀಡಿರುವ ಅಂಕಿಅಂಶಗಳಿಂದ ತಿಳಿದುಬಂದಿದೆ. 2024ರ ಏಪ್ರಿಲ್‌ನಿಂದ ಅಕ್ಟೋಬರ್‌ವರೆಗೆ 407 ಲಕ್ಷ ಬಾಕ್ಸ್ ಇಂಡಿಯನ್ ಮೇಡ್ ಲಿಕ್ಕರ್ (ಐಎಂಎಲ್) ಮಾರಾಟವಾಗಿತ್ತು. ಪ್ರಸಕ್ತ ವರ್ಷದ ಏಪ್ರಿಲ್‌ನಿಂದ ಅಕ್ಟೋಬರ್‌ವರೆಗೆ 403 ಲಕ್ಷ ಬಾಕ್ಸ್ ಐಎಂಎಲ್ ಸೇಲಾಗಿದ್ದು, ಕಳೆದ ವರ್ಷಕ್ಕೆ ಹೋಲಿಸಿದರೆ ಪ್ರಸಕ್ತ ಸಾಲಿನ ಇದೇ ಅವಧಿಯಲ್ಲಿ ಶೇ.5 ಐಎಂಎಲ್ ಮಾರಾಟ ಇಳಿಮುಖವಾಗಿದೆ. 2024ರ ಏಪ್ರಿಲ್‌ನಿಂದ ಅಕ್ಟೋಬರ್‌ವರೆಗೆ 278 ಲಕ್ಷ ಬಾಕ್ಸ್ ಬಿಯರ್ ಮಾರಾಟವಾಗಿತ್ತು. ಪ್ರಸಕ್ತ ಸಾಲಿನ ಏಪ್ರಿಲ್‌ನಿಂದ ಅಕ್ಟೋಬರ್ ವರೆಗೆ 227 ಲಕ್ಷ ಬಾಕ್ಸ್ ಬಿಯರ್ ಮಾರಾಟ ವಾಗಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ ಪ್ರಸಕ್ತ ಸಾಲಿನ ಇದೇ ಅವಧಿಯಲ್ಲಿ ಶೇ.51 ಮಾರಾಟ ಕುಸಿತವಾಗಿದೆ. ಸತತ 8 ತಿಂಗಳು ಬಿಯರ್ ಮಾರಾಟ ಅರ್ಧಕ್ಕರ್ಧ ಇಳಿಕೆಯಾಗಿದೆ.

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

(ಸಿಐಎನ್ : ಯು40109ಕೆಎ1999ಎಸ್‌ಜಿಸಿ025521)

ಟೆಂಡರ್ ಪ್ರಕಟಣೆ

(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಮಾತ್ರ)

ಸಂಖ್ಯೆ: ಅಇಂ(ವಿ)/ಪ್ರ(ಯೋಜನೆ)/ಬೆಂ.ಗ್ರಾ.ವೃ/ಕಾ.ನಿ.ಇಂ(ಕ)/ಸ.ಕಾ.ಇಂ–(ಸಿ)/2025–26/2420 ದಿನಾಂಕ: 31.12.2025

ಕವಿಪ್ರನಿನಿ, ಬಿಡ್ ವಿಚಾರಣೆ ಸಂಖ್ಯೆ: ಕವಿಪ್ರನಿನಿ/ಅ.ಇಂ(ವಿ)/ಪ್ರ.(ಯೋ)/ಬೆಂ.ಗ್ರಾ.ವೃ/ಕಾ.ನಿ.ಇಂ(ಕ)/ಸ.ಕಾ.ಇಂ(ಸಿ)/2025–26/ಇ.ಪಿ.ಆರ್–4 ದಿನಾಂಕ: 20.09.2025 ರ ಅನ್ವಯ ಕ್ಯಾಪಿಟಲ್ ಸಿವಿಲ್ ಕಾಮಗಾರಿಗೆ ಕೋಲಾರ ಜಿಲ್ಲೆ ಮುಳಬಾಗಿಲು ತಾಲ್ಲೂಕು, ಎನ್.ವಡ್ಡಹಳ್ಳಿ ಬಳಿ ನಿರ್ಮಿಸಲು ಉದ್ದೇಶಿಸಿರುವ 66/11 ಕೆವಿ ಉಪ–ವಿದ್ಯುತ್ ಕೇಂದ್ರದ ಜಮೀನಿಗೆ ಮುಳ್ಳು ತಂತಿ ಬೇಲಿ ಅಳವಡಿಸುವ ಕಾಮಗಾರಿ. **ಟೆಂಡರಿಗಿಟ್ಟ ಮೊತ್ತ:** ರೂ.6.20 ಲಕ್ಷಗಳು (ಪ್ರವರ್ಗ: ಸಾಮಾನ್ಯ) – 3ನೇ ಕರೆ.

ಮೇಲ್ಕಂಡ ಕಾಮಗಾರಿಗಳ ವಿಚಾರಣೆ ಬಗ್ಗೆ ವಿವರವಾದ ಪ್ರಕಟಣೆಯನ್ನು ಕವಿಪ್ರನಿನಿ ವೆಬ್‌ಸೈಟ್: https://kptcl.karnataka.gov.in. ಹೈಪರ್ ಲಿಂಕ್ "E Procurement KPTCL" ಅಥವಾ https://kppp.karnataka.gov.in ಗೆ ದಿನಾಂಕ **05.01.2026** ರಂದು ಅಥವಾ ನಂತರ ಲಾಗಿನ್ ಆಗಿ ಪಡೆಯಬಹುದು.

ಸಹಿ/– ಅಧೀಕ್ಷಕ ಇಂಜಿನಿಯರ್ (ವಿ), ಪ್ರಸರಣ (ಯೋಜನೆ)
ಗ್ರಾಮೀಣ ವೃತ್ತ, ಆರ್ ಆರ್ ನಗರ, ಮೆಟ್ರೋ ನಿಲ್ದಾಣದ ಎದುರು
ಪಂತರಪಾಳ್ಯ, ಮೈಸೂರು ರಸ್ತೆ, ಬೆಂಗಳೂರು–26

ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ

ಕಾರ್ಯಪಾಲಕ ಅಭಿಯಂತರರವರ ಕಛೇರಿ, ಧಾರವಾಡ ವಿಭಾಗ,
ಟೋಲ್‌ನಾಕಾ, ಧಾರವಾಡ. ದೂರವಾಣಿ: 0836-2747842
E-mail: ksdb.dhrdiv@gmail.com

ಸಂ. ಕಕೊಅಮ/ಕಾಪಾಅ/ಧಾ.ವಿ/ತಾಂ.ಶಾ/ಟೆಂ.ಪ್ರ/2025-26/866 ದಿನಾಂಕ: 30.12.2025

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ, ಧಾರವಾಡ ವಿಭಾಗ ವ್ಯಾಪ್ತಿಯಲ್ಲಿ ಬರುವ ಧಾರವಾಡ ಉಪವಿಭಾಗಕ್ಕೆ ಸಂಬಂಧಿಸಿದಂತೆ ಸೆಸ್ ಕ್ರಿಯಾ Infrastructure works - 112 Houses for the Construction of 976 Houses including infrastructure works for slum dwellers of Dharwad West assembly Constituency of Dhawad City under PMAY(U) - HFA Scheme. KSDB/2025-26/OW/WORK_INDENT368 ಮಂಜೂರಾದ ಕಾಮಗಾರಿಯನ್ನು ನಿರ್ವಹಿಸಲು ನೋಂದಾಯಿತ ಅರ್ಹ ಸಿವಿಲ್ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ಕರೆದಿರುವ ಕಾಮಗಾರಿ ಕರ್ನಾಟಕ ಲೋಕೋಪಯೋಗಿ ಇಲಾಖೆಯಿಂದ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಐಟಂವಾರು ಟೆಂಡರ್‌ನ್ನು ಕರೆಯಲಾಗಿದೆ. ಹೆಚ್ಚಿನ ವಿವರ/ವಿಚಾರಣೆ ಇ-ಪ್ರೊಕ್ಯೂರ್‌ಮೆಂಟ್‌ನ **https://kppp.karnataka.gov.in** ನಿಂದ ಟೆಂಡರ್ ದಾಖಲೆಗಳನ್ನು ದಿನಾಂಕ: **01.01.2026** ರಿಂದ ಡೌನ್‌ಲೋಡ್ ಮಾಡಿಕೊಂಡು ಟೆಂಡರನ್ನು ಸಲ್ಲಿಸಲು ಕೊನೆಯ ದಿನಾಂಕ: **13.01.2026 ಸಂಜೆ 5.00 ಗಂಟೆಯವರೆಗೆ** ಸ್ವೀಕೃತವಾದ ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: **15.01.2026 ರಂದು ಬೆಳಿಗ್ಗೆ 11.00 ಗಂಟೆಯ** ನಂತರ ತೆರೆಯಲಾಗುವುದು.

ಕಾಮಗಾರಿಯ ಗರಿಷ್ಠ ಮೊತ್ತ ರೂ.100.00 ಲಕ್ಷಗಳ 1 ಕಾಮಗಾರಿ ಇದ್ದು. ಟೆಂಡರ್‌ನ ಇ.ಎಂ.ಡಿ ಗುತ್ತಿಗೆದಾರರ ಅರ್ಹತೆ/ಟೆಂಡರ್‌ನ ನಿಯಮ/ಟೆಂಡರ್ ಶುಲ್ಕ ತುಂಬುವ ವಿಧಾನ ಇತ್ಯಾದಿ ವಿವರಗಳಿಗೆ **https://kppp.karnataka.gov.in** ಮೂಲಕ ಮಾಹಿತಿ ಪಡೆಯಬಹುದು ಅಥವಾ ಈ ಕೆಳಗೆ ಸಹಿ ಮಾಡಿರುವವರ ಕಛೇರಿ ದಿನಗಳಂದು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

ಕಾರ್ಯಪಾಲಕ ಅಭಿಯಂತರರು,
ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ,
ಧಾರವಾಡ ವಿಭಾಗ, ಧಾರವಾಡ.

ವಾಸಾಸಂಇ/ಧಾ/ದಿಶಾ/1049/2025–26

ಕರ್ನಾಟಕ ಸರ್ಕಾರ

ಶಿಶು ಅಭಿವೃದ್ಧಿ ಯೋಜನೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

2ನೇ ಮಹಡಿ, ಅಕ್ಷಯ ಭವನ, ಪಿ.ಎಲ್.ಡಿ ಬ್ಯಾಂಕ್ ಕಟ್ಟಡ, ಬಿ.ಬಿ.ರಸ್ತೆ
ದೇವನಹಳ್ಳಿ– 562110 ದೂ: 29565103

ಸಂಖ್ಯೆ: ಶಿಅಯೋ/ದೇ/ತೂ.ಯಂ.ಸತ್ಯಾ/ಇ.ಟೆಂಡರ್/2025–26 ದಿನಾಂಕ: 31.12.2025

ಟೆಂಡರ್ ಪ್ರಕಟಣೆ

ವಿಷಯ: ಅಂಗನವಾಡಿ ಕೇಂದ್ರಗಳಲ್ಲಿನ ತೂಕದ ಯಂತ್ರಗಳನ್ನು ಸತ್ಯಾಪನೆ ಮಾಡುವಾಗ ದುರಸ್ತಿ ಕಾರ್ಯಗಳನ್ನು ಮಾಡುವ ಬಗ್ಗೆ ಟೆಂಡರ್ ಪ್ರಕಟಣೆ.

ಶಿಶು ಅಭಿವೃದ್ಧಿ ಯೋಜನೆ, ದೇವನಹಳ್ಳಿ ತಾಲ್ಲೂಕು ವ್ಯಾಪ್ತಿಯ ಅಂಗನವಾಡಿ 264 ಕೇಂದ್ರಗಳಲ್ಲಿನ (1) 25 ಕೆ.ಜಿ ಸಾಮರ್ಥ್ಯದ ಸ್ಪ್ರಿಂಗ್ ಬ್ಯಾಲೆನ್ಸ್– ಸಾಲ್ಟರ್ ಸ್ಕೇಲ್, (2) 25 ಕೆ.ಜಿ ಸಾಮರ್ಥ್ಯದ ಸ್ಪ್ರಿಂಗ್ ಬ್ಯಾಲೆನ್ಸ್– ಸಾಲ್ಟರ್ ಸ್ಕೇಲ್ (ಪೋಷಣ್ ಅಭಿಯಾನ) (3) 150 ಕೆ.ಜಿ. ಸಾಮರ್ಥ್ಯದ ಎಲೆಕ್ಟ್ರಾನಿಕ್ ತೂಕದಯಂತ್ರ (ಪೋಷಣ್ ಅಭಿಯಾನ), (4) 120 ಕೆ.ಜಿ. ಸಾಮರ್ಥ್ಯದ ವಯಸ್ಕರ ತೂಕದ ಯಂತ್ರಗಳನ್ನು ಕಾನೂನು ಮಾಪನಶಾಸ್ತ್ರ ಇಲಾಖೆಯಿಂದ ಸತ್ಯಾಪನೆ ಮಾಡಬೇಕಾಗಿದ್ದು, ಸತ್ಯಾಪನೆ ಮಾಡಬೇಕಾದ ಸಂಧರ್ಭದಲ್ಲಿ ದುರಸ್ತಿಯಾಗಬೇಕಾದ ತೂಕದಯಂತ್ರಗಳನ್ನು ದುರಸ್ತಿ ಮಾಡಲು ಕಾನೂನುಮಾಪನಶಾಸ್ತ್ರ ಇಲಾಖೆಯಿಂದ ಅಧಿಕೃತ ಲೈಸೆನ್ಸ್ ಹೊಂದಿರುವ ಸಂಸ್ಥೆಗಳಿಂದ ದುರಸ್ತಿ ಮಾಡಲು ಇ–ಪ್ರೊಕ್ಯೂರ್‌ಮೆಂಟ್ ನ ಮೂಲಕ ದರಗಳನ್ನು ಆಹ್ವಾನಿಸಲಾಗಿದೆ. ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತು ಮಾಹಿತಿಯನ್ನು https://kppp.karnataka.gov.in ವೆಬ್‌ಸೈಟ್ ನಲ್ಲಿ ಪಡೆಯಬಹುದು.

01	ಟೆಂಡರ್ ಸಲ್ಲಿಸಲು ಪ್ರಾರಂಭಿಕ ದಿನಾಂಕ	31.12.2025
02	ಬಿಡ್ ಸಲ್ಲಿಸಲು ಅಂತಿಮ ದಿನಾಂಕ	31.01.2026 ಸಂಜೆ 5.30ಕ್ಕೆ
03	ತಾಂತ್ರಿಕ ಬಿಡ್ ತೆರೆಯುವ ದಿನಾಂಕ	03.02.2026 ಬೆಳಿಗ್ಗೆ 10.30ಕ್ಕೆ
04	ಆರ್ಥಿಕ ಬಿಡ್ ತೆರೆಯುವ ದಿನಾಂಕ	05.02.2026 ಬೆಳಿಗ್ಗೆ 10.30

ಹೆಚ್ಚಿನ ವಿವರಗಳಿಗಾಗಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ ದೇವನಹಳ್ಳಿ ದೂರವಾಣಿ ಸಂಖ್ಯೆ: 08029565103 ಇವರನ್ನು ಸಂಪರ್ಕಿಸಲು ಕೋರಿದೆ.

ಸಹಿ/–
ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು
ಶಿಶು ಅಭಿವೃದ್ಧಿ ಯೋಜನೆ
ದೇವನಹಳ್ಳಿ ತಾಲ್ಲೂಕು

ವಾಸಾಸಂಇ/ವಾಪ್ರ/4740/ಶಿರಡಿ ಸಾಯಿ/2025–26

ಕರ್ನಾಟಕ ಸರ್ಕಾರ

ಲೋಕೋಪಯೋಗಿ ಇಲಾಖೆ

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ,
ಮೈಸೂರು ವಿಭಾಗ, ಮೈಸೂರು.
www:eepwdmys21@gmail.com
ದೂರವಾಣಿ ಸಂಖ್ಯೆ/ಫ್ಯಾಕ್ಸ್ ನಂ: 0821–2420810

ಈ ಕಛೇರಿ ಐಟಂವಾರು ಟೆಂಡರ್ ಪ್ರಕಟಣೆ ಸಂ:27/2025–26
ದಿನಾಂಕ:26.12.2025

ಕರ್ನಾಟಕ ರಾಜ್ಯಪಾಲರ ಪರವಾಗಿ ಮೈಸೂರು ಲೋಕೋಪಯೋಗಿ ಇಲಾಖೆ ವಿಭಾಗದ ಕಾರ್ಯಪಾಲಕ ಇಂಜಿನಿಯರ್ ರವರಿಂದ ಲೆಕ್ಕಶೀರ್ಷಿಕೆ: 4059–80–051–0–60–132–ಮುಖ್ಯ ಮಂತ್ರಿಗಳ ಮೂಲ ಸೌಕರ್ಯ ಅಭಿವೃದ್ಧಿ ಯೋಜನೆ–ಬಂಡವಾಳ ವೆಚ್ಚಗಳಡಿ ಅನುಮೋದನೆಯಾಗಿರುವ ಈ ವಿಭಾಗದಡಿಯಲ್ಲಿನ ನಂ–1 ಉಪವಿಭಾಗ, ಮೈಸೂರು ಮತ್ತು ತಿ.ನರಸೀಪುರ ಉಪವಿಭಾಗ ವ್ಯಾಪ್ತಿಯ 11 ಸಂಖ್ಯೆ ಕಾಮಗಾರಿಗಳಿಗೆ ಸ್ಟ್ಯಾಂಡರ್ಡ ಬಿಡ್ ಡಾಕ್ಯುಮೆಂಟ್ ಕೆ.ಡಬ್ಲ್ಯೂ–3 ಮತ್ತು 4ರ ಷರತ್ತು ಮತ್ತು ನಿಯಮಗಳನ್ವಯ ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪಾರದರ್ಶಕ ನಿಯಮ 2000 ರಂತೆ ದ್ವಿ–ಲಕೋಟೆ ಪದ್ಧತಿಯಲ್ಲಿ ಐಟಂವಾರು ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗಿದೆ. ಕೆಪಿಪಿ ಪೋರ್ಟಲ್‌ನಲ್ಲಿ ನೊಂದಾಯಿಸಿರುವ "ಅರ್ಹ" ಲೋಕೋಪಯೋಗಿ ಗುತ್ತಿಗೆದಾರರು ಕೆಪಿಪಿ ಪೋರ್ಟಲ್‌ನಲ್ಲಿ (viz https://kppp.karnataka.gov.in/) ಕ್ರಮ ಸಂಖ್ಯೆ 01 ರಿಂದ 06 ರ ಕಾಮಗಾರಿಗಳಿಗೆ :ದಿ:26.12.2025 ರಿಂದ 12.01.2026 ರವರೆಗೆ ಮತ್ತು ಕ್ರಮ ಸಂಖ್ಯೆ 07 ರಿಂದ 11 ರವರೆಗಿನ ಕಾಮಗಾರಿಗಳಿಗೆ: ದಿ:29.12.2025 ರಿಂದ 13.01.2026 ರವರೆಗೆ ಸಂಜೆ 17:00 ರವರೆಗೆ ಸಲ್ಲಿಸಬಹುದಾಗಿರುತ್ತದೆ. ಟೆಂಡರ್‌ಗಿಟ್ಟ ಕನಿಷ್ಠ ಮೊತ್ತ ರೂ.79.73 ಲಕ್ಷಗಳು ಹಾಗೂ ಇ.ಎಂ.ಡಿ ರೂ.0.80 ಲಕ್ಷಗಳು ಹಾಗೂ ಗರಿಷ್ಠ ಮೊತ್ತ ರೂ.160.96 ಲಕ್ಷಗಳು ಹಾಗೂ ಇ.ಎಂ.ಡಿ ರೂ.2.41 ಲಕ್ಷಗಳಾಗಿರುತ್ತದೆ. ಕ್ರಮ ಸಂಖ್ಯೆ 01 ರಿಂದ 06 ಕಾಮಗಾರಿಗಳ ಪೈಕಿ 03 ಕಾಮಗಾರಿ ಸಾಮಾನ್ಯ ವರ್ಗಕ್ಕೆ, 01 ಕಾಮಗಾರಿ ಪರಿಶಿಷ್ಟ ಜಾತಿಗೆ, 01 ಕಾಮಗಾರಿ ಪರಿಶಿಷ್ಟ ಪಂಗಡಕ್ಕೆ, 01 ಕಾಮಗಾರಿಯು ಪ್ರವರ್ಗ–I ಕ್ಕೆ ಮೀಸಲಾಗಿರುತ್ತದೆ. ಕ್ರಮ ಸಂಖ್ಯೆ 07 ರಿಂದ 11ರ ವರೆಗಿನ ಕಾಮಗಾರಿಗಳ ಪೂರ್ವಭಾವಿ ಸಭೆಯನ್ನು ದಿ:06.01.2026 ರ ಬೆಳಿಗ್ಗೆ 11.00 ಗಂಟೆಗೆ ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಏರ್ಪಡಿಸಲಾಗಿದೆ. ಕಾಮಗಾರಿಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳು ಬೇಕಾದ್ದಲ್ಲಿ ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದ್ದು, ಯಾವುದೇ ಟೆಂಡರ್‌ನ್ನು ಅಂಗೀಕರಿಸುವ/ತಿರಸ್ಕರಿಸುವ ಹಕ್ಕನ್ನು ಈ ಕೆಳಗೆ ಸಹಿ ಮಾಡಿರುವವರು ಹೊಂದಿರುತ್ತಾರೆ. ಟೆಂಡರ್ ಪ್ರಕಟಣೆಯಲ್ಲಿ ಯಾವುದೇ ತಿದ್ದುಪಡಿ ಅಥವಾ ಮಾರ್ಪಾಡುಗಳಾದಲ್ಲಿ ಕೆಪಿಪಿ ಪೋರ್ಟಲ್ ಮೂಲಕ ಮಾತ್ರ ಪ್ರಕಟಿಸಲಾಗುವುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್,
ಲೋಕೋಪಯೋಗಿ ಇಲಾಖೆ, ಮೈಸೂರು ವಿಭಾಗ, ಮೈಸೂರು.

DIPR/DDMYS/1449/KSMCA/824/2025-26

ಪೊಲೀಸ್ ಅಧೀಕ್ಷಕರು, ವೈರಲೆಸ್‌ರವರ ಕಛೇರಿ

ನಂ.1, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001.
ದೂರವಾಣಿ : +91–80–22942324, ಇ–ಮೇಲ್: spwireless@ksp.gov.in

ಟೆಂಡರ್ ಸಂಖ್ಯೆ: KSP/2025-26/IND0455/Call-2 ದಿನಾಂಕ: 31.12.2025

ಸಂಕ್ಷಿಪ್ತ ಮರು ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಪೊಲೀಸ್ ಅಧೀಕ್ಷಕರು, ವೈರಲೆಸ್ ಬೆಂಗಳೂರುರವರಿಂದ, ಇಆರ್‌ಎಸ್‌ಎಸ್–112 ಯೋಜನೆಯನ್ನು ಬಲವರ್ಧಿಸುವ ನಿಮಿತ್ತ ಹೆದ್ದಾರಿ ಗಸ್ತು/ಗರುಡ/ಪಿಸಿಆರ್ ಗಸ್ತು ವಾಹನಗಳಲ್ಲಿ ಅಳವಡಿಸಿರುವ 267 ಸಂಖ್ಯೆಯ MDT (Mobile Data Terminal) ಗಳಿಗೆ SIM ಕಾರ್ಡ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಖರೀದಿಸುವ ಸಂಬಂಧ ಆನ್‌ಲೈನ್ ನಲ್ಲಿ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್‌ನ ವಾರ್ಷಿಕ ಅಂದಾಜು ಮೌಲ್ಯ: **ರೂ. 6.76 ಲಕ್ಷಗಳು,** ಟೆಂಡರ್ ಪೂರ್ವಭಾವಿ ಸಭೆಯ **ದಿನಾಂಕ: 07.01.2026 ಸಮಯ ಮಧ್ಯಾಹ್ನ 12.30 ಗಂಟೆ** ಹಾಗೂ ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 16.01.2026, ಸಂಜೆ 5.00 ಗಂಟೆಗಳು**. ಇತರೆ ಮಾಹಿತಿಯನ್ನು **https://eproc.karnataka.gov.in** ರಲ್ಲಿ ಪಡೆಯಬಹುದು ಹಾಗೂ ಹೆಚ್ಚಿನ ವಿವರಗಳಿಗಾಗಿ ಮೇಲ್ಕಂಡ ಕಛೇರಿಯನ್ನುಸಂಪರ್ಕಿಸಬಹುದಾಗಿದೆ.

ಸಹಿ/– ಪೊಲೀಸ್ ಅಧೀಕ್ಷಕರು,
ವೈರ್‌ಲೆಸ್, ಬೆಂಗಳೂರು

ವಾಸಾಸಂಇ/ವಾ.ಪ್ರ./4775/ಎಸ್‌ಎಸ್‌ಸಿ/2025–26

ಪ್ರವಾಸೋದ್ಯಮ ಇಲಾಖೆ

ಪ್ರವಾಸೋದ್ಯಮ ಆಯುಕ್ತಾಲಯ, 5ನೇ ಮಹಡಿ, ಇಂಧನ ಭವನ,
ರೇಸ್ ಕೋರ್ಸ್ ರಸ್ತೆ, ಬೆಂಗಳೂರು–560009.
ಇಮೇಲ್ : director@karnatakatourism.org ದೂರವಾಣಿ : 080–22352525

ಕರ್ನಾಟಕ ಒಂದು ರಾಜ್ಯ, ಹಲವು ಜಗತ್ತುಗಳು. ಪ್ರವಾಸೋದ್ಯಮ ಇಲಾಖೆ

ಸಂಖ್ಯೆ: DT/CSS/SASCI-R&D/2025-26/1461 ದಿನಾಂಕ: 01.01.2026

ಟೆಂಡರ್ ತಿದ್ದುಪಡಿ

ಪ್ರವಾಸೋದ್ಯಮ ಇಲಾಖೆಯಿಂದ ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಈ ಕೆಳಕಂಡ ಟೆಂಡರ್ ಅನ್ನು ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ ಪ್ರಕಟಿಸಲಾಗಿರುತ್ತದೆ. ತಾಂತ್ರಿಕ ಕಾರಣಗಳಿಂದಾಗಿ Package 2,3&4 ಗಳ ಇಂಡೆಂಟ್ ಸಂಖ್ಯೆ: DT/2025-26/OW/WORK_INDENT8, WORK_INDENT9, WORK_INDENT10 ಗಳನ್ನು ರದ್ದುಪಡಿಸಲಾಗಿರುತ್ತದೆ.

ಕ್ರ. ಸಂ	ಕಾಮಗಾರಿಯ ವಿವರ	ಪ್ಯಾಕೇಜ್ ಸಂಖ್ಯೆ	ಇಂಡೆಂಟ್ ಸಂಖ್ಯೆ	ಪ್ರಮುಖ ದಿನಾಂಕಗಳು
1.	ಕೇಂದ್ರ ಪುರಸ್ಕೃತ Special Assistance to State for Capital Investment-Development of Iconic Tourist Destination (SASCI) ಯೋಜನೆಯಡಿ, ಕರ್ನಾಟಕದ ಬೆಂಗಳೂರು ನಗರ ಜಿಲ್ಲೆಯ ತಾತಗುಣಿಯಲ್ಲಿರುವ ರೋರಿಚ್ ಮತ್ತು ದೇವಿಕಾ ರಾಣಿ ಎಸ್ಟೇಟ್‌ನಲ್ಲಿ ಪರಿಸರ ಪ್ರವಾಸೋದ್ಯಮ ಮತ್ತು ಸಾಂಸ್ಕೃತಿಕ ಕೇಂದ್ರದ ಅಭಿವೃದ್ಧಿ ಯೋಜನೆ	Package 1	DT/2025-26/OW/WORK_INDENT7	ಬಿಡ್ ಸಲ್ಲಿಕೆಯ ಪರಿಷ್ಕೃತ ಅಂತಿಮ ದಿನಾಂಕ:12.01.2026.

ಇನ್ನುಳಿದಂತೆ, ಸದರಿ ಟೆಂಡರ್‌ನ ನಿಯಮಾವಳಿಗಳಲ್ಲಿ ಯಾವುದೇ ಬದಲಾವಣೆಗಳಿರುವುದಿಲ್ಲ.

ಸಹಿ/–
ಕಾರ್ಯಪಾಲಕ ಅಭಿಯಂತರರು ಹಾಗೂ
ಟೆಂಡರ್ ಆಹ್ವಾನಿಸುವ ಪ್ರಾಧಿಕಾರಿ, ಪ್ರವಾಸೋದ್ಯಮ ಇಲಾಖೆ

DIPR/CP/4781/NR/2025-26

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರಪಾರ್ಕ್ ಪಶ್ಚಿಮ, ಬೆಂಗಳೂರು–560 020

ಸಂ.: ಬೆಂಅಪ್ರಾ/ನಯೋಸ/CLU-159/3616/2025-26 ದಿನಾಂಕ: 01.01.2026

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14–A ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು **ಕೈಗಾರಿಕಾ ವಲಯದಿಂದ ವಸತಿ** ಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗೆ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಚೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ ಗ್ರಾಮ ಇತರೆ ವಿವರ	ನಿವೇಶನ ಸಂ.	ವಿಸ್ತೀರ್ಣ ಎ–ಗು	ಪರಿಷ್ಕೃತ ಮಹಾಯೋಜನೆ 2015ರ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀ.ಟಿ.ಎ.ಶರವಣ	ಯಶವಂತಪುರ	ಮಾರಪ್ಪನಪಾಳ್ಯ ವಾರ್ಡ್ ಇಂಡಸ್ಟ್ರಿಯಲ್ ಸಬರ್ಬ್ ಎಪಿಎಂಸಿ ಯಾರ್ಡ್ ಹತ್ತಿರ	ಮುನ್ಸಿಪಾಲಿಟಿ ಸಂಖ್ಯೆ 55/2 (ನಿವೇಶನ ಸಂಖ್ಯೆ 29)	5831.030 ಚ.ಮೀ	ಕೈಗಾರಿಕೆ ವಲಯ	ವಸತಿ

ಷರಾ: ಅರ್ಜಿದಾರರು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿನ ಬೆಂಗಳೂರು ನಗರ, ನಿವೇಶನ ಸಂಖ್ಯೆ 55/2 (ಹಳೆ ನಂ: 29) ಇಂಡಸ್ಟ್ರಿಯಲ್ ಸಬರ್ಬ್ ಎಪಿಎಂಸಿ ಯಾರ್ಡ್ ಹತ್ತಿರ ಗೇಟ್ ನಂ: –4, ಯಶವಂತಪುರ ದಲ್ಲಿರುವ 5831.030 ಚ.ಮೀ ಜಮೀನನ್ನು ಜಮೀನು ವಸತಿಯೇತರ ಉದ್ದೇಶಕ್ಕಾಗಿ ಬಳಸಲು ಸಾಧ್ಯವಿರುವುದಿಲ್ಲ, ನಮ್ಮ ಜಮೀನಿನ ಸುತ್ತಮುತ್ತ ವಾಸದ ಉದ್ದೇಶಕ್ಕಾಗಿ ಬೇಡಿಕೆ ಇದ್ದು, ಪ್ರಶ್ನಿತ ಜಮೀನಿನಲ್ಲಿ ಯೋಜಿತ ಬೆಳವಣಿಗೆಯ ಅಭಿವೃದ್ಧಿ ಪಡಿಸುವುದರಿಂದ ಸುತ್ತಮುತ್ತಲಿನ ನಿವಾಸಿಗಳಿಗೆ ಉದ್ಯೋಗಾವಕಾಶ ಕಲ್ಪಿಸಿದಂತಾಗುತ್ತದೆ, ಭೂ ಉಪಯೋಗ ಬದಲಾಣೆಗೊಂಡ ನಂತರ ವಸತಿ ಉದ್ದೇಶಕ್ಕೆ ಸಕ್ರಮ ಪ್ರಾಧಿಕಾರದಿಂದ ಅನುಮೋದನೆ ಪಡೆದು ಯೋಜನಾಬದ್ಧ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವುದರಿಂದ ಸ್ಥಳೀಯರಿಗೆ ಉದ್ಯೋಗಾವಕಾಶ ಸೃಷ್ಟಿಯಾಗುತ್ತದೆ, ಸದರಿ ಪ್ರದೇಶದಲ್ಲಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವುದರಿಂದ ಸಾರ್ವಜನಿಕರಿಗೆ ಅನುಕೂಲವಾಗುತ್ತದೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ, ಪ್ರಶ್ನಿತ ಜಮೀನುಗಳನ್ನು **'ಕೈಗಾರಿಕೆ ವಲಯ'** ದಿಂದ **'ವಸತಿ'** ಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/– ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು.

ಸಮಾಚಾರ ಸಣ್ಣದಲ್ಲ

ಕಾಲು ಜಾರಿ ಕಾಲುವೆಗೆ ಬಿದ್ದು ಇಬ್ಬರು ಸಾವು

ಲಿಂಗಸೂಗೂರು: ಕೂಲಿ ಕೆಲಕ್ಕೆ ಬಂದಿದ್ದ ಇಬ್ಬರು ಮಹಿಳೆಯರು ಕೈ ಕಾಲು ಮುಖ ತೊಳೆಯಲು ಕಾಲುವೆಗೆ ಹೋಗಿ ಕಾಲು ಜಾರಿ ಬಿದ್ದು ಸಾವನ್ನಪ್ಪಿರುವ ಘಟನೆ ರಾಯಚೂರು ಜಿಲ್ಲೆ ಲಿಂಗಸೂಗೂರು ತಾಲೂಕಿನ ಆನೆಹೊಸರು ಗ್ರಾಮದ ಬಳಿ ನಡೆದಿದೆ. ನಾರಾಯಣ ಪುರ ಬಲದಂಡೆ ಕಾಲುವೆಯಲ್ಲಿ ಮುಳುಗಿ ಮಸ್ಕಿ ತಾಲೂಕಿನ ನಂಜಲದಿನ್ನಿ ಗ್ರಾಮದ ಈರಮ್ಮ (40), ದೇವಮ್ಮ (30) ಮೃತಪಟ್ಟಿದ್ದಾರೆ. ಬುಧವಾರ ಸಂಜೆ ಕೂಲಿ ಕೆಲಸ ಮುಗಿದ ನಂತರ ಕಾಲುವೆಯಲ್ಲಿ ಮುಖ ತೊಳೆದುಕೊಳ್ಳಲು ಹೋಗಿ ಕಾಲು ಜಾರಿ ಕಾಲುವೆಗೆ ಬಿದ್ದಿದ್ದಾರೆ. ಕೂಲಿ ಕೆಲಸಕ್ಕೆ 30 ಜನ ಬಂದಿದ್ದು, ಬುಧವಾರ ಸಾಯಂಕಾಲ ಈರಮ್ಮಳ ಶವ ಪತ್ತೆಯಾಗಿದ್ದು, ಗುರುವಾರ ಬೆಳಗ್ಗೆ ದೇವಮ್ಮ ಶವ ಪತ್ತೆಯಾಗಿದೆ. ಈ ಸಂಬಂಧ ಲಿಂಗಸುಗೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹಳೆ ಲವ್ವರ್‌ಗೆ ಶುಭ ಕೋರಿದವನ ಕೊಲೆ

ಚಿಕ್ಕಮಗಳೂರು: ಹಳೇ ಪ್ರಿಯತಮೆಯ ಹುಟ್ಟುಹಬ್ಬಕ್ಕೆ ವಿಶ್ ಮಾಡಿದ್ದಕ್ಕೆ ಆಕೆಯ ಅಣ್ಣ ಹಾಗೂ ನಿಶ್ಚಿತಾರ್ಥ ಮಾಡಿಕೊಂಡಿದ್ದ ಯುವಕ ಸೇರಿ ಮಾಜಿ ಪ್ರಿಯತಮನಿಗೆ ಚಾಕು ಇರಿದು ಹತ್ಯೆ ಮಾಡಿರುವ ಘಟನೆ ತರೀಕೆರೆ ತಾಲೂಕಿನ ಅತ್ತಿಗನಾಳು ಗ್ರಾಮದಲ್ಲಿ ನಡೆದಿದೆ. ಹತ್ಯೆಯಾದ ಯುವಕನನ್ನು ಉಡೇವಾ ಗ್ರಾಮದ ಮಂಜುನಾಥ್ (28) ಎಂದು ಗುರುತಿಸಲಾಗಿದೆ. ಮೃತ ಮಂಜು ಯುವತಿಯೊಬ್ಬಳನ್ನು ಪ್ರೀತಿಸುತ್ತಿದ್ದ. ಆಕೆಯ ಮನೆಯವರು ಆತ ಬೇಡ ಅಂತ ವೇಣು ಎಂಬ ಬೇರೆ ಹುಡುಗನ ಜತೆ ಮದುವೆ ನಿಶ್ಚಯ ಮಾಡಿದ್ದರು. ಆದರೆ, ಕಳೆದ 2 ದಿನಗಳ ಹಿಂದೆ ಆಕೆಯ ಹುಟ್ಟು ಹಬ್ಬಕ್ಕೆ ಸಾಮಾಜಿಕ ಜಾಲತಾಣದಲ್ಲಿ ವಿಶ್ ಮಾಡಿದ್ದ. ಇದರಿಂದ ಕೆರಳಿದ ಯುವತಿಯ ಅಣ್ಣ ಹಾಗೂ ನಿಶ್ಚಿತಾರ್ಥ ಮಾಡಿಕೊಂಡು ಯುವಕ ಮಂಜುಗೆ ಕರೆ ಮಾಡಿ ಕರೆಸಿಕೊಂಡು ಮಾತನಾಡುವಾಗ ಚಾಕು ಇರಿದಿದ್ದಾರೆ. ಕೂಡಲೇ ಆತನನ್ನ ತರೀಕೆರೆ ಸಾರ್ವ ಜನಿಕ ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ಕೊಡಿಸಿ ಶಿವಮೊಗ್ಗದ ಖಾಸಗಿ ಆಸ್ಪತ್ರೆಗೆ ದಾಖಲಿಸಿದರೂ ಚಿಕಿತ್ಸೆ ಫಲಕಾರಿಯಾಗದೆ ಸಾವನ್ನಪ್ಪಿದ್ದಾನೆ.

ವಿನಯ್ ಹೆಗ್ಡೆ ನಿಧನ: ಹೆಬ್ಬಾಳ್ಕರ್ ಸಂತಾಪ

ಬೆಳಗಾವಿ: ನಿಟ್ಟೆ ಡೀಮ್ಡ್ ವಿಶ್ವವಿದ್ಯಾಲಯ ಸಂಸ್ಥಾಪಕ ಹಾಗೂ ಕುಲಾಧಿಪತಿ ವಿನಯ್ ಹೆಗ್ಡೆ (83) ಅವರ ನಿಧನಕ್ಕೆ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಸಂತಾಪ ಸೂಚಿಸಿದ್ದಾರೆ. ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಿಗೆ ಶೈಕ್ಷಣಿಕವಾಗಿ ತಮ್ಮದೇ ಕೊಡುಗೆ

ನೀಡಿರುವ ವಿನಯ್ ಹೆಗ್ಡೆ ಅವರ ಅಗಲಿಕೆಯಿಂದ ಓರ್ವ ಸಜ್ಜನ ವ್ಯಕ್ತಿಯನ್ನು ಕಳೆದುಕೊಂಡಂತೆ ಆಗಿದೆ. ಸುಪ್ರೀಂ ಕೋರ್ಟ್ ಮಾಜಿ ನ್ಯಾಯಮೂರ್ತಿ ದಿ. ಕೆ.ಎಸ್. ಹೆಗ್ಡೆ ಅವರ ಎರಡನೇ ಪುತ್ರ ವಿನಯ್ ಹೆಗ್ಡೆ ಅವರು ಸ್ಥಾಪಿಸಿರುವ ನಿಟ್ಟೆ ಶಿಕ್ಷಣ ಸಂಸ್ಥೆಯಲ್ಲಿ ವೈದ್ಯಕೀಯ, ಎಂಜಿನಿಯರಿಂಗ್ ಹಾಗೂ ಇನ್ನಿತರ ಕೋರ್ಸ್‌ಗಳು ಇವೆ. ಇತ್ತೀಚೆಗೆ ನಿಟ್ಟೆ ಶಿಕ್ಷಣ ಸಂಸ್ಥೆಗೆ ಪರಿಗಣಿತ ವಿವಿ ಮಾನ್ಯತೆ ದೊರೆತಿದೆ. ಗ್ರಾಮೀಣ ಪ್ರದೇಶಗಳಲ್ಲಿ ಉನ್ನತ ಶಿಕ್ಷಣ ಸಂಸ್ಥೆಗಳನ್ನು ಆರಂಭಿಸುವ ಮೂಲಕ ಬಡ ಮಕ್ಕಳಿಗೂ ಉನ್ನತ ಶಿಕ್ಷಣ ಸಿಗುವಂತೆ ಮಾಡಿದ್ದರು. ವಿನಯ್ ಹೆಗ್ಡೆ ಅವರ ಆತ್ಮಕ್ಕೆ ಶಾಂತಿ ಸಿಗಲಿ, ಅವರ ಅಗಲಿಕೆಯ ದುಃಖವನ್ನು ಸಹಿಸಿಕೊಳ್ಳುವ ಶಕ್ತಿಯನ್ನು ಆ ಭಗವಂತ ಕುಟುಂಬ ಸದಸ್ಯರಿಗೆ, ಅಭಿಮಾನಿಗಳಿಗೆ, ಬಂಧು ಬಳಗಕ್ಕೆ ಶಕ್ತಿ ನೀಡಲಿ ಎಂದು ಪ್ರಾರ್ಥಿಸಿಕೊಳ್ಳುವೆ ಎಂದು ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವರದಕ್ಷಿಣೆಗಾಗಿ ಕಿರುಕುಳ: 8 ಮಂದಿ ವಿರುದ್ಧ ಕೇಸ್

ಚಿಕ್ಕಮಗಳೂರು: ವರದಕ್ಷಿಣೆಗಾಗಿ ವ್ಯಕ್ತಿಯೊಬ್ಬ ತನ್ನ ಪತ್ನಿಯನ್ನು ವಿವಸ್ತ್ರಗೊಳಿಸಿ ಮನಸೋ ಇಚ್ಛೆ ಹಲ್ಲೆ ನಡೆಸಿರುವುದು ತರಿಕೆರೆ ತಾಲೂಕಿನ ನಂದಿಹೊಸಳ್ಳಿ ಗ್ರಾಮದಲ್ಲಿ ನಡೆದಿದೆ. ಮಹಿಳೆ ಗ್ರಾಮದ ತಿಮ್ಮಪ್ಪ ಎಂಬವನನ್ನು 2014ರಲ್ಲಿ ಪ್ರೀತಿಸಿ ಮದುವೆಯಾಗಿದ್ದಳು. 2 ಮಕ್ಕಳಾದ ಬಳಿಕ ತವರಿಗೆ ಹೋಗಿ ಹಣ ತರುವಂತೆ ತಿಮ್ಮಪ್ಪ ತನ್ನ ಪತ್ನಿಗೆ ನಿತ್ಯ ಕಿರುಕುಳ ನೀಡುತ್ತಿದ್ದ. ಹಲ್ಲೆಯಿಂದಾಗಿ ಮಹಿಳೆಯ ಮೈಯೆಲ್ಲ ಕಪ್ಪು ಬಣ್ಣಕ್ಕೆ ತಿರುಗಿದೆ. ಅಷ್ಟೇ ಅಲ್ಲದೇ ಅಪ್ಪ-ಅಣ್ಣನ ಮಾತು ಕೇಳಿಕೊಂಡು ನಿತ್ಯ ಕುಡಿದು ಬಂದು, ಬೇರೆ ಮದುವೆಯಾಗಬೇಕು, ಬರೀ ಹೆಣ್ಣು ಮಕ್ಕಳಿರೋದು, ಮನೆ ಬಿಟ್ಟು ಹೋಗು ಎಂದು ನಿಂದಿಸುತ್ತಿದ್ದನಂತೆ. ಹಲ್ಲೆ ನಡೆಸಿ ಪತ್ನಿಯನ್ನ ವಿವಸ್ತ್ರಗೊಳಿಸಿ ಮನೆಯಲ್ಲೇ ಕೂಡಿ ಹಾಕಿದ್ದನಂತೆ. ಮನೆ ಹಿಂದಿನಿಂದ ಓಡಿಹೋಗಿ ದಾರಿಯಲ್ಲಿ ಸಿಕ್ಕ ಬಟ್ಟೆಯಲ್ಲಿ ಮೈಮುಚ್ಚಿಕೊಂಡು ಮಹಿಳೆ ಅಲ್ಲಿಂದ ಪಾರಾಗಿದ್ದಾಳೆ. ಈ ಸಂಬಂಧ ಲಿಂಗದಹಳ್ಳಿ ಪೊಲೀಸ್ ಠಾಣೆಯಲ್ಲಿ ಮಹಿಳೆಯ ಪತಿ ಸೇರಿ 8 ಜನರ ವಿರುದ್ಧ ಪ್ರಕರಣ ದಾಖಲಾಗಿದೆ.

ವಿಶ್ವವಾಣಿ ಕ್ಲಬ್ ಹೌಸ್
02.01.2026
ಸಂಜೆ: 06.55 ರಿಂದ 08.05 ರವರೆಗೆ
ಶುಕ್ರವಾರದ ಅತಿಥಿ

ಶ್ರೀ ಪಿ. ಕೆ ನಂದೀಶ್
ವಿಷಯ
ಅರವಿಂದರ ಸಾವಿತ್ರಿ-9
vishwavani.news

ಶೂನ್ಯ ಬಡ್ಡಿ ದರದ ಕೃಷಿ ಸಾಲಕ್ಕೆ ಉತ್ತಮ ಸ್ಪಂದನೆ

ಹಿಂದಿನ ವರ್ಷ 26,36,796 ರೈತರಿಂದ ಯೋಜನೆ ಸದ್ಬಳಕೆ
20 ಡಿಸಿಸಿ ಬ್ಯಾಂಕ್‌ಗಳಿಂದ 23,673 ಕೋಟಿ ರು. ಸಾಲ ವಿತರಣೆ

ಬೆಂಗಳೂರು: ರೈತರಿಗೆ 5 ಲಕ್ಷ ರು.ವರೆಗೆ ನೀಡಲಾಗುವ ಶೂನ್ಯ ಬಡ್ಡಿ ದರದ ಅಲ್ಪಾವಧಿ 'ಕೃಷಿ ಸಾಲ' ಯೋಜನೆಗೆ ರಾಜ್ಯದಲ್ಲಿ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ.

ಕೃಷಿ ಚಟುವಟಿಕೆ ಪ್ರೋತ್ಸಾಹಿಸಲು ಮತ್ತು ಗ್ರಾಮೀಣ ಆರ್ಥಿಕತೆಯ ಜೀವನಾಡಿಯಾದ ಸಹಕಾರ ವಲಯ ಬಲಪಡಿಸಲು 2023-24ನೇ ಸಾಲಿನಲ್ಲಿ ಸಿದ್ದರಾಮಯ್ಯ ನೇತೃತ್ವದ ರಾಜ್ಯ ಸರಕಾರ, ಶೂನ್ಯ ಬಡ್ಡಿ ದರದಲ್ಲಿ ನೀಡುವ ಬೆಳೆ ಸಾಲ ಮಿತಿಯನ್ನು ಮೂರು ಲಕ್ಷ ರು. ನಿಂದ ಐದು ಲಕ್ಷ ರು. ವರೆಗೆ ಹೆಚ್ಚಿಸಿತ್ತು. ಅದರಂತೆ, 2024-25ನೇ ಸಾಲಿನಲ್ಲಿ ರಾಜ್ಯದ 20 ಡಿಸಿಸಿ ಬ್ಯಾಂಕ್‌ಗಳಿಂದ ಒಟ್ಟು 23,673 ಕೋಟಿ ರು. ಮೊತ್ತವನ್ನು 26,36,796 ರೈತರಿಗೆ ಸಾಲ ವಿತರಿಸಲಾಗಿದೆ.

ಈ ಮೂಲಕ ಹೆಚ್ಚಿನ ಅನ್ನದಾತರು ಈ ಯೋಜನೆ ಸದ್ಬಳಕೆ ಮಾಡಿಕೊಂಡಿದ್ದಾರೆ. ರಾಜ್ಯದ ಇತರ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ಗಳಗಿಂತ (ಡಿಸಿಸಿಬಿ), ಬೆಳಗಾವಿ ಡಿಸಿಸಿ ಬ್ಯಾಂಕ್ 4,88,379 ರೈತರಿಗೆ ಸಾಲ ನೀಡುವ ಮೂಲಕ ಮೊದಲ ಸ್ಥಾನದಲ್ಲಿದೆ. ಬಾಗಲಕೋಟೆ, ವಿಜಯಪುರ, ಹಾಸನ ಹಾಗೂ ಕಲಬುರಗಿ ಮತ್ತು ಯಾದಗಿರಿ ಡಿಸಿಸಿ ಬ್ಯಾಂಕ್‌ಗಳು ಕ್ರಮವಾಗಿ 1,2,3 ಮತ್ತು 4ನೇ ಸ್ಥಾನದಲ್ಲಿವೆ. ಈ ಯೋಜನೆಯಲ್ಲಿ ಸಾಲ ಪಡೆದ ರೈತರು, 365 ದಿನಗಳ ಅವಧಿಯಲ್ಲಿ ಸಾಲ ಮರುಪಾವತಿಸಿ ಮತ್ತೆ ಬೆಳೆ ಸಾಲ ಪಡೆಯಬಹುದು.

ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ 52 ಶಾಖೆ ಹೊಂದಿದೆ. ತನ್ನ ಅಂಗಸಂಸ್ಥೆಯಾದ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ (ಡಿಸಿಸಿಬಿ) ಮತ್ತು ಪ್ರಾಥಮಿಕ ಕೃಷಿ ಸಹಕಾರಿ ಸಂಘಗಳ (ಪಿಎಸಿಎಸ್) ಮೂಲಕ ಗ್ರಾಮೀಣ ಮಟ್ಟದಲ್ಲಿ ಅಲ್ಪಾವಧಿ ಸಾಲವನ್ನು ರೈತರಿಗೆ ನೀಡುತ್ತಿದೆ. ರಾಜ್ಯದಲ್ಲಿ 21 ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು ಕಾರ್ಯನಿರ್ವಹಿಸುತ್ತಿದ್ದು, 818 ಶಾಖೆಗಳನ್ನು ಹೊಂದಿವೆ. ರಾಜ್ಯದಲ್ಲಿ ಒಟ್ಟು 5,658 ಪ್ರಾಥಮಿಕ ವ್ಯವಸಾಯ ಸಹಕಾರ ಸಂಘಗಳು, ಗ್ರಾಮ ಪಂಚಾಯತಿ ಮಟ್ಟದಲ್ಲಿ ಕಾರ್ಯನಿರತವಾಗಿವೆ. ಈ ಸಂಸ್ಥೆಗಳು ನಬಾರ್ಡ್ ಮಾರ್ಗಸೂಚಿಯನ್ವಯ ತಮ್ಮ ಮೂಲನಿಧಿಯನ್ನು ಆರ್ಥಿಕವಾಗಿ ಮತ್ತು ಸಂಘಟನಾತ್ಮಕವಾಗಿ ಕಾರ್ಯನಿರ್ವಹಿಸುತ್ತಿವೆ.

ಸಹಕಾರ ಸಾಲ ಸಂರಚನೆಯ ಬಲವರ್ಧನೆಗಾಗಿ ನಬಾರ್ಡ್, ರಾಜ್ಯ ಸರಕಾರ ಮತ್ತು ಅಪೆಕ್ಸ್ ಬ್ಯಾಂಕ್ ಒಡಂಬಡಿಕೆ ಮಾಡಿಕೊಂಡಿವೆ. ರಾಜ್ಯದ ರೈತರಿಗೆ ಪತ್ತಿನ ಸಹಕಾರಿ ಸಂಸ್ಥೆಗಳ ಮೂಲಕ ಶೇ.3 ಬಡ್ಡಿ ದರದಲ್ಲಿ 15 ಲಕ್ಷ ರು.ವರೆಗೆ ಮಧ್ಯಮಾವಧಿ, ದೀರ್ಘಾವಧಿ ಕೃಷಿ ಮತ್ತು ಕೃಷಿ ಸಂಬಂಧಿತ ಸಾಲ ನೀಡುವ ಯೋಜನೆ ಜಾರಿಗೊಳಿಸಲಾಗಿದೆ.

ವರ್ಷಕ್ಕೆ ಸೀಮಿತ: ರೈತರು ಪಡೆಯುವ ಎಲ್ಲ ಸಾಲಗಳಿಗೆ ಕೃಷಿ ಜಮೀನು ಅಥವಾ ಬೆಳೆ ಆಧಾರದಲ್ಲಿ ಸಾಲ ನೀಡಲಾಗುತ್ತದೆ. ಅಲ್ಪಾವಧಿ ಸಾಲ 1 ವರ್ಷಕ್ಕೆ ಸೀಮಿತ. ಆದರೆ, ಇದು ಶೂನ್ಯ ಬಡ್ಡಿ ಅಂದರೆ ಬಡ್ಡಿ ಇಲ್ಲದ ಸಾಲವಾಗಿದೆ. ಮಧ್ಯಮಾವಧಿ 5 ವರ್ಷ ಮತ್ತು ದೀರ್ಘಾವಧಿ ಸಾಲವನ್ನು 10 ವರ್ಷ ಅವಧಿಗೆ ನೀಡಲಾಗುತ್ತದೆ. ರೈತರ ಕೃಷಿ ಚಟುವಟಿಕೆಗೆ ನೆರವಾಗಲೆಂದು ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್‌ಗಳು, ಪಿಕಾರ್ಡ್ ಬ್ಯಾಂಕ್ ಹಾಗೂ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕುಗಳಿಂದ ರೈತರಿಗೆ ಶೂನ್ಯ ಬಡ್ಡಿ ದರದಲ್ಲಿ ಸಾಲ ನೀಡಲಿವೆ. ಕೃಷಿ ಚಟುವಟಿಕೆಗೆ ಮಾತ್ರವಲ್ಲದೆ ಕುರಿ, ಮೇಕೆ, ಕೋಳಿ, ಹಂದಿ ಸಾಕಾಣಿಕೆಗೆ ಹಾಗೂ ರೇಷ್ಮೆ ಶೆಡ್ ನಿರ್ಮಾಣಕ್ಕೂ 5 ಲಕ್ಷ ರು. ವರೆಗೆ ಸಾಲ ಸಿಗಲಿದೆ.

ಲಾಭಾಂಶದತ್ತ ದಕ್ಷಿಣ ಕನ್ನಡ, ಉಡುಪಿ ಡಿಸಿಸಿ ಬ್ಯಾಂಕ್

2024-25ನೇ ಸಾಲಿನಲ್ಲಿ ಅತಿ ಹೆಚ್ಚು ಲಾಭಾಂಶದಲ್ಲಿರುವ ರಾಜ್ಯದಲ್ಲೇ ಇತರ ಡಿಸಿಸಿಬಿ ಬ್ಯಾಂಕ್‌ಗಳಗಿಂತ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್, 86.41 ಕೋಟಿ ರು. ಲಾಭ ಗಳಿಸಿ ಪಡೆದು ಮೊದಲ ಸ್ಥಾನದಲ್ಲಿದೆ. ಬೆಳಗಾವಿ ಡಿಸಿಸಿ ಬ್ಯಾಂಕ್ 33.1 ಕೋಟಿ ರು., ವಿಜಯಪುರ ಡಿಸಿಸಿ ಬ್ಯಾಂಕ್ 25.18 ಕೋಟಿ ರು., ಉತ್ತರ ಕನ್ನಡ ಕೆಡಿಸಿಸಿ ಬ್ಯಾಂಕ್ 25.11 ಕೋಟಿ ರು., ಶಿವಮೊಗ್ಗ 20.73 ಕೋಟಿ ರು., ಹಾಸನ ಡಿಸಿಸಿ ಬ್ಯಾಂಕ್ 16.46 ಕೋಟಿ ರು., ಕೊಡಗು ಡಿಸಿಸಿ ಬ್ಯಾಂಕ್ 16.7 ಕೋಟಿ ರು., ಕಲಬುರಗಿ ಮತ್ತು ಯಾದಗಿರಿ ಡಿಸಿಸಿ ಬ್ಯಾಂಕ್ 14.02 ಕೋಟಿ ರು., ಲಾಭಗಳಿಸಿದೆ. ಆದರೆ, ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ 50.28 ಕೋಟಿ ರೂ ಹಾಗೂ ಬೀದರ್ ಡಿಸಿಸಿ ಬ್ಯಾಂಕ್ 41.86 ಕೋಟಿ ರು.ನಷ್ಟ ಅನುಭವಿಸಿವೆ.

ಜಿಲ್ಲಾವಾರು ಡಿಸಿಸಿ ಬ್ಯಾಂಕ್‌ನಲ್ಲಿ ಸಾಲ ಪಡೆದ ರೈತರ ವಿವರ

ಬೆಳಗಾವಿ-4,88,379, ಬಾಗಲಕೋಟೆ-2,54,191, ವಿಜಯಪುರ-2,36,330, ಹಾಸನ- 1,69, 281, ಕಲಬುರಗಿ ಮತ್ತು ಯಾದಗಿರಿ-1,56,821, ಬೀದರ್-1,50,419, ದಕ್ಷಿಣ ಕನ್ನಡ ಮತ್ತು ಉಡುಪಿ -1,41,548, ತುಮಕೂರು-1,40,953, ರಾಯಚೂರು ಮತ್ತು ಕೊಪ್ಪಳ - 1,13,577, ಮೈಸೂರು ಮತ್ತು ಚಾಮರಾಜನಗರ-1,08,033, ಬಳ್ಳಾರಿ-1,02,390, ದಾವಣಗೆರೆ - 1,02, 159, ಕೆನರಾ ಡಿಸ್ಟಿಕ್ಸ್ ಸೆಂಟ್ರಲ್ ಬ್ಯಾಂಕ್, ಉತ್ತರ ಕನ್ನಡ-88,485, ಕರ್ನಾಟಕ ಸೆಂಟ್ರಲ್ ಬ್ಯಾಂಕ್, ಧಾರವಾಡ-87,437, ಶಿವಮೊಗ್ಗ- 83,074, ಚಿತ್ರದುರ್ಗ 56,950, ಚಿಕ್ಕಮಗಳೂರು - 56,883, ಕೊಡಗು-36,756 ಮತ್ತು ಮಂಡ್ಯ-14,452 ರೈತರು

ನಾನೂ ಸದಾ ಆಶಾವಾದಿ: ಪರಮೇಶ್ವರ

ಬೆಂಗಳೂರು: ಹೊಸವರ್ಷದ ಮೊದಲ ದಿನವೇ 'ಪದೋನ್ನತಿ'ಯ ಆಶಾವಾದವನ್ನು ಗೃಹ ಸಚಿವ ಡಾ.ಜಿ. ಪರಮೇಶ್ವರ ಹೊರಹಾಕಿರುವುದು ಕುತೂಹಲಕ್ಕೆ ಕಾರಣವಾಗಿದೆ.

ಗುರುವಾರ ಬೆಳಗ್ಗೆ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಹೈಕಮಾಂಡ್ ತೀರ್ಮಾನಿಸಿದರೆ ರಾಜಕೀಯ ಪದೋನ್ನತಿ ಆಗುತ್ತದೆ. ಎಲ್ಲರ ರೀತಿಯಲ್ಲಿ ನನಗೂ ಆಕಾಂಕ್ಷೆಯಿದೆ. ನಾನು ಈವರೆಗೂ ಆಶಾವಾದಿಯಾಗಿಯೇ ಬದುಕಿದ್ದೇನೆ, ಅದೇನು ಹೊಸದಾಗಿ ಆಗಬೇಕು ಅಂತೇನಿಲ್ಲ. ಎಲ್ಲರಿಗೂ ಜೀವನದಲ್ಲಿ ಏನೇನೋ ಆಗಬೇಕು ಅಂತೆಲ್ಲ ಇರುತ್ತೆ. ಮನುಷ್ಯನಿಗೆ ಆಕಾಂಕ್ಷೆ ಅನ್ನೋದು ಇರಲೇಬೇಕು, ಇಲ್ಲದಿದ್ದರೆ ಮನುಷ್ಯ ಅನಿಸಿಕೊಳ್ಳಲ್ಲ. ಎಲ್ಲರಂತೆ ನನಗೂ ಆಕಾಂಕ್ಷೆಯಿದೆ ಎಂದು ಪರೋಕ್ಷವಾಗಿ ಮುಖ್ಯಮಂತ್ರಿ ಸ್ಥಾನದ ಮೇಲೆ ಕಣ್ಣಿಟ್ಟಿರುವುದನ್ನು ಹೇಳಿದ್ದಾರೆ.

ಯಾರದ್ದೇ ಆಶಯ ಈಡೇರಬೇಕು ಎನ್ನುವುದಿದ್ದರೆ ನಮ್ಮ ಹೈಕಮಾಂಡ್‌ಗೆ ಬಿಟ್ಟದ್ದು. ಹೈಕಮಾಂಡ್ ತೀರ್ಮಾನ ಮಾಡಿದರೆ ಆಗುತ್ತೆ. ಸದ್ಯ ವಾತಾವರಣ ಪೂರಕವಾಗಿದೆಯೆ ಇಲ್ಲವೇ ಎನ್ನುವುದನ್ನು ಎಲ್ಲರು ಗಮನಿಸುತ್ತಿದ್ದಾರೆ. ಯಾರಿಗೆ ವಾತಾವರಣ ಪೂರಕವಾಗಿದೆ, ಯಾರಿಗೆ ಇಲ್ಲ ಅಂತ ಮಾಧ್ಯಮಗಳಿಗೆ ಕಾಣಿಸುತ್ತಿದೆ ಎಂದು ಹೇಳಿದರು.

ಎಲ್ಲೂ ಅಹಿತಕರ ಘಟನೆ ಆಗಿಲ್ಲ: ಹೊಸ ವರ್ಷಕ್ಕೆ ಬೆಂಗಳೂರಿನಲ್ಲಿ ಹೆಚ್ಚು ಜನ ಭಾಗವಹಿಸುವ ನಿರೀಕ್ಷೆಯಿತ್ತು. ಒಂದು ಲೆಕ್ಕದ ಪ್ರಕಾರ ಏಳೆಂಟು ಲಕ್ಷ ಜನ ಭಾಗವಹಿಸಿದರು. ನಾನೂ ಕಮಾಂಡ್ ಸೆಂಟರ್‌ನಲ್ಲಿ ಹೋಗಿ ಕೂತಿದ್ದೆ. ಈ ಬಾರಿ ಜವಾಬ್ದಾರಿಯಿಂದ ಹೊಸ ವರ್ಷ ಆಚರಿಸಿ ಎಂದು ಮನವಿ ಮಾಡಿದ್ದೇವು. ಜವಾಬ್ದಾರಿಯಿಂದ ಜನ ಹೊಸ ವರ್ಷ ಆಚರಿಸಿದ್ದಾರೆ. 20 ಸಾವಿರ ಸಿಬ್ಬಂದಿಯನ್ನು ಭದ್ರತೆಗೆ ನಿಯೋಜಿಸಲಾಗಿತ್ತು. ಎಲ್ಲೂ ಅಹಿತಕರ ಘಟನೆ ಆಗಿಲ್ಲ, ಟ್ರಾಫಿಕ್ ಜಾಮ್ ಆಗಿಲ್ಲ. ಯಾರೂ ಅಪಘಾತ ಮಾಡಿಕೊಂಡು ಪ್ರಾಣ ಹಾನಿ ಮಾಡಿಕೊಳ್ಳಲಿಲ್ಲ. ಮಾಧ್ಯಮದವರೂ ಹೊಸ ವರ್ಷಾಚರಣೆಗೆ ಸಹಕರಿಸಿದರು ಎಂದರು.

ತೀವ್ರ ಸ್ವರೂಪ ಪಡೆದ ಸರಕಾರಿ ವೈದ್ಯಕೀಯ ಕಾಲೇಜು ಹೋರಾಟ

ಪ್ರತಿಭಟನೆ 106 ದಿನಕ್ಕೆ | ಸಚಿವ ಎಂ.ಬಿ. ಪಾಟೀಲ್ ಮನೆಗೆ ಮುತ್ತಿಗೆ ಹಾಕಲು ಯತ್ನ | 30ಕ್ಕೂ ಅಧಿಕ ಪ್ರತಿಭಟನಾಕಾರರ ಬಂಧನ ಬಿಡುಗಡೆ

ಪಿಪಿಪಿ ವಿರೋಧಿಸಿ ವಿಜಯಪುರದಲ್ಲಿ ನಡೆದ ಪ್ರತಿಭಟನೆಯಲ್ಲಿ ಸ್ವಾಮೀಜಿ ಹಾಗೂ ಪೊಲೀಸರ ನಡುವೆ ವಾಗ್ವಾದ ನಡೆಯಿತು.

ವಿಜಯಪುರ: ವಿಜಯಪುರದಲ್ಲಿ ಸರಕಾರಿ ವೈದ್ಯಕೀಯ ಕಾಲೇಜು ಸ್ಥಾಪಿಸಲು ಆಗ್ರಹಿಸಿ ಹಾಗೂ ಸಾರ್ವಜನಿಕ- ಖಾಸಗಿ ಸಹಭಾಗಿತ್ವ (ಪಿಪಿಪಿ) ವಿರೋಧಿಸಿ 106 ದಿನಗಳಿಂದ ನಡೆಯುತ್ತಿರುವ ಅನಿರ್ದಿಷ್ಟಾವಧಿ ಹೋರಾಟ ಗುರುವಾರ ತೀವ್ರ ಸ್ವರೂಪ ಪಡೆಯಿತು.

ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ.ಪಾಟೀಲ ಅವರ ಸೋಲಾಪುರ ರಸ್ತೆಯಲ್ಲಿರುವ ಮನೆಗೆ ಮುತ್ತಿಗೆ ಹಾಕಲು ಹೋರಾಟಗಾರರು ಮುಂದಾದಾಗ ಪೊಲೀಸರು ಮಾರ್ಗ ಮಧ್ಯೆ ತಡೆಯೊಡ್ಡಿದರು. ಈ ವೇಳೆ ಪೊಲೀಸರು ಮತ್ತು ಹೋರಾಟಗಾರರ ನಡುವೆ ತಳ್ಳಾಟ, ನೂಕಾಟ ನಡೆಯಿತು.

ರಾಜ್ಯ ಸರಕಾರದ ಜನ ವಿರೋಧಿ ನೀತಿ ವಿರುದ್ಧ ಹೋರಾಟಗಾರರು ಆಕ್ರೋಶ ವ್ಯಕ್ತಪಡಿಸಿದರು. ಸುಸಜ್ಜಿತ ಸರಕಾರಿ ಜಿಲ್ಲಾಸ್ಪತ್ರೆಯನ್ನು ಖಾಸಗಿಯವರಿಗೆ ವೈದ್ಯಕೀಯ ಕಾಲೇಜು ಮಾಡಲು ಪಿಪಿಪಿ ಮಾದರಿಯಲ್ಲಿ ಕೊಡಲು ಮುಂದಾಗಿರುವ ಸರಕಾರದ ವಿರುದ್ಧ ಘೋಷಣೆ ಕೂಗಿದರು. ಹೋರಾಟವನ್ನು ಹತ್ತಿಕ್ಕಲು ಸಚಿವರು, ಸರಕಾರ ಷಡ್ಯಂತ್ರ ರೂಪಿಸಿರುವುದು ಖಂಡನೀಯ ಎಂದರು.

ಹೋರಾಟ ಸಮಿತಿ ಸದಸ್ಯರಾದ ಅನಿಲ ಹೊಸಮನಿ, ಅರವಿಂದ ಕಲುಲಕರ್ಣಿ, ಭಗವಾನ್ ರೆಡ್ಡಿ, ಸಿದ್ದಲಿಂಗ ಬಾಗೇವಾಡಿ, ಭರತ್ ಎಚ್.ಟಿ., ಮಲ್ಲಿಕಾರ್ಜುನ ಎಚ್.ಟಿ., ಅಕ್ರಂ ಮಾಶಾಳಕರ, ಭೋಗೇಶ್ ಸೋಲಾಪುರ, ಲಲಿತಾ ಬಿಜ್ಜರಗಿ, ಸುರೇಶ ಬಿಜಾಪುರ, ಶಿವಬಾಳಮ್ಮ, ಗೀತಾ ಎಚ್.ಟಿ., ಜಗದೇವ ಸೂರ್ಯವಂಶಿ ಸೇರಿದಂತೆ 30ಕ್ಕೂ ಅಧಿಕ ಪ್ರತಿಭಟನಾಕಾರರನ್ನು ಪೊಲೀಸರು ವಶಕ್ಕೆ ಪಡೆದು, ಜಿಲ್ಲೆಯ ಹೊರ್ತಿ, ಝಳಕಿ ಠಾಣೆಗೆ ಕೊರೆದೊಯ್ದು ದಿನವಿಡೀ ಕೂರಿಸಿಕೊಂಡಿದ್ದರು. ಬಳಿಕ ಹೋರಾಟಗಾರರ ವಿರುದ್ಧ ದೂರು ದಾಖಲಿಸಿಕೊಂಡು ಬಿಡುಗಡೆಗೊಳಿಸಿದರು.

ಪೊಲೀಸ್‌ಗೆ ಕಪಾಳಮೋಕ್ಷ: ಹೋರಾಟದಲ್ಲಿ ಪಾಲ್ಗೊಂಡಿದ್ದ ಬಸವನ ಬಾಗೇವಾಡಿ ತಾಲೂಕಿನ ಪಿ.ಬಿ. ಹುಳಶ್ಯಾಳ ಮಠದ ಸಂಗನ ಬಸವ ಸ್ವಾಮೀಜಿಯವರನ್ನು ಪೊಲೀಸರು ತಡೆಯಲು ಯತ್ನಿಸಿದರು. ಅಲ್ಲದೇ, ಸ್ವಾಮೀಜಿಯವರನ್ನು ತಳ್ಳಾಡಿ ಅವರ ಬಳಿ ಇದ್ದ ಮೊಬೈಲ್ ಕಿತ್ತುಕೊಂಡಾಗ ಸಿಟ್ಟಿಗೆದ್ದ ಅವರು ಪೊಲೀಸ್ ಒಬ್ಬರಿಗೆ ಕಪಾಳ ಮೋಕ್ಷ ಮಾಡಿದರು. ತಕ್ಷಣ ಪೊಲೀಸರು ಅವರನ್ನು ವಶಕ್ಕೆ ಪಡೆದು, ವಾಹನದಲ್ಲಿ ಕೂರಿಸಿದರು.

1200 ಚದರಡಿ ಕಟ್ಟಡಕ್ಕೆ ಒಸಿ, ಸಿಸಿ ವಿನಾಯಿತಿ

ಬೆಂಗಳೂರು: ಗ್ರಾಮೀಣ ಭಾಗದ ಜನರಿಗೆ ರಾಜ್ಯ ಸರಕಾರ ಹೊಸ ವರ್ಷಕ್ಕೆ ಸಿಹಿ ಸುದ್ದಿ ನೀಡಿದ್ದು, ಇನ್ನು ಮುಂದೆ 1200 ಚದರ ಅಡಿ ವ್ಯಾಪ್ತಿಯಲ್ಲಿ ವಸತಿ ಕಟ್ಟಡಗಳಿಗೆ ಒಸಿ, ಸಿಸಿಯಿಂದ ವಿನಾಯಿತಿ ನೀಡುವ ಮಹತ್ವದ ಆದೇಶವನ್ನು ಹೊರಡಿಸಿದೆ.

ಗ್ರಾಮೀಣ ಭಾಗದಲ್ಲಿ 30X40 ಚ.ಅಡಿ ವ್ಯಾಪ್ತಿಯಲಿ ನಿರ್ಮಿಸುವ ನೆಲಮಹಡಿ +2 ಮಹಡಿಗಳು ಅಥವಾ ನೆಲ ಅಂತಸ್ತು + 3 ಮಹಡಿ ಹೊಂದಿರುವ ಯಾವುದೇ ವಸತಿ ಕಟ್ಟಡಗಳಿಗೆ ಪೂರ್ವಾನುಮತಿ ಅಥವಾ ಯೋಜನಾ ಅನುಮೋದನೆ ಇಲ್ಲದೇ ನಿರ್ಮಿಸಿದ್ದರೂ ಆಕ್ಯುಪೆನ್ಸಿ ಪ್ರಮಾಣಪತ್ರವನ್ನು ಪಡೆಯುವುದರಿಂದ ವಿನಾಯಿತಿ ಇರಲಿದೆ ಎಂದು ಸ್ಪಷ್ಟಪಡಿಸಲಾಗಿದೆ.

ಇನ್ನು ಒಸಿ ಇಲ್ಲದೆ ಇರುವುದು ಅಥವಾ ಸಕಾಲದಲ್ಲಿ ಒಸಿ ಸಿಗದೆ ಆಸ್ತಿದಾರರು ವಿದ್ಯುತ್ ಮತ್ತು ನೀರು ಸರಬರಾಜು ಸೇರಿದಂತೆ ಅನೇಕ ಸರಕಾರಿ ಸೌಲಭ್ಯಗಳನ್ನು ಪಡೆದುಕೊಳ್ಳುವುದಕ್ಕೆ ಪರದಾಡುವ ಪರಿಸ್ಥಿತಿ ನಿರ್ಮಾಣವಾಗಿತ್ತು. ಇದೀಗ ಈ ಸಮಸ್ಯೆಗಳಿಗೆ ಪರಿಹಾರ ಸಿಕ್ಕಂತಾಗಿದೆ. ವಿದ್ಯುತ್ ಸರಬರಾಜು ಕಂಪನಿಗಳು ಮತ್ತು ಸ್ಥಳೀಯ ಸಂಸ್ಥೆಗಳು ವಿದ್ಯುತ್, ನೀರು ಸರಬರಾಜು ಮತ್ತು ಒಳಚರಂಡಿ ಸಂಪರ್ಕಗಳಂತಹ ಅಗತ್ಯ ಸೇವೆಗಳನ್ನು ಒದಗಿಸಲು ನಿರಾಕರಿಸುತ್ತಿರುವುದರಿಂದ ಒಸಿ ಇಲ್ಲದಿರುವುದು ಆಸ್ತಿ ಮಾಲೀಕರಿಗೆ ಪ್ರಮುಖ ತೊಡಕಾಗಿತ್ತು. ಈ ಸಮಸ್ಯೆ ನಿವಾರಿಸಲು ರಾಜ್ಯ ಸರಕಾರ ಈ ತೀರ್ಮಾನವನ್ನು ಕೈಗೊಂಡಿದೆ.

ಸಂಕ್ರಾಂತಿ ಬಳಿಕ ಸಂಪುಟ ರಚನೆ: ಸಲೀಂ ಅಹ್ಮದ್

ಹೊಸಬರಿಗೆ ಸಂಪುಟದಲ್ಲಿ ಅವಕಾಶ ಸಿಗುವ ಸಾಧ್ಯತೆ | ನಾನು ಸಚಿವ ಸ್ಥಾನದ ಆಕಾಂಕ್ಷಿ

ಹುಬ್ಬಳ್ಳಿ: ಸಂಕ್ರಾಂತಿ ನಂತರದಲ್ಲಿ ರಾಜ್ಯ ಸಚಿವ ಸಂಪುಟ ಪುನರ್‌ರಚನೆ ಸಾಧ್ಯತೆ ಅಧಿಕವಾಗಿದ್ದು, ಶೇ.50ರಷ್ಟು ಸಚಿವರಿಗೆ ಪಕ್ಷ ಜವಾಬ್ದಾರಿ

ನೀಡಿ, ಹೊಸಬರಿಗೆ ಸಚಿವ ಸ್ಥಾನ ನೀಡುವ ಸಾಧ್ಯತೆಯಿದೆ ಎಂದು ವಿಧಾನ ಪರಿಷತ್ತು ಸರಕಾರಿ ಮುಖ್ಯ ಸಚೇತಕ ಸಲೀಂ ಅಹ್ಮದ್ ತಿಳಿಸಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ಸಂಪುಟ ಪುನಾರಚನೆ ಬಗ್ಗೆ ಪಕ್ಷದ ಹೈಕಮಾಂಡ್ ಚಿಂತನೆ ನಡೆಸಿದೆ. ನಾನು ಸಹ ಸಚಿವ ಸ್ಥಾನದ ಆಕಾಂಕ್ಷಿಯಾಗಿದ್ದೇನೆ. ಸಂಪುಟ ಪುನರ್‌ರಚನೆ ಅಂತಿಮವಾಗಿ ಹೈಕಮಾಂಡ್, ಸಿಎಂ, ಡಿಸಿಎಂ ನಿರ್ಧಾರ ಕೈಗೊಳ್ಳಲಾಗಿದೆ. ಸಿಎಂ ಬದಲಾವಣೆ ವಿಷಯದ ಬಗ್ಗೆ ಮಾತನಾಡುವಷ್ಟು ದೊಡ್ಡವನಲ್ಲ. ಅದು ಹೈಕಮಾಂಡ್ ತೀರ್ಮಾನ ಎಂದರು.

ಕಾಂಗ್ರೆಸ್‌ನಲ್ಲಿ ಆಂತರಿಕ ಪ್ರಜಾಪ್ರಭುತ್ವವಿದೆ ವಿನಃ ನರೇಂದ್ರ ಮೋದಿ ರೀತಿ ಸರ್ವಾಧಿಕಾರಿ ಧೋರಣೆಯಿಲ್ಲ, ಕೇಂದ್ರ ಸರಕಾರ ಪರ್ವತ, ಸಮುದ್ರ, ನದಿ, ವಿಮಾನ ನಿಲ್ದಾಣಗಳನ್ನು ಅದಾನಿ, ಅಂಬಾನಿ ಕುಟುಂಬಗಳಿಗೆ ನೀಡಲು ಮುಂದಾಗಿದೆ. ಕೇಂದ್ರ ಸರಕಾರ ಭಂಡ ಸರಕಾರವಾಗಿದ್ದು, ವಿಪಕ್ಷಗಳನ್ನು ಹೆದರಿಸಲು ಸಿಬಿಐ, ಇಡಿ ಆಯ್ತು ಇದೀಗ ಚುನಾವಣಾ ಆಯೋಗವನ್ನು ದುರ್ಬಳಕೆ ಮಾಡಿಕೊಳ್ಳುತ್ತಿದೆ ಎಂದರು.

ಏಪ್ರಿಲ್-ಮೇನಲ್ಲಿ ಜಿಪಂ, ತಾಪಂ, ಗ್ರಾಪಂ ಹಾಗೂ ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಯುವ ಸಾಧ್ಯತೆಯಿದೆ. ನಿಟ್ಟಿನಲ್ಲಿ ಪಕ್ಷ ಸಂಘಟನೆಗೆ ಇನ್ನಷ್ಟು ಒತ್ತು ನೀಡಿದ್ದೇವೆ. ನಗರ, ಗ್ರಾಮೀಣ ಸ್ಥಳೀಯ ಸಂಸ್ಥೆಗಳಲ್ಲಿ ನಾವೇ ಗೆಲ್ಲುತ್ತೇವೆ, ಜತೆಗೆ 2028ರಲ್ಲೂ ನಾವೇ ಅಧಿಕಾರಕ್ಕೆ ಬರುತ್ತೇವೆ. ಕೇಂದ್ರದಲ್ಲೂ ಮುಂದಿನ ಬಾರಿ ಯುಪಿಎ ಅಧಿಕಾರಕ್ಕೆ ಬರುವುದು ಶತಸಿದ್ಧ.

-ಸಲೀಂ ಅಹ್ಮದ್ ವಿಧಾನ ಪರಿಷತ್ತು ಸರಕಾರಿ ಮುಖ್ಯ ಸಚೇತಕ

ಮರ್ಯಾದೆಗೇಡು ಹತ್ಯೆ ತಡೆಗೆ ಮಾನ್ಯಾ ಹೆಸರಿನಲ್ಲಿ ಕಾನೂನು

ಮಾನ್ಯಾ ಕುಟುಂಬಸ್ಥರನ್ನು ಭೇಟಿಯಾದ ಡಾ.ಎಚ್.ಸಿ.ಮಹದೇವಪ್ಪ

ಹುಬ್ಬಳ್ಳಿ: ಹುಬ್ಬಳ್ಳಿ ತಾಲೂಕಿನ ಇನಾಂವೀರಪುರ ಗ್ರಾಮದಲ್ಲಿ ಇತ್ತೀಚೆಗೆ ನಡೆದ ಏಳು ತಿಂಗಳ ಗರ್ಭಿಣಿ ಮಾನ್ಯಾಳ ಮರ್ಯಾದೆ ಹತ್ಯೆ ಪ್ರಕರಣಕ್ಕೆ ರಾಜ್ಯಾದ್ಯಂತ ತೀವ್ರ ಖಂಡನೆ ವ್ಯಕ್ತವಾಗುತ್ತಿದೆ. ಇಂತಹ ಹತ್ಯೆ ಹತ್ತಿಕ್ಕಲು ಕಠಿಣ ಕಾನೂನು ಜಾರಿಗೆ ತರಬೇಕು ಎಂಬ ಒತ್ತಾಯವೂ ಹೆಚ್ಚಾಗುತ್ತಿದೆ.

ಈ ಮಧ್ಯೆ ಗುರುವಾರ ಮಾನ್ಯಾಳ ಕುಟುಂಬಸ್ಥರನ್ನು ಭೇಟಿಯಾಗಿ ಸಾಂತ್ವನ ಹೇಳಿದ ಸಮಾಜ ಕಲ್ಯಾಣ ಇಲಾಖೆ ಸಚಿವ ಡಾ.ಎಚ್.ಸಿ. ಮಹದೇವಪ್ಪ, ಈ ಕೃತ್ಯವನ್ನು ಸರಕಾರ ತೀವ್ರವಾಗಿ ಖಂಡಿಸಿದೆ. ಮನುವಾದದ ಮನಸ್ಸುಗಳನ್ನು ಹತ್ತಿಕ್ಕಲೇ ಬೇಕು. ಈ ಪ್ರಕರಣದಲ್ಲಿ ಭಾಗಿಯಾದವರನ್ನು ಸುಮ್ಮನೆ ಬಿಡುವುದಿಲ್ಲ. ಮರ್ಯಾದಾ ಹತ್ಯೆಯಂತಹ ಪ್ರಕರಣಗಳ ತಡೆಗೆ ಕಠಿಣ ಕಾನೂನನ್ನು ಮುಂದಿನ ಅಧಿವೇಶನದಲ್ಲಿ ಜಾರಿಗೆ ತರುವ ಕುರಿತು ಪರಿಶೀಲಿಸಲಾಗುವುದು, ಮಾನ್ಯ ಹೆಸರಿನಲ್ಲಿ ಕಾಯ್ದೆ ತರುವ ಕುರಿತು ಚರ್ಚಿಸಲಾಗುವುದು ಎಂದು ತಿಳಿಸಿದರು.

ಇದು ಮರ್ಯಾದೆ ಹತ್ಯೆಯಲ್ಲ ಉಗ್ರವಾದ ಕೊಲೆ. ಇದು ನಮ್ಮ ಭಾಗದಲ್ಲಿ ಕಂಡುಬಂದಿರಲಿಲ್ಲ. ರಾಜಸ್ಥಾನ, ಹರಿಯಾಣ ಸೇರಿ ಇತರ ರಾಜ್ಯದಲ್ಲಿತ್ತು. ನಮ್ಮ ಕರ್ನಾಟಕ ಮುಂದುವರಿದ ರಾಜ್ಯ. ಪ್ರಾಯಕ್ಕೆ ಬಂದ ಯುವತಿ ತನ್ನ ಮದುವೆಯ ಆಯ್ಕೆಯ ಸ್ವಾತಂತ್ರ್ಯ ಹೊಂದಿದ್ದಾಳೆ. ಅದು ಆಯ್ಕೆಯ ಮೂಲಭೂತ ಹಕ್ಕು. ಅಂತಹ ಹಕ್ಕನ್ನು ಹತ್ತಿಕ್ಕುವ ವ್ಯಕ್ತಿಗಳನ್ನು ಹಾಗೂ ಬೆಂಬಲಿಸುವವರನ್ನು ಸರಕಾರ ಬಿಡುವುದಿಲ್ಲ. ಅವರ ಮೇಲೆ ಕಠಿಣ ಕ್ರಮ ಜರುಗಿಸಲಾಗುವುದು ಎಂದು ಹೇಳಿದರು.

ಸಮಾಜ ಕಲ್ಯಾಣ ಇಲಾಖೆಯ ವೈಫಲ್ಯದ ಆರೋಪ ಕುರಿತು ತನಿಖೆ ನಡೆಸಲಾಗುವುದು. ತನಿಖಾ ವರದಿ ಬಂದ ಬಳಿಕ ತಪ್ಪು ಎಸಗಿದ ಅಧಿಕಾರಿಗಳ ವಿರುದ್ಧ ಶಿಸ್ತುಕ್ರಮ ಜರುಗಿಸಲಾಗುವುದು. ಇದಕ್ಕೂ ಮಿಗಿಲಾದ ಘಟನೆ ನಡೆದಿರುವುದರಿಂದ ಕೊಲೆ ಆರೋಪಿಗಳ ವಿರುದ್ಧ ಕಠಿಣ ಕ್ರಮ ಜರುಗಿಸಲಾಗುವುದು ಎಂದರು.

ಪರಿಹಾರ ವಿತರಣೆ: ಸರಕಾರದಿಂದ ಈಗಾಗಲೇ 5 ಲಕ್ಷ ರು. ಹಣ ನೀಡಲಾಗಿದೆ. ಕುಟುಂಬದ 8 ಸದಸ್ಯರಿಗೆ ತಲಾ 2 ಲಕ್ಷದಂತೆ ಒಟ್ಟಾರೆಯಾಗಿ 16 ಲಕ್ಷ ಮೊತ್ತದ ಚೆಕ್ ವಿತರಿಸಲಾಯಿತು.

ಇನಾಂ ವೀರಪುರ ಗ್ರಾಮದ ನಿವಾಸಿ ಮಾನ್ಯ ವಿವೇಕಾನಂದ ದೊಡ್ಡಮನಿ (20 ವರ್ಷ) ಎಂಬ ಯುವತಿ, ದಲಿತ ಸಮುದಾಯದ ಯುವಕನನ್ನು ಪ್ರೀತಿಸಿ ಅಂತರ್ಜಾತಿ ವಿವಾಹವಾಗಿದ್ದರು. ಇದರಿಂದ ರೊಚ್ಚಿಗೆದ್ದ ತಂದೆ ಪ್ರಕಾಶ ಗೌಡ ಪಾಟೀಲ ಹಾಗೂ ಸಂಬಂಧಿಕರು ಕಳೆದ ತಿಂಗಳು 20 ರಂದು ಏಳು ತಿಂಗಳ ಗರ್ಭಿಣಿ ಎಂಬ ಕನಿಷ್ಠ ಮಾನವೀಯತೆಯನ್ನೂ ತೋರದೆ ಆಕೆಯ ಮೇಲೆ ಹಲ್ಲೆ ನಡೆಸಿದ್ದರು. ಇದರಿಂದ ತೀವ್ರವಾಗಿ ಗಾಯಗೊಂಡಿದ್ದ ಆಕೆಯನ್ನು ಹುಬ್ಬಳ್ಳಿಯ ವಿವೇಕಾನಂದ ಆಸ್ಪತ್ರೆಗೆ ದಾಖಲಿಸಲಾಯಿತಾದರೂ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದರು.

ಹುಬ್ಬಳ್ಳಿ ತಾಲೂಕಿನ ಇನಾಂವೀರಪುರ ಗ್ರಾಮಕ್ಕೆ ಸಮಾಜ ಕಲ್ಯಾಣ ಸಚಿವ ಎಚ್.ಸಿ.ಮಹದೇವಪ್ಪ ಭೇಟಿ ನೀಡಿ ಮಾನ್ಯಾ ಕುಟುಂಬಸ್ಥರಿಗೆ ಸಾಂತ್ವನ ಹೇಳಿದರು.

ಮುಖ್ಯಮಂತ್ರಿಗಳು ಹಾಗೂ ಗೃಹಸಚಿವರೊಂದಿಗೆ ವಿವೇಕಾನಂದ ದೊಡ್ಡಮನಿ ಕುಟುಂಬಕ್ಕೆ ಹೆಚ್ಚಿನ ಭದ್ರತೆ ಒದಗಿಸಲು ಕೋರಲಾಗುವುದು. ಈ ತರಹದ ಘಟನೆಗಳು ಮರುಕಳಿಸದಂತೆ ಮುಂದೇನು ಮಾಡಬೇಕು ಎಂಬುದರ ಕುರಿತು ಚರ್ಚಿಸಲಾಗುವುದು.

-ಎಚ್.ಸಿ.ಮಹದೇವಪ್ಪ ಸಚಿವ

ರಾಯರ ಸನ್ನಿಧಿಗೆ ಭಕ್ತರ ದಂಡು

ಹೊಸ ವರ್ಷದ ಮೊದಲ ದಿನ ಮಂತ್ರಾಲಯ ರಾಘವೇಂದ್ರ ಸ್ವಾಮಿ ಮಠದ ಆವರಣದಲ್ಲಿ ಸೇರಿದ್ದ ಭಕ್ತರ ದಂಡು.

ರಾಯಚೂರು: ಭಕ್ತರ ಪಾಲಿನ ಕಾಮಧೇನು, ಆರಾಧ್ಯ ದೈವ ಮಂತ್ರಾಲಯದ ರಾಘವೇಂದ್ರ ಸ್ವಾಮಿಗಳ ದರ್ಶನಕ್ಕೆ ನೂತನ ವರ್ಷದ ಮೊದಲ ದಿನವೇ ಲಕ್ಷಾಂತರ ಭಕ್ತರು ಆಗಮಿಸಿ, ತುಂಗಭದ್ರೆಯಲ್ಲಿ ಮಿಂದೆದ್ದು, ರಾಯರಿಗೆ ಭಕ್ತಿ ಸಮರ್ಪಿಸಿ ಪುನೀತರಾದರು.

ಗುರುವಾರವೇ ಹೊಸ ವರ್ಷದ ದಿನವಾಗಿರುವುದರಿಂದ ಶ್ರೀ ಮಠದ ಪ್ರಾಂಗಣ ಸೇರಿದಂತೆ ರಥ ಬೀದಿ ಮಾಧ್ವ ಮಾರ್ಗದ ತುಂಬಾ ಕಿಕ್ಕಿರಿದ ಜನಸ್ತೋಮದಿಂದ ಗುರು ಸಾರ್ವಭೌಮ ನಾಮ ಸ್ಮರಣೆ ಇಡೀ ಮಂತ್ರಾಲಯದಲ್ಲಿ ಅನುರಣಿಸುತಿತ್ತು. ಪ್ರತಿ ವರ್ಷಕ್ಕಿಂತಲೂ ಎರಡು ಪಟ್ಟು ಭಕ್ತರಿಂದ ರಾಯರ ಮಠ ತುಂಬಿ ತುಳುಕುತ್ತಿದೆ.

ಬೆಳಗ್ಗೆ ಐದು ಗಂಟೆಯಿಂದಲೇ ರಾಯರ ಬೃಂದಾವನ ದರ್ಶನಕ್ಕೆ ಶ್ರೀಮಠ ಅನುವು ಮಾಡಿಕೊಡಲಾಗಿತ್ತು. ಮಠದ ಎಲ್ಲಾ ದ್ವಾರಗಳ ಮೂಲಕ ಭಕ್ತರಿಗೆ ಒಳಬರಲು ಅವಕಾಶ ನೀಡಲಾಗಿತ್ತು. ಹೊಸ ವರ್ಷದ ಆರಂಭದ ದಿನ ಲಕ್ಷಾಂತರ ಸಂಖ್ಯೆಯಲ್ಲಿ ಭಕ್ತ ಸಾಗರ ಹರಿದು ಬಂದಿದ್ದರಿಂದ ಮಠದ ಕೊಠಡಿ, ಪ್ರಸಾದ ವ್ಯವಸ್ಥೆಯಲ್ಲಿ ವ್ಯತ್ಯಯವಾಯಿತು. ದೇಶ, ರಾಜ್ಯದ ಮೂಲೆ ಮೂಲೆಗಳಿಂದ ಭಕ್ತರು ಆಗಮಿಸಿದ್ದು, ವರ್ಷದ ಮೊದಲನೇ ದಿನ ರಾಘವೇಂದ್ರ ಸ್ವಾಮಿಗಳ ಅನುಗ್ರಹವಾದರೆ, ಇಡೀ ವರ್ಷ ಒಳಿತಾಗುತ್ತದೆ ಅನ್ನೋ ನಂಬಿಕೆ ಭಕ್ತರದ್ದಾಗಿದೆ. ಬಂದಂತಹ ಭಕ್ತರಿಗೆ ಮಠದ ಪೀಠಾಧಿಪತಿ ಸುಬುಧೇಂದ್ರ ತೀರ್ಥ ಸ್ವಾಮಿಯವರು ಮಂತ್ರಾಕ್ಷತೆ ನೀಡಿ ಆಶೀರ್ವದಿಸಿದರು.

ವಿಶ್ವವಾಣಿ

ಸಂಪಾದಕೀಯ

ಅಕಟಕಟಾ, ಜೈಲಿನಲ್ಲೂ ವೈಭೋಗ!

ತಪ್ಪು ಮಾಡಿದೋರನ್ನ ಕೊಪ್ಪಕ್ಕೆ ಹಾಕು- ಇದು ದಶಕಗಳ ಹಿಂದೆ ಸರಕಾರಿ ಸಿಬ್ಬಂದಿ ವ್ಯವಸ್ಥೆಯಲ್ಲಿ ಚಾಲ್ತಿಯಲ್ಲಿದ್ದ ಒಂದು ಅಲಿಖಿತ ನಿಯಮ. ಸರಕಾರಿ ಕಚೇರಿಗಳಲ್ಲಿನ ಕಾರ್ಯನಿರ್ವಹಣೆಯ ವೇಳೆ ಯಾವುದೇ ಸ್ತರದ ನೌಕರರು ಅದಕ್ಷತೆ ತೋರಿದರೆ ಅಥವಾ ಟೇಬಲ್ ಕೆಳಗೆ ಕೈಯೊಡ್ಡಿ ಸಿಕ್ಕಿಹಾಕಿಕೊಂಡರೆ, ಅಂಥವರನ್ನು ಮಲೆನಾಡು ಚಿಕ್ಕಮಗಳೂರು ಜಿಲ್ಲೆಯ 'ಕೊಪ್ಪ' ಎಂಬ ಪ್ರದೇಶಕ್ಕೆ ವರ್ಗಾವಣೆ ಮಾಡಬೇಕು; ಆಗ ಅವರಿಗೆ ಬುದ್ಧಿ ಬರುತ್ತದೆ ಎಂಬುದು ಈ ಮಾತಿನ ಹಿಂದಿದ್ದ ಗ್ರಹಿಕೆ. ಕಾರಣ ಒಂದು ಕಾಲಕ್ಕೆ ಕೊಪ್ಪದಲ್ಲಿ ಮಲೇರಿಯಾ ಕಾಯಿಲೆ ತಾರಕಕ್ಕೇರಿತ್ತು ಮತ್ತು ಆ ಕಾರಣ ದಿಂದಾಗಿ ಅದು ಕೊಂಪೆಯಾಗಿ ಪರಿಣಮಿಸಿತ್ತು, ಅಲ್ಲಿನ ಜೀವನ ನಿರ್ವಹಣೆ ದುರ್ಭರವಾಗಿತ್ತು. ಇಂಥ ಜಾಗಕ್ಕೆ ತಪ್ಪಿತಸ್ಥರನ್ನು ವರ್ಗಾಯಿಸಿದರೆ, ಅದಕ್ಕಿಂತ ಬೇರೊಂದು ಶಿಕ್ಷೆ ಬೇಡ ಎಂಬುದು ಇದರರ್ಥವಾಗಿತ್ತು. ಇನ್ನು, ಕಾನೂನಿನ ದೃಷ್ಟಿಯಲ್ಲಿ ಅಪರಾಧಿಗಳು ಎನಿಸಿಕೊಂಡವರನ್ನು, ಅವರ ಅಪರಾಧದ ತೀವ್ರತೆಗೆ ತಕ್ಕಂತೆ ಜೈಲುವಾಸಕ್ಕೆ ಕಳಿಸುವುದು ಇದೆಯಲ್ಲವೇ? ಮುಖ್ಯವಾಹಿನಿ ಸಮಾಜದಲ್ಲಿರುವ ಬಹುತೇಕ ಸೌಲಭ್ಯಗಳಿಗೆ ಜೈಲುಗಳಲ್ಲಿ ಕತ್ತರಿ ಬೀಳುವುದರಿಂದಾಗಿ ತಪ್ಪಿತಸ್ಥರಿಗೆ ಅದೊಂದು ಶಿಕ್ಷೆಯಾಗಿ ಪರಿಣಮಿಸಿ ಪಾಠ ಕಲಿಯಲಿ ಎಂಬುದು ಈ ಕ್ರಮದ ಉದ್ದೇಶ. ಆದರೆ, ಬದಲಾದ ಕಾಲ ಘಟ್ಟದಲ್ಲಿ ಜೈಲುಗಳಲ್ಲಿ 'ಪ್ರಭಾವಿ' ಕೈದಿಗಳಿಗೆ ರಾಜವೈಭೋಗ ಸದೃಶವಾಗಿರುವ ಸೇವೆ ಸಲ್ಲುತ್ತಿರುವುದು ಒಂದೊಂದಾಗಿ ವರದಿಯಾಗುತ್ತಿದೆ. ಕಲಬುರ್ಗಿಯ ಕೇಂದ್ರ ಕಾರಾಗೃಹದಲ್ಲಿ ಸಿಗರೇಟು-ಮದ್ಯ ಸರಬರಾಜಿಗೆ, ಇಸ್ಪೀಟು ಆಟಕ್ಕೆ ಎಡೆಮಾಡಿಕೊಡಲಾಗಿದೆಯೇ ಎಂಬ ಸಂಶಯಕ್ಕೆ ಎಡೆಮಾಡಿಕೊಡುವ ವಿಡಿಯೋ ಸಾಮಾಜಿಕ ಮಾಧ್ಯಮಗಳಲ್ಲಿ ವೈರಲ್ ಆಗಿದ್ದು ಇದರ ತಥ್ಯವನ್ನು ಸಂಬಂಧಪಟ್ಟವರು ಹೊರಗೆಡಹಬೇಕಿದೆ. ತಪ್ಪನ್ನು ತಿದ್ದಿಕೊಳ್ಳುವುದಕ್ಕೆ ಮತ್ತು ಪಶ್ಚಾತ್ತಾಪ ಪಡುವುದಕ್ಕೆ ಅನುವು ಮಾಡಿಕೊಡಬೇಕಿದ್ದ ನೆಲೆಯೇ ಹೀಗೆ ತನ್ನ ಸ್ವರೂಪಕ್ಕೆ ಕಳಂಕ ಮೆತ್ತಿಕೊಂಡರೆ, ಇನ್ನು ದುರುಳರಿಗೆ ಅದಿನ್ನಾವ ಭಯ ಉಳಿದೀತು? ಇಂಥ ವಿಪರ್ಯಾಸಗಳಿಗೆ ಕೊನೆ ಯಾವಾಗ?

ಸೊಂಪಾದಕೀಯ

ಮನೆ ಮನೆ ಕಥೆ

ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದ ಮೇಲೆ ಅನೇಕ ರೀತಿಯ ಗ್ಯಾರಂಟಿಗಳನ್ನು, ಭಾಗ್ಯಗಳನ್ನು ಜನರಿಗೆ ಕೊಟ್ಟಿದೆ. ಅವುಗಳಿಂದ ಜನರಿಗೆ ಕಾಂಗ್ರೆಸ್ಸಿಗರು ಎಷ್ಟು ಹತ್ತಿರ ಆಗಿದ್ದಾರೆ ಅನ್ನೋದು ಮುಂದಿನ ಚುನಾವಣೆಯಲ್ಲಿ ಗೊತ್ತಾಗುತ್ತೆ. ಆದರೆ ಮೊನ್ನೆ ಮೊನ್ನೆ ಗೃಹಸಚಿವ ಪರಮೇಶ್ವರ್ ಅವರು ಕೊಟ್ಟ ಭಾಗ್ಯ ಮಾತ್ರ ಎಲ್ಲೆಡೆ ಸದ್ದು ಮಾಡಿತ್ತು. ತರಹೇವಾರಿ ಭಾಗ್ಯಗಳನ್ನು ಕೊಟ್ಟಿದ್ದ ಕಾಂಗ್ರೆಸ್ ಸರಕಾರದಿಂದ ಗೃಹ ಭಾಗ್ಯ ಘೋಷಣೆ ಆಗಿತ್ತು. ಹಾಗಂತ, ಇದು ಎಲ್ಲರಿಗೂ ವಸತಿ ಕಲ್ಪಿಸಿಕೊಡುವ ಭಾಗ್ಯ ಅಲ್ಲ. ಹೊಸ ವರ್ಷದಂದು ಕುಡಿದು ರಸ್ತೆಯಲ್ಲಿ ಬಿದ್ದವರನ್ನು ಮನೆಗೆ ಸೇರಿಸುವ ಭಾಗ್ಯ ಅಂತ ಇದರ ಅರ್ಥ. ಆದರೆ ಗೃಹ ಸಚಿವ ಪರಮೇಶ್ವರ್ ಅವರು ಈ ಆಫರ್ ಕೊಟ್ಟಿದ್ದರಿಂದ 'ಗೃಹ ಸಚಿವರು ಅಂದ್ರೆ ಕುಡಿದವರನ್ನು ಗೃಹಪ್ರವೇಶ ಮಾಡಿಸುವ ಸಚಿವರಾ?' ಅಂತ ಎಲ್ಲರಿಗೂ ಅನುಮಾನ ಮೂಡಿತ್ತು. ಅಲ್ಲದೆ ಗೃಹ ಸಚಿವರು ಮತ್ತು ವಸತಿ ಸಚಿವರ ಮಧ್ಯೆ ಇರೋ ವ್ಯತ್ಯಾಸ ಗೊತ್ತಾಗದೆ ಎಲ್ಲರೂ ಕಂಗಾಲಾಗಿದ್ದರು. ಆದರೆ ಈ ಕೆಲಸವನ್ನು ಪರಮೇಶ್ವರ್ ಮತ್ತು ಅವರ ಪೊಲೀಸರ ತಂಡ ಸಕ್ಸಸ್‌ಫುಲ್ ಆಗಿ ಮಾಡಿದೆ ಎನ್ನಬಹುದು. ಡಿಸೆಂಬರ್ 31ರ ರಾತ್ರಿ ಕುಡಿದು ಫುಲ್ ಆದವರು ಬೀದಿಪಾಲು ಆಗುವ ಕಷ್ಟದಿಂದ ಹೊರಬಂದು ಸರಕಾರದ ಕೃಪಾಕಟಾಕ್ಷದಿಂದ ಮನೆಪಾಲಾಗಿದ್ದಾರೆ. ಆದರೂ ಕುಡಿದು ರಸ್ತೆಯಲ್ಲಿ ಆಟಾಟೋಪ ಮಾಡಿದವರ ಸಂಖ್ಯೆ ಏನೂ ಕಡಿಮೆ ಇಲ್ಲ. ಆದರೆ ಕುಡಿದಿದ್ದೆಲ್ಲಾ ಇಳಿದ ಮೇಲೆ ನಾನೆಲ್ಲಿದ್ದೀನಿ ಅಂತ ಪರದಾಡುವ ಬದಲು ಸುರಕ್ಷಿತವಾಗಿ ಮನೆ ಸೇರಿದ್ದಾರೆ. ಆದ್ರೆ 'ನಾನಿನ್ನೂ ಕುಡೀಬೇಕು ಬಿಡ್ರೋ, ಇಷ್ಟೊತ್ತಿಗೇ ಮನೆಗೆ ಹೋಗಲ್ಲ' ಅಂತ ವರಾತ ತೆಗೆದವರ ಬಗ್ಗೆ ವರದಿ ಆಗಿಲ್ಲ. ಗೃಹಸಚಿವರೇನೋ ಕುಡಿದವರನ್ನು ಮನೆಗೆ ಸೇರಿಸುವ ಕೆಲಸ ಮಾಡಿದ್ದಾರೆ. ಆದರೆ ಹೊಸ ವರ್ಷದಂದು ಕುಡಿದು ಬಂದರೆ ಮನೆಗೆ ಸೇರಿಸಲ್ಲ ಅಂತ ವಾರ್ನಿಂಗ್ ಕೊಟ್ಟಿದ್ದ ಹೋಮ್ ಮಿನಿಸ್ಟರ್‌ಗಳು ಸಕಲ ಸರಕಾರಿ ಗೌರವಗಳೊಂದಿಗೆ ಮನೆಗೆ ಬಂದ ತಮ್ಮ ಗಂಡಂದಿರನ್ನು ಮನೆಗೆ ಸೇರಿಸಿಕೊಂಡರಾ? ಅನ್ನೋದು ಕೇಳಬೇಕಾದ ಪ್ರಶ್ನೆ.

ಸಂಪಾದಕರ ಸದ್ಯಶೋಧನೆ

ನಿರಂತರ ಹಾರಾಟ

ವಿಮಾನಯಾನ ಎಂಬುದು ಕೇವಲ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಹೋಗುವ ಮಾರ್ಗವಷ್ಟೇ ಅಲ್ಲ, ಅದೊಂದು ತಾಂತ್ರಿಕ ಅದ್ಭುತ. ಸಾಮಾನ್ಯವಾಗಿ, ವಿಮಾನಗಳು ವಿಮಾನ ನಿಲ್ದಾಣಗಳಲ್ಲಿ ಗಂಟೆಗಟ್ಟಲೆ ನಿಂತಿರುತ್ತವೆ ಎಂದು ನಾವು ಭಾವಿಸುತ್ತೇವೆ. ಆದರೆ, ಜಗತ್ತಿನ ಕೆಲವು ವಿಮಾನಗಳು ಎಷ್ಟು ಕಾರ್ಯನಿರತವಾಗಿರುತ್ತವೆ ಎಂದರೆ, ಅವು ಭೂಮಿಗಿಂತ ಹೆಚ್ಚಾಗಿ ಆಕಾಶದಲ್ಲೇ ತಮ್ಮ ಜೀವನವನ್ನು ಕಳೆಯುತ್ತವೆ. ಇದಕ್ಕೆ ಅತ್ಯುತ್ತಮ ಉದಾಹರಣೆ ಎಂದರೆ ಲಂಡನ್‌ನ ಹೀಥ್ರೂ ನಿಲ್ದಾಣದಿಂದ ಅಮೆರಿಕದ ಹೂಸ್ಟನ್ ನಡುವೆ ಸಂಚರಿಸುವ ಬೋಯಿಂಗ್ 777 ವಿಮಾನ. ಈ ನಿರ್ದಿಷ್ಟ ಬೋಯಿಂಗ್ 777 ವಿಮಾನದ ವೇಳಾಪಟ್ಟಿಯನ್ನು ಗಮನಿಸಿದರೆ ಯಾರಿಗಾದರೂ ಅಚ್ಚರಿಯಾಗುವುದು ಸಹಜ. ಲಂಡನ್‌ನಿಂದ ಹೂಸ್ಟನ್‌ಗೆ ಹೋಗಲು ಸುಮಾರು 10ರಿಂದ 11 ಗಂಟೆಗಳ ಕಾಲ ಬೇಕಾಗುತ್ತದೆ. ಅಲ್ಲಿಗೆ ತಲುಪಿದ ಕೆಲವೇ ಗಂಟೆಗಳಲ್ಲಿ, ಅಂದರೆ ಕೇವಲ ಇಂಧನ ತುಂಬಿಸಿ, ಸ್ವಚ್ಛಗೊಳಿಸಿ ಮತ್ತು ಪ್ರಯಾಣಿಕರನ್ನು ಬದಲಾಯಿಸಿದ ತಕ್ಷಣ, ಅದು ಮತ್ತೆ ಲಂಡನ್‌ನತ್ತ ಪ್ರಯಾಣ ಬೆಳೆಸುತ್ತದೆ. ದಿನದ 24 ಗಂಟೆಗಳಲ್ಲಿ ಸುಮಾರು 20 ಗಂಟೆಗಳ ಕಾಲ ಈ ವಿಮಾನವು ಹಾರಾಟ ನಡೆಸುತ್ತಲೇ ಇರುತ್ತದೆ. ಅಂದರೆ ಅದರ ಜೀವಿತಾವಧಿಯ ಶೇಕಡಾ 80ರಷ್ಟು ಸಮಯ ಅದು ಮೋಡಗಳ ಮೇಲೆ 35,000 ಅಡಿ ಎತ್ತರದಲ್ಲಿ ಶಬ್ದದ ವೇಗದ ಹತ್ತಿರ ಚಲಿಸುತ್ತಿರುತ್ತದೆ. ಬೋಯಿಂಗ್ 777 ಈ ಕಾರ್ಯಕ್ಕೆ ಯಾಕೆ ಸೂಕ್ತ? ಬೋಯಿಂಗ್ 777-300 ER ವಿಮಾನವನ್ನು 'ಲಾಂಗ್ ಹಾಲ್' (Long Haul) ಅಂದರೆ ಸುದೀರ್ಘ ಪ್ರಯಾಣದ ರಾಜ ಎಂದು ಕರೆಯಲಾಗುತ್ತದೆ. ಇದಕ್ಕೆ ಕಾರಣಗಳು ಹಲವು. ಎರಡು ಎಂಜಿನ್‌ಗಳನ್ನು ಹೊಂದಿದ್ದರೂ, ನಾಲ್ಕು ಎಂಜಿನ್‌ಗಳ ವಿಮಾನಕ್ಕೆ ಸಮನಾದ ಶಕ್ತಿಯನ್ನು ಇದು ನೀಡುತ್ತದೆ. ಹತ್ತಾರು ಸಾವಿರ ಕಿ.ಮೀ.ಗಳ ಪ್ರಯಾಣದ ಸಮಯದಲ್ಲಿ ಇದರ ಎಂಜಿನ್‌ಗಳು (GE90) ಅತ್ಯಂತ ಸ್ಥಿರವಾಗಿ ಕಾರ್ಯನಿರ್ವಹಿಸುತ್ತವೆ. ಹೆಚ್ಚಿನ ಪ್ರಯಾಣಿಕರನ್ನು ಮತ್ತು ಸರಕುಗಳನ್ನು ಹೊತ್ತೊಯ್ಯುವ ಸಾಮರ್ಥ್ಯವಿರುವುದರಿಂದ, ವಿಮಾನಯಾನ ಸಂಸ್ಥೆಗಳಿಗೆ ಇದು ಲಾಭದಾಯಕ. ಒಂದು ವಿಮಾನ ಭೂಮಿಗೆ ಇಳಿದ ತಕ್ಷಣ ಅದನ್ನು ಮತ್ತೆ ಹಾರಾಟಕ್ಕೆ ಸಿದ್ಧಪಡಿಸುವ ಪ್ರಕ್ರಿಯೆಯನ್ನು 'ಟರ್ನ್ ಅರೌಂಡ್' ಎನ್ನಲಾಗುತ್ತದೆ. ಬೋಯಿಂಗ್ 777 ಅಂಥ ಬೃಹತ್ ವಿಮಾನಕ್ಕೆ ಇದು ಸುಲಭದ ಮಾತಲ್ಲ. ನೂರಾರು ಪ್ರಯಾಣಿಕರನ್ನು ಇಳಿಸುವುದು, ವಿಮಾನದ ಒಳಾಂಗಣವನ್ನು ಸ್ವಚ್ಛಗೊಳಿಸುವುದು, ಟನ್‌ಗಟ್ಟಲೆ ಇಂಧನವನ್ನು ಮರುಪೂರಣ ಮಾಡುವುದು, ಸಾವಿರಾರು ಕೆ.ಜಿ. ತೂಕದ ಲಗೇಜ್ ಮತ್ತು ಕಾರ್ಗೋ ಬದಲಾಯಿಸುವುದು, ಮುಂದಿನ ಪ್ರಯಾಣಕ್ಕೆ ಬೇಕಾದ ಆಹಾರ ಮತ್ತು ನೀರನ್ನು ಲೋಡ್ ಮಾಡುವುದು... ಇಷ್ಟೆಲ್ಲ ಕೆಲಸಗಳನ್ನು ಕೇವಲ 2-3 ಗಂಟೆಗಳಲ್ಲಿ ಮುಗಿಸಿ, ವಿಮಾನ ಮತ್ತೆ ರನ್‌ವೇ ಮೇಲೆ ಓಡಲು ಸಿದ್ಧವಾಗುತ್ತದೆ ಎಂದರೆ ಅಲ್ಲಿನ ತಾಂತ್ರಿಕ ಸಿಬ್ಬಂದಿಯ ದಕ್ಷತೆ ಎಷ್ಟಿರಬಹುದು ಊಹಿಸಿ! ವಿಮಾನಯಾನ ಸಂಸ್ಥೆಗಳಿಗೆ ವಿಮಾನವು ಭೂಮಿಯ ಮೇಲೆ ನಿಂತಿದ್ದರೆ ಅದು ಕೇವಲ 'ವೆಚ್ಚ'. ಅದು ಆಕಾಶದಲ್ಲಿದ್ದಾಗ ಮಾತ್ರ 'ಆದಾಯ'. ಒಂದು ಬೋಯಿಂಗ್ 777 ವಿಮಾನದ ಬೆಲೆ ಸಾವಿರಾರು ಕೋಟಿ ರುಪಾಯಿಗಳಾಗಿರುತ್ತವೆ. ಆ ಹೂಡಿಕೆಯನ್ನು ಲಾಭವಾಗಿ ಪರಿವರ್ತಿಸಬೇಕೆಂದರೆ ವಿಮಾನವು ನಿರಂತರ ಹಾರುತ್ತಿರಬೇಕು. ಲಂಡನ್-ಹೂಸ್ಟನ್ ಮಾರ್ಗವು ವ್ಯಾಪಾರ ಮತ್ತು ಪ್ರವಾಸೋದ್ಯಮದ ದೃಷ್ಟಿಯಿಂದ ಅತ್ಯಂತ ಜನನಿಬಿಡ ಮಾರ್ಗ. ಹೀಗಾಗಿ, ಇಲ್ಲಿ ವಿಮಾನವನ್ನು ಹೆಚ್ಚು ಸಮಯ ನಿಲ್ಲಿಸುವುದು ಆರ್ಥಿಕವಾಗಿ ನಷ್ಟ. ವಿಮಾನದ ನಿರ್ವಹಣೆ (Maintenance) ಹೇಗೆ ನಡೆಯುತ್ತದೆ? ವಿಮಾನ ನಿಲ್ಲುವುದೇ ಇಲ್ಲವೆಂದಾದರೆ ಅದಕ್ಕೆ ರಿಪೇರಿ ಬೇಡವೇ? ಎಂಬ ಪ್ರಶ್ನೆ ಕಾಡುವುದು ಸಹಜ. ವಿಮಾನಯಾನದಲ್ಲಿ ಸುರಕ್ಷತೆಗೆ ಮೊದಲ ಆದ್ಯತೆ. ಪ್ರತಿ ಬಾರಿ ವಿಮಾನ ಇಳಿದಾಗ ಎಂಜಿನಿಯರ್‌ಗಳು ಎಂಜಿನ್, ಟೈರ್ ಮತ್ತು ಇತರ ಪ್ರಮುಖ ಭಾಗಗಳನ್ನು ಸೂಕ್ಷ್ಮವಾಗಿ ಪರಿಶೀಲಿಸುತ್ತಾರೆ. ಕೆಲವು ವಾರಗಳಿಗೊಮ್ಮೆ ವಿಮಾನವನ್ನು ಹಾರಾಟದಿಂದ ಹೊರಗಿಟ್ಟು ಸಂಪೂರ್ಣ ತಪಾಸಣೆ ಮಾಡಲಾಗುತ್ತದೆ. ಆಧುನಿಕ ಬೋಯಿಂಗ್ ವಿಮಾನಗಳಲ್ಲಿ ಸಾವಿರಾರು ಸೆನ್ಸರ್‌ಗಳಿರುತ್ತವೆ. ಇವು ವಿಮಾನ ಹಾರುತ್ತಿರುವಾಗಲೇ ಅದರ ಆರೋಗ್ಯದ ಬಗ್ಗೆ ನೆಲದ ಮೇಲಿರುವ ಎಂಜಿನಿಯರ್‌ಗಳಿಗೆ ಮಾಹಿತಿ ನೀಡುತ್ತಿರುತ್ತವೆ. ವಿಮಾನವು ವಿಶ್ರಾಂತಿ ಇಲ್ಲದೇ ಹಾರಬಹುದು, ಆದರೆ ಮನುಷ್ಯರಿಗೆ ವಿಶ್ರಾಂತಿ ಬೇಕು. ಇಂಥ ಸುದೀರ್ಘ ಹಾರಾಟಗಳಲ್ಲಿ ಪೈಲಟ್‌ಗಳ ತಂಡವನ್ನು ಬದಲಾಯಿಸಲಾಗುತ್ತದೆ. ಸಾಮಾನ್ಯವಾಗಿ ಲಂಡನ್‌ನಿಂದ ಹೂಸ್ಟನ್‌ಗೆ ಹೋದ ಪೈಲಟ್‌ಗಳು ಅಲ್ಲಿ ವಿಶ್ರಾಂತಿ ಪಡೆದು, ಮತ್ತೊಂದು ದಿನ ಅದೇ ಮಾರ್ಗದ ವಿಮಾನದಲ್ಲಿ ಮರಳುತ್ತಾರೆ. ವಿಮಾನವು ಮಾತ್ರ ಯಂತ್ರದಂತೆ ಸತತವಾಗಿ ಕೆಲಸ ಮಾಡುತ್ತದೆ.

ಪೇಟೆಯ ಬದುಕಿಗೆ ಜೀನ್ಸ್ ಬದಲಿಸಿಕೊಂಡ ಶಿಕಾಗೋ ಗಿಡುಗ

ಶಿಶಿರಕಾಲ

ಶಿಶಿರ್ ಹೆಗಡೆ
shishirh@gmail.com

ಶಿಕಾಗೋ ನಗರ ಮಿಷಿಗನ್ ಸರೋವರದ ತಟದಲ್ಲಿದೆ. ಸರೋವರವೆಂದರೆ ಅದೇನು ಚಿಕ್ಕಪುಟ್ಟ ಕೆರೆಯಲ್ಲ, ಸ್ಯಾಂಕಿ ಟ್ಯಾಂಕ್ ಅಲ್ಲ. ಸರೋವರವೆಂದರೆ ಸಿಹಿ ನೀರಿನ ಸಾಗರ-ಸದೃಶ. ಒಂದು ಕಡೆಯಿಂದ ಇನ್ನೊಂದು ಕಡೆ ಕಾಣಿಸದಷ್ಟು ಅಗಲ. 75 ಬೆಂಗಳೂರನ್ನು ಅದರೊಳಕ್ಕೆ ಹಿಡಿಸಬಹುದು ಎಂದಾದರೆ ಅದರ ವಿಸ್ತಾರ ಅಂದಾಜಿಸಿಕೊಳ್ಳಿ. ಇದರ ತಟದಲ್ಲಿರುವ ಶಿಕಾಗೊ ನಗರದ ತುಂಬೆಲ್ಲ ಗಗನಚುಂಬಿ ಕಟ್ಟಡಗಳು. ನನ್ನ ಕಚೇರಿ ಇರುವುದು ಇಂಥದೇ ಒಂದು ಕಟ್ಟಡದ 76ನೇ ಮಹಡಿಯಲ್ಲಿ. ಅಲ್ಲಿ ಗಾಜಿನ ಗೋಡೆ-ಕಿಟಕಿಗಳಿಂದ ಕೆಳಕ್ಕೆ ನೋಡಿದರೆ ಮನುಷ್ಯರೆಲ್ಲ ಇರುವೆ ಹರಿದಂತೆ, ಕಾರುಗಳು ಅಂಗಿ ಗುಂಡಿಯಷ್ಟು ಚಿಕ್ಕದಾಗಿ ಕಾಣಿಸುತ್ತವೆ. ಇಷ್ಟು ಎತ್ತರೆತ್ತರದ ಕಟ್ಟಡದ ಮೇಲೆ ವಾಸಿಸುವುದು ಕೇವಲ ಮನುಷ್ಯರಷ್ಟೇ ಅಲ್ಲ. ಕಟ್ಟಡದ ಅಂಚುಗಳಲ್ಲಿ ಸಾಕಷ್ಟು ಪ್ರಮಾಣದಲ್ಲಿ ಪೆರಿಗ್ರಿನ್ ಫಾಲ್ಕನ್ (ಒಂದು ಜಾತಿಯ ಗಿಡುಗ) ಗಳು ಗೂಡು ಕಟ್ಟಿಕೊಂಡಿರುತ್ತವೆ. ಅವುಗಳ ಬಗ್ಗೆಯೇ ನಿಮಗೆ ಹೇಳಲು ಹೊರಟದ್ದು.

ಈಗ ಕೆಲವು ತಿಂಗಳ ಹಿಂದಿನ ಸಂಗತಿಯಿದು. ನಾನು ಕಚೇರಿಯಲ್ಲಿ ಕುಳಿತುಕೊಳ್ಳುವ ಗಾಜಿನ ಗೋಡೆಯ ಹೊರಗೆ ಕಾಣಿಸುವಂತೆ ಎರಡು ಗಿಡುಗಗಳು ಸೇರಿ ಗೂಡು ಕಟ್ಟುತ್ತಿದ್ದವು. ಒಂದೆರಡು ದಿನ, ಆಗೀಗ, ಹೋಗಿ ಬರುವಾಗ ಅದರತ್ತ ಗಮನ ಹರಿಸುತ್ತಿದ್ದೆ ಒಳಗಿನಿಂದ. ದಿನಗಳು ಕಳೆಯುತ್ತಿದ್ದಂತೆ ನನಗೆ ಅವುಗಳ ಚಲನವಲನವನ್ನು ನೋಡುವುದೇ ಒಂದು ಚಟವಾಗಿಬಿಟ್ಟಿತು. ಒಂದು ದಿನ ನೋಡುತ್ತೇನೆ, ಗಿಡುಗ ಮೂರು ಮೊಟ್ಟೆಯಿಟ್ಟಿದೆ. ನಂತರ ಕೆಲವು ದಿನಗಳು ತಾಯಿ ಮತ್ತು ತಂದೆ ಗಿಡುಗ ಪಾಳಿಯಲ್ಲಿ ಕಾವು ಕೊಡುತ್ತ ಕೂರುತ್ತಿದ್ದವು. ಅಷ್ಟೊಂದು ಚಟುವಟಿಕೆಯಿರದ ನೀರಸ ದಿನಗಳವು. ಮೂರ್ನಾಲ್ಕು ವಾರ ಕಳೆಯಿತು. ಒಂದು ದಿನ ಮೊಟ್ಟೆಗಳಿಂದ ಚಿಕ್ಕ ಮರಿಗಳು ಹೊರಬಂದವು. ನಂತರ ಅವುಗಳಿಗೆ ಒಂದಿಷ್ಟು ಆಹಾರವನ್ನು, ಮಾಂಸದ ತುಂಡುಗಳನ್ನು ತಂದುಕೊಡುವುದು ಇತ್ಯಾದಿ ನಡೆಯಿತು. ನಿಧಾನಕ್ಕೆ ಆ ಮರಿ ಗಿಡುಗಗಳು ಕಟ್ಟಡದ ಅಂಚಿನಲ್ಲಿ ಓಡಾಡಲು ಶುರುಮಾಡಿದವು. ಅವುಗಳ ಕಾವಲಿಗೆ ಎರಡರಲ್ಲೊಂದು ಗಿಡುಗ ಇದ್ದೇ ಇರುತ್ತಿತ್ತು. ನನಗೋ, ಅವೆಲ್ಲಿ ಅಕಸ್ಮಾತ್ ಕೆಳಕ್ಕೆ ಬಿದ್ದುಬಿಡುತ್ತವೋ ಎಂಬ ಅಂಜಿಕೆ. ರೆಕ್ಕೆ ಬಲಿಯದ ಆ ಮರಿಹಕ್ಕಿ ಕೆಳಕ್ಕೆ ಬಿದ್ದರೆ ಬೀಸುವ ಗಾಳಿಗೆ ಇನ್ನೆಲ್ಲಿಯೋ ತೂರಿಹೋಗಿ ಯಾವುದೋ ರಸ್ತೆಯ ಕಾರಿನಡಿಯಾಗುತ್ತಿದ್ದವು. ಒಂದು ದಿನ ಹೋಗಿ ನೋಡುವಾಗ ಎರಡೇ ಮರಿಗಳು ಕಾಣಿಸಿದವು. ಮೂರನೆಯದು ಕಾಣಿಸಲೇ ಇಲ್ಲ. ಈಗ ಇಳಿದ ಎರಡು ಮರಿಗಳ ಹಾರಾಟದ ತಾಲೀಮು ಶುರುವಾಗಿತ್ತು. ಗಿಡುಗ ಮರಿಗಳಿಗೆ ಟ್ರೈನಿಂಗ್ ಕೊಡಲು ಶುರುಮಾಡಿತ್ತು.

ನಿಮಗೊಂದು ಹೇಳಬೇಕು- ಶಿಕಾಗೋ ಸರೋವರದ ಪಕ್ಕದಲ್ಲಿರುವುದರಿಂದ ದಿನದಲ್ಲಿ ಹಲವಾರು ಬಾರಿ 90-120 ಕಿಮಿ ವೇಗದಲ್ಲಿ ಕಟ್ಟಡದ ಮಧ್ಯದಲ್ಲಿ ಗಾಳಿ ನುಸುಳಿ ಹೋಗುತ್ತಿರುತ್ತವೆ. ಬೀಸುಗಾಳಿ ನಿರಂತರ. ಇವುಗಳ ನಡುವೆ ಈ ಗಿಡುಗಗಳು ಹಾರುವುದನ್ನು ವಿಶೇಷವಾಗಿ ಬದಲಿಸಿಕೊಂಡಿವೆ. ಇಂಥ ಆವಾಸಸ್ಥಾನ ಸ್ವಾಭಾವಿಕವಾಗಿ ಎಲ್ಲಿಯೂ ಇರುವುದಿಲ್ಲವಲ್ಲ. ಅಷ್ಟೆತ್ತರದ ಗಗನಚುಂಬಿ ಕಟ್ಟಡಗಳ ನಡುವೆ ಬೇಕಾಬಿಟ್ಟಿ ಸುಳಿ ಸುತ್ತುವ ಗಾಳಿ. ಹೀಗೆ ಬೀಸುವ ಗಾಳಿಯ ನಡುವೆಯೇ ಹೇಗೆ ಗ್ಲೈಡ್ ಮಾಡಿಕೊಂಡು ಹಾರಬೇಕು ಎಂಬುದನ್ನು ವಿಶೇಷವಾಗಿ ಈ ಗಿಡುಗಗಳು ಕಲಿತಿವೆ. ಅಷ್ಟೇ ಅಲ್ಲ, ಅವುಗಳನ್ನು ಮುಂದಿನ ತಲೆಮಾರಿಗೆ ಕಲಿಸಿಕೊಡುವುದನ್ನೂ ರೂಢಿಸಿಕೊಂಡಿವೆ. ಅವುಗಳು ಸಾಮಾನ್ಯವಾಗಿ ಕಟ್ಟಡದ ಕೊನೆಯ ಕೆಲವು ಮಹಡಿಗಳ ಅಂಚಿನಲ್ಲಿ ಗೂಡು ಕಟ್ಟಿಕೊಂಡಿರುತ್ತವೆ. ಅವುಗಳಿಗೆ ಕೆಳಕ್ಕೆ ಹಾರುವ ಪಾರಿವಾಳ, ಇತರೆ ಹಕ್ಕಿಗಳು ಮತ್ತು ಪೇಟೆಯ ರಸ್ತೆ-ನೆಲದಲ್ಲಿ ಓಡಾಡುವ ಇಲಿ-ಹೆಗ್ಗಣಗಳು ಆಹಾರ. ಈ ಗಿಡುಗಗಳು ಉಳಿದವುಗಳಂತೆ ಹಾರುತ್ತ, ಸುತ್ತುತ್ತ ಬೇಟೆಯನ್ನು ಹುಡುಕುವುದಿಲ್ಲ. ಬದಲಿಗೆ ಬಿಲ್ಡಿಂಗ್‌ನ ಅಂಚಿನಲ್ಲಿ ಬೇಟೆಗೆ ಕಾಯುತ್ತವೆ. ಕೆಳಕ್ಕೆ ನೆಲದಲ್ಲಿ ಇಲಿ ಕಾಣಿಸಿತೆಂದುಕೊಳ್ಳಿ, ಅವುಗಳ ರೆಕ್ಕೆಗಳು ಮಡಚಿ, ದೇಹವನ್ನು ರಾಕೆಟ್ ಆಕೃತಿಯಲ್ಲಿ ಹಿಡಿದು, ಸುಮಾರು 300-400 ಮೀಟರ್ ಎತ್ತರದ ಕಟ್ಟಡದಿಂದ ಜಿಗಿಯುತ್ತವೆ, ರಾಕೆಟ್ ವೇಗದಲ್ಲಿ, ಎಷ್ಟು ವೇಗದಲ್ಲಿ ಅವು ಡೈವ್ ಮಾಡಬಹುದು? ಹೇಳಿ ನೋಡೋಣ? 370ರಿಂದ 400 ಕಿ.ಮೀ ವೇಗ!! ಅಷ್ಟು ವೇಗದಲ್ಲಿ ಕೆಳಕ್ಕಿಳಿದು ಕ್ಷಣಾರ್ಧದಲ್ಲಿ ಇಲಿಯನ್ನು ಹಿಡಿದು ಮೇಲಕ್ಕೆತ್ತಿಕೊಂಡು ಬರುತ್ತವೆ. ಆದರೆ ಅದು ಅಷ್ಟು ಸುಲಭದ ಕೆಲಸವಲ್ಲ. ಅಷ್ಟು ವೇಗದಲ್ಲಿ ಮೇಲಿನಿಂದ ಕೆಳಕ್ಕೆ ಶರವೇಗದಲ್ಲಿ ಇಳಿಯುವಾಗ ಕಟ್ಟಡಗಳ ನಡುವೆ ಅಂಡೆಪಿರ್ಕಿ ಗಾಳಿ ನುಗ್ಗುತ್ತಿರುತ್ತದೆ. ಅದರ ದಿಶೆ, ವೇಗ ಹೆಚ್ಚು ಕಡಿಮೆಯಾಗುತ್ತಿರುತ್ತದೆ. ಜಾಸ್ತಿ ಗಾಳಿಯಿದ್ದರೆ ಒಂದು ಕಟ್ಟಡದಿಂದ ಕೆಳಕ್ಕೆ ಹಾರಿದರೆ ನಾಲ್ಕು ಕಟ್ಟಡದಾಚೆ ಇನ್ನೊಂದು ಬುಡಕ್ಕೆ ಹೋಗಿ ತಲುಪಬಹುದು. ಆ ಕಾರಣಕ್ಕೆ ಅವು ನಾಲ್ಕು ಬಿಲ್ಡಿಂಗ್ ಆ ಕಡೆ ಹೋಗಿ ಕುಳಿತುಕೊಳ್ಳುತ್ತವೆ. ಗಾಳಿ ಎಡದಿಂದ ಬಲಕ್ಕೆ ಬೀಸುತ್ತಿದ್ದರೆ ಎಡಗಡೆಯ ಒಂದಿಷ್ಟು ಬಿಲ್ಡಿಂಗುಗಳಾಚೆ ಕೂತು ಅವು ಬಲಕ್ಕೆ ನೋಡುತ್ತಿರುತ್ತವೆ. ಅಲ್ಲೇನಾದರೂ ಬೇಟೆ ಕಂಡಿತೆಂದುಕೊಳ್ಳಿ, ಗಾಳಿಗನುಸಾರವಾಗಿ ಬಾಗಿ ಕೆಳಕ್ಕೆ ಹಾರುತ್ತವೆ. ಅವುಗಳಿಗೆ 70-80 ಅಂತಸ್ತು ಕೆಳಕ್ಕೆ ನೆಲದಲ್ಲಿರುವ ಇಲಿ ಕಾಣಿಸುತ್ತವೆ. ಈ ಪೇಟೆಯ ಇಲಿಗಳು ಸಿಕ್ಕಾಪಟ್ಟೆ ವೇಗದವು. ಮನುಷ್ಯ ವಸತಿ ಅಷ್ಟಿರುವುದರಿಂದ ಕ್ಷಣಾರ್ಧದಲ್ಲಿ ಕಂಡು ಮಾಯವಾಗುವಷ್ಟು ಅವುಗಳದ್ದೂ ವೇಗ. ಆದರೆ ಈ ಪೆರಿಗ್ರಿನ್ ಗಿಡುಗ ಕ್ಷಣಕ್ಕೊಮ್ಮೆ ಬೀಸುವ, ವೇಗ ದಿಕ್ಕುಗಳನ್ನು ಬದಲಿಸಿಕೊಳ್ಳುವ ಗಾಳಿಯ ನಡುವೆ ಕರಾರುವಾಕ್ಕಾಗಿ ಎಷ್ಟು ದೂರದಿಂದ ಹೇಗೆ, ಯಾವ ಕೋನದಲ್ಲಿ ಹಾರಬೇಕು ಎಂದು ಲೆಕ್ಕಾಚಾರ ಮಾಡಿ ನೆಗೆಯುತ್ತದೆ. ಅಷ್ಟೇ ಅಲ್ಲ, ಅವು ಬೇಟೆಯಾಡುವ ಸಮಯ ಸಾಮಾನ್ಯವಾಗಿ ಬೆಳಗ್ಗೆ ಹತ್ತರಿಂದ ಮಧ್ಯಾಹ್ನ ಹನ್ನೆರಡರ ಒಳಗೆ. ಶಿಕಾಗೋದಲ್ಲಿ ಈ ಸಮಯದಲ್ಲಿ ಸರೋವರದಿಂದ ಬೀಸುವ ಗಾಳಿ ಸಾಮಾನ್ಯವಾಗಿ ಒಂದೇ ವೇಗದಲ್ಲಿರುತ್ತದೆ, ನಂತರದಲ್ಲಿ ವೇಗ ಹೆಚ್ಚುತ್ತಾ ಹೋಗುತ್ತದೆ.

ಈ ಗಂಡು ಮತ್ತು ಹೆಣ್ಣು ಗಿಡುಗ ತಮ್ಮ ಮರಿಗಳಿಗೆ ಹಾರುವುದನ್ನು, ಬೇಟೆಯಾಡುವುದನ್ನು ಕಲಿಸುವುದಕ್ಕೆ ಶುರುಮಾಡಿದ್ದವು. ಮೊದಲೆರಡು ದಿನ ಬೆಳಗ್ಗೆ ಹತ್ತು ಗಂಟೆಗೆ ಸರಿಯಾಗಿ ಅವುಗಳ ತಾಲೀಮು ಶುರುವಾಯಿತು. ಅಷ್ಟೊತ್ತಿಗಾಗಲೇ ಆ ಗಿಡುಗದ ಬಗ್ಗೆ ಒಂದಿಷ್ಟು ಓದಿಕೊಂಡಿದ್ದೆ. ಈಗ ಕುತೂಹಲ ಇನ್ನಷ್ಟು ಹೆಚ್ಚಿತ್ತು. ಏಕೆಂದರೆ ಗಿಡುಗ ಮರಿಗಳಿಗೆ ಹಾರಲು ಕಲಿಸುವ ವಿಧಾನವೇ ಅಷ್ಟು ರೋಚಕ. ನಾನು ಅವು ಪ್ರತಿದಿನ ತಾಲೀಮು ಶುರುವಾಗುವ ಸಮಯ ಮತ್ತು ಆ ಸಮಯದಲ್ಲಿ ಅಲ್ಲಿನ ಗಾಳಿಯ ವೇಗವನ್ನು ಒಂದು ಹಾಳೆಯ ಮೇಲೆ ಬರೆದುಕೊಳ್ಳಲು ಶುರುಮಾಡಿದೆ. ದಿನವೂ ಅದೇ ಕೆಲಸ. ಸ್ಥಳೀಯ ಗಾಳಿಯ ವೇಗವನ್ನು ತಿಳಿಸುವ ಮೊಬೈಲ್ ಅಪ್ಲಿಕೇಷನ್‌ಗಳಿವೆಯಲ್ಲ. ದಿನಕಳೆದಂತೆ ಮರಿಗಳ ಹಾರಾಡುವ ಕ್ಷಮತೆ ಹೆಚ್ಚುತ್ತಾ ಹೋಗುವುದು ಕಾಣಿಸುತ್ತಿತ್ತು. ಹಾಗೆ ಹೆಚ್ಚಿದಂತೆ ಅವುಗಳ ತಾಲೀಮು ಶುರುವಾಗುವ ಸಮಯ ಕೂಡ ಬದಲಾದವು. ಈಗ ತಾಲೀಮು ಹೆಚ್ಚಿನ ವೇಗದ ಗಾಳಿಯ ಸಮಯದಲ್ಲಾಗುತ್ತಿತ್ತು. ದಿನಗಳೆದಂತೆ ಗಿಡುಗವು ಮರಿಗಳಿಗೆ ಹೆಚ್ಚಿನ ಸವಾಲು ಒಡ್ಡುತ್ತಿರುವುದು ಸ್ಪಷ್ಟವಾಗಿತ್ತು. ಗಾಳಿಯ ವೇಗ, ದಿಕ್ಕು ಇವೆಲ್ಲ ಕಾಲಕ್ಕೆ ತಕ್ಕಂತೆ ಬದಲಾಗುವವು. ನಾನು ಪಟ್ಟಿಮಾಡಿಕೊಳ್ಳುತ್ತ ಹೋದಂತೆ ಅವೆಲ್ಲವುದರ ಅರಿವು ಈ ಗಿಡುಗಕ್ಕೆ ಇದೆ ಎನ್ನುವುದು ಸ್ಪಷ್ಟವಾಗಿ ಗೋಚರಿಸುತ್ತಿತ್ತು. ಮರಿ ಹಕ್ಕಿ ಬೆಳೆದಂತೆಲ್ಲ, ರೆಕ್ಕೆ ಬಲಿತಂತೆಲ್ಲ ಹೆಚ್ಚುಹೆಚ್ಚಿನ ವೇಗದ ಗಾಳಿಯಲ್ಲಿ ಅವುಗಳ ತಾಲೀಮು. ಅದಾಗಲೇ ತಾಯಿ-ತಂದೆ ಹಕ್ಕಿಗಳು ಸುಮಾರು ನೂರಿನ್ನೂರು ತಾಸನ್ನು ಹಾರಾಟ ಕಲಿಸುವುದಕ್ಕೆ ವ್ಯಯಿಸಿದ್ದವು. ಆದರೆ ಮರಿಹಕ್ಕಿಗಳು ಇನ್ನೂ ಸಂಪೂರ್ಣ ಹೊರಜಗತ್ತಿಗೆ, ಕಟ್ಟಡಗಳ ನಡುವೆ, ಬೀಸುಗಾಳಿಯಲ್ಲಿ ಬೇಟೆಯ ಡೈವ್‌ಗೆ ತಯಾರಾಗಿರಲಿಲ್ಲ. ಆ ಸಮಯದಲ್ಲಿ ಒಮ್ಮೆಲೇ ಈ ಗಿಡುಗದ ನಡವಳಿಕೆ ಸಂಪೂರ್ಣ ಬದಲಾದದ್ದು ಕಾಣಿಸಿತು. ಇಷ್ಟು ದಿನ ತನ್ನ ಪಾಡಿಗಿದ್ದ ಗಿಡುಗ, ಈಗ ಎಲ್ಲಿಲ್ಲದಷ್ಟು ಅಕ್ರಮಣಕಾರಿಯಾಗಿತ್ತು. ಅದು ಮರಿಹಕ್ಕಿ ಮೇಲಿಂದ ನೆಲದವರೆಗೆ ಹಾರಿ ಇಳಿಯುವ ತರಬೇತಿಯ ಸಮಯ. ಆ ಸಮಯದಲ್ಲಿ ರಸ್ತೆಯ ಕೆಳಕ್ಕೆ ಓಡಾಡುವವರನ್ನೆಲ್ಲ ತಾಯಿ-ತಂದೆ ಹಕ್ಕಿಗಳು ಕುಕ್ಕಿ ದಾಳಿ ಮಾಡಲು ಶುರುಮಾಡಿದವು. ಅದೆಷ್ಟೆಂದರೆ ಕಟ್ಟಡದ ಒಂದು ಪಕ್ಕದ ರಸ್ತೆಯಲ್ಲಿ 'ಗಿಡುಗ ದಾಳಿ ಮಾಡಬಹುದು' ಎಂಬ ಎಚ್ಚರಿಕೆಯ ಬೋರ್ಡ್ ಹಾಕಬೇಕಾದಷ್ಟು. ಒಂದಿಷ್ಟು ದಿನ ನಡೆದಾಡುವವರು ಯಾರೂ ಅತ್ತ ಸುಳಿಯಲಿಲ್ಲ. ಅಷ್ಟು ವ್ಯವಸ್ಥೆ ಮಾಡಿಕೊಂಡ ನಂತರವೇ ಈ ಮರಿಹಕ್ಕಿಗಳಿಗೆ ಪೂರ್ಣ ನೆಲದವರೆಗೆ ಡೈವ್ ಮಾಡಲು ಕಲಿಸಲು ಶುರುಮಾಡಿದ್ದು.

ಇದಿಷ್ಟೇ ಆಗಿದ್ದಿದ್ದರೆ ಯಾವುದೋ ಒಂದು ಹಕ್ಕಿ, ಎಲ್ಲಿಯೋ ಒಂದು ಕಡೆ ಪೇಟೆಯಲ್ಲಿ ಬಿಲ್ಡಿಂಗುಗಳ ನಡುವೆ ಹಾರಲು ಕಲಿತುಕೊಂಡಿದೆ, ಅವು ಮರಿಗಳಿಗೆ ಕಲಿಸುತ್ತವೆ ಎಂದಷ್ಟೇ ವಿಷಯವಾಗುತ್ತಿತ್ತು. ಆದರೆ ವಿಷಯ ಅಷ್ಟೇ ಅಲ್ಲ. ಈ ಗಿಡುಗಗಳು 1960-70ರ ಸಮಯದಲ್ಲಿ ಅವಸಾನದ ಅಂಚಿಗೆ ತಲುಪಿದ್ದವು. ಮೊದಲನೆಯದಾಗಿ, ಆ ಸಮಯದಲ್ಲಿ ಉಳಿದ ಕೆಲವೇ ಖಾಲಿ ಜಾಗಗಳಲ್ಲೆಲ್ಲ ಕಟ್ಟಡಗಳು ಬಂದು ಅವಕ್ಕೆ ಹೊಂದಿಕೊಳ್ಳಲಾಗಲಿಲ್ಲ. ಎರಡನೆಯದಾಗಿ ಆ ಕಾಲದಲ್ಲಿ ಶಿಕಾಗೋದಲ್ಲಿ ಸೊಳ್ಳೆ ಓಡಿಸಲಿಕ್ಕೆಂದು ಯಥೇಚ್ಛ ಡಿಡಿಟಿ ಹೊಗೆ ಬಳಸಲಾಗುತ್ತಿತ್ತು. ಅದು ಈ ಗಿಡುಗದ ಮೊಟ್ಟೆಗಳ ಹೊರ ಮೇಲ್ಮೈಯನ್ನು ದುರ್ಬಲವಾಗಿಸುತ್ತಿತ್ತು. ಅದರಿಂದ ಮೊಟ್ಟೆ ಅಕಾಲದಲ್ಲಿ ಒಡೆದು ಮರಿಗಳು ಸಾಯುತ್ತಿದ್ದವು. ಅದಾದ ನಂತರ 1990ರಲ್ಲಿ ಈ ಗಿಡುಗಗಳನ್ನು 'ಶಿಕಾಗೋ ನಗರದ ಹಕ್ಕಿ' ಎಂದು ಘೋಷಿಸಿ, ಅವುಗಳನ್ನು ಸಂರಕ್ಷಿಸುವ ಕೆಲಸ ಶುರುವಾಯಿತು. ಅದೆಷ್ಟೋ ಪೆರಿಗ್ರಿನ್ ಫಾಲ್ಕನ್‌ಗಳನ್ನು ತಂದುಬಿಡಲಾಯಿತು. ನಂತರದ ಮೂವತ್ತೇ ವರ್ಷದಲ್ಲಿ ಅವು ಸಂಪೂರ್ಣ ಶಿಕಾಗೋ ಪೇಟೆಯ ಬಹುಮಹಡಿ ಬದುಕಿಗೆ ಹೊಂದಿಕೊಂಡವು. ಅವು ಅಲ್ಲಿ ಹಾರಿ, ಬೇಟೆಯಾಡಿ ಬದುಕಲಷ್ಟೇ ಕಲಿತದ್ದಲ್ಲ, ಮೂರೇ ದಶಕದಲ್ಲಿ ಅವುಗಳ ದೇಹರಚನೆ ಬದಲಾದವು. ಬಾಹ್ಯವಲ್ಲ, ವಂಶವಾಹಿನಿಯಲ್ಲಿಯೇ ಆದ ಬದಲಾವಣೆ ಅದು. ಇದೆಲ್ಲ ನಡೆದದ್ದು ಕೇವಲ 30-40 ವರ್ಷದಲ್ಲಿ. ಸಾಮಾನ್ಯವಾಗಿ ಯಾವುದೇ ಜೀವಿಯ ಹೊಂದಾಣಿಕೆಯು ಜೀನ್ ಹಂತದಲ್ಲಿ ಅಷ್ಟು ಕಡಿಮೆ ಸಮಯದಲ್ಲಿ ಆಗುವುದಿಲ್ಲ. ಜೀನ್ಸ್ ಬದಲಾವಣೆಯಿಂದಾಗಿ ದೇಹರಚನೆಯಷ್ಟೇ ಅಲ್ಲ, ಅವುಗಳು ಗೂಡು ಕಟ್ಟುವ ರೀತಿ, ಆಹಾರ ಕ್ರಮ, ಬೇಟೆಯ ರೀತಿ ಮತ್ತು ಅವುಗಳ ನಡವಳಿಕೆಯಲ್ಲಿಯೂ ಬದಲಾವಣೆಯಾಗಿದೆ. ಈ ಬದಲಾವಣೆ ಎಷ್ಟೆಂದರೆ ಈ ಪೇಟೆಯ ಗಿಡುಗನನ್ನು ಕಾಡಿನಲ್ಲಿ, ಬಯಲುಸೀಮೆಯಲ್ಲಿ ಬಿಟ್ಟರೆ ಅವು ಇಂದು ಬದುಕಲಾರವು. ಅವುಗಳು ಇಂದು ಬಹುಮಹಡಿ ಪೇಟೆಯಲ್ಲಷ್ಟೇ, ಶಿಕಾಗೋದಲ್ಲಷ್ಟೇ ಬದುಕುಳಿಯಬಲ್ಲವು.

ಇಂದು ಹಿಂದೆಲ್ಲದಕ್ಕಿಂತ ವೇಗದಲ್ಲಿ ನಾವು ಭೂಮಿಯನ್ನು ಬದಲಿಸುತ್ತಿದ್ದೇವೆ ಎಂಬುದು ಅಮ್ಮಕ್ಕಜ್ಜಿಯ ಕಥೆಯಂತಾಗಿದೆ. ಇದನ್ನು ಹೋದಲ್ಲಿ-ಬಂದಲ್ಲಿ ಕೇಳುತ್ತಲೇ ಇರುತ್ತೇವೆ. ನಿಜ ಅದು. ಇದನ್ನು break neck speed ಎಂದು ಕರೆಯುವುದಿದೆ- ಕುತ್ತಿಗೆ ಮುರಿದುಕೊಳ್ಳುವಷ್ಟು ವೇಗವೆಂಬ ವಿಡಂಬನಾ ಹೋಲಿಕೆ. ಇದು ಅದೆಷ್ಟು ವೇಗವೆಂದರೆ ಖುದ್ದು ಮನುಷ್ಯನಿಗೇ ಅಷ್ಟು ವೇಗದಲ್ಲಿ ಹೊಂದಿಕೊಳ್ಳಲಾಗುತ್ತಿಲ್ಲ. ಇಂದು ಬದುಕುವ ರೀತಿ ಬದಲಿಸಿಕೊಂಡ ಒಂದು ದೊಡ್ಡ ವರ್ಗ ದಿನಕ್ಕೆ ಹತ್ತೆಂಟು ತಾಸು ಕೂತು ಕೆಲಸ ಮಾಡುತ್ತದೆ. ನಮ್ಮ ದೇಹ ಅದಕ್ಕೇ ಹೊಂದಿಕೊಳ್ಳಲು ಸಾಧ್ಯವಾಗಿಲ್ಲ, ಬೆನ್ನುನೋವು ಬಂದು ಅದು ಇವರನ್ನೆಲ್ಲ ಕಾಡುತ್ತದೆ. ಡಯಾಬಿಟಿಸ್, ಜೆಡ್ಡು ಆಹಾರ ಪದ್ಧತಿ, ಸ್ಥೂಲಕಾಯ ಇವು ಯಾವುದು ಕೂಡ ನಮಗೆ ಹೊಂದಾಣಿಕೆಯಾಗದೇ ರೋಗಕ್ಕೆ ಕಾರಣವಾಗುತ್ತವೆ. ಜಗತ್ತಿನ ಅರ್ಧದಷ್ಟು ಜನಸಂಖ್ಯೆ ಇಂದು ಪೇಟೆಯಲ್ಲಿ ಬದುಕುತ್ತಿದೆಯಂತೆ. ಅವರಲ್ಲಿ ಕೆಲವು ತಲೆಮಾರಿನಿಂದ ಅದೇ ಪೇಟೆಯಲ್ಲಿದ್ದವರಿದ್ದಾರೆ. ಆದರೆ ಇಂದಿಗೂ ಆಧುನಿಕ ಪೇಟೆಗೆ ಮನುಷ್ಯ ಸಂಪೂರ್ಣವಾಗಿ ಹೊಂದಿಕೊಂಡಿಲ್ಲ. ಇಂಥ ಸಮಯದಲ್ಲಿ ಮನುಷ್ಯ ಮಾಡಿದ ಆವಾಂತರದ ಬದಲಾವಣೆಗೆ ನಮಗಿಂತ ಚೆನ್ನಾಗಿ ಹೊಂದಿಕೊಳ್ಳುವ, ತಮ್ಮ ವಂಶವಾಹಿನಿಯನ್ನೇ ಬದಲಿಸಿಕೊಳ್ಳುವ ಜೀವಿಗಳು, ಅವುಗಳ ಹೊಂದಾಣಿಕೆಯ ವೇಗ ವಿಶೇಷವೆನ್ನಿಸುತ್ತದೆ. ನ್ಯೂಯಾರ್ಕ್ ನಗರದಲ್ಲಿ ಒಂದು ಜಾತಿಯ ಊಸರವಳ್ಳಿಯಿದೆ. ಅವುಗಳದ್ದು ಕೂಡ ಬಿಲ್ಡಿಂಗ್ ಬದುಕು. ಅವುಗಳ ನಿರ್ವಾತ ಅಂಟಿಕೊಳ್ಳುವ ಪಾದದ ಅಗಲ ಕಳೆದ ಐದು ದಶಕದಲ್ಲಿ ಒಂದೂವರೆ ಪಟ್ಟು ಜಾಸ್ತಿ ದೊಡ್ಡದಾಗಿರುವುದು ಇನ್ನೊಂದು ಉದಾಹರಣೆ.

ಇನ್ನು ಕೆಲವೊಮ್ಮೆ ಮನುಷ್ಯಕೃತ ಬದಲಾವಣೆಗಳು ವಿಕಸನದ ನೈಸರ್ಗಿಕ ಆಯ್ಕೆಯನ್ನೇ ಬದಲಿಸುವುದಿದೆ. ಆನೆ ಮತ್ತು ಆನೆಯ ದಂತದ ವಿಷಯ. ಮೊಜಾಂಬಿಕ್ ಯಥೇಚ್ಛ ಆನೆಗಳಿರುವ ಆಫ್ರಿಕಾದ ಒಂದು ಬಡದೇಶ. ಅದು ಪೋರ್ಚುಗೀಸರ ವಸಾಹತಾಗಿತ್ತು. ಅವರ ದಂತಲೂಟಿಯ ನಂತರವೂ ಅಲ್ಲಿ ಯಥೇಚ್ಛ ಆನೆಗಳು ಬದುಕುಳಿದುಕೊಂಡಿದ್ದವು. ಮೊಜಾಂಬಿಕ್ ದೇಶಕ್ಕೆ ಸ್ವಾತಂತ್ರ್ಯ ಬಂದದ್ದು 1975ರಲ್ಲಿ. ಸ್ವಾತಂತ್ರ್ಯ ಸಿಕ್ಕ ಒಂದೂವರೆ ವರ್ಷದೊಳಗೆ ಆಂತರಿಕ ಯುದ್ಧದ ಬೆಂಕಿ ಹೊತ್ತಿಕೊಂಡಿತು. 1977ರಲ್ಲಿ ದೇಶ ಎರಡು ಪಂಗಡವಾಗಿ ಒಡೆದಿತ್ತು. ಈ ಪಂಗಡಗಳು ಯುದ್ಧಕ್ಕೆ ನಿಂತವು. ಯುದ್ಧವೆಂದರೆ ಶಸ್ತ್ರಾಸ್ತ್ರ, ಉಳಿದವುಗಳಿಗೆ ಹಣ ಬೇಕಲ್ಲ. ಎರಡೂ ಪಂಗಡಗಳು ಆನೆಯನ್ನು ಕೊಂದು ದಂತವನ್ನು ಸ್ಮಗಲ್ ಮಾಡಲು ಶುರುಮಾಡಿದವು. ಪೋರ್ಚುಗೀಸರು ಆ ದೇಶದಲ್ಲಿ 25,00ದಷ್ಟಿದ್ದ ಆನೆಯ ಸಂಖ್ಯೆಯನ್ನು ಅದಾಗಲೇ 10,000ಕ್ಕೆ ಇಳಿಸಿದ್ದರು. ಈ ಆಂತರಿಕ ಯುದ್ಧದ ಸಮಯದಲ್ಲಿ ಅವುಗಳ ಸಂಖ್ಯೆ 200ಕ್ಕೆ ಬಂದು ನಿಂತಿತ್ತು ಎಂದರೆ ನೀವೇ ಅಂದಾಜಿಸಿಕೊಳ್ಳಿ.

ನೀವು ಆನೆಯನ್ನು ಕಾಣುವಾಗ ಒಂದನ್ನು ಗ್ರಹಿಸಿರಬಹುದು. ಗಂಡು ಆನೆಗೆ ಉದ್ದದ ದಂತವಿರುತ್ತದೆ. ಹೆಣ್ಣು ಆನೆಗೆ ಕೆಲವೊಮ್ಮೆ, ಇದ್ದರೂ ಚಿಕ್ಕದಂತ. ಗಂಡು ಎಂದರೆ XY ಕ್ರೋಮೋಸೋಮ್ (ವರ್ಣತಂತು), ಹೆಣ್ಣೆಂದರೆ XX ಕ್ರೋಮೋಸೋಮ್. ಇದು ನಿಮಗೆ ಗೊತ್ತು. ಈ ಆಫ್ರಿಕಾದ ಆನೆಗಳ XX ವರ್ಣತಂತುವಿನಲ್ಲಿ ಒಂದು X ನಲ್ಲಿ ದಂತವನ್ನು ಕಳೆದುಕೊಳ್ಳುವ ಅಂಶವಿತ್ತು. ಆ ಸಾಮೂಹಿಕ 'ಗಜಮೇಧ' ನಡೆಯುವುದಕ್ಕಿಂತ ಮೊದಲು ಅಲ್ಲಿನ ಶೇ. 60ರಷ್ಟು ಹೆಣ್ಣು ಆನೆಗಳಿಗೆ ಗಂಡಿನಷ್ಟೇ ಉದ್ದದ ದಂತವಿರುತ್ತಿತ್ತಂತೆ. ಅಂದು ಅಲ್ಲಿನವರು ದಂತವಿದ್ದ ಬಹುತೇಕ ಆನೆಗಳನ್ನು ಕೊಂದುಬಿಟ್ಟಿದ್ದರು. ಹಾಗಾಗಿ ಕೊನೆಯಲ್ಲಿ ಉಳಿದಿದ್ದು ದಂತವಿಲ್ಲದ ಕೆಲವೇ ಹೆಣ್ಣು ಆನೆಗಳು. ಆ ಕಾರಣಕ್ಕೇ ಅವು ಬದುಕಿಕೊಂಡದ್ದು. ಅದು ಬೇರೆ ವಿಷಯ. ಆದರೆ ಅವೆಲ್ಲವೂ X ಜೀವವಾಹಿನಿಯಲ್ಲಿ ದಂತವಿಲ್ಲದ ಜೀನ್ಸ್ ಹೊಂದಿದ್ದವು. ಇಂದು ಮೊಜಾಂಬಿಕ್‌ನಲ್ಲಿ ಆನೆಗಳ ಸಂಖ್ಯೆ ಹತ್ತುಸಾವಿರಕ್ಕೆ ಏರಿದೆ. ಆದರೆ ಶೇಕಡಾವಾರು ಕೆಲವೇ ಹೆಣ್ಣು ಆನೆಗಳಲ್ಲಿ ದಂತ ಉಳಿದುಕೊಂಡಿದೆ. ಶೇ. 90ಕ್ಕಿಂತ ಹೆಚ್ಚಿನ ಹೆಣ್ಣು ಆನೆಗಳಲ್ಲಿ ದಂತಗಳು ಇಲ್ಲ.

ಹಾಗಾದರೆ ಗಂಡಿನಲ್ಲಿ XY ಇದೆಯಲ್ಲ, ಇಲ್ಲಿ X ಬರುವುದು ತಾಯಿಯಿಂದ. ಹಾಗಾಗಿ ಗಂಡು ಆನೆಗಳು ದಂತವನ್ನು ಕಳೆದುಕೊಳ್ಳಲಿಲ್ಲವೇ ಎಂಬ ಪ್ರಶ್ನೆ ಸಹಜ. ಅದು ಹೇಗೋ, ಗಂಡು ಆನೆಗಳಲ್ಲಿ ದಂತ ಗುಣವಿರುವ Y ವರ್ಣತಂತುವೇ ಹೆಚ್ಚು ಗಟ್ಟಿಯಾಗಿ, ದಂತ ಕಳೆದುಕೊಳ್ಳುವ X ವರ್ಣತಂತುವನ್ನು ಮೆಟ್ಟಿ ನಿಂತಿವೆ, ಇಂದಿಗೂ. ವಿಜ್ಞಾನಿಗಳು ಅದಕ್ಕೆ ಗಂಡು ಆನೆಗಳ ಜೀವನಶೈಲಿಯೇ ಕಾರಣವೆನ್ನುತ್ತಾರೆ. ಆದರೆ ಅದು ಹೇಗೆ ಸಾಧ್ಯವಾಯಿತು ಎಂಬ ಪ್ರಶ್ನೆಗೆ ಉತ್ತರ ಪಡೆದುಕೊಳ್ಳುವಷ್ಟು ನಮ್ಮ ವಿಜ್ಞಾನ ಮುಂದುವರಿದಿಲ್ಲ. ಒಟ್ಟಾರೆ ಗಂಡು ಆನೆ ಸಂಕುಲಕ್ಕೆ ಅಪಾಯಕಾರಿಯಾಗುವ ಜೀನ್ಸ್ ಅನ್ನು ಹಿಡಿದಿಟ್ಟುಕೊಂಡಿದ್ದರೆ ಹೆಣ್ಣಾನೆ ಬದುಕಲಿಕ್ಕೆ ಅತ್ಯವಶ್ಯಕವಾದ ದಂತವನ್ನು ಕಳೆದುಕೊಳ್ಳುವ ಜೈವಿಕ ಆಯ್ಕೆ ಮಾಡಿಕೊಂಡಿತು. ಇದೇ ಸ್ಥಿತಿ ಆನೆಗಳನ್ನು ಸಾಕಿ ಬೆಳೆಸಿ ವಿದೇಶಗಳಿಗೆ, ಭಾರತಕ್ಕೆ ಮಾರುವ ಶ್ರೀಲಂಕಾದಲ್ಲಿಯೂ ಇದೆ. ಅಲ್ಲಿ ಇವತ್ತು ಶೇ. 5ರಷ್ಟು ಹೆಣ್ಣಾನೆಗಳಿಗೆ ಮಾತ್ರ ಚಿಕ್ಕದಂತವಿರುತ್ತದೆ. ಉಳಿದವು ಟೂತ್ ಲೆಸ್. ನಾವು ಭೂಮಿಯ ಮೇಲಿನ ಅತ್ಯಂತ ದೊಡ್ಡ ಪ್ರಾಣಿ ಆನೆ, ಆಕಾಶದಲ್ಲಿ ಹಾರಾಡುವ ಗಿಡುಗ, ಅಂಥವುಗಳ ಜೀನ್ಸ್ ಅನ್ನೇ ಬದಲಿಸುವಷ್ಟು ಜಗತ್ತನ್ನು ಬದಲಿಸುತ್ತಿದ್ದೇವೆ. ಇನ್ನು ಚಿಕ್ಕಪುಟ್ಟ ಜೀವಿಗಳ ಕಥೆಯೇನಾಗಿರಬಹುದು? ಸುಮ್ಮನೆ ನೀವು ಕೂರುವ, ವಾಸಿಸುವ ಬಿಲ್ಡಿಂಗು, ಮನೆ, ಪಕ್ಕದ ಕೆರೆ ಹೀಗೆ ಮನುಷ್ಯ ವಾಸದ ಸುತ್ತಮುತ್ತ ಅದೆಷ್ಟೋ ಇಂಥ ಸೂಕ್ಷ್ಮ ಬದಲಾವಣೆಗಳನ್ನು ನೋಡಬಹುದು. ಗುಬ್ಬಿ, ಕಾಗೆ, ನರಿ, ಕರಡಿ, ತೋಳ, ಹಾವು, ಇಲಿ, ಪಾರಿವಾಳ, ಇಣಚಿ ಹೀಗೆ ಅದೆಷ್ಟೋ ಜೀವಿಗಳು, ಗಿಡಗಳೂ ಹೊರತಲ್ಲ. ಮನುಷ್ಯನ ಪೇಟೆಯ ಜೀವನ, ಮಾಲಿನ್ಯ, ಗ್ಲೋಬಲ್ ವಾರ್ಮಿಂಗ್ ಇತ್ಯಾದಿ ನೂರೆಂಟು break neck ವೇಗದ ಬದಲಾವಣೆಗಳಿಗೆ ಒಗ್ಗಿಕೊಂಡು ಬದುಕುವುದು, ಜೀವ ಸ್ವಾಭಾವಿಕ ಆಯ್ಕೆ, ವಂಶವಾಹಿನಿಯನ್ನೇ ಅದರ ಸುತ್ತ ಬೇಕಾದಂತೆ ಬದಲಿಸಿಕೊಳ್ಳುವುದು ಜೀವ ಜಗತ್ತಿನ ವಂಡರ್, ಅಲ್ಲವೇ?

ಭಾರತದ ಆರ್ಥಿಕ ಬೆಳವಣಿಗೆಯ ವೇಗ ನಕಲಿಯಲ್ಲ!

ಮನಿ ಮೈಂಡೆಡ್

ಕೇಶವ ಪ್ರಸಾದ್ ಬಿ.
keshavaprasadb@gmail.com

ಹಿಂದಿನಿಂದಲೂ, ಬಹುತೇಕ ಎಡಪಂಥೀಯ ಚಿಂತಕರು ಮತ್ತು ಆರ್ಥಿಕ ತಜ್ಞರು ಭಾರತದ ಜಿಡಿಪಿ ಬೆಳವಣಿಗೆಯನ್ನು ವ್ಯಂಗ್ಯವಾಡಿ, ತಿರಸ್ಕರಿಸಿದವರೇ ಆಗಿದ್ದಾರೆ. ಮಾತೆತ್ತಿದರೆ ಅಸಮಾನತೆ, ನಿರುದ್ಯೋಗದ್ದೇ ಮಾತು. ''ಅಂಬಾನಿ-ಅದಾನಿಯವರಿಗೆ ಮೋದಿ ಇಡೀ ದೇಶವನ್ನೇ ಮಾರಾಟ ಮಾಡುತ್ತಿದ್ದಾರೆ, ಎಚ್‌ಎಎಲ್ ಸೇರಿದಂತೆ ಸಾರ್ವಜನಿಕ ವಲಯದ ಕಂಪನಿಗಳನ್ನು ದುರ್ಬಲಗೊಳಿಸುತ್ತಿದ್ದಾರೆ, ಬ್ಯಾಂಕ್‌ಗಳನ್ನು ಮುಳುಗಿಸುತ್ತಿದ್ದಾರೆ'' ಎಂಬಿತ್ಯಾದಿ ಇಲ್ಲಸಲ್ಲದ ಆರೋಪಗಳ ಸರಮಾಲೆಯನ್ನೇ ಇವರು ಕಟ್ಟಿದರು. ಸದಾ ನಕಾರಾತ್ಮಕ ಮಾತುಗಳಲ್ಲಿ ನಿಂದಿಸುತ್ತಾ ತಾಯ್ನಾಡಿನ ಪ್ರಗತಿಯನ್ನೇ ಒಪ್ಪಿಕೊಳ್ಳದೆ, ದ್ರೋಹ ಬಗೆದರು. ಜಿಡಿಪಿ ಅಂಕಿ-ಅಂಶಗಳು ಏರಿಕೆಯಾಗುತ್ತಿರುವುದನ್ನು ತೋರಿಸಿದಾಗಲೆಲ್ಲ, ''ತಲಾ ಆದಾಯ ಕಳಪೆಯಾಗಿದೆ, ಜನಸಾಮಾನ್ಯರ ಜೀವನ ದುಸ್ತರವಾಗಿದೆ'' ಎಂದು ಬೊಬ್ಬೆ ಹೊಡೆದರು. ದೇಶವಾಸಿಗಳಲ್ಲಿ ಕೀಳರಿಮೆ ಹುಟ್ಟಿಸುವುದರಲ್ಲಿ ಇವರ ಕಿತಾಪತಿ, ಷಡ್ಯಂತ್ರದ ಪಾಲು ಸಾಕಷ್ಟಿದೆ. ಅಂಥ ಒಂದಷ್ಟು ಉದಾಹರಣೆಗಳನ್ನು ನೋಡೋಣ.

ನೊಬೆಲ್ ಪ್ರಶಸ್ತಿ ಪುರಸ್ಕೃತ ಅಮರ್ತ್ಯ ಸೇನ್ ಅವರು ''ಅಭಿವೃದ್ಧಿ ಎಂದರೆ 'ನಿಜವಾದ ಸ್ವಾತಂತ್ರ್ಯ' ಆಗಿರಬೇಕೇ ಹೊರತು ಕೇವಲ ಜಿಡಿಪಿ ಬೆಳವಣಿಗೆಯಲ್ಲ'' ಎಂದು ನಿರಂತರ ಪ್ರತಿಪಾದಿಸಿದರು. ದೇಶವು ಶಿಕ್ಷಣ ಮತ್ತು ಆರೋಗ್ಯಕ್ಕೆ ಹೆಚ್ಚು ಖರ್ಚು ಮಾಡುತ್ತಿಲ್ಲ ಎಂಬುದು ಅವರ ಬೇಸರವಾಗಿತ್ತು. ಬೆಲ್ಜಿಯಂ ಮೂಲದ ಜಿಯಾನ್ ಡ್ರೆಜ್ ಎಂಬ ಆರ್ಥಿಕ ತಜ್ಞರು, ''ಭಾರತದ ಜಿಡಿಪಿ ಬೆಳವಣಿಗೆಯಿಂದ ಜನಸಾಮಾನ್ಯರಿಗೆ ಯಾವ ಪ್ರಯೋಜನವೂ ಆಗುತ್ತಿಲ್ಲ'' ಎಂದು ತಗಾದೆ ಮಾಡುತ್ತಿದ್ದರು. ಜೆಎನ್‌ಯುವಿನ ನಿವೃತ್ತ ಪ್ರೊಫೆಸರ್ ಅರುಣ್ ಕುಮಾರ್ ಅವರು, ''ಭಾರತದ ನಿಜವಾದ ಆರ್ಥಿಕ ಬೆಳವಣಿಗೆ ಕೇವಲ 2.5 ಪರ್ಸೆಂಟ್‌ನಿಂದ 3 ಪರ್ಸೆಂಟ್ ಇರಬಹುದು. 8 ಪರ್ಸೆಂಟ್ ಆಗಿರಲಾರದು'' ಎಂದು ಆಪಾದಿಸಿದ್ದರು. ಕರಣ್ ಥಾಪರ್‌ಗೆ ನೀಡಿದ ಸಂದರ್ಶನದಲ್ಲಿ ಅವರು, ''ಭಾರತದ ಜಿಡಿಪಿ ಅಂಕಿ-ಅಂಶಗಳನ್ನು ಉತ್ಪ್ರೇಕ್ಷೆ ಮಾಡಲಾಗುತ್ತಿದೆ. ಐಎಂಎಫ್ ಪ್ರಕಾರವೇ ಇದೆಲ್ಲ ಸಿ-ಗ್ರೇಡ್ ಡೇಟಾಗಳಾಗಿವೆ'' ಎಂದು ದೂರಿದ್ದರು.

ಇಂಡಿಯನ್-ಅಮೆರಿಕನ್ ಇಕನಾಮಿಸ್ಟ್ ಅಶೋಕ ಮೂಡಿಯವರಂತೂ, ''ಭಾರತದ ಜಿಡಿಪಿ ಬೆಳವಣಿಗೆಯೇ ನಕಲಿ'' (India's Fake Growth Story) ಎಂದು ವರದಿಯನ್ನೇ ಬರೆದಿದ್ದರು. ''ಹೆಚ್ಚುತ್ತಿರುವ ಅಸಮಾನತೆ, ನಿರುದ್ಯೋಗ ಸಮಸ್ಯೆ, ಖಾಸಗಿ ಬಂಡವಾಳ ಹೂಡಿಕೆಯ ಕೊರತೆ, ಹೆಚ್ಚುತ್ತಿರುವ ಸಾಲ, ಉತ್ಪಾದನೆ ಮತ್ತು ವೆಚ್ಚದ ನಡುವಿನ ಅಜಗಜಾಂತರ ವ್ಯತ್ಯಾಸದ ಪರಿಣಾಮ ಜಿಡಿಪಿ ಬೆಳವಣಿಗೆಯೇ ನಕಲಿ'' ಎಂದು ಅವರು ಆರೋಪಿಸಿದ್ದರು. ಭಾರತೀಯ ಆಡಳಿತ ವ್ಯವಸ್ಥೆಯು ಜಿ-20 ಶೃಂಗಸಭೆಗೆ ಮುನ್ನ ಆರ್ಥಿಕ ಪರಿಸ್ಥಿತಿಯ ವಾಸ್ತವಿಕ ಅಂಶಗಳನ್ನು ಮರೆಮಾಚುತ್ತಿದೆ. ಹೆಡ್‌ಲೈನ್ ಅಂಕಿ-ಅಂಶಗಳನ್ನು ಮಾತ್ರ ವೈಭವೀಕರಿಸಲಾಗುತ್ತಿದೆ. ಬಹುಪಾಲು ಜನಸಾಮಾನ್ಯರು ಎದುರಿಸುತ್ತಿರುವ ಕಷ್ಟಗಳು, ಹೋರಾಟಗಳನ್ನು ಮರೆಮಾಚುವುದು ಅಪಾಯಕಾರಿ ಎಂದು ಅವರು ಬರೆದಿದ್ದರು. ಮೋದಿ ಮಾದರಿಯಲ್ಲಿ ಜಾಬ್‌ಲೆಸ್ ಗ್ರೋತ್ ಅಥವಾ ಉದ್ಯೋಗ ರಹಿತ ಬೆಳವಣಿಗೆಯಾಗುತ್ತಿದೆ. ಕಾರ್ಪೊರೇಟ್ ವಲಯದ ಕಂಪನಿಗಳು ಗಳಿಸುತ್ತಿರುವ ಲಾಭವು ಬಹುಸಂಖ್ಯಾತ ಜನತೆಯ ಆರ್ಥಿಕ ಚೇತರಿಕೆಗೆ ಕಾರಣವಾಗುತ್ತಿಲ್ಲ. ಜಿಡಿಪಿ ಮಾತ್ರ ಏರುತ್ತಿದೆ. ದೇಶದ ಉತ್ಪಾದನೆ ಅಥವಾ ಆದಾಯ ಹೆಚ್ಚುತ್ತಿದ್ದರೂ, ಖಾಸಗಿ ವೆಚ್ಚಗಳು ಹಿಂದುಳಿದಿದೆ ಎಂದರೆ, ಜನಸಾಮಾನ್ಯರಿಗೆ ಬೆನಿಫಿಟ್ ಸಿಗುತ್ತಿಲ್ಲ ಎಂದರ್ಥ. ಜಿಡಿಪಿ ಏರುತ್ತಿದ್ದರೂ, ಹೊಸ ಉದ್ಯೋಗಗಳು ಸೃಷ್ಟಿಯಾಗುತ್ತಿಲ್ಲ, ಉದ್ಯೋಗದಲ್ಲಿರುವವರಿಗೂ ಕಡಿಮೆ ಸಂಬಳ ಸಿಗುತ್ತಿದೆ. ಕಾರ್ಪೊರೇಟ್ ಲಾಭ ಹೆಚ್ಚುತ್ತಿದೆ, ಜನಸಾಮಾನ್ಯರ ಆದಾಯ ಇಳಿಯುತ್ತಿದೆ. ಇದು ಮಾರುಕಟ್ಟೆಯ ವೈಫಲ್ಯವಲ್ಲ, ಬದಲಿಗೆ ನೀತಿಯ ಸೋಲು. ಜಿಡಿಪಿಯಲ್ಲಿ ಉತ್ಪಾದನೆ ವಲಯದ ಪಾಲು ಮುಗ್ಗರಿಸಿದೆ. ಹೀಗಾಗಿ ಇದು 'ಮೇಕ್ ಇನ್ ಇಂಡಿಯಾ'ದ ಹಿನ್ನಡೆಯಾಗಿದೆ. ಎರಿಕ್ ಎ ಹಾನುಶೆಕ್ ಎಂಬ ಇಕನಾಮಿಸ್ಟ್, ''ಭಾರತದ 85 ಪರ್ಸೆಂಟ್ ಶಾಲಾ ಮಕ್ಕಳಿಗೆ ಮೂಲಭೂತ ಸಾಕ್ಷರತೆ ಕೂಡ ಸಿಗುತ್ತಿಲ್ಲ'' ಎಂದೆಲ್ಲ ಬಣ್ಣಿಸಿದ್ದರು. 2023-24ರ ಏಪ್ರಿಲ್-ಜೂನ್ ತ್ರೈಮಾಸಿಕದಲ್ಲಿ ಭಾರತದ ಜಿಡಿಪಿ ಗ್ರೋತ್ ರೇಟ್ 7.8 ಪರ್ಸೆಂಟ್‌ಷ್ಟಿತ್ತು. ಆಗ ಅಸಮಾಧಾನ ತೋಡಿಕೊಂಡಿದ್ದ ಅಶೋಕ ಮೂಡಿಯವರು, ''ಜಿಡಿಪಿ ನಂಬರುಗಳು ತಪ್ಪಾಗಿದ್ದು, ಸರಿಯಾಗಿ ಲೆಕ್ಕ ಹಾಕಿದರೆ 4.5 ಪರ್ಸೆಂಟ್‌ಗೆ ಇಳಿಯಲಿದೆ'' ಎಂದು ಕುಟುಕಿದ್ದರು. ಜಿ-20 ಶೃಂಗಸಭೆಗೆ ಮುನ್ನ ಮೋದಿ ಸರಕಾರವು ಅಂತಾರಾಷ್ಟ್ರೀಯ ಸಮುದಾಯವನ್ನು ಪ್ರಭಾವಿತಗೊಳಿಸಲು 7.8 ಪರ್ಸೆಂಟ್ ಲೆಕ್ಕಾಚಾರವನ್ನು ಮುಂದಿಡುತ್ತಿದೆ. ಭಾರತವು ಜಗತ್ತಿನಲ್ಲೇ ವೇಗವಾಗಿ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರವಾಗಿದೆ ಎಂಬುದಾಗಿ ವೈಭವೀಕರಿಸಲಾಗುತ್ತಿದೆ. ಭಾರತವು ಅಂತಾರಾಷ್ಟ್ರೀಯ ದರ್ಜೆಯ ಉತ್ತಮ ಗುಣಮಟ್ಟದ ಪದ್ಧತಿಯಡಿಯಲ್ಲಿ ಜಿಡಿಪಿ ಲೆಕ್ಕ ಕೊಡುತ್ತಿಲ್ಲ ಎಂದು ಟೀಕಿಸಿದ್ದರು.

ಆದರೆ ಎಡಪಂಥೀಯ ಆರ್ಥಿಕ ಚಿಂತಕರ ಈ ಎಲ್ಲ ನರೇಟಿವ್‌ಗಳು ಸುಳ್ಳಾಗಿವೆ. ಭಾರತವು ಹೊಸ ವರ್ಷದ ಆರಂಭದಲ್ಲಿ ಸಿಹಿ ಸುದ್ದಿಯನ್ನು ಜಗತ್ತಿಗೆ ನೀಡಿದೆ. ನಮ್ಮ ದೇಶವು ಪ್ರಪಂಚದ ನಾಲ್ಕನೇ ಅತಿ ದೊಡ್ಡ ಆರ್ಥಿಕತೆಯಾಗಿ ಅಧಿಕೃತವಾಗಿ ಹೊರಹೊಮ್ಮಿದೆ. ಜಪಾನ್ ಅನ್ನು ಹಿಂದಿಕ್ಕಿದೆ. ಇನ್ನು ಮುಂದಿರುವುದು ಜರ್ಮನಿ, ಚೀನಾ ಮತ್ತು ಅಮೆರಿಕ ಮಾತ್ರ. ಸೈಕಲಾಜಿಕಲ್ ಆಗಿಯೂ ಇದು ಮಹತ್ವದ ಸಾಧನೆ. ಏಕೆಂದರೆ ಜರ್ಮನಿಯನ್ನೂ ಹಿಂದಿಕ್ಕಿ ವಿಶ್ವದ ಮೂರನೇ ಅತಿ ದೊಡ್ಡ ಇಕಾನಮಿಯಾಗುವ ದಿನಗಳೂ ದೂರವಿಲ್ಲ. 2025-26ರ ಜುಲೈ-ಸೆಪ್ಟೆಂಬರ್‌ನಲ್ಲಂತೂ ದೇಶದ ಜಿಡಿಪಿ 8.2 ಪರ್ಸೆಂಟ್ ಬೆಳೆದಿತ್ತು! ಈಗ ಬಹುಶಃ ಅಶೋಕ ಮೂಡಿಯವರ ಮೂಡೇ ಕೆಟ್ಟಿರಬಹುದು. ಏಳು ಪರ್ಸೆಂಟ್ ಗ್ರೋತ್ ಆಗಿದ್ದಾಗಲೇ ರಂಪ ಹೂಡಿದ ವ್ಯಕ್ತಿ ಈತ.

ಅಂದಹಾಗೆ, ಈಗ ಫ್ರಾನ್ಸ್ ಮತ್ತು ಬ್ರಿಟನ್ ಅನ್ನು ಸೇರಿಸಿದರೂ ಭಾರತಕ್ಕಿಂತ ಸಣ್ಣ ಆರ್ಥಿಕತೆಯಾಗುತ್ತದೆ. ಆಫ್ರಿಕ ಭೂಖಂಡದ ಐವತ್ತು ದೇಶಗಳ ಇಕಾನಮಿಗಿಂತಲೂ ಭಾರತದ್ದು ದೊಡ್ಡದು. ಜರ್ಮನಿಯು ಎಂಜಿನಿಯರಿಂಗ್ ಮತ್ತು ಆಟೋಮೊಬೈಲ್ ಉತ್ಪಾದನೆಯಲ್ಲಿ ಜಾಗತಿಕವಾಗಿ ಮುಂಚೂಣಿಯಲ್ಲಿದೆ. ಆದರೆ ಅದರಲ್ಲಿ ಹಿಂದಿದ್ದರೂ, ಭಾರತದ ಆರ್ಥಿಕತೆ ಈಗ ಜರ್ಮನಿಯ ಕದ ತಟ್ಟುತ್ತಿದೆ. ಹೊಸ ಕಾರ್ಖಾನೆಗಳು, ಸ್ಟಾರ್ಟಪ್‌ಗಳು, ಯುನಿಕಾರ್ನ್‌ಗಳು ಬೆಳೆಯುತ್ತಿವೆ. ಭಾರತದ ಸಾಧ್ಯತೆಗಳು ಅಗಾಧ. ಮುಂಬರುವ ದಶಕಗಳು ಭಾರತದ್ದೇ ಎನ್ನುವುದು ಎಂಥವರಿಗಾದರೂ ರೋಮಾಂಚನ ಮೂಡಿಸಬಲ್ಲದು. ಭಾರತವೀಗ 4.18 ಟ್ರಿಲಿಯನ್ ಡಾಲರ್ ಆರ್ಥಿಕತೆಯಾಗಿದೆ. ಮುಂದಿನ 2.5ರಿಂದ 3 ವರ್ಷಗಳಲ್ಲಿ 7.3 ಟ್ರಿಲಿಯನ್ ಡಾಲರ್ ಇಕಾನಮಿಯಾಗುವುದರೊಂದಿಗೆ ಜರ್ಮನಿಯನ್ನೂ ಹಿಂದಿಕ್ಕಿ ಪ್ರಪಂಚದಲ್ಲಿ ಮೂರನೇ ಸ್ಥಾನಕ್ಕೇರುವುದು ಬಹುತೇಕ ಖಚಿತವಾಗಿದೆ. ಭಾರತವು ಕಳೆದ ಹಲವಾರು ವರ್ಷಗಳಿಂದ ವೇಗವಾಗಿ ಬೆಳೆಯುತ್ತಿರುವ ಪ್ರಮುಖ ಆರ್ಥಿಕತೆಯಾಗಿದೆ. ಕಳೆದ ಹತ್ತು ವರ್ಷಗಳಲ್ಲಿ ಇಕಾನಮಿಯ ಗಾತ್ರ ಇಮ್ಮಡಿಯಾಗಿದೆ.

ಅಂತಾರಾಷ್ಟ್ರೀಯ ಹಣಕಾಸು ಸಂಸ್ಥೆ ಐಎಂಎಫ್ ಪ್ರಕಾರ ಭಾರತವು 2028-29ರ ವೇಳೆಗೆ 5 ಟ್ರಿಲಿಯನ್ ಡಾಲರ್ ಆರ್ಥಿಕತೆಯಾಗಲಿದೆ. ಮೊದಲ ಟ್ರಿಲಿಯನ್ ಡಾಲರ್‌ಗೆ ದೇಶ ಬರೋಬ್ಬರಿ 60 ವರ್ಷಗಳನ್ನು ತೆಗೆದುಕೊಂಡಿತ್ತು. ಆದರೆ ಎರಡನೇ ಟ್ರಿಲಿಯನ್‌ಗೆ 7 ವರ್ಷ ಮತ್ತು ಮೂರನೇ ಟ್ರಿಲಿಯನ್ ಸಾಧನೆಯು ಕೋವಿಡ್ ಬಿಕ್ಕಟ್ಟಿನ ನಡುವೆಯೂ 7 ವರ್ಷದಲ್ಲಿ ಸಾಧ್ಯವಾಗಿತ್ತು. ನಾಲ್ಕನೇ ಟ್ರಿಲಿಯನ್ ಕೇವಲ 4 ವರ್ಷದಲ್ಲಾಗಿದೆ. ಮುಂದಿನ 4 ವರ್ಷದಲ್ಲಿ 5 ಟ್ರಿಲಿಯನ್ ನಿರೀಕ್ಷಿಸಲಾಗಿದೆ. ಹೀಗೆ ವೇಗದ ಪ್ರಗತಿಯನ್ನು ಕಾಣಬಹುದು.

ಜಾಗತಿಕ ತಲ್ಲಣಗಳು, ಆಘಾತಗಳ ನಡುವೆಯೂ, ಭಾರತವು ಸ್ಥಿರವಾಗಿ 'ಹೈ-ಗ್ರೋತ್' ದಾಖಲಿಸುತ್ತಲೇ ಇದೆ. 1990 ಮತ್ತು 2023ರ ನಡುವೆ ದೇಶದ ಸರಾಸರಿ ವಾರ್ಷಿಕ ಜಿಡಿಪಿ ಬೆಳವಣಿಗೆಯ ದರ 6.7 ಪರ್ಸೆಂಟ್ ಇತ್ತು. ಇದು ಅಭಿವೃದ್ಧಿ ಹೊಂದಿರುವ ಹಲವಾರು ದೇಶಗಳಿಗಿಂತಲೂ ಹೆಚ್ಚು. ಜಾಗತಿಕ ಆರ್ಥಿಕ ಹಿಂಜರಿತ, ಕೋವಿಡ್-19 ಬಿಕ್ಕಟ್ಟು, ರಷ್ಯಾ-ಉಕ್ರೇನ್ ಯುದ್ಧ, ಮಧ್ಯಪ್ರಾಚ್ಯ ಬಿಕ್ಕಟ್ಟು, ಯುರೋಪ್‌ನ ಮಂದಗತಿ, ಅಮೆರಿಕ-ಚೀನಾ ಸಂಘರ್ಷ, ಟ್ರಂಪ್ ಸುಂಕ ಸಮರ, ಭಾರತ-ಚೀನಾ-ಪಾಕಿಸ್ತಾನ ಗಡಿ ವಿವಾದ, ದುರ್ಬಲ ನೆರೆಹೊರೆ ಮೊದಲಾದ ಸವಾಲುಗಳ ನಡುವೆಯೂ ಜಗತ್ತಿನಲ್ಲೇ ವೇಗವಾಗಿ ಅಭಿವೃದ್ಧಿ ಹೊಂದಿರುವ ಪ್ರಮುಖ ಆರ್ಥಿಕತೆಯಾಗಿರುವುದು ಸಣ್ಣ ಸಾಧನೆಯಲ್ಲ. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಭಾರತದ ವಿರುದ್ಧ 50 ಪರ್ಸೆಂಟ್ ಸುಂಕ ಜಡಿದರೂ, ಡೋಂಟ್ ಕೇರ್ ಎನ್ನದೆ ದೇಶ ಕಳೆದ ನವೆಂಬರ್‌ನಲ್ಲಿ ರಫ್ತಿನಲ್ಲಿ 22 ಪರ್ಸೆಂಟ್ ಏರಿಕೆ ದಾಖಲಿಸಿದೆ. ಜುಲೈ-ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಶೇಕಡಾ 8.2 ಜಿಡಿಪಿ ಬೆಳವಣಿಗೆಯಾಗಿದೆ. ಹೊಸ ಟಾರಿಫ್ ಹೊರತಾಗಿಯೂ ನವೆಂಬರ್‌ನಲ್ಲಿ ಭಾರತವು ಅಮೆರಿಕಕ್ಕೆ 22 ಪರ್ಸೆಂಟ್ ರಫ್ತು ಮಾಡಿತ್ತು. ಆದರೆ ಚೀನಾ, ಸ್ಪೇನ್, ಯುನೈಟೆಡ್ ಅರಬ್ ಎಮಿರೇಟ್ಸ್ ಮತ್ತು ತಾಂಜಾನಿಯಾಗೆ ರಫ್ತು ಹೆಚ್ಚಳವಾಗಿದೆ. ಹೀಗಾಗಿ ಟ್ರಂಪ್ ಸುಂಕಾಸ್ತ್ರ ದುರ್ಬಲವಾಗಿದೆ.

ಭಾರತವು ಸ್ವತಂತ್ರವಾದ ವೇಳೆಗೆ ಬ್ರಿಟಿಷರು ಸಂಪತ್ತನ್ನು ಕೊಳ್ಳೆಹೊಡೆದು ಹೋಗಿದ್ದರು. ದೇಶವು ತೃತೀಯ ಜಗತ್ತಿನ ಬಡ ರಾಷ್ಟ್ರವಾಗಿ ಗುರುತಿಸಿಕೊಂಡಿತ್ತು. ಬ್ರಿಟಿಷರ ದಬ್ಬಾಳಿಕೆ ಕಂಡು ಬಂಡವಾಳಶಾಹಿ ಅಥವಾ ಕ್ಯಾಪಿಟಲಿಸಂ ವಿರುದ್ಧ ಭಾರತೀಯ ಪ್ರಜ್ಞೆ ನೆಲೆನಿಂತಿತ್ತು. ಕ್ಯಾಪಿಟಲಿಸಂ ಬಹಳ ಕೆಟ್ಟದ್ದು ಎಂಬ ಭಾವನೆಯನ್ನು ಸಮಾಜವಾದಿ ರಾಜಕಾರಣಿಗಳೂ ಜನಮಾನಸದಲ್ಲಿ ಪಡಿ ಮೂಡಿಸಿದರು. ಆದರೆ ಇದು ಪ್ರಯೋಜನಕ್ಕೆ ಬರಲಿಲ್ಲ. ದೇಶ ಮತ್ತಷ್ಟು ಆರ್ಥಿಕ ಪತನಕ್ಕೆ ಸಾಕ್ಷಿಯಾಯಿತು. 1991ರಲ್ಲಿ ಅಂದಿನ ಪ್ರಧಾನಿ ಪಿ.ವಿ. ನರಸಿಂಹರಾವ್ ಮತ್ತು ಹಣಕಾಸು ಸಚಿವ ಮನಮೋಹನ್ ಸಿಂಗ್ ಅವರು ಐತಿಹಾಸಿಕ ಉದಾರೀಕರಣ ನೀತಿಯನ್ನು ಜಾರಿಗೊಳಿಸಿದರು. ಲೈಸೆನ್ಸ್ ರಾಜ್ ವ್ಯವಸ್ಥೆಯ ಹಿಡಿತ ಸಡಿಲವಾಯಿತು. ಒಂದೊಂದೇ ಕ್ಷೇತ್ರಗಳು ಖಾಸಗೀಕರಣಕ್ಕೆ ಮುಕ್ತವಾದವು. ಉದಾರೀಕರಣಕ್ಕೆ ಒಡ್ಡಿಕೊಂಡ ಬಳಿಕ ಜಿಡಿಪಿ ದರವೂ ಏರತೊಡಗಿತು. ತಲಾ ಆದಾಯವೂ ವೃದ್ಧಿಸಿತು. ಆದ್ದರಿಂದ ಭಾರತದ ಆರ್ಥಿಕ ಬೆಳವಣಿಗೆಯ ಹಿಂದೆ ಮೂರೂವರೆ ದಶಕಗಳ ಇತಿಹಾಸವಿದೆ ಎಂಬ ಸೂಕ್ಷ್ಮವನ್ನು ಅರ್ಥಮಾಡಿಕೊಳ್ಳಬೇಕು. ಆಗ ಯಾರೂ ತಮ್ಮ ಮೂಗಿನ ನೇರಕ್ಕೆ ಜಿಡಿಪಿ ಬೆಳವಣಿಗೆಯನ್ನು ಅಲ್ಲಗಳೆಯುವುದಿಲ್ಲ.

ಭಾರತದ ತಲಾ ಆದಾಯವೂ ಬೆಳೆಯಬೇಕು. ಜನಜೀವನದ ಗುಣಮಟ್ಟ, ನಾಗರಿಕ ಪ್ರಜ್ಞೆ, ಮೂಲಸೌಕರ್ಯ ಅಭಿವೃದ್ಧಿ ಆಗಬೇಕಾಗಿದೆ. ಆದರೆ ತಲಾ ಆದಾಯ ಹೆಚ್ಚಲೂ ಜಿಡಿಪಿ ವೇಗವಾಗಿ ಬೆಳೆಯಬೇಕು. ಹಾಗಂತ ಆರ್ಥಿಕ ಬೆಳವಣಿಗೆಯನ್ನೂ ಹೇಗೆ ನಿರಾಕರಿಸುತ್ತೀರಿ? ಅದಕ್ಕಿಂತ ಅದರ ಲಾಭವನ್ನು ಪಡೆಯುವುದು ಉತ್ತಮವಲ್ಲವೇ? ಭಾರತದ್ದು ವೈವಿಧ್ಯಮಯವಾದ ಆರ್ಥಿಕತೆ. ಸೇವೆ-ರಫ್ತು-ಉತ್ಪಾದನೆಯಲ್ಲಿ ಯಾವುದೋ ಒಂದನ್ನೇ ಅವಲಂಬಿಸಿಲ್ಲ, ಮಿಕ್ಸೆಡ್ ಇಕಾನಮಿ ಇದಾಗಿದೆ. ವಿಶಾಲವಾದ ಆಂತರಿಕ ಮಾರುಕಟ್ಟೆಯೇ ಭಾರತದ ದೊಡ್ಡ ಶಕ್ತಿ. ಇದು ಯಾವುದೇ ಬಾಹ್ಯ ಆಘಾತಗಳಿಂದ ಭಾರತವನ್ನು ಸಂರಕ್ಷಿಸುತ್ತದೆ.

ಕೊನೆಯದಾಗಿ, ಭಾರತೀಯರ ಮನೆಗಳಲ್ಲಿ 25 ಸಾವಿರ ಟನ್ ಬಂಗಾರವಿದೆ. ಅದನ್ನು 'ಆಪದ್ಧನ' ಎಂದೇ ಹಿಂದಿನಿಂದಲೂ ಕರೆಯುತ್ತಿದ್ದರು. ಇದು ಸಮಕಾಲೀನ ಯುಗದಲ್ಲಿ ಸಾಬೀತಾಗಿದೆ. ನಾನಾ ರಾಷ್ಟ್ರಗಳ ಸೆಂಟ್ರಲ್ ಬ್ಯಾಂಕ್‌ಗಳೂ ಬಂಗಾರವನ್ನು ಖರೀದಿಸುತ್ತಿವೆ. ಹಣದುಬ್ಬರ, ಅನಿಶ್ಚಿತತೆಯ ಎದುರು, ಸಂಪತ್ತಿನ ಮೌಲ್ಯ ರಕ್ಷಣೆಯಲ್ಲಿ ಚಿನ್ನ ನಿರ್ಣಾಯಕ ಪಾತ್ರ ವಹಿಸುತ್ತಿದೆ. ಆದರ ಅರಿವು ಪ್ರಾಚೀನ ಭಾರತೀಯರಿಗೆ ಮೊದಲೇ ಇತ್ತು!

ಭಟ್ಟರ್ ಸ್ಕಾಚ್

- **ಅಮಾಸೆ ಸುಬ್ಬು, ಮೈಸೂರು**
ಭಟ್ರೇ, 'ಭಟ್ಟರ್ ಸ್ಕಾಚ್' ಬಗೆಗಿನ ನಿಮ್ಮ ಅಂಕಣ ಓದಿ ತಾಳಮದ್ದಳೆ ಅರ್ಥಧಾರಿಗಳಿಗೆ ಅರ್ಥವಾಗಿರಬಹುದು ಅಂತೀರಾ?
– **ಅನರ್ಥ ಮಾಡಿಕೊಳ್ಳೋದು ಹೇಗೆ ಎಂದು ಕೆಲವರು ಯೋಚಿಸುತ್ತಿದ್ದಾರಂತೆ!**

- **ಪುಷ್ಪಾ ಭಾಸ್ಕರ, ಉಡುಪಿ**
ಭಟ್ರೇ, ಭಾಗವತರು ಪದ ಹಾಡೋದು ನಿಲ್ಲಿಸಿದರೂ ಅರ್ಥಧಾರಿಗಳು ಮಾತು ನಿಲ್ಲಿಸೋದಿಲ್ವಲ್ಲ ಯಾಕೆ?
– **ಭಾಗವತರಿಗೆ ಗಂಟಲು ನೋವಾದರೆ ಸುಮ್ಮನಾಗಬಹುದು, ಆದರೆ ಅರ್ಥಧಾರಿಗಳಿಗೆ ಗಂಟಲು ಹೋದರೂ 'ಹಠ' ಇನ್ನು ಬಾಕಿ ಇರುತ್ತೆ!**

- **ಮಲ್ಲೆ ಪ್ರಕಾಶ, (ಇಮೇಲ್ ಮೂಲಕ)**
ಭಟ್ರೇ, ಅರ್ಥಧಾರಿಗಳಿಗೂ ರಾಜಕೀಯದವರಿಗೂ ಇರುವ ಸಾಮ್ಯತೆ ಏನು?
– **ಇಬ್ಬರೂ ಕುಳಿತಲ್ಲೇ ಇಡೀ ಪ್ರಪಂಚವನ್ನು ತಿದ್ದುತ್ತೇವೆ ಅಂತ ಗಂಟೆಗಟ್ಟಲೆ ಭಾಷಣ ಮಾಡ್ತಾರೆ; ಆದ್ರೆ ಎದ್ದು ಹೋದ ಮೇಲೆ ಪರಿಸ್ಥಿತಿ ಮೊದಲಿಗಿಂತ ಜಾಸ್ತಿ ಕೆಟ್ಟಿರುತ್ತೆ!**

- **ಸದಾಶಿವ ಉಚ್ಚಿಲ, (ಇಮೇಲ್ ಮೂಲಕ)**
ಭಟ್ರೇ, ಗಂಡನಿಗೂ ಹೆಂಡತಿಗೂ ಸಂಭಾಷಣೆ ನಡೆಯುವಾಗ 'ಮೌನ' ಅನ್ನೋದು ಯಾರಿಗೆ ವರದಾನ?
– **ಹೆಂಡತಿಗೆ ಅದು ಮುಂದಿನ ದೊಡ್ಡ ವಾಗ್ವಾದಕ್ಕೆ ತಯಾರಿ ನಡೆಸುವ ವಿರಾಮವಾದರೆ, ಗಂಡನಿಗೆ ಅದು ಜೀವ ಉಳಿಸಿಕೊಳ್ಳುವ ಏಕೈಕ ಮಾರ್ಗ!**

- **ಜಗದೀಶ ನಾಯಕ, ಚಿಕ್ಕಮಗಳೂರು**
ಭಟ್ರೇ, ಹೆಂಡತಿ ಮಾತನಾಡುವಾಗ ಗಂಡ ಯಾಕೆ ಯಾವಾಗಲೂ ತಲೆ ಅಲ್ಲಾಡಿಸುತ್ತಿರುತ್ತಾನೆ?
– **ಅವನು ಒಪ್ಪಿಗೆ ನೀಡುತ್ತಿದ್ದಾನೆ ಅಂತಲ್ಲ, ಕಣ್ಣು ಮುಚ್ಚಿ ನಿದ್ದೆ ಹೋಗುತ್ತಿಲ್ಲ ಎಂದು ತನಗೆ ತಾನೇ ಸಾಬೀತುಪಡಿಸಿಕೊಳ್ಳಬೇಕಲ್ಲ?!**

- **ಕೆ. ಶಂಕರ ಗುತ್ತಿ, ದಾವಣಗೆರೆ**
ಭಟ್ರೇ, ಗಂಡನಿಗೆ ತನ್ನ ಶಕ್ತಿ ಪ್ರದರ್ಶನ ಮಾಡಲು ಇರುವ ಏಕೈಕ ಅವಕಾಶ ಯಾವುದು?
– **ಹೆಂಡತಿ ಕೈಗೆ ಸಿಗದ ಜಾಮೂನು ಡಬ್ಬದ ಮುಚ್ಚಳವನ್ನು ಕಷ್ಟಪಟ್ಟು ತೆಗೆದುಕೊಡುವುದು!**

- **ರಾಜು ಪತ್ತಾರ, ಹುಬ್ಬಳ್ಳಿ**
ಭಟ್ರೇ, ಮದುವೆಯಾದ ಮೇಲೆ ಗಂಡನಿಗೆ ಅನ್ವಯಿಸುವ ಗಾದೆ ಯಾವುದು?
– **'ಮಾತು ಬೆಳ್ಳಿ, ಮೌನ ಬಂಗಾರ'!**

ಆಂಗ್ಲರು ಇದಕ್ಕೆ ಇಟ್ಟಿದ್ದಾರೆ ಆಕರ್ಷಕ ಹೆಸರು!

ಶಶಾಂಕಣ
ಶಶಿಧರ ಹಾಲಾಡಿ
vveditoped@gmail.com

ಬೃಹದಾಕಾರ, ನೇರವಾಗಿ ಅರವತ್ತರಿಂದ ಎಂಬತ್ತು ಅಡಿ ಎತ್ತರ ಬೆಳೆಯುವ ಕಪ್ಪನೆಯ ಕಾಂಡ, ತುದಿಯಲ್ಲಿ ಭಾರಿ ಗಾತ್ರದ ಹಸಿರು ಎಲೆ; ದೂರದಿಂದ ಕಂಡಾಗ, ಹಳ್ಳಿಯ ಕಾವಲು ಕಾಯುವ ದೈತ್ಯ ಮರಗಳಿವೆ ಎಂಬ ಭಾವನೆಯೂ ಮೂಡಬಹುದು! ನಮ್ಮೂರಲ್ಲಿ ಇದನ್ನು ಹಣೆ ಮರ ಎನ್ನುವರು. ಕನ್ನಡದಲ್ಲಿ ತಾಳೆ ಮರ ಎಂಬ ಹೆಸರು ಸ್ಥಿರವಾಗಿದೆ. ಇಂಗ್ಲಿಷರು ಮಾತ್ರ ಇದಕ್ಕೆ ಬಹು ಸುಂದರ ಹೆಸರು ಇಟ್ಟಿದ್ದಾರೆ 'ಐಸ್ ಆ್ಯಪಲ್!' ಥಂಡಾ ಸೇಬು! ನಿಜಕ್ಕೂ ಇದು ತಂಪಾದ ಮರ. ನೆರಳಿನ ತಂಪಿಗಿಂತಲೂ, ಇದರ ಹಣ್ಣನ್ನು ಸೇವಿಸಿದರೆ, ದೇಹಕ್ಕೆ ತಂಪು; ನೋಡಲು ಐಸ್ ರೀತಿ ಕಾಣಿಸುವುದರಿಂದಾಗಿ, ಇದನ್ನು ಆಂಗ್ಲರು ಐಸ್ ಆ್ಯಪಲ್ ಎಂದು ಕರೆದಿರಬೇಕು!

ಹಣೆ ಮರಗಳು ನಮ್ಮೂರಿನ ಅವಿಭಾಜ್ಯ ಅಂಗಗಳಾಗಿದ್ದವು. ಈಚಿನ ದಿನಗಳಲ್ಲಿ ಇವುಗಳ ಸಂಖ್ಯೆ ನಿಧಾನವಾಗಿ ಕಡಿಮೆಯಾಗುತ್ತಿರುವುದು ನಿಜ. ಅದಕ್ಕೆ ಕಾರಣವೆಂದರೆ, ಇಂದಿನವರಲ್ಲಿ ಇದರ ಮೇಲಿರುವ ನಿರ್ಲಕ್ಷ್ಯ. ಬಾಲ್ಯದಲ್ಲಿ ಈ ಹಣೆ ಮರವು ಹಲವು ಕಾರಣಗಳಿಗಾಗಿ ನಮಗೆಲ್ಲಾ ಹೆಚ್ಚು ಪರಿಚಿತ. 'ಹಣೆ ಕಣ್ಣು' ಎಂಬ ರುಚಿಕರ ಹಣ್ಣುಗಳನ್ನು ನೀಡುವ ಹಣೆ ಮರಗಳು ಬಹುದೂರದಿಂದಲೇ ಕಾಣಿಸುವಂಥ ನಿಲುವಿನವುಗಳು. ನಮ್ಮೂರಿನಲ್ಲಿ ಮಾತ್ರವಲ್ಲ, ನಮ್ಮ ರಾಜ್ಯದಾದ್ಯಂತ ಹಲವು ಪ್ರದೇಶಗಳಲ್ಲಿ ಹಣೆ ಮರಗಳ ಸಾಲುಗಳೇ ಬೆಳೆದಿರುತ್ತಿದ್ದವು. ಭಾರಿ ಎತ್ತರ ಬೆಳೆಯುವ ಆ ಮರದ ದೊಡ್ಡ ಗಾತ್ರದ ಗರಿಗಳು ಬೇಸಗೆಯಲ್ಲಿ ಗಾಳಿ ಬೀಸಿದಾಗ ಮಾಡುವ 'ಬರಬರ' ಸದ್ದು ಮಕ್ಕಳಿಗೆ ಭಯ ಹುಟ್ಟಿಸುವಂಥದ್ದು.

ತಾಳೆ ಮರ ಎಂದು ಈಗ ಹೇಳಿದರೆ, ಮೊದಲಿಗೆ ನೆನಪಾಗುವುದು ಪಾಮ್ ಆಯಿಲ್! ಅದೇ, ನಮ್ಮೆಲ್ಲರ ಆರೋಗ್ಯವನ್ನು ದಿನನಿತ್ಯ ನಿಧಾನವಾಗಿ ತಿಂದುಹಾಕುತ್ತಿರುವ ಎಣ್ಣೆ; ಬಿಸ್ಕಿಟ್, ಬೇಕರಿ ತಿನಿಸು, ಚಾಕೊಲೇಟ್ ಮೊದಲಾದ ಎಲ್ಲಾ ತಿನಿಸುಗಳಲ್ಲಿ ಪಾಮ್ ಆಯಿಲ್ ಹೇರಳವಾಗಿದೆಯಂತೆ! ಆದರೆ, ನಮ್ಮೂರಿನ ಹಣೆ ಮರ ಅಥವಾ ತಾಳೆ ಮರ ಎಂದಾಗ, ಮೊದಲಿಗೆ ನೆನಪಾಗುವುದೇ ಅದು ನೀಡುವ ತಂಪಾದ ಹಣ್ಣುಗಳು.

ಇದನ್ನು ಬೇರೆ ಬೇರೆ ಹೆಸರಿನಿಂದಲೂ ಗುರುತಿಸುವುದುಂಟು. ಬೆಂಗಳೂರು ಸೀಮೆಯವರಿಗೆ ಇಂದು 'ತಾಳೆ ಮರದ ಹಣ್ಣು' ಅಥವಾ 'ಹಣೆ ಕಣ್ಣು' ಎಂದರೆ ಸುಲಭವಾಗಿ ಅರ್ಥವಾಗುವುದಿಲ್ಲ; ಬದಲಿಗೆ 'ಅದೇ ಕಣ್ರಿ, ತಾಟಿ ನಿಂಗು' ಎಂದರೆ ಕಣ್ಣಲ್ಲಿ ಹೊಳಪು ಮೂಡಿಸಿಕೊಂಡು, 'ಹೌದು, ಅದರ ಹಣ್ಣು ಬಹಳ ರುಚಿ' ಎಂದಾರು! ಬೆಂಗಳೂರು, ಮೈಸೂರು ಮೊದಲಾದ ಕಡೆ ತಮಿಳುನಾಡಿನಿಂದ ತರಿಸಿದ 'ಹಣೆ ಕಣ್ಣು'ಗಳನ್ನು ಮಾರುತ್ತಾರೆ. ಆ ಹಣ್ಣಿನ ಜತೆಯೇ, ಅಲ್ಲಿನ ಹೆಸರನ್ನೂ ಇಲ್ಲಿಗೆ ವರ್ಗಾಯಿಸಿರುವುದರಿಂದಲೇ, ಬೆಂಗಳೂರಿನಲ್ಲಿ ಇಂದು 'ತಾಟಿ ನಿಂಗು' ಎಂಬ ಹೆಸರಿನಿಂದ ತಾಳೆ ಹಣ್ಣು ಪ್ರಸಿದ್ಧ!

ನಮ್ಮ ಮನೆಯ ಹಿಂಭಾಗದಲ್ಲೇ ಎರಡು ಬೃಹದಾಕಾರದ ಹಣೆ ಮರಗಳಿದ್ದವು. ಅವುಗಳ ಎತ್ತರ, ದಪ್ಪನೆಯ ಕಪ್ಪನೆಯ ಆ ಕಾಂಡ, ತುದಿಯಲ್ಲಿ ಚೂಪಾಗಿ ಅರಳಿಕೊಂಡಿರುವ ದೊಡ್ಡ ದೊಡ್ಡ ಎಲೆಗಳು– ಎಲ್ಲವೂ ಮಕ್ಕಳಲ್ಲಿ ದಿಗಿಲು ಹುಟ್ಟಿಸುವಂಥವುಗಳೇ ಸರಿ. ಜತೆಗೆ 'ರಾತ್ರಿ ಹೊತ್ತು ಬೆಳದಿಂಗಳಿದ್ದರೆ, ಹಣೆ ಮರದ ತುದಿಯಲ್ಲಿ ಒಂದು ಭೂತ ಹಕ್ಕಿ ಬಂದು ಕುಳಿತುಕೊಂಡು, ಕೂಗುತ್ತಿರುತ್ತೆ' ಎಂದು ನಮ್ಮ ಅಮ್ಮಮ್ಮ ಆಗಾಗ ಹೇಳುತ್ತಿದ್ದು, ಹಣೆ ಮರಗಳ ಕುರಿತು ಒಂದು ನಿಗೂಢ ಭಯಮಿಶ್ರಿತ ಪ್ರಭಾವಳಿಯನ್ನೇ ಸೃಷ್ಟಿಸಿತ್ತು. ನಮ್ಮ ಮನೆ ಸುತ್ತಲೂ ಹರಡಿದ್ದ ಆರೆಂಟು ತೆಂಗಿನ ಮರ, ಎರಡು ತೇಗದ ಮರ, ದಟ್ಟವಾಗಿ ಎಲೆ ಬಿಟ್ಟುಕೊಂಡಿದ್ದ ಹಲಸಿನ ಮರ, ಅಲ್ಲಲ್ಲಿ ಬೆಳೆದಿದ್ದ ಕೆಲವು ಅಡಕೆ ಮರಗಳು– ಇವೆಲ್ಲಕ್ಕಿಂತಲೂ 20–30 ಅಡಿ ಎತ್ತರವಿದ್ದ, ಭವ್ಯ ನಿಲುವಿನ ಆ ಎರಡು ಹಣೆಮರಗಳು, ಮಕ್ಕಳಲ್ಲಿ ಭಯ–ಭಕ್ತಿ–ಗೌರವ ಮೂಡಿಸಿದ್ದರೆ, ಅದರಲ್ಲಿ ಅಚ್ಚರಿಯೇನಿದೆ!

ಆ ಎರಡು ಬೃಹತ್ ಹಣೆ ಮರಗಳು ಪ್ರತಿವರ್ಷ ಶಿಸ್ತಾಗಿ ನೂರಾರು ತಾಳೆ ಹಣ್ಣುಗಳನ್ನು ಬಿಡುತ್ತಿದ್ದರೂ, ಆ ಮರಗಳ ಎತ್ತರಕ್ಕೆ ಹೆದರಿ, ಯಾರೂ ಅವುಗಳನ್ನೇರುವ ಸಾಹಸಕ್ಕೆ ಕೈ ಹಾಕುತ್ತಿರಲಿಲ್ಲ. ಕಡಿಮೆ ಎತ್ತರದ ಹಲವು ತಾಳೆ ಮರಗಳು ನಮ್ಮ ಫಾಸಲೆಯಲ್ಲಿದ್ದು, ಅವುಗಳಿಂದ ಹಣ್ಣನ್ನು ಕೆಲವರು ಕೀಳುತ್ತಿದ್ದರು. ನಾನು ಮೊದಲ ಬಾರಿ 'ಹಣೆ ಕಣ್ಣ'ನ್ನು ತಿಂದದ್ದು ನಾಲ್ಕನೆಯ ತರಗತಿಯಲ್ಲಿದ್ದಾಗ. ದಟ್ಟ ಕಪ್ಪುಮಿಶ್ರಿತ, ತೆಂಗಿನಕಾಯಿ ಗಾತ್ರದ ಆ ಕಾಯಿಗಳ ಕವಚವನ್ನು ಕೆತ್ತಿದರೆ, ಒಳಗೆ ಮೂರು 'ಕಣ್ಣು'ಗಳು. ನಸು ಬೆಳ್ಳಿಯ ಬಣ್ಣ, ಅರೆ ಪಾರದರ್ಶಕ, ಮಿದುವಾದ ದುಂಡಗಿನ ಹಣ್ಣುಗಳು, ಒಳಗೆ ಸಿಹಿಸಿಹಿ ನೀರು ಜಿನುಗುವ ಪರಿ ವಿಶಿಷ್ಟ. ಮೇಲ್ನೋಟಕ್ಕೆ ಐಸ್ ಅನ್ನು ಹೋಲುವ ಸ್ವರೂಪ. ಬಿಸಿಲಿನ ದಿನಗಳಲ್ಲಿ ಈ ಹಣ್ಣುಗಳನ್ನು ತಿಂದರೆ, ಬಾಯಾರಿಕೆ ಮಾಯ; ಜತೆಗೆ ಸಾಕಷ್ಟು ಲವಣಾಂಶಗಳು ದಕ್ಕಿ, ದೇಹಕ್ಕೆ ಶಕ್ತಿ. ಎಳೆಯ ಹಣೆ ಕಣ್ಣುಗಳನ್ನು ತಿನ್ನುವುದೆಂದರೆ, ಮಕ್ಕಳಿಗೆ ತುಂಬಾ ಇಷ್ಟ. ರಥೋತ್ಸವ ಮತ್ತು ಜಾತ್ರೆಗಳಲ್ಲಿ ಅವುಗಳನ್ನು ಮಾರುತ್ತಿದ್ದರು. ಹಣ್ಣುಗಳು ತುಸು ಬಲಿತರೆ, ಗಟ್ಟಿಯಾಗುತ್ತಾ ಹೋಗುತ್ತದೆ, ರುಚಿಯೂ ಕಡಿಮೆ.

ಹಣೆ ಮರಗಳು ಹಣ್ಣು ನೀಡುವುದರ ಜತೆಗೇ, ಹಿಂದಿನ ದಶಕಗಳಲ್ಲಿ, ಬೇರೊಂದಕ್ಕೂ ಉಪಯೋಗವಾಗುತ್ತಿದ್ದವು. ಅದೇ, ಪಾನೀಯ ತಯಾರಿಕೆಗಾಗಿ! ನಮ್ಮ ಹಳ್ಳಿ ಮನೆಯ ಹಿಂದೆ ಇದ್ದ ಆ ಎರಡು ಭಾರಿ ಎತ್ತರದ ಹಣೆ ಮರದ ಕಾಂಡದುದ್ದಕ್ಕೂ ಅರ್ಧ ಅಡಿ ಅಗಲದ ಮೆಟ್ಟಿಲುಗಳನ್ನು ಕೆತ್ತಿದ ಗುರುತುಗಳಿದ್ದವು. ಎಂಬತ್ತು ಅಡಿ ಎತ್ತರವಿದ್ದ ಆ ಕಾಂಡದ ಮೇಲೆ, ಸುಮಾರು ನಲವತ್ತು ಅಡಿ ಎತ್ತರದ ತನಕ, ಯಾರೋ ಕತ್ತಿಯಿಂದ ಮೆಟ್ಟಿಲುಗಳನ್ನು ಕೆತ್ತಿದ್ದು ದೂರದಿಂದಲೂ ಸ್ಪಷ್ಟವಾಗಿ ಕಾಣಿಸುತ್ತಿತ್ತು. ಹಲವು ವರ್ಷ ಹಳೆಯದಾದ ಆ ಗುರುತುಗಳು ತುಸು ಮಾಸಿದ್ದರೂ, ಮರ ಹತ್ತುವಲ್ಲಿ ನುರಿತವರು ಅದನ್ನು ಆಧರಿಸಿ ಮರವನ್ನು ಏರಬಹುದಿತ್ತು. ಆದರೆ ಆ ಗುರುತುಗಳು ನಲವತ್ತು ಅಡಿಗಳಿಗಿಂತ ಮೇಲ್ಭಾಗದಲ್ಲಿ ಇರಲಿಲ್ಲ. ಆ ನಂತರ, ಯಾವುದೇ ಗಚ್ಚಿನ ಗುರುತಿಲ್ಲದೇ ಆ ಕಪ್ಪನೆಯ, ದಪ್ಪನೆಯ ಕಾಂಡಗಳು ಮೇಲಕ್ಕೇರಿ ಹೋಗಿದ್ದವು. ಮರ ಹತ್ತಲು ಅನುಕೂಲವಾಗುವಂತೆ ಆ ಗುರುತುಗಳನ್ನು ಯಾರು, ಏಕೆ ಮತ್ತು ಯಾವಾಗ ಮಾಡಿದ್ದರು? ಇಂಥ ಪ್ರಶ್ನೆಗಳಿಗೆ ನಮ್ಮ ಅಮ್ಮಮ್ಮನ ಬಳಿ ಉತ್ತರ ಸಿದ್ಧವಿತ್ತು.

'ಅಷ್ಟೂ ಗೊತ್ತಾಗುವುದಿಲ್ಲವೆ? ಹಣೆ ಮರದಿಂದ ಕಳ್ಳು (ಶೇಂದಿ) ತೆಗೆಯುವವರು ಮಾಡಿದ ಗುರುತು ಅದು. ಪ್ರತಿದಿನ ಬೆಳಗ್ಗೆ ಮರ ಏರಿ, ಪ್ರತಿ ಮರದಿಂದಲೂ ಕಳ್ಳನ್ನು ಸಂಗ್ರಹಿಸುತ್ತಿದ್ದರು. ಅದಕ್ಕೆ ನಮ್ಮ ಹಳ್ಳಿಯಲ್ಲಿ ಸಾಕಷ್ಟು ಬೇಡಿಕೆಯೂ ಇತ್ತು'.

'ಆ ರೀತಿ ಕಳ್ಳು ಸಂಗ್ರಹಿಸುತ್ತಿದ್ದುದು ಯಾರು?'

'ಕಳ್ಳು ಸಂಗ್ರಹಿಸುವ ಕೆಲವು ಕುಟುಂಬಗಳು ನಮ್ಮೂರಿನಲ್ಲಿದ್ದವು. ಈಗ ಇಲ್ಲ ಅಷ್ಟೆ. ಆ ಕಳ್ಳನ್ನು ಮಾರಾಟ ಮಾಡುತ್ತಿದ್ದರು, ಹಳ್ಳಿಯ ಕೆಲವರು ಕುಡಿಯುತ್ತಿದ್ದರು'.

'ಈಗ ಯಾಕೆ ಅದನ್ನು ಸಂಗ್ರಹಿಸುವುದಿಲ್ಲ? ನಲವತ್ತು ಅಡಿಗಳಿಗಿಂತ ಮೇಲ್ಭಾಗದ ಮರದ ಕಾಂಡದ ಮೇಲೆ ಯಾವುದೇ ಗುರುತುಗಳಿಲ್ಲವಲ್ಲ?'

'ಹೌದು, ಆ ಮೇಲೆ ಕಳ್ಳು ತೆಗೆಯುವುದನ್ನು ನಿಲ್ಲಿಸಿದರು'

'ಯಾಕೆ?'

'ಮರ ಎತ್ತರವಾದ ನಂತರ, ಮರ ಹತ್ತಲು ಹೆದರಿಕೆ ಆಗಿರಬೇಕು'. ಇದು ಅಮ್ಮಮ್ಮನ ಉತ್ತರ.

ಆದರೆ ಆ ಕೊನೆಯ ಉತ್ತರ ಭಾಗಶಃ ನಿಜವಾಗಿರಬಹುದು; ಕಳ್ಳನ್ನು ಸಂಗ್ರಹಿಸುವ ಕೆಲಸ ನಿಂತು ಹೋಗಲು ಇತರ ಹಲವು ಸಾಮಾಜಿಕ, ರಾಜಕೀಯ ಕಾರಣಗಳೂ ಇವೆ ಅನಿಸುತ್ತದೆ. ನಮ್ಮ ದೇಶಕ್ಕೆ ಸ್ವಾತಂತ್ರ್ಯ ದೊರೆತ ನಂತರ, ನಮ್ಮ ಹಾಲಾಡಿಗೂ ಸಾರಾಯಿ ಅಂಗಡಿ ಬಂದ ನಂತರ, ಶೇಂದಿಯ ಮೇಲಿನ ಬೇಡಿಕೆ ಕಡಿಮೆಯಾಯಿತು. ಜತೆಗೆ, ಶೇಂದಿ ಸಂಗ್ರಹಿಸಲು ಸಹ ನಿಯಂತ್ರಣ ಹೇರಲಾಯಿತು. ಸರಕಾರವು ಈ ಗೃಹಕೈಗಾರಿಕೆಯ ಮೇಲೆ ಕಣ್ಣು ಹಾಕಿತು. ರಾಜ್ಯದ ಜನರು ಸೇವಿಸುವ ಇಂಥ ಪಾನೀಯಗಳ ಮೇಲೆ ತೆರಿಗೆ ಹಾಕಿ, ಅದರಿಂದ ದೊರಕುವ ಆದಾಯವೆಲ್ಲವೂ ತನ್ನದು ಎಂದು ಸಾರಿತು. ಹಳ್ಳಿಯ ಜನರು ಇಂಥ ಪಾನೀಯಗಳನ್ನು ತಯಾರಿಸುವುದು ಕಾನೂನುಬಾಹಿರ ಎನಿಸಿತು.

ಆದ್ದರಿಂದಲೇ, ಈ ಎರಡು ಮರಗಳಿಂದ ಶೇಂದಿ ಸಂಗ್ರಹ ನಿಂತುಹೋಗಿರಬೇಕು. ನಮ್ಮ ಮನೆಯ ಹಿಂದಿನ ಮರಗಳನ್ನು ಏರಲು ಅನುಕೂಲ ಮಾಡಿದ್ದ ಮೆಟ್ಟಿಲುಗಳಂಥ ಗಚ್ಚುಗಳು, ಆಗಲೇ ನಿಂತು ಹೋಗಿರಲೂಬಹುದು. ಇವುಗಳ ಜತೆಗೇ, ನಮ್ಮೂರಿನಲ್ಲಿ ಕಡಿಮೆ ಎತ್ತರದ, ಕಡಿಮೆ ವಯಸ್ಸಿನ ಇನ್ನೂ ಕೆಲವು ಹಣೆ ಮರಗಳು ಇದ್ದು, ಅವುಗಳಿಂದಲೂ ಶೇಂದಿ ಸಂಗ್ರಹ ನಡೆಯುತ್ತಿರಲಿಲ್ಲ. ನಮ್ಮ ದೇಶದಲ್ಲಿ ಪ್ರಾದೇಶಿಕವಾಗಿ ಕಳ್ಳು ಅಥವಾ ಶೇಂದಿ ಸಂಗ್ರಹ, ಸೇವನೆಯ ಕಥನವೇ ಕುತೂಹಲಕಾರಿ, ಅಧ್ಯಯನಯೋಗ್ಯ. ಸಮುದ್ರಕ್ಕೆ ತಾಗಿಕೊಂಡಿರುವ ಕೆಲವು ಹಳ್ಳಿಗಳಲ್ಲಿ ಇಂದಿಗೂ ತೆಂಗಿನ ಮರಗಳಿಂದ ಶೇಂದಿ ಸಂಗ್ರಹ ನಡೆಯುತ್ತಿದೆ. ಹಳೆಯ ಮೈಸೂರಿನ ಭಾಗದಲ್ಲಿ ತೆಂಗಿನ ಮರದಿಂದ ಸಂಗ್ರಹಿಸುವ 'ನೀರಾ'ವನ್ನು ಆರೋಗ್ಯವರ್ಧಕ ಪಾನೀಯವಾಗಿ ಪರಿಚಯಿಸುವ ಪ್ರಯತ್ನ ನಿರಂತರ ಸಾಗಿದೆ. ನಮ್ಮೂರಿನ ಕಳ್ಳಿನ ವಿಚಾರಕ್ಕೆ ಬಂದರೆ, ಬೆಳಗ್ಗೆ ಏಳು ಗಂಟೆಗೂ ಮುಂಚೆ ಅದನ್ನು ಕುಡಿದರೆ, ಶಕ್ತಿವರ್ಧಕ; ನಂತರ ಹುಳಿ ಬರುವುದರಿಂದ ಅಮಲು ಪದಾರ್ಥ ಎನ್ನುತ್ತಾರೆ. ನಮ್ಮೂರಿನಲ್ಲಿ ತೆಂಗು, ತಾಳೆ ಮತ್ತು ಬಗನೆ ಮರದಿಂದ ಕಳ್ಳು ಸಂಗ್ರಹಿಸುವ ಪರಿಪಾಠ ಇತ್ತು. ಈಚಿನ ವರ್ಷಗಳಲ್ಲಿ ಇದು ಬಹುಮಟ್ಟಿಗೆ ನಿಂತು ಹೋಗಿದೆ. ಮರದ ತುದಿಯಲ್ಲಿ ಹೊರಬರುವ ಹೂವಿನ ಕೊನೆಯನ್ನು ಕತ್ತರಿಸಿ, ಅಲ್ಲೊಂದು ಮಡಕೆಯನ್ನು ಕಟ್ಟಿ, ಪ್ರತಿದಿನ ಬೆಳಗ್ಗೆ ಒಂದೊಂದು ಮರದಿಂದಲೂ ಒಂದೆರಡು ಲೋಟ ದ್ರವವನ್ನು ಸಂಗ್ರಹಿಸಿ, ಅದನ್ನು ಮಾರುವ ವೃತ್ತಿಯೇ ಕುತೂಹಲಕಾರಿ. ನಮ್ಮ ಹಳ್ಳಿ ಮನೆಯ ಹಿಂಭಾಗದಲ್ಲಿ ಬೆಳೆದಿದ್ದ ಎರಡು ಬೃಹತ್ ತಾಳೆ ಮರಗಳು ಬಹೂಪಯೋಗಿ. ಆ ಎತ್ತರವಾದ ಮರಗಳನ್ನು ಯಾರೂ ಏರುತ್ತಿರಲಿಲ್ಲವಾದರೂ, ಕಡಿಮೆ ಎತ್ತರದ ಇನ್ನೂ ಕೆಲವು ತಾಳೆ ಮರಗಳು ನಮ್ಮ ಹಳ್ಳಿಯಲ್ಲಿ ಅಲ್ಲಲ್ಲಿ ಅವುಗಳ ಪಾಲಿಗೆ ಬೆಳೆದಿದ್ದವು. ಇವುಗಳ ಗರಿಗಳಿಂದ ಬೀಸಣಿಗೆ ಮಾಡುವ ಕಲೆಯೂ ನಮ್ಮೂರಿನಲ್ಲಿತ್ತು. ಒಪ್ಪವಾಗಿ ಕತ್ತರಿಸಿ, ದಾರದಿಂದ ಪೋಣಿಸಿ, ಎರಡೂ ಕೊನೆಯಲ್ಲಿ ಬಿದಿರಿನ ಕಡ್ಡಿಗಳನ್ನು ಸಿಕ್ಕಿಸಿ, ಮಡಚುವ ಬೀಸಣಿಗೆ ಮಾಡುವ ಪರಿ ನಿಜಕ್ಕೂ ಕಲಾತ್ಮಕ.

ತಾಳೆ ಗರಿಗಳ ಇನ್ನೊಂದು ಉಪಯೋಗವೆಂದರೆ ಕೊಡೆ ಅಥವಾ ಛತ್ರಿ ತಯಾರಿಸಲು! ಮೂರನೆಯ ತರಗತಿಗೆ ನಾನು ನಮ್ಮೂರಿನ ಶಾಲೆಗೆ ಸೇರಿಕೊಂಡಾಗ, ನಮ್ಮ ಅಮ್ಮಮ್ಮ ನನಗೆ ಕೊಡಿಸಿದ್ದು 'ಓಲಿ ಕೊಡೆ'– ತಾಳೆಗರಿಗಳನ್ನು ಬೇಯಿಸಿ, ಒಣಗಿಸಿ, ಬಿದಿರಿನಿಂದ ಮಾಡಿದ ವೃತ್ತಾಕಾರದ ರೂಪಕ್ಕೆ ಸಿಕ್ಕಿಸಿ ಆ ಕೊಡೆಯನ್ನು ತಯಾರಿಸಲಾಗಿತ್ತು. ಬಟ್ಟೆಯ ಕೊಡೆಗಿಂತ ಇದು ಬಲಶಾಲಿ ಮತ್ತು ಎಂಥದ್ದೇ ಮಳೆ ಬಂದರೂ, ಅದರೊಳಗೆ ನೀರು ಸಿಡಿಯುತ್ತಿರಲಿಲ್ಲ ಎಂದು ಆ ಕೊಡೆಯನ್ನು ಶಿಫಾರಸು ಮಾಡುತ್ತಿದ್ದರು ನಮ್ಮ ಅಮ್ಮಮ್ಮ! ಎರಡು ವರ್ಷ 'ಓಲಿ ಕೊಡೆ'ಯನ್ನೇ ಹಿಡಿದು, ಕಾಡಿನ ನಡುವೆ ಸಾಗುವ ದಾರಿಯಲ್ಲಿ ನಡೆದು, ಶಾಲೆಗೆ ಹೋದ ಸಾಹಸ ನನ್ನದು. ಅಂಥ ತಾಳೆಗರಿಗಳ ಕೊಡೆಯನ್ನು ಈಗ ಮಠದ ಸ್ವಾಮಿಗಳು ಉಪಯೋಗಿಸುತ್ತಾರೆ!

ಈಚೆಗೆ ನಮ್ಮೂರಿಗೆ ಹೋಗಿ, ಆ ತಾಳೆ ಮರಗಳಿದ್ದ ಜಾಗದತ್ತ ಕಣ್ಣು ಹಾಯಿಸಿದರೆ, ಆ ಜಾಗವು ಬೋಳು ಬೋಳಾಗಿ ಕಂಡಿತು. ಆ ಬೃಹತ್ ತಾಳೆಮರಗಳು ಎಂದೋ ಬಿದ್ದುಹೋಗಿದ್ದವು. ಮಾತ್ರವಲ್ಲ, ನಮ್ಮೂರಲ್ಲಿ ಅಲ್ಲಲ್ಲಿ ಬೆಳೆದುಕೊಂಡಿದ್ದ ತಾಳೆಮರಗಳ ಸಂಖ್ಯೆಯೂ ಕಡಿಮೆಯಾಗಿತ್ತು. ಈ ಮರಗಳು ಬೆಳೆಯುವುದು ಬಹಳ ಎಂದರೆ ಬಹಳ ನಿಧಾನ. ಈಗಿನ ದಿನಗಳಲ್ಲಿ ಕೃಷಿಕರ ಅಭಿರುಚಿ, ಸಂಪ್ರದಾಯ, ಪದ್ಧತಿಗಳು ಬದಲಾಗಿವೆ. ಬಹುಬೇಗನೆ ಬೆಳೆಯುವ ಗಿಡ, ಮರ, ಬಳ್ಳಿ, ಬೆಳೆಗಳನ್ನು ಇಂದಿನ ಕೃಷಿಕರು ಇಷ್ಟಪಡುತ್ತಾರೆ. ಆದ್ದರಿಂದಲೇ ಇರಬೇಕು, ಹಣೆ ಮರ ಅಥವಾ ತಾಳೆ ಮರದಂಥ, ಬಹು ನಿಧಾನವಾಗಿ ಬೆಳೆಯುವ ಮರಗಳಿಗೆ ಇಂದಿನ ಕೃಷಿ ದಿನಚರಿಯಲ್ಲಿ ಪ್ರಾಮುಖ್ಯ ಕಡಿಮೆಯಾಗಿದೆ.

ಕಲಾವಿದರ ಬಗೆಗೂ ಸಹಾನುಭೂತಿ ಇರಲಿ

ತಪ್ಪಿದ ತಾಳ
ಸುಧಾಕರ್ ಕಲ್ಲಾರ್
vveditoped@gmail.com

ಯಾವುದೇ ಕಲೆ ಉಳಿದು ಬೆಳೆಯಬೇಕಿದ್ದರೆ ಅಂತಃಸತ್ವ, ರಂಜನೆ ಎರಡೂ ಅನಿವಾರ್ಯ. ಅಗ್ಗದ ಸರಕು ಹೆಚ್ಚು ಬಾಳಿಕೆ ಬಾರದು. ಶ್ರೇಷ್ಠ ಗುಣಮಟ್ಟ ಇದ್ದರೂ ಜನರನ್ನು ರಂಜಿಸದಿದ್ದರೆ ಕಲೆಗೆ ಬೇಡಿಕೆ ಉಳಿಯಲಾರದು. ಇವೆರಡನ್ನೂ ಹದವಾಗಿ ಹೊಂದಿಸಿಕೊಳ್ಳುವ ಕಲೆ ಹೆಚ್ಚು ಸಮಯ ಉಳಿಯಬಹುದು. ಯಕ್ಷಗಾನ ಅಂಥ ಒಂದು ಕಲೆ ಎನ್ನುವುದು ನಿರ್ವಿವಾದ. ಆದರೆ ರಂಜನೆಯ ಹೆಸರಿನಲ್ಲಿ ಕಲೆ ಹಳಿ ತಪ್ಪುತ್ತಿದೆಯಾ? ಇತ್ತೀಚಿನ ಕೆಲವು ಕಾರ್ಯಕ್ರಮಗಳನ್ನು ಗಮನಿಸಿದರೆ ಅಂಥ ಆತಂಕ ಹುಟ್ಟುವುದು ಸಹಜ. ಕಲಾವಿದರೇ ಕಲೆಗಿರುವ ಚೌಕಟ್ಟನ್ನು ಮೀರದೆ, ಕಲೆಯನ್ನು ಉಳಿಸಿ ಬೆಳೆಸುವುದು ಅಪೇಕ್ಷಿತ. ಹಾಗಾಗದಿದ್ದಾಗ ಇತರರ ಪ್ರವೇಶ ಅನಿವಾರ್ಯ.

ಯಕ್ಷಗಾನದ ಸ್ವಲ್ಪ ಮಟ್ಟಿನ ತರಬೇತಿಯನ್ನು ಪಡೆದು, ಕೆಲವು ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದು, ತಾಳಮದ್ದಳೆ, ಆಟ–ಕೂಟಗಳ ವೀಕ್ಷಕನಾಗಿ ನನ್ನ ಒಂದಷ್ಟು ಅಭಿಪ್ರಾಯ ತಿಳಿಸುವುದು ವಿಹಿತ ಎಂದುಕೊಂಡಿದ್ದೇನೆ. 'ವಿಶ್ವವಾಣಿ'ಯ ಚರ್ಚೆ ತಾಳಮದ್ದಳೆಯ ಬಗ್ಗೆಯೇ ಆಗಿರುವುದರಿಂದ ತಾಳಮದ್ದಳೆಯಲ್ಲಿ ನಡೆದ, ನಡೆಯುವ ಅಪಸವ್ಯಗಳನ್ನು ಯಾರ ಹೆಸರನ್ನೂ ಉಲ್ಲೇಖಿಸದೆ ಪ್ರಸ್ತಾಪಿಸುತ್ತೇನೆ.

ಯಕ್ಷಗಾನ ತಾಳಮದ್ದಳೆಗಳ ಗುಣಮಟ್ಟ ಇತ್ತೀಚೆಗೆ ಕೆಟ್ಟು ಹೋಯಿತಾ? ಹಿಂದೆ ಅದ್ಭುತ ಗುಣಮಟ್ಟದ ತಾಳಮದ್ದಳೆಗಳು ಮಾತ್ರವೇ ನಡೆಯುತ್ತಿದ್ದವಾ? ಅಂದರೆ ಹಾಗೇನೂ ಇಲ್ಲ. ಹಿಂದೆಯೂ ಕಳಪೆ ತಾಳಮದ್ದಳೆಗಳು ನಡೆಯುತ್ತಿದ್ದವು. ಆದರೆ ಆಗ ಕಳಪೆ ತಾಳಮದ್ದಳೆಗಳನ್ನು ನಿರ್ಲಕ್ಷಿಸಿ ಒಳ್ಳೆಯ ತಾಳಮದ್ದಳೆಗಳ ಬಗೆಗೆ ಚರ್ಚೆಗಳು ಜಾಸ್ತಿ ನಡೆಯುತ್ತಿದ್ದವು. ಗುಣಮಟ್ಟದ ತಾಳಮದ್ದಳೆಗಳಲ್ಲಿ ನಡೆದ ಚರ್ಚೆಯ ಅಂಶಗಳನ್ನು ತಮ್ಮ ಸಂಘದ ತಾಳಮದ್ದಳೆಗಳಲ್ಲಿ ಬಳಸಿಕೊಳ್ಳುತ್ತಿದ್ದರು. ಹೀಗಾಗಿ ಅಪಸವ್ಯಗಳು ನಿರ್ಲಕ್ಷಿಸಲ್ಪಟ್ಟು ಒಳ್ಳೆಯ ಅಂಶಗಳು ಮಾತ್ರವೇ ಉಳಿದವು.

ಶ್ರೇಷ್ಠ, ಕಳಪೆ ಎರಡೂ ರೀತಿಯ ತಾಳಮದ್ದಳೆಗಳು ಇಂದೂ ನಡೆಯುತ್ತಿವೆ. ಆನ್‌ಲೈನ್‌ನಲ್ಲಿ ತಾಳಮದ್ದಳೆಗಳ ಪ್ರಸಾರ ಆರಂಭವಾದ ಬಳಿಕ ಸೋಲಲು ಸಿದ್ಧರಿಲ್ಲದೆ ವಿತಂಡವಾದಕ್ಕೆ ಇಳಿಯುತ್ತಿರುವ ಕಲಾವಿದರ ಸಂಖ್ಯೆ ಜಾಸ್ತಿ ಆಗಿದೆ. ಅದನ್ನು ನೋಡುತ್ತಿದ್ದಂತೆ ಇಂದಿನ ತಾಳಮದ್ದಳೆಗಳ ಗುಣಮಟ್ಟ ಕೆಟ್ಟಿದೆ, ಅಗ್ಗದ ಮನರಂಜನೆಗೆ ಪ್ರಾಶಸ್ತ್ಯ ಎಂಬ ಭಾವನೆ ಹರಡುತ್ತಿದೆ. ಹಿಂದೆ ನಡೆದಿದ್ದ ವಿತಂಡವಾದಗಳಿಗೆ ಉದಾಹರಣೆ ಕೊಡುವುದಾದರೆ, ಸೀತಾಪಹಾರ ಪ್ರಸಂಗದಲ್ಲಿ ಮಾಯಾಜಿಂಕೆಯ ಪ್ರವೇಶವಾದ ಬಳಿಕ ''ಮಾಯಾಜಿಂಕೆಯನ್ನು ನಾನು ತರುತ್ತೇನೆ, ನೀನು ಸೀತೆಗೆ ರಕ್ಷಣೆಯಾಗಿ ನಿಲ್ಲು'' ಎಂದು ರಾಮ ಹೇಳುತ್ತಾನೆ. ''ಇಲ್ಲ, ನಾನೇ ಹೋಗುತ್ತೇನೆ. ಸೀತೆಯ ಗಂಡನಾಗಿ ನೀನೇ ಸೀತೆಯ ರಕ್ಷಣೆಗೆ ನಿಲ್ಲು'' ಎಂದು ಲಕ್ಷ್ಮಣ ವಾದ ಹೂಡಿದ. ವಾದದಲ್ಲಿ ಲಕ್ಷ್ಮಣ ರಾಮನ ಬಾಯಿ ಮುಚ್ಚಿಸಿದ.

ಭಾಗವತರು ತಕ್ಷಣ ''ನನಗೆ ಮುಂದಿನ ಪದ್ಯ ಗೊತ್ತಿಲ್ಲ, ಪ್ರಸಂಗ ಪುಸ್ತಕ ತನ್ನಿ'' ಎಂದರು (ಆ ಕಾಲದಲ್ಲಿ ಭಾಗವತರು 'ಪ್ರಸಂಗ ಪುಸ್ತಕ' ಬಳಸುತ್ತಿರಲಿಲ್ಲ. ಪದ್ಯಗಳು ಅವರಿಗೆ ಬಾಯಿಪಾಠ ಬರುತ್ತಿತ್ತು). ವ್ಯವಸ್ಥಾಪಕರು ಎಲ್ಲಿಂದಲೋ ಪ್ರಸಂಗ ಪುಸ್ತಕ ತರಿಸಿದರು. ಅದನ್ನು ನೋಡಿದ ಭಾಗವತರು ''ಈ ಪದ್ಯ ನನಗೆ ಗೊತ್ತು. ಚಿನ್ನದ ಜಿಂಕೆಯನ್ನು ತರಲು ಲಕ್ಷ್ಮಣ ಹೋದ ಪದ್ಯ ಇರುವ ಪ್ರಸಂಗ ಪುಸ್ತಕ ನನಗೆ ಬೇಕು, ಅದನ್ನು ತನ್ನಿ'' ಎಂದರು. ಪರಿಸ್ಥಿತಿಯ ಅರಿವಾದ ಲಕ್ಷ್ಮಣ ಪಾತ್ರದಾರಿಯು ಕ್ಷಮೆ ಕೇಳಿದ ಬಳಿಕ ಪ್ರಸಂಗ ಮುಂದುವರಿಯಿತು. ಇಲ್ಲಿ ಯಾರನ್ನು ದೂರಬೇಕು? ಔಚಿತ್ಯ ಮರೆತು ವಾದಮಾಡಿದ ಲಕ್ಷ್ಮಣನನ್ನೇ ಅಥವಾ ರಾಮನ ಬಾಯಿ ಮುಚ್ಚಿಸಬಲ್ಲ ಸಾಮರ್ಥ್ಯವಿರುವ ಮಾತುಗಾರನಿಗೆ ಲಕ್ಷ್ಮಣನ ಪಾತ್ರ ಕೊಟ್ಟ ವ್ಯವಸ್ಥಾಪಕರನ್ನೇ? ಇದು ನಾನು ಬೇರೆಯವರಿಂದ ಕೇಳಿದ ಘಟನೆ.

ಈಗ, ನಾನೇ ವೀಕ್ಷಕನಾಗಿದ್ದ ತಾಳಮದ್ದಳೆಯ ಇನ್ನೊಂದು ಉದಾಹರಣೆ ಹೇಳುತ್ತೇನೆ. ಸಂಘವೊಂದರ ತಾಳಮದ್ದಳೆ, ಪ್ರಸಂಗ– ಅಂಗದ ಸಂಧಾನ. ಪ್ರಹಸ್ತ ಮತ್ತು ಅಂಗದರ ನಡುವಿನ ಸಂಭಾಷಣೆಯ ಸಂದರ್ಭ. ''ಮಾತಿನೊಳಗೆ ಜಾಣನಹುದು ನಿನ್ನನ್ನು ಪೆತ್ತ ಮಾತೆ (ಹೆತ್ತ ಮಾತೆ) ಯಾರಯ್ಯ'' ಎಂಬುದು ಪದ್ಯ. ಪೆತ್ತ ಎಂಬಲ್ಲಿಗೆ ಭಾಗವತರು ರಾಗದ ಆಲಾಪನೆ ಆರಂಭಿಸಿದರು. ತಕ್ಷಣ ಅರ್ಥಧಾರಿ ತುಳುವಿನಲ್ಲಿ ''ಪೆತ್ತ ಅತ್ ಕೋಣ'' (ಹಸು ಅಲ್ಲ ಕೋಣ) ಎಂದುಬಿಟ್ಟರು. ಭಾಗವತರು ಪದ್ಯ ನಿಲ್ಲಿಸಿ ಜಗಳಕ್ಕೆ ನಿಂತರು. ವ್ಯವಸ್ಥಾಪಕರ ಮಧ್ಯಪ್ರವೇಶದಿಂದ ತಾಳಮದ್ದಳೆ ಇಡೀ ರಾತ್ರಿ ಮುಂದುವರಿಯಿತು. ಬೆಳಗ್ಗೆ ಮತ್ತೆ ಜಗಳ ನಡೆಯಿತು. ''ಪದ್ಯದಲ್ಲಿ ಪೆತ್ತ ಎಂಬಲ್ಲಿಗೆ ಗೀಟು ಹಾಕಿದ್ದು ಯಾಕೆ? ಗೀಟು ಹಾಕಿದಲ್ಲಿ ನಾನು ನಿಲ್ಲಿಸುತ್ತೇನೆ'' ಎಂದು ಭಾಗವತರು ಅರ್ಥದಾರಿಯ ಶೇಪ್ ತೆಗೆದರು. ಪದ್ಯಕ್ಕೆ ಗೀಟು ಹಾಕಿದಲ್ಲೆಲ್ಲಾ ನಿಲ್ಲಿಸಲಾರಂಭಿಸಿದರೆ ಏನು ಅಪಸವ್ಯವಾಗುತ್ತದೆ ಎಂಬುದು ಯಕ್ಷಗಾನ ಪದ್ಯಗಳ ಪ್ರಾಥಮಿಕ ತಿಳಿವಳಿಕೆ ಇರುವವರಿಗೆ ಗೊತ್ತು. ಅರ್ಥಧಾರಿಯದೂ ಅನುಚಿತ ಪ್ರತಿಕ್ರಿಯೆ. ಈ ತಾಳಮದ್ದಳೆಗೆ ಸಂಪಾದಕರು ಸಾಕ್ಷಿಯಾಗಿದ್ದರೆ ಅವರ ಪ್ರತಿಕ್ರಿಯೆ ಏನಿರುತ್ತಿತ್ತು ಎನ್ನುವುದು ನನ್ನ ಕುತೂಹಲ.

ಇನ್ನೊಂದು ಜಿಲ್ಲಾ ಮಟ್ಟದ ಪ್ರಸಿದ್ಧ ಅರ್ಥಧಾರಿಗಳ ಉದಾಹರಣೆಯನ್ನು ತೆಗೆದುಕೊಳ್ಳುವುದಾದರೆ ಅದೇ ಅಂಗದ ಸಂಧಾನ ಪ್ರಸಂಗದಲ್ಲಿ ರಾವಣನ ಮಂತ್ರಿ ಪ್ರಹಸ್ತ ಸಂಧಾನಕ್ಕೆ ಬಂದ ಅಂಗದನ ಮೇಲೆ ಯಾವ ರೀತಿ ಮಾತಿನ ಪ್ರಹಾರ ನಡೆಸಿದರೆಂದರೆ ''ನನಗೆ ಒಂದು ಸಲ ತಾಳಮದ್ದಳೆ ಮುಗಿದರೆ ಸಾಕು ಅನಿಸಿತ್ತು'' ಎಂದು ಮಾರನೇ ದಿನ ಅಂಗದನ ಅರ್ಥದಾರಿ ಹೇಳಿದರಂತೆ. ನ್ಯಾಯವನ್ನೇ ಹಿಡಿದು ಮಾತನಾಡುವುದಾದರೆ ನೀತಿಯನ್ನು ಬೋಧಿಸುವ ರಾಮಾಯಣದ ಪ್ರಕರಣವನ್ನು ಆಧರಿಸಿದ ತಾಳಮದ್ದಳೆಯಲ್ಲಿ ನ್ಯಾಯದ ಪರವಾಗಿದ್ದ ಅಂಗದನ ಮೇಲೆ ಪ್ರಹಸ್ತ ಆ ಪರಿ ಪ್ರಹಾರ ನಡೆಸಬಹುದಿತ್ತೆ? ಅಥವಾ ಎದುರು ಅರ್ಥಧಾರಿಯ ಸಾಮರ್ಥ್ಯ ಅರಿತ ಸಜ್ಜನ ಅರ್ಥಧಾರಿಯು ಆ ಪ್ರಸಂಗದಲ್ಲಿ ಭಾಗವಹಿಸದೆ ಇರಬಹುದಿತ್ತಲ್ಲವೆ? ಇಲ್ಲಿ ಪ್ರಹಸ್ತ ಪಾತ್ರಧಾರಿಯಿಂದ ಸೌಜನ್ಯ ಅಪೇಕ್ಷಿಸಬೇಕಿತ್ತೇ ಅಥವಾ ತಾಳಮದ್ದಳೆಯ ವೀಕ್ಷಕರು ರಂಜನೆ ಅಪೇಕ್ಷಿಸಬೇಕೇ? ಪ್ರಹಸ್ತನ ಮಾತುಗಳಿಗೆ ಪ್ರೇಕ್ಷಕರು ಘೊಳ್ಳೆಂದು ನಗುತ್ತಿದ್ದುದರಿಂದಲೇ ಅವರು ಮನರಂಜನೆ ಪಡೆದಿರುವುದು ಸ್ಪಷ್ಟ. ಆದರೆ ತಾಳಮದ್ದಳೆಯ ಗುಣಮಟ್ಟ ಮಾತ್ರ ಪಾತಾಳಕ್ಕೆ ಇಳಿದಿತ್ತು.

ಇಷ್ಟೊಂದು ದೀರ್ಘವಾಗಿ ಉದಾಹರಣೆಗಳನ್ನು ಯಾಕೆ ಕೊಟ್ಟೆ ಅಂದರೆ, ಹಿಂದಿನ ಕಾಲದಲ್ಲಿಯೂ ಕಳಪೆ ಪ್ರದರ್ಶನಗಳು, ವಿತಂಡವಾದಗಳು ನಡೆಯುತ್ತಿದ್ದವು. ಆದರೂ ಯಕ್ಷಗಾನ ತಾಳಮದ್ದಳೆ ಇಲ್ಲಿಯವರೆಗೆ ಉಳಿದಿದೆ, ಬೆಳೆದಿದೆ. ಆದರೆ ಇಂದು ಆನ್‌ಲೈನ್ ಪ್ರಸಾರದಿಂದಾಗಿ ಅಪಸವ್ಯ ನಡೆದ ಕೂಡಲೇ ಪ್ರಚಾರವಾಗುತ್ತದೆ.

ಅಪಸವ್ಯಗಳು ಯಾಕೆ ನಡೆಯುತ್ತವೆ?

1. ಕೆಲವು ಪಾತ್ರಧಾರಿಗಳು ಸೋಲೊಪ್ಪಲು ಸಿದ್ಧರಿಲ್ಲದೆ ವಿತಂಡ ವಾದ ನಡೆಸುವುದು. ಇದು ತಪ್ಪು. ವ್ಯವಸ್ಥಾಪಕರು ಕ್ರಮ ಕೈಗೊಳ್ಳಲೇಬೇಕು.

2. ಸಮಕಾಲೀನ ಘಟನೆಗಳನ್ನು ಯಕ್ಷಗಾನ ಪ್ರಸಂಗದೊಳಕ್ಕೆ ಎಳೆದು ತರುವುದು. ಇದನ್ನು ಪೂರಾ ತಪ್ಪು ಅನ್ನುವಂತಿಲ್ಲ. ಕೆಲವು ಸಮರ್ಥ ಕಲಾವಿದರು ಇದನ್ನು ಅತ್ಯಂತ ಜಾಣತನದಿಂದ ನಿರ್ವಹಿಸುತ್ತಾರೆ. ನೋಟ್‌ಬ್ಯಾನ್‌ನಂಥ ಘಟನೆಯನ್ನು ಯಕ್ಷಗಾನದಲ್ಲಿ ಪ್ರಸ್ತಾಪಿಸಿದ್ದು ಹೀಗೆ: ಕುಬೇರನಲ್ಲಿ ಮಾತನಾಡುತ್ತಾ ''ನೀನು ಕೂಡಿಹಾಕಿದ ಸಂಪತ್ತನ್ನು ಒಂದು ಕ್ಷಣದಲ್ಲಿ ಅವನು ಮೌಲ್ಯ ಇಲ್ಲದಂತೆ ಮಾಡಬಲ್ಲ''. ಕುಬೇರ ಸಂಪತ್ತಿನ ಅಧಿಪತಿ ಆದ್ದರಿಂದ ಇದು ಚೆನ್ನಾಗಿ ಹೊಂದಿಕೊಂಡಿತ್ತು.

ದೇವಸೇನಾನಿ ಕುಮಾರಸ್ವಾಮಿಗೆ (ಷಣ್ಮುಖ) ನೀನು ಪಕ್ಷ ಬದಲಿಸು ಎಂಬ ಸಲಹೆ ಕೊಡುವುದು, ಕೋವಿಡ್ ಕಾಲದ 'ಅಂತರ ಕಾಯ್ದುಕೊಳ್ಳುವಿಕೆ', ಇತ್ತೀಚಿನ ಯಕ್ಷಗಾನದ ಕಾಲಮಿತಿಯ ಬಗ್ಗೆ ಕೃಷ್ಣಾರ್ಜುನ ಕಾಳಗ ಪ್ರಸಂಗದಲ್ಲಿ ''ಗಯನನ್ನು 8 ದಿನಗಳೊಳಗೆ ಕೊಲ್ಲುತ್ತೇನೆ'' ಎಂಬ ಕೃಷ್ಣ ಹೇಳಿದ ಮಾತಿಗೆ ಕಾಲಮಿತಿಯನ್ನು ನೆನಪಿಸುವುದು... ಇವು ಕೆಲವು ಉದಾಹರಣೆಗಳಾದರೂ ಪಾತ್ರದಾರಿಯ ವಾಕ್ಚಾತುರ್ಯ, ಪದ ಸಂಪತ್ತು ಚೆನ್ನಾಗಿದ್ದರೆ ತುಂಬಾ ಚೆನ್ನಾಗಿ ಯಕ್ಷಗಾನ ಪ್ರಸಂಗಕ್ಕೆ ಹೊಂದಿಕೊಳ್ಳುತ್ತವೆ.

ಕೆಲವು ಬಾರಿ ಇದು 'ಮಿಸ್‌ಫೈರ್' ಆಗುತ್ತದೆ, ಅದಕ್ಕೆ ಎರಡು ಕಾರಣಗಳಿವೆ:

1. ಪಾತ್ರಧಾರಿಯ ವೈಫಲ್ಯ

2. ವೀಕ್ಷಕರಿಗೆ ಆ ಕ್ಷಣದಲ್ಲಿ ಅರ್ಥವಾಗದಿರುವಿಕೆ

ಇದಕ್ಕೆ ಒಂದು ಉದಾಹರಣೆ ಕೊಡುತ್ತೇನೆ 'ಗಾಂಡೀವ ನಿಂದನೆ' ಪ್ರಸಂಗದಲ್ಲಿ ಅರ್ಜುನ ಯುಧಿಷ್ಠರನ್ನು ಗರಿಷ್ಠ ಮಟ್ಟದಲ್ಲಿ ನಿಂದಿಸಿದ ಬಳಿಕ 'ಇನ್ನು ತೆಗಳಲು ಪದ ಉಂಟಾ?' ಎನ್ನುತ್ತಾರೆ (ಪದ ಇಲ್ಲ ಅಂದರೆ ಶಬ್ದ ಇಲ್ಲ ಎಂಬರ್ಥದಲ್ಲಿ). ಆದರೆ ವಿಮರ್ಶಕರೊಬ್ಬರು ಪದ ಉಂಟಾ? ಎಂಬುದನ್ನು ಪ್ರಸಂಗದಲ್ಲಿ ಪದ್ಯ ಉಂಟಾ ಎಂದದ್ದು ಅಂತ ತಪ್ಪು ಅರ್ಥ ಮಾಡಿಕೊಂಡಿದ್ದರು. ಇನ್ನೊಂದು ವೇದಿಕೆಯಲ್ಲಿ ಅದು ಪ್ರಸ್ತಾಪವಾದಾಗ ಆ ಅರ್ಥಧಾರಿಯೇ ಸ್ಪಷ್ಟೀಕರಿಸಿದ್ದು ಯುಟ್ಯೂಬ್‌ನಲ್ಲಿ ಲಭ್ಯವಿದೆ.

ಯಕ್ಷಗಾನ ಆಶುಸಾಹಿತ್ಯವಾಗಿರುವುದರಿಂದ, ಕಲಾವಿದನ ಉಳಿವಿಗೆ ಆತ ರಂಜಿಸುವುದೂ ಅನಿವಾರ್ಯವಾದಾಗ, ಆತನ ಪ್ರಯತ್ನ ಕೆಲವು ಬಾರಿ ಆಭಾಸಕ್ಕೆ ಎಡೆಮಾಡಿಕೊಡುತ್ತದೆ. ಆ ಕೂಡಲೇ ಯಕ್ಷಗಾನ ಪಾತಾಳಕ್ಕಿಳಿಯಿತು ಎಂದಾಗಲೀ, ಕಲಾವಿದನಿಗೆ ಔಚಿತ್ಯಪ್ರಜ್ಞೆ ಇಲ್ಲವೆಂದಾಗಲಿ ವಾಗ್ಬಾಣಗಳನ್ನು ಪ್ರಯೋಗಿಸುವ ಅಗತ್ಯವಿಲ್ಲ. ಕಲಾವಿದನಿಗೆ ಕೆಟ್ಟ ಉದ್ದೇಶ ಇಲ್ಲದಿದ್ದರೆ ಅದು ಕ್ಷಮ್ಯ. ಮುಂದೆ ಹಾಗಾಗದಂತೆ ನೋಡಿಕೊಳ್ಳುವುದು ಅಗತ್ಯ. ಜನರಿಗೆ ಇಂದು ಮನರಂಜನೆಗೆ ಹಲವು ಆಯ್ಕೆಗಳಿವೆ. ಹಾಗಾಗಿ ತಾಳಮದ್ದಳೆಗಳಿಗೆ ವೀಕ್ಷಕರೂ ಕಡಿಮೆಯಾಗುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಹೇಗಾದರೂ ಮಾಡಿ ರಂಜನೆಯ ಒತ್ತಡಕ್ಕೆ ಬಿದ್ದ ಕಲಾವಿದರು ಆಭಾಸಕ್ಕೆ ಕಾರಣವಾಗುವುದೂ ಸತ್ಯ. ತಮ್ಮ ಬದುಕಿಗೆ ಆಸರೆಯಾಗಿರುವ ಕಲೆಯನ್ನು ಜೀವಂತವಾಗಿ ಇರಿಸಿಕೊಳ್ಳಲು ಜನರನ್ನು ಆಕರ್ಷಿಸುವ ಕಲಾವಿದರ ಒತ್ತಡವನ್ನು ನಾವು ಅರ್ಥ ಮಾಡಿಕೊಳ್ಳಬೇಕಿದೆ. ಯಕ್ಷಗಾನ ಹಲವು ಅವಸ್ಥಾಂತರಗಳನ್ನು ದಾಟಿ ಬಂದಿದೆ. ಅಂದೂ ಇಂದೂ ಸವ್ಯ, ಅಪಸವ್ಯ ಎರಡೂ ಇವೆ. ಇಂದೂ ಪ್ರಬುದ್ಧ ಮಾತುಗಾರರಿದ್ದಾರೆ. ಆಟಕ್ಕಷ್ಟೆ ಬಳಕೆಯಾಗುವ ದೇವಿ ಮಹಾತ್ಮೆ ಪ್ರಸಂಗದ ತಾಳಮದ್ದಳೆಯಲ್ಲಿ ಶುಂಭನ ಪಾತ್ರದಲ್ಲಿ ಬೆರಗು ಹುಟ್ಟಿಸುವ ಅದ್ಭುತ ನಿರೂಪಣೆ ನೀಡಿದ ಕಲಾವಿದರಿದ್ದಾರೆ (ಆಟದಲ್ಲಿ ಶುಂಭ ಪಾತ್ರ ಆಟಕ್ಕುಂಟು ಲೆಕ್ಕಕ್ಕಿಲ್ಲ ಎಂಬಂತಿದೆ). ಕರ್ಣಾರ್ಜುನ ಕಾಳಗದ ಕರ್ಣ–ಶಲ್ಯ ಸಂವಾದ, ಕುರುಕ್ಷೇತ್ರ ಯುದ್ಧದ ಮೊದಲಿನ ಭೀಷ್ಮ–ಕೌರವ ಸಂವಾದ ಇಂಥ ಅದ್ಭುತ ಕಾರ್ಯಕ್ರಮಗಳು ಯುಟ್ಯೂಬ್‌ನಲ್ಲಿ ಲಭ್ಯವಿವೆ. ಇದರಿಂದಲೇ ಯಕ್ಷಗಾನದ ಶ್ರೀಮಂತಿಕೆಯ ಬಗ್ಗೆ ಹೆಮ್ಮೆ ಪಡಬಹುದು.

ಹಾಗೆಂದು ಅಪಸವ್ಯಗಳಿಗೆ ಕಡಿವಾಣ ಅನಿವಾರ್ಯ. ಯಕ್ಷಗಾನದಲ್ಲಿ ಭಾಗವತನೇ ನಿರ್ದೇಶಕನಾಗಿದ್ದರೂ ಇಂದಿನ ತಾಳಮದ್ದಳೆಗಳಲ್ಲಿ ಭಾಗವಹಿಸುವ ಬಹು ಬೇಡಿಕೆಯ ಭಾಗವತರುಗಳು ಅರ್ಥಧಾರಿಗಳಿಂದ ಕಿರಿಯರಾಗಿರುವುದರಿಂದ ಅವರು ಬಹುಶಃ ಅರ್ಥಧಾರಿಗಳನ್ನು ನಿಯಂತ್ರಿಸಲಾರರು. ಇಂಥ ಸಂದರ್ಭಗಳಲ್ಲಿ ವಿಶ್ವೇಶ್ವರ ಭಟ್‌ರಂಥ ಹಿರಿಯರ ಹಿತವಚನ ಸಕಾಲಿಕ.

(ಲೇಖಕರು ಪತ್ರಕರ್ತರು ಮತ್ತು ಯಕ್ಷಗಾನಾಸಕ್ತರು)

ಚರ್ಚೆಗೆ ಹೀಗೊಂದು ಮುಕ್ತವೇದಿಕೆ

ಕೆಲ ದಿನಗಳಿಂದ ತೀವ್ರ ಚರ್ಚೆಗೆ ಗ್ರಾಸವಾಗುತ್ತಿರುವ ತಾಳಮದ್ದಳೆ ವಿಷಯಕ್ಕೆ ಸಂಬಂಧಿಸಿದಂತೆ ಮುಕ್ತ ಅಭಿಪ್ರಾಯಗಳನ್ನು ಪ್ರಕಟಿಸಲು 'ವಿಶ್ವವಾಣಿ' ವೇದಿಕೆಯಾಗುತ್ತಿದೆ. ಈ ಕುರಿತಾದ ಪರ ಮತ್ತು ವಿರೋಧ ಅಭಿಪ್ರಾಯಗಳನ್ನು 800 ಪದಗಳಿಗೆ ಮಿತಿಗೊಳಿಸಿ ಕಳುಹಿಸಿ.

ಇ–ಮೇಲ್ : vveditoped@gmail.com

ನುಡಿನಮನ

ರವೀ ಸಜಂಗದ್ದೆ

ಕನಸುಗಳನ್ನು ನನಸಾಗಿಸಿದ ನಿಟ್ಟೆಯ ವಿನಯವಂತ!

ಕರಾವಳಿ ಪ್ರದೇಶದಲ್ಲಿ ಶಿಕ್ಷಣ, ಆರೋಗ್ಯ ಮತ್ತು ಉದ್ಯೋಗ ಕ್ಷೇತ್ರಗಳಿಗೆ ಅಪಾರ ಕೊಡುಗೆ ನೀಡಿ ಕ್ರಾಂತಿಕಾರಿ ಬದಲಾವಣೆಗಳ ಹರಿಕಾರ ಎನಿಸಿಕೊಂಡಿದ್ದ ಡಾ. ಎನ್.ವಿನಯ್ ಹೆಗ್ಡೆ (86) ಅವರು ಜನವರಿ 1ರ ಮುಂಜಾನೆ ಇಹದ ಯಾತ್ರೆ ಮುಗಿಸಿದ್ದಾರೆ. ನಿಟ್ಟೆ ಸಮೂಹ ಸಂಸ್ಥೆಗಳ ಸಂಸ್ಥಾಪಕರು ಮತ್ತು ಕೆ.ಎಸ್.ಹೆಗ್ಡೆ ಚಾರಿಟಬಲ್ ಆಸ್ಪತ್ರೆಯ ವ್ಯವಸ್ಥಾಪಕ ನಿರ್ದೇಶಕರಾಗಿದ್ದ ಶ್ರೀಯುತರು, ನಿಟ್ಟೆ ಡೀಮ್ಡ್ ವಿಶ್ವವಿದ್ಯಾಲಯದ ಮೂಲಕ ಲಕ್ಷಾಂತರ ವಿದ್ಯಾರ್ಥಿಗಳಿಗೆ ಉತ್ತಮ ಶಿಕ್ಷಣ ನೀಡಿ ಬದುಕು ಕಟ್ಟಿಕೊಟ್ಟ ಕರಾವಳಿಯ ಶ್ರೇಷ್ಠ ಶಿಕ್ಷಣತಜ್ಞರ ಸಾಲಿನಲ್ಲಿ ಅಗ್ರಗಣ್ಯರಾಗಿದ್ದಾರೆ. ಅವರಿಗೆ ಕಂಬನಿಪೂರ್ಣ ನುಡಿನಮನವಿದು.

ಹೆಚ್ಚಿನವರ ಬಾಯಲ್ಲಿ 'ವಿನಯಣ್ಣ' ಎಂದೇ ಪ್ರೀತ್ಯಾದರಗಳಿಂದ ಕರೆಸಿಕೊಳ್ಳುತ್ತಿದ್ದ ಶ್ರೀಯುತರು ಐವತ್ತು ವರ್ಷಗಳ ಹಿಂದೆ ಕೈಗಾರಿಕೆ ಮತ್ತು ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ, ಹುಟ್ಟೂರು ನಿಟ್ಟೆಯನ್ನು ಶಿಕ್ಷಣ ಕಾಶಿ ಮತ್ತು ಕೈಗಾರಿಕಾ ಹಬ್ ಆಗಿ ಅಭಿವೃದ್ಧಿಪಡಿಸಿ ಸೈ ಎನಿಸಿಕೊಂಡರು. ಬಿಎಸ್ಸಿ ಪದವಿ ಪೂರೈಸಿದ ನಂತರ ಹುಟ್ಟೂರಿನವರಿಗಾಗಿ ಊರಿನಲ್ಲಿಯೇ ಏನಾದರೊಂದು ಮಾಡಿ ತೋರಿಸಬೇಕು ಎಂಬ ಮಹದಾಸೆಯಿಂದ 1975ರಲ್ಲಿ 'ಲಮಿನಾ ಸಸ್ಪೆನ್ಷನ್ ಪ್ರೈವೇಟ್ ಲಿಮಿಟೆಡ್' ಹೆಸರಿನ, ಆಟೋಮೊಬೈಲ್ ಬಿಡಿಭಾಗಗಳ ತಯಾರಿಕಾ ಸಂಸ್ಥೆಯನ್ನು ಆರಂಭಿಸಿದರು. ಇದು ದೇಶೀಯ ಮತ್ತು ಅಂತಾರಾಷ್ಟ್ರೀಯ ಮಾರುಕಟ್ಟೆಗಳಲ್ಲಿ ವಿಶ್ವಾಸಾರ್ಹ ಸಂಸ್ಥೆಯಾಗಿ ಹೆಸರು ಗಳಿಸಿದ್ದು ISO 9001:2008 ಪ್ರಮಾಣೀಕೃತವಾಗಿದೆ. ಉತ್ಪನ್ನಗಳ ಗುಣಮಟ್ಟದ ಕುರಿತು ಹೆಚ್ಚಿನ ಗಮನ ಹರಿಸುವ ಈ ಸಂಸ್ಥೆಯು ಯುರೋಪ್ ಸೇರಿದಂತೆ ಪ್ರಪಂಚದ ಅನೇಕ ಭಾಗಗಳಿಗೆ ತನ್ನ ಉತ್ಪನ್ನಗಳನ್ನು ರಫ್ತು ಮಾಡುವ ದೊಡ್ಡ ಸಂಸ್ಥೆಯಾಗಿ ಬೆಳೆದಿದೆ. ವಾರ್ಷಿಕ ಅಂದಾಜು 150 ರು. ಕೋಟಿ ವ್ಯವಹಾರ ನಡೆಸುವ ಈ ಸಂಸ್ಥೆಯಲ್ಲಿ ಸಾವಿರಕ್ಕೂ ಮಿಕ್ಕಿ ಉದ್ಯೋಗಿಗಳಿದ್ದಾರೆ.

ತಮ್ಮ ತಂದೆಯವರಾದ, ಸುಪ್ರೀಂಕೋರ್ಟ್ ನಿವೃತ್ತ ನ್ಯಾಯಮೂರ್ತಿ ಮತ್ತು ಲೋಕಸಭೆಯ ಮಾಜಿ ಸ್ಪೀಕರ್ ದಿ. ಜಸ್ಟಿಸ್ ಕೆ.ಎಸ್. ಹೆಗ್ಡೆಯವರ 'ನಮ್ಮ ಊರಿನ ಮಕ್ಕಳಿಗೆ ಒಳ್ಳೆಯ ಶಿಕ್ಷಣವು ದೊರಕುವಂತಾಗಬೇಕು' ಎನ್ನುವ ಆಶಯದಂತೆ 1979ರಲ್ಲಿ ಹುಟ್ಟೂರು ಕಾರ್ಕಳದ ನಿಟ್ಟೆ ಗ್ರಾಮದಲ್ಲಿ ಶಾಲೆ ಮತ್ತು ಕಾಲೇಜುಗಳನ್ನು ವಿನಯ್ ಹೆಗ್ಡೆ ಸ್ಥಾಪಿಸಿದರು. 'ನಿಟ್ಟೆ ಎಜ್ಯುಕೇಷನ್ ಟ್ರಸ್ಟ್' (ಎನ್‌ಇಟಿ) ಹೆಸರಿನ ಸೇವಾಸಂಸ್ಥೆ ಸ್ಥಾಪಿಸಿದರು. ಕೆಲವೇ ವಿದ್ಯಾರ್ಥಿಗಳು ಮತ್ತು ಸಣ್ಣ ಕಟ್ಟಡದೊಂದಿಗೆ ಆರಂಭವಾದ ಈ ಶಿಕ್ಷಣ ಕ್ರಾಂತಿಯು ಕಳೆದ ನಾಲ್ಕೂವರೆ ದಶಕಗಳಿಂದ ಬೆಳೆದು ನಿಂತ ಪರಿ, ವ್ಯಾಪಿಸಿದ ಪ್ರದೇಶ ನೋಡಿದರೆ ಅಚ್ಚರಿ!

ಎನ್‌ಇಟಿ ಅಡಿಯಲ್ಲಿ ನಿಟ್ಟೆ, ಮಂಗಳೂರು ಮತ್ತು ಬೆಂಗಳೂರಿನಲ್ಲಿ ನಲವತ್ತಕ್ಕೂ ಹೆಚ್ಚು ವಿದ್ಯಾಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ! ಎಲ್‌ಕೆಜಿಯಿಂದ ತೊಡಗಿ ಉನ್ನತ ಶಿಕ್ಷಣದವರೆಗಿನ ಶಿಕ್ಷಣವು ಈ ಸಂಸ್ಥೆಗಳಲ್ಲಿ ಲಭ್ಯವಿದೆ. ಈ ಶಿಕ್ಷಣ ಸಂಸ್ಥೆಗಳು ದೇಶದ ಮುಂದಿನ, ಜವಾಬ್ದಾರಿಯುತ, ಸುಶಿಕ್ಷಿತ ಜನಾಂಗವನ್ನು ರೂಪಿಸುವ ಕೈಂಕರ್ಯದಲ್ಲಿ ನಿರತವಾಗಿವೆ. ತಂದೆ ಕೆ.ಎಸ್. ಹೆಗ್ಡೆಯವರ ಹೆಸರಿನ ಸುಸಜ್ಜಿತ, ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಗಳನ್ನು ಸ್ಥಾಪಿಸಿ, ಮೆಡಿಕಲ್ ಕಾಲೇಜುಗಳ ಮೂಲಕ ಹುಟ್ಟೂರಿನವರಿಗೆ ಉನ್ನತ ಶಿಕ್ಷಣ ಮತ್ತು ಕಡಿಮೆ ದರದಲ್ಲಿ ಆರೋಗ್ಯ ಸೇವೆಗಳನ್ನು ನಿರಂತರ ನೀಡಿಕೊಂಡು ಬಂದ ಹೆಗ್ಗಳಿಕೆ ವಿನಯ್ ಹೆಗ್ಡೆ ಅವರದ್ದು. ''ಒಬ್ಬ ಸಾಮಾನ್ಯ ವಿದ್ಯಾರ್ಥಿಗೂ ಗುಣಮಟ್ಟದ ಶಿಕ್ಷಣ ಸಿಗುವಂತಾಗಬೇಕು, ತನ್ಮೂಲಕ ಆತ ಸಮಾಜದ ಆಸ್ತಿಯಾಗಬೇಕು'' ಎಂಬ ಕನಸನ್ನು ಸಾಕಾರಗೊಳಿಸಿದ ಅವರು, 86ರ ಇಳಿವಯಸ್ಸಿನಲ್ಲೂ ಸಂಸ್ಥೆಗಳನ್ನು ಸಮರ್ಥವಾಗಿ ಮುನ್ನಡೆಸುತ್ತಾ ಲವಲವಿಕೆಯಿಂದಲೇ ಇದ್ದರು. ಆರೋಗ್ಯ ಮತ್ತು ಆಹಾರದ ವಿಷಯದಲ್ಲಿ ಅತೀವ ಶಿಸ್ತು ಬೆಳೆಸಿಕೊಂಡಿದ್ದರು. ನಿಟ್ಟೆ ಡೀಮ್ಡ್ ವಿಶ್ವವಿದ್ಯಾಲಯದ ಪ್ರಸಕ್ತ ಕುಲಪತಿಗಳಾಗಿದ್ದರು. ಶಿಕ್ಷಣವನ್ನು ವ್ಯವಹಾರವಾಗಿ ನೋಡದೆ, 'ಸೇವೆ'ಯಾಗಿ ಸ್ವೀಕರಿಸಿದ ದೊಡ್ಡ ಗುಣ ಅವರನ್ನು ಜನನಾಯಕರನ್ನಾಗಿ ಮಾಡಿತು ಎಂದರೆ ತಪ್ಪಾಗಲಾರದು. ನಿಟ್ಟೆ ಶಿಕ್ಷಣ ಸಂಸ್ಥೆಗಳಲ್ಲಿ ಕಲಿತ ಲಕ್ಷಾಂತರ ಮಂದಿ ಇಂದು ದೇಶ–ವಿದೇಶಗಳಲ್ಲಿ ಉನ್ನತ ಹುದ್ದೆಯಲ್ಲಿದ್ದಾರೆ.

ಸಹಾಯ ಅಪೇಕ್ಷಿಸಿ ತಮ್ಮನ್ನು ಸಂಪರ್ಕಿಸಿದ ಪ್ರತಿಯೊಬ್ಬರಿಗೂ ಕೈಲಾದ ಸಹಾಯ–ಸಹಕಾರ ನೀಡಿ ಜನಾನುರಾಗಿ ಎನಿಸಿಕೊಂಡ ಶ್ರೇಯಸ್ಸು ವಿನಯ್ ಹೆಗ್ಡೆಯವರಿಗೆ ಸಲ್ಲುತ್ತದೆ. ಶಿಕ್ಷಣಕ್ಕೆ ಸಂಬಂಧಿಸಿದ ರಾಜ್ಯದ ಹಲವಾರು ಸಮಿತಿಗಳಲ್ಲಿ ಮತ್ತು ಕೈಗಾರಿಕಾ ಒಕ್ಕೂಟ ಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡು ಸಲಹೆ, ಸೂಚನೆ, ಮಾರ್ಗದರ್ಶನ ಅವರು ನೀಡುತ್ತಿದ್ದರು. ದಶಕಗಳ ಹಿಂದೆ ಸಣ್ಣ ಗ್ರಾಮೀಣ ಪ್ರದೇಶವಾಗಿದ್ದ 'ನಿಟ್ಟೆ'ಯ ಹೆಸರನ್ನು ಅಂತಾರಾಷ್ಟ್ರೀಯ ಮಟ್ಟದಲ್ಲಿ ಕೈಗಾರಿಕೆ–ಶಿಕ್ಷಣದ ಕ್ಷೇತ್ರದಲ್ಲಿ ಗುರುತಿಸುವಂತೆ ಮಾಡಿದ ಅನನ್ಯ ಸಾಧಕರು ಎನ್. ವಿನಯ್ ಹೆಗ್ಡೆ. ಧಾರ್ಮಿಕ, ಸಾಂಸ್ಕೃತಿಕ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲೂ ಗುರುತಿಸಿಕೊಂಡು ತಮ್ಮ ಕೊಡುಗೆಯನ್ನು ಆ ಕ್ಷೇತ್ರಗಳಿಗೂ ವಿಸ್ತರಿಸಿದ ಮಹಾನುಭಾವರು ಇವರು. ಕ್ರಿಕೆಟ್ ಮತ್ತಿತರ ಆಟಗಳ ಬಗ್ಗೆಯೂ ಶ್ರೀಯುತರಿಗೆ ವಿಶೇಷ ಆಸಕ್ತಿಯಿತ್ತು. ಅದರ ಭಾಗವಾಗಿ ಭಾರತ ಕ್ರಿಕೆಟ್ ತಂಡದ ಮಾಜಿ ಆಟಗಾರ, ಮೂಲತಃ ಕರಾವಳಿಯವರಾದ ಬಿ.ಸಿ. ಆಳ್ವಾರ ಹೆಸರಿನಲ್ಲಿ ಕ್ರೀಡಾಂಗಣವೊಂದನ್ನು ನಿರ್ಮಿಸಿ, ಪ್ರತಿವರ್ಷ ಕ್ರೀಡಾಕೂಟಗಳನ್ನು ಆಯೋಜಿಸಿ ಪಠ್ಯೇತರ ಚಟುವಟಿಕೆಗಳಿಗೂ ಪ್ರೋತ್ಸಾಹ ನೀಡುತ್ತಿದ್ದರು. ಹೆಸರಿಗೆ ಒಪ್ಪುವಂತೆ ವಿನಯವಂತ ವ್ಯಕ್ತಿಯಾಗಿದ್ದ ಇವರು, ಉತ್ತಮ ಯೋಜನೆಗಳನ್ನು ಹಾಕಿಕೊಂಡು, ನಿಖರ ಹೆಜ್ಜೆಗಳನ್ನಿಟ್ಟು ಯಶಸ್ವಿಯಾದ ದಾರ್ಶನಿಕ. ಸ್ಥಳೀಯರಿಗೆ ಉದ್ಯೋಗ, ಊರಿನ ಅಭಿವೃದ್ಧಿಗೆ ಮಹತ್ತರ ಕೊಡುಗೆ ನೀಡಿ, ಸರ್ವತೋಮುಖ ಬೆಳವಣಿಗೆಗೆ ಪೂರಕ ವಾತಾವರಣ ನಿರ್ಮಿಸಿದವರು. ಜೀವನಪರ್ಯಂತ ಮೌಲ್ಯಾಧಾರಿತ ಬದುಕು ಬಾಳಿದವರು.

ಕೈಗಾರಿಕೋದ್ಯಮಿ, ವಿದ್ಯಾದೇಗುಲಗಳ ಸಾರಥಿ, ಶಿಕ್ಷಣ ಭೀಷ್ಮ ಇಂದು ದೈಹಿಕವಾಗಿ ನಮ್ಮನ್ನು ಅಗಲಿದ್ದರೂ ಅವರು ಹಚ್ಚಿಹೋದ ಜ್ಞಾನದೀವಿಗೆ ಲಕ್ಷಾಂತರ ಮನೆ–ಮನಗಳಲ್ಲಿ ಸದಾ ಬೆಳಗುತ್ತಿರುತ್ತದೆ. ಓರ್ವ ವ್ಯಕ್ತಿ 'ಎಷ್ಟು ವರುಷ ಬದುಕಿದ್ದರು?' ಎನ್ನುವುದಕ್ಕಿಂತ 'ಎಷ್ಟು ಜನರ ಬದುಕಿಗೆ ನೆರವಾದರು–ಬೆಳಕಾದರು?' ಎನ್ನುವುದು ಬಹುಮುಖ್ಯ. ಆ ದೃಷ್ಟಿಯಿಂದ ಡಾ.ಎನ್. ವಿನಯ್ ಹೆಗ್ಡೆಯವರು ಸಾರ್ಥಕ ಜೀವನವನ್ನು ಬಾಳಿ ತೋರಿಸಿದರು. ಅವರು ಸೃಷ್ಟಿಸಿದ ವಿದ್ಯಾದೇಗುಲಗಳು, ನೀರೆರೆದು ಪೋಷಿಸಿದ ಸಂಬಂಧಗಳು, ಗಳಿಸಿದ ಪ್ರೀತಿ–ವಿಶ್ವಾಸ, ಗೌರವ–ಅಭಿಮಾನ ಚಿರಾಯು!

ಅವರ ನಿಧನವು ಒಂದು ಯುಗದ ಅಂತ್ಯದ ಸಂಕೇತವಾಗಿ ಕಾಣಿಸುತ್ತದೆ. ಹೆಗ್ಡೆಯವರ ನಾಯಕತ್ವ, ನಮ್ರತೆ, ದೂರದೃಷ್ಟಿ ಮತ್ತು ನೀಡಿದ ಕೊಡುಗೆಗಳು ಶಾಶ್ವತ ಮತ್ತು ಚಿರಸ್ಮರಣೀಯ. ತಮ್ಮ ಪಾಲಿನ ಎಲ್ಲಾ ಜವಾಬ್ದಾರಿಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸಿ, ಬಾರದ ಲೋಕಕ್ಕೆ ಪಯಣಿಸಿದ, 'ಕಾಯಕವೇ ಕೈಲಾಸ' ಎಂದು ನಂಬಿ ಬದುಕಿದ ಈ ಧೀಮಂತ–ಶ್ರೀಮಂತ ವ್ಯಕ್ತಿತ್ವಕ್ಕೆ ಕೋಟಿ ನಮನಗಳು. ಅವರು ಹಾಕಿಕೊಟ್ಟ ಆದರ್ಶ–ಸನ್ಮಾರ್ಗದಲ್ಲಿ ಸಾಗುವುದರ ಮೂಲಕ ಅವರಿಗೆ ನಿಜಾರ್ಥದಲ್ಲಿ ಶ್ರದ್ಧಾಂಜಲಿ ಸಲ್ಲಿಸುವ ಗುರುತರ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ.

(ಲೇಖಕರು ಪ್ರಚಲಿತ ವಿದ್ಯಮಾನಗಳ ವಿಶ್ಲೇಷಕರು)

ತಿದ್ದುಪಡಿ

ಸಹೃದಯಿ ಓದುಗರಲ್ಲಿ ಒಂದು ವಿನಂತಿ. ಡಿ.29ರ 'ವಿಶ್ವವಾಣಿ' ಸಂಚಿಕೆಯಲ್ಲಿನ ನನ್ನ ಲೇಖನದಲ್ಲಿ ರಾಜಾರಿಷ್ಟ ಮತ್ತು ದುಃಸ್ವಪ್ನದ ವಿಚಾರ ರಾಮಾಯಣದಲ್ಲಿ ಇಲ್ಲವೆಂದು ಬರೆದಿದ್ದೆ. ಅದು ದಶರಥ ರಾಮನಲ್ಲಿ ಹೇಳುವ ಮಾತೇ ಹೊರತು ಕೈಕೇಯಿಯ ಬಳಿ ಹೇಳುವ ಮಾತಲ್ಲ ಅಂತ ಬರೆಯುವುದಕ್ಕೆ ಹೋಗಿ ಸಣ್ಣ ಪ್ರಮಾದ ಘಟಿಸಿದೆ. ರಾಜಾರಿಷ್ಟ ಮತ್ತು ದುಃಸ್ವಪ್ನದ ವಿಚಾರ ವಾಲ್ಮೀಕಿ ರಾಮಾಯಣದ ನಾಲ್ಕನೇ ಸರ್ಗದಲ್ಲಿ ಬರುತ್ತದೆ. ಆದರೆ ಪ್ರಸಂಗ ಪಠ್ಯದಲ್ಲಿ ಈ ವಿಚಾರ ಇಲ್ಲ. ಇದನ್ನು ಓದುಗರು ಗಮನಿಸಬೇಕಾಗಿ ವಿನಂತಿಸಿಕೊಳ್ಳುತ್ತೇನೆ. – ಗ.ನಾ.ಭಟ್ಟ

ಅಚ್ಚುಕಟ್ಟು ಪ್ರದೇಶ
RNI : KARKAN/2016/67914
VISHVAVANI, Edited & Published by : VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942, Printed at M/s Digantha Mudhrana Ltd. NT Road, Shivamogga - 577 201
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:10, Issue: 352

ಸಮಾಚಾರ ಸಣ್ಣದಲ್ಲ

ವೈಸ್ ಏರ್ ಚೀಫ್ ನಾಗೇಶ್ ಕಪೂರ್

ದೆಹಲಿ: ಭಾರತೀಯ ವಾಯುಪಡೆಯ(ಐಎಎಫ್) ಉಪ ಮುಖ್ಯಸ್ಥರಾಗಿ(ವೈಸ್ ಏರ್ ಚೀಫ್ ಆಫ್ ಏರ್ ಸ್ಟಾಫ್) ಏರ್ ಮಾರ್ಷಲ್ ನಾಗೇಶ್ ಕಪೂರ್ ಗುರುವಾರ ಅಧಿಕಾರ ಸ್ವೀಕರಿಸಿದರು. ಈವರೆಗೆ ವೈಸ್ ಏರ್‌ಚೀಫ್ ಆಫ್ ಏರ್ ಸ್ಟಾಫ್ ಆಗಿದ್ದ ನರ್ಮದೇಶ್ವರ್ ತಿವಾರಿ ನಿವೃತ್ತರಾಗಿದ್ದರಿಂದ ಅವರ ಸ್ಥಾನಕ್ಕೆ ಕಪೂರ್ ನೇಮಕವಾಗಿದೆ. ದೆಹಲಿಯಲ್ಲಿನ ಏರ್ ಫೋರ್ಸ್ ಭವನದಲ್ಲಿ ಕಪೂರ್ ಅವರಿಗೆ ಗೌರವ ವಂದನೆ ಸಲ್ಲಿಸಲಾಯಿತು. 1986ರ ಡಿಸೆಂಬರ್‌ನಲ್ಲಿ ವಾಯುಪಡೆ ಫ್ಲೈಯಿಂಗ್ ಸ್ಕ್ವಾಡ್‌ಗೆ ನಿಯೋಜನೆಗೊಂಡ ನಾಗೇಶ್ ಕಪೂರ್, 38 ವರ್ಷಗಳಿಂದ 'ಐಎಎಫ್' ಸೇವೆಯಲ್ಲಿದ್ದಾರೆ.

ಚೀನಾದಲ್ಲಿ ತೈವಾನ್ ವಿಲೀನ ಶೀಘ್ರ: ಕ್ಸಿ

ಬೀಜಿಂಗ್: ತೈವಾನ್ ಸದ್ಯದಲ್ಲೇ ಚೀನಾದಲ್ಲಿ ವಿಲೀನವಾಗಲಿದೆ. ಅದನ್ನು ಯಾರಿಂದಲೂ ತಡೆಯಲು ಸಾಧ್ಯವಿಲ್ಲ ಎಂದು ಚೀನಾ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ದೃಢವಾಗಿ ಹೇಳಿದ್ದಾರೆ. 2026ನೇ ವರ್ಷದ ಸ್ವಾಗತ ಭಾಷಣದಲ್ಲಿ ಅವರು ಈ ಮಾತನ್ನಾಡಿದ್ದಾರೆ. ತೈವಾನ್ ಜಲಸಂಧಿಯ ಎರಡೂ ಬದಿ ಇರುವವರು ಚೀನೀಯರೇ ಆಗಿದ್ದಾರೆ. ಅವರು ನಮ್ಮೊಂದಿಗೆ ರಕ್ತ ಸಂಬಂಧ ಹೊಂದಿದ್ದಾರೆ. ನಮ್ಮ ತಾಯ್ನೆಲದ ಮರು ಏಕೀಕರಣ ಸದ್ಯದಲ್ಲೇ ಆಗಲಿದೆ ಎಂದು ಘೋಷಿಸಿದರು. ಜಾಗತಿಕ ಬಿಕ್ಕಟ್ಟಿನ ಸಂದರ್ಭಗಳಲ್ಲೆಲ್ಲಾ ಚೀನಾ ಸದಾ ಇತಿಹಾಸದ ಬಲಬದಿಯೇ ಇರುತ್ತದೆ, ಶಾಂತಿ-ಅಭಿವೃದ್ಧಿ ವಿಚಾರಗಳು ಬಂದಾಗ ಎಲ್ಲಾ ದೇಶಗಳ ಜತೆಗೂ ನಿಲ್ಲುತ್ತದೆ ಎಂದಿದ್ದಾರೆ. ಬ್ರಹ್ಮಪುತ್ರಾ ನದಿಗೆ ವಿಶ್ವದಲ್ಲೇ ಅತ್ಯಂತ ದೊಡ್ಡದಾದ ಅಣೆಕಟ್ಟೆ ನಿರ್ಮಿಸುವುದನ್ನೂ ಪ್ರಸ್ತಾಪಿಸಿದ್ದಾರೆ.

ಲಷ್ಕರೆ ಮೂಲ ನಾಶ ಒಪ್ಪಿಕೊಂಡ ಕಸೂರಿ

ಇಸ್ಲಾಮಾಬಾದ್: ಆಪರೇಷನ್ ಸಿಂಧೂರ್ ಸೇನಾ ಕಾರ್ಯಾಚರಣೆ ಮೂಲಕ ಪಾಕಿಸ್ತಾನದಲ್ಲಿನ ನಮ್ಮ ಸಂಘಟನೆಗಳ ಮೂಲಸೌಕರ್ಯವನ್ನು ಭಾರತ ನಾಶಪಡಿಸಿದೆ. ನಮ್ಮ ಶಿಬಿರಗಳ ಮೇಲೆ ದಾಳಿ ನಡೆಸಿ ಭಾರತ ತಪ್ಪು ಮಾಡಿದೆ ಎಂದು ಲಷ್ಕರ್-ಎ-ತಯ್ಯಬಾ ಉಗ್ರ ಸಂಘಟನೆಯ ನಾಯಕ, ಪಹಲ್ಗಾಮ್ ಭಯೋತ್ಪಾದಕ ದಾಳಿಯ ಮಾಸ್ಟರ್ ಮೈಂಡ್ ಸೈಫುಲ್ಲಾ ಕಸೂರಿ ಗುಟುರು ಹಾಕಿದ್ದಾನೆ. ಕಾಶ್ಮೀರ, ಅಮೃತಸರ, ಹೋಶಿಯಾರ್‌ಪುರ, ಗುರುದಾಸ್‌ಪುರ, ಜುನಾಗಢ, ಮುನವದರ್‌ನ ಕೆಲವು ಭಾಗಗಳು, ಹೈದರಾಬಾದ್ ಡೆಕ್ಕನ್, ಬಂಗಾಳವನ್ನು ಪಾಕಿಸ್ತಾನದಿಂದ ಕಿತ್ತುಕೊಳ್ಳಲಾಗಿದೆ ಎಂದು ಆರೋಪಿಸಿದ್ದಾನೆ. ಕಾಶ್ಮೀರ ಕಾರ್ಯಾಚರಣೆಯಿಂದ ಎಂದೂ ಹಿಂದೆ ಸರಿಯುವುದಿಲ್ಲ. ಇಡೀ ಜಗತ್ತನ್ನು ತಲೆಕೆಳಗು ಮಾಡಬಹುದು, ವ್ಯವಸ್ಥೆಯನ್ನು ಬದಲಿಸಬಹುದು. ಆದರೆ ಉದ್ದೇಶಗಳಿಂದ ನಾವು ಹಿಂದೆ ಸರಿಯಲ್ಲ ಎಂದು ಕಿಡಿಕಾರಿದ್ದಾನೆ.

ತಂಬಾಕು ಉತ್ಪನ್ನಗಳಿಗೆ ಫೆ.1ರಿಂದ ಸುಂಕ ಅಧಿಕ

ದೆಹಲಿ: ಸರಕು ಮತ್ತು ಸೇವೆಗಳ ತೆರಿಗೆ(ಜಿಎಸ್‌ಟಿ) ನಿಯಮಗಳಲ್ಲಿ ಕೇಂದ್ರದ ಹಣಕಾಸು ಸಚಿವಾಲಯ ಇತ್ತೀಚೆಗೆ ತಂದಿರುವ ಬದಲಾವಣೆಗಳ ಅನ್ವಯ ಹೊಸ ವರ್ಷದ 2ನೇ ತಿಂಗಳ(ಫೆಬ್ರವರಿ) ಮೊದಲ ದಿನದಿಂದಲೇ ಸಿಗರೇಟ್, ಬೀಡಿ, ತಂಬಾಕು ಉತ್ಪನ್ನಗಳು ಮತ್ತಷ್ಟು ತುಟ್ಟಿ ಆಗಿವೆ. ಮೂರು ಶ್ರೇಣಿಗಳಲ್ಲಿದ್ದ ಜಿಎಸ್‌ಟಿ ತೆರಿಗೆ ಪ್ರಮಾಣವನ್ನು ಎರಡು ಶ್ರೇಣಿಗಳಿಗೆ ಇಳಿಸಿದ ಕೇಂದ್ರ ಹಣಕಾಸು ಸಚಿವಾಲಯ, ಸಿಗರೇಟ್, ಬೀಡಿ. ಪಾನ್ ಮಸಾಲ ಸೇರಿದಂತೆ ತಂಬಾಕು ಉತ್ಪನ್ನಗಳನ್ನು 'ಪಾಪದ ಉತ್ಪನ್ನಗಳು' ಪಟ್ಟಿಗೆ ಸೇರಿಸಿದೆ. ಹಾಗಾಗಿ ಈ ನಶೆಯ ಉತ್ಪನ್ನಗಳು ಶೇ.40ರಷ್ಟು ತೆರಿಗೆ ಪಟ್ಟಿಗೆ ಒಳಪಟ್ಟಿವೆ. ಜತೆಗೆ ಹೆಚ್ಚುವರಿಯಾಗಿ ಅಬಕಾರಿ ಸುಂಕ, ಆರೋಗ್ಯ ಮತ್ತು ರಾಷ್ಟ್ರೀಯ ಭದ್ರತಾ ಸುಂಕವೂ ಈ ಕೆಟ್ಟ ಪರಿಣಾಮದ ತಂಬಾಕು ಉತ್ಪನ್ನಗಳ ಮೇಲೆ ಬೀಳಲಿದೆ. ಬಡವರು ನಶೆ ಏರಿಸಿಕೊಳ್ಳಲು ಬಳಸುವ ಬೀಡಿಗೆ ಮಾತ್ರ ಶೇ.18ರಷ್ಟು ಜಿಎಸ್‌ಟಿ ನಿಗದಿಯಾಗಿದೆ.

19 ಕೆಜಿ ಎಲ್ಪಿಜಿ ತುಟ್ಟಿ

ದೆಹಲಿ: ಹೊಸ ವರ್ಷದ ಮೊದಲ ದಿನವೇ(ಜ.1) ವಾಣಿಜ್ಯ ಬಳಕೆಯ 19 ಕಿಲೋ ಅಡುಗೆ ಅನಿಲ ಸಿಲಿಂಡರ್ ಬೆಲೆ ಒಮ್ಮೆಲೇ 111 ರು.ಗಳಷ್ಟು ಏರಿಕೆಯಾಗಿದೆ. ಪರಿಣಾಮ ದೇಶಾದ್ಯಂತದ ಹೋಟೆಲ್, ರೆಸ್ಟೋರೆಂಟ್ ಮತ್ತಿತರ ಸಣ್ಣ ಉದ್ಯಮಗಳಿಗೆ ನಿರ್ವಹಣಾ ವೆಚ್ಚ ಹೆಚ್ಚಲಿದೆ. ದೆಹಲಿಯಲ್ಲಿ 19 ಕೆಜಿ ಎಲ್‌ಪಿಜಿ ಸಿಲಿಂಡರ್ ಬೆಲೆ 1,580.50 ರು.ನಿಂದ ಒಮ್ಮೆಲೇ 1,691.50 ರು.ಗೆ ಏರಿಕೆಯಾಗಿದೆ. ಕೋಲ್ಕತ್ತದಲ್ಲಿ 1,684 ರು.ಗಳಿಂದ 1,795 ರು.ಗಳಿಗೆ, ಮುಂಬೈನಲ್ಲಿ 1,531 ರು.ನಿಂದ 1,642.50 ರು.ಗಳಿಗೆ ಏರಿಕೆಯಾಗಿದೆ. 14 ಕೆಜಿ ಗೃಹಬಳಕೆ ಸಿಲಿಂಡರ್ ಬೆಲೆಯಲ್ಲಿ ಯಾವುದೇ ಬದಲಾವಣೆ ಆಗಿಲ್ಲ.

{ ಅಸಾದುದ್ದೀನ್ ಓವೈಸಿ } ಎಐಎಂಐಎಂ ಸಂಸದ

ಭಾರತ-ಪಾಕ್ ಯುದ್ಧ ನಿಲುಗಡೆಗೆ ತನ್ನದೇ ಮಧ್ಯಸ್ಥಿಕೆ ಎಂಬ ಚೀನಾ ಹೇಳಿಕೆ ಅಪಮಾನಕಾರಿಯಾಗಿದೆ. ಇದನ್ನು ಕೇಂದ್ರ ಸರಕಾರ ಬಲವಾಗಿ ಖಂಡಿಸಬೇಕು. ಭಾರತ-ಪಾಕ್ ಒಂದೇ ಮಟ್ಟದಲ್ಲಿರಿಸಲು ಚೀನಾ ಬಯಸಿ ತನ್ನನ್ನು ಬಲಾಢ್ಯ ಎಂದು ಬಿಂಬಿಸಿಕೊಳ್ಳಲು ಯತ್ನಿಸುತ್ತಿದೆ. ಚೀನಾದ ಇಂಥ ನಡೆ ಭಾರತದ ಗೌರವ-ಸಾರ್ವಭೌಮತೆಗೆ ತಕ್ಕದಾಗಿಲ್ಲ.

---

50 ವರ್ಷ ವ್ಯಕ್ತಿಗೆ ಜೀವಂತ ಬೆಂಕಿ ಹಚ್ಚಿ ಕೊಲ್ಲಲೆತ್ನಿಸಿದ ಗುಂಪು | ಬಾಂಗ್ಲಾದೇಶದಲ್ಲಿ 4ನೇ ಹಿಂದೂ ವ್ಯಕ್ತಿ ಮೇಲೆ ಹಲ್ಲೆ ಸರಣಿ | ಖೋಕೊನ್ ದಾಸ್ ಸ್ವಲ್ಪದರಲ್ಲಿ ಪಾರು

ಹಿಂದೂ ಸಜೀವ ದಹನ ಯತ್ನ

ಢಾಕಾ: ಮುಸ್ಲಿಂ ಬಹುಸಂಖ್ಯಾತವಾಗಿರುವ ಬಾಂಗ್ಲಾದೇಶದಲ್ಲಿ ಅಲ್ಪಸಂಖ್ಯಾತ ಹಿಂದೂಗಳ ಮೇಲೆ ದಾಳಿ ನಡೆಯುವುದು ನಿರಂತರ ಮುಂದುವರೆದಿದೆ.

ಬಾಂಗ್ಲಾದೇಶದ ಶರಿಯತ್‌ಪುರ ಜಿಲ್ಲೆಯಲ್ಲಿ ಉದ್ರಿಕ್ತ ಗುಂಪೊಂದು ಬುಧವಾರ ತಡರಾತ್ರಿ ಮತ್ತೊಬ್ಬ ಹಿಂದೂ ವ್ಯಕ್ತಿಯ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿ, ಬಳಿಕ ಬೆಂಕಿ ಹಚ್ಚಿ ಸಜೀವ ದಹನ ಮಾಡಲು ಯತ್ನಿಸಿದೆ. ಅದೃಷ್ಟವಶಾತ್ 50 ವರ್ಷದ ಹಿಂದೂ ವ್ಯಕ್ತಿ ಸ್ವಲ್ಪದರಲ್ಲಿ ಪ್ರಾಣಾಪಾಯದಿಂದ ಪಾರಾಗಿದ್ದಾರೆ.



ಮೊಹಮ್ಮದ್ ಯೂನುಸ್

ಖೋಕೊನ್ ದಾಸ್ ಮೇಲೆ ಹಲ್ಲೆ ನಡೆಸಿದ ನಂತರ ಅವರಿಗೆ ಬೆಂಕಿ ಹಚ್ಚಿ ಸಜೀವವಾಗಿ ಸುಟ್ಟ ಹಾಕಲು ಯತ್ನಿಸಲಾಗಿದೆ. ಇದರಿಂದ ಗಂಭೀರವಾಗಿ ಗಾಯಗೊಂಡು ಸಾವು-ಬದುಕಿನ ನಡುವೆ ಹೋರಾಟ ನಡೆಸುತ್ತಿದ್ದಾರೆ.

ಡಿ.31ರಂದು ಖೋಕೊನ್ ದಾಸ್ ಮನೆಗೆ ಹೋಗುತ್ತಿದ್ದಾಗ ಅವರನ್ನು ಮಾರ್ಗಮಧ್ಯೆಯೇ ತಡೆದು ನಿಲ್ಲಿಸಿದ ಗುಂಪೊಂದು ಜಗಳ ತೆಗೆದು ಬಳಿಕ ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿದೆ. ಗಾಯಗೊಂಡು ಕೆಳಕ್ಕೆ ಬಿದ್ದು ನರಳುತ್ತಿದ್ದ ಖೋಕೊನ್ ದಾಸ್ ಮೇಲೆ ತೈಲ ಸುರಿದು ಬೆಂಕಿ ಹಚ್ಚಲು ಯತ್ನಿಸಿದೆ. ಸಜೀವ ದಹನವಾಗುವುದರಿಂದ ಖೋಕೊನ್ ದಾಸ್ ಸ್ವಲ್ಪದರಲ್ಲಿ ಪಾರಾಗಿದ್ದಾರೆ. ಗಂಭೀರವಾಗಿ ಗಾಯಗೊಂಡು ನರಳುತ್ತಾ ಬಿದ್ದಿದ್ದ ಅವರನ್ನು ಸಮುದಾಯದ ಕೆಲವರು ನೋಡಿ ಆಸ್ಪತ್ರೆ ಕರೆದೊಯ್ದು ದಾಖಲಿಸಿ ಚಿಕಿತ್ಸೆ ಕೊಡಿಸಿದ್ದಾರೆ. ದಾಸ್ ದೇಹದ ಮೇಲೆಲ್ಲಾ ಮಾರಕಾಸ್ತ್ರಗಳ ಹೊಡೆತದಿಂದಾಗಿ ಹತ್ತಾರು ಗಾಯಗಳಾಗಿವೆ. ಜತೆಗೆ ಬೆಂಕಿಯಿಂದ ಸುಟ್ಟ ಗಾಯಗಳೂ ಆಗಿವೆ. ಆಸ್ಪತ್ರೆ ದಾಸ್‌ಗೆ ಚಿಕಿತ್ಸೆ ಮುಂದುವರಿದಿದೆ.

ಚುನಾಯಿತ ಪ್ರಧಾನಿ ಶೇಕ್ ಹಸೀನಾ ಸರಕಾರ ವಿದ್ಯಾರ್ಥಿಗಳ ಕ್ಷಿಪ್ರ ದಂಗೆಯ ಕಾರಣ ಪದಚ್ಯುತಿಗೊಂಡ ಬಳಿಕ ಬಾಂಗ್ಲಾದೇಶದಲ್ಲಿ ಮಧ್ಯಂತರ ಸರಕಾರದ ಆಡಳಿತ ನಡೆದಿದೆ. ನೊಬೆಲ್ ಪ್ರಶಸ್ತಿ ಪುರಸ್ಕೃತ ಮೊಹಮ್ಮದ್ ಯೂನುಸ್ ನೇತೃತ್ವದ ಮಧ್ಯಂತರ ಸರಕಾರದ ಆಡಳಿತ ಕಾದಲ್ಲಿ ಬಾಂಗ್ಲಾದೇಶದಲ್ಲಿ ಅಲ್ಪಸಂಖ್ಯಾತ ಹಿಂದೂ ಸಮುದಾಯದ ಮೇಲೆ ಸರಣಿಯೋಪಾದಿಯಲ್ಲಿ ಮಾರಣಾಂತಿಕ ದಾಳಿಗಳು ನಡೆಯುತ್ತಿದ್ದು, ಈಗಾಗಲೇ ಇಬ್ಬರು ಯುವಕರು ಹತರಾಗಿದ್ದಾರೆ. ಭಾರತದ ಎಚ್ಚರಿಕೆಯನ್ನೂ ಬಾಂಗ್ಲಾದೇಶದಲ್ಲಿನ ಮಧ್ಯಂತರ ಸರಕಾರ ಅಷ್ಟಾಗಿ ಗಮನಕ್ಕೆ ತೆಗೆದುಕೊಂಡಂತಿಲ್ಲ ಎಂಬ ಮಾತುಗಳೂ ಕೇಳಿಬರುತ್ತಿವೆ.

ಬಾಂಗ್ಲಾದೇಶದ ಶರಿಯತ್‌ಪುರ ಜಿಲ್ಲೆಯಲ್ಲಿ ಹಲ್ಲೆಯಿಂದ ಗಾಯಗೊಂಡಿರುವ ಖೋಕೊನ್ ದಾಸ್‌ಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ ನಡೆದಿದೆ.

4ನೇ ಮಾರಣಾಂತಿಕ ದಾಳಿ

ಕಳೆದ 2 ವಾರಗಳಲ್ಲಿ ಬಾಂಗ್ಲಾದೇಶದಲ್ಲಿ ಹಿಂದೂ ಸಮುದಾಯದವರ ಮೇಲೆ ನಡೆದ ನಾಲ್ಕನೇ ಮಾರಣಾಂತಿಕ ದಾಳಿ ಇದಾಗಿದೆ. ಮೊದಲಿನ 2 ಪ್ರಕರಣಗಳಲ್ಲಿ ಹಿಂದೂ ಯುವಕರು ದುರ್ಮರಣಕ್ಕೀಡಾಗಿದ್ದಾರೆ. ಖೋಕೋನ್ ದಾಸ್ ಮತ್ತು ಇನ್ನೊಬ್ಬರು ಪ್ರಾಣ ಸಹಿತ ಉಳಿದುಕೊಂಡಿದ್ದಾರೆ. ಆದರೆ, ಖೋ ಕೊನ್ ದಾಸ್‌ಗೆ ಗಂಭೀರ ಸ್ವರೂಪದ ಗಾಯಗಳಾ ಗಿದ್ದು, ಚೇತರಿಸಿಕೊಂಡು ಆಸ್ಪತ್ರೆಯಿಂದ ಡಿಸ್‌ಚಾರ್ಜ್ ಅಗಲು ಇನ್ನಷ್ಟು ದಿನಗಳೇ ಬೇಕಾಗುತ್ತವೆ ಎನ್ನಲಾಗಿದೆ.

ಇಬ್ಬರು ಹಿಂದೂ ಯುವಕರ ಬಲಿ

ಇದಕ್ಕೂ ಮುನ್ನ, ಡಿ.18ರಂದು ದೀಪು ಚಂದ್ರದಾಸ್ ಎಂಬ 25 ವರ್ಷದ ಯುವಕನನ್ನು ಉದ್ರಿಕ್ತ ಮುಸ್ಲಿಮರ ಗುಂಪು ಬೀದಿಗೆಳೆದು ತಂದು ಮಾರಾಕಾಸ್ತ್ರಗಳು, ಕೈಗೆ ಸಿಕ್ಕ ದೊಣ್ಣೆ, ಇಟ್ಟಿಗೆಗಳಿಂದ ಹಲ್ಲೆ ನಡೆಸಿ ಬರ್ಬರವಾಗಿ ಹತ್ಯೆ ಮಾಡಿತ್ತು. ಬಳಿಕ ಸಮೀಪದಲ್ಲಿದ್ದ ಮರಕ್ಕೆ ದೇಹವನ್ನು ನೇತು ಹಾಕಿ ಸುಟ್ಟು ಹಾಕಿತ್ತು. ಡಿ.24ರಂದು ಬಾಂಗ್ಲಾದೇಶದ ಕಲಿಮೊಹರ್ ಯೂನಿಯನ್‌ನ ಹೊಸೈನ್‌ದಂಗ ಪ್ರದೇಶದಲ್ಲಿ 29 ವರ್ಷದ ಅಮೃತ್ ಮೊಂಡಲ್ ಎಂಬ ಯುವಕನನ್ನು ಸಹೋದ್ಯೋಗಿ ಮುಸ್ಲಿಂ ವ್ಯಕ್ತಿಯೇ ಗುಂಡಿಕ್ಕಿ ಹತ್ಯೆ ಮಾಡಿದ.

ಯೂನುಸ್ ಮತ್ತೊಬ್ಬ ಸಲಹೆಗಾರ ಪದತ್ಯಾಗ

ಢಾಕಾ: ನೊಬೆಲ್ ಪ್ರಶಸ್ತಿ ಪುರಸ್ಕೃತ ಮೊಹಮ್ಮದ್ ಯೂನುಸ್ ನೇತೃತ್ವದ ಬಾಂಗ್ಲಾದೇಶದ ಮಧ್ಯಂತರ ಸರಕಾರ ಸರಾಗವಾಗಿ ಆಡಳಿತ ನಡೆಸುವುದೇ ಕಷ್ಟವಾಗುತ್ತಿದೆ. ಕಳೆದೊಂದು ವಾರದಲ್ಲೇ ಇಬ್ಬರು ಪ್ರಮುಖ ಇಲಾಖೆಗಳ ಸಲಹೆಗಾರರು ರಾಜೀನಾಮೆ ಸಲ್ಲಿಸಿರುವುದರಿಂದ ಮೊಹಮ್ಮದ್ ಯೂನುಸ್ ನೇತೃತ್ವದ ಮಧ್ಯಂತರ ಸರಕಾರ ಕುಂಟುತ್ತಾ ಸಾಗಿದೆ. ಆರೋಗ್ಯ ಸಚಿವಾಲಯಕ್ಕೆ ಸಲಹೆಗಾರರಾಗಿದ್ದ ಸಯೇದುರ್ ರೆಹಮಾನ್ ರಾಜೀನಾಮೆ ಸಲ್ಲಿಸಿದ್ದಾರೆ ಎಂದು ಗುರುವಾರ ಸರಕಾರದ ಪ್ರಕಟಣೆ ತಿಳಿಸಿದೆ. ಆದರೆ, ರೆಹಮಾನ್ ರಾಜೀನಾಮೆಗೆ ಕಾರಣ ಎನ್ನುವುದನ್ನು ಸರಕಾರ ಬಹಿರಂಗಪಡಿಸಿಲ್ಲ. ನಾನು ತಿಂಗಳ ಹಿಂದೆಯೇ ರಾಜೀನಾಮೆ ಪತ್ರವನ್ನು ಮಧ್ಯಂತರ ಸರಕಾರದ ಮುಖ್ಯಸ್ಥ ಯೂನುಸ್ ಅವರಿಗೆ ಸಲ್ಲಿಸಿದ್ದೆ. ಆದರೆ, ಅವರು ಇಂದು ಅದನ್ನು ಅಂಗೀಕರಿಸಿದ್ದಾರೆ ಎಂದು ರೆಹಮಾನ್ 'ಪ್ರೊಥೊಮ್ ಅಲೊ' ಪತ್ರಿಕೆಗೆ ಪ್ರತಿಕ್ರಿಯಿಸಿದ್ದಾರೆ. ರೆಹಮಾನ್ ಅವರು, ಬಂಗಬಂಧು ಷೇಕ್ ಮುಜೀಬ್ ವೈದ್ಯಕೀಯ ವಿಶ್ವವಿದ್ಯಾಲಯದ ಉಪ ಕುಲಪತಿಯಾಗಿದ್ದರು. ಇದಕ್ಕೂ ಮುನ್ನ ಗೃಹ ಸಚಿವಾಲಯಕ್ಕೆ ವಿಶೇಷ ಸಲಹೆಗಾರರಾಗಿದ್ದ ಖುದಾ ಬಕ್ಷ ಅವರು ಡಿ.24ರಂದೇ ರಾಜೀನಾಮೆ ಸಲ್ಲಿಸಿ ಯೂನುಸ್ ಸರಕಾರದಿಂದ ನಿರ್ಗಮಿಸಿದ್ದರು. ಇಬ್ಬರು ಪ್ರಮುಖ ಸಲಹೆಗಾರರ ದಿಢೀರ್ ನಿರ್ಗಮನದಿಂದ ಯೂನುಸ್ ಸರಕಾರ ಸಂಕಷ್ಟಕ್ಕೆ ಸಿಲುಕಿದೆ ಎಂಬ ಮಾತುಗಳು ಕೇಳಿಬಂದಿವೆ.

ವೈದ್ಯ, ದಂತ ವೈದ್ಯ ವಿದ್ಯಾರ್ಥಿ, ಐಟಿ ಉದ್ಯೋಗಿ ಸೇರಿ 7 ಮಂದಿ ಸೆರೆ | ಬೆಂಗಳೂರಿನಿಂದ ಪೂರೈಕೆ

ಮಾದಕ ದ್ರವ್ಯ ಜಾಲದಲ್ಲಿ ಕೇರಳ

ತಿರುವನಂತಪುರಂ: ಕೇರಳದಲ್ಲಿ ಮಾದಕ ದ್ರವ್ಯದ ಘಾಟು ಜೋರಾಗಿದೆ. ಹೊಸ ವರ್ಷದ ಸಂಭ್ರಮದಲ್ಲಿ ಮಾದಕ ದ್ರವ್ಯದ ನಶೆ ಏರಿಸಿಕೊಂಡಿದ್ದ ವೈದ್ಯ, ಇಬ್ಬರು ಯುವತಿಯರು ಸೇರಿದಂತೆ 7 ಮಂದಿ ಬಂಧನಕ್ಕೊಳಗಾಗಿದ್ದಾರೆ.

ತಿರುವನಂತಪುರಂನ ಥೊಪ್ಪಿಲ್ ಪ್ರದೇಶದ ಕಾನಿಪುರಂನಲ್ಲಿ ಬಾಡಿಗೆ ಮನೆಯೊಂದರಲ್ಲಿ ಮಾದಕದ್ರವ್ಯದ ನಶೆ ಏರಿಸಿಕೊಂಡಿದ್ದ ವೈದ್ಯ ವಿಗ್ನೇಶ್ ದಾಥನ್, ಡೆಂಟಲ್ ಸರ್ಜರಿ (ಬಿಡಿಎಸ್) ವಿದ್ಯಾರ್ಥಿ ಹಲೀನಾ, ಅಸೀಮ್, ಅವಿನಾಶ್, ಅಜಿತ್, ಅನ್ಸಿಯಾ ಮತ್ತು ಹರೀಶ್ ಬಂಧಿತರು.

ಇವರೆಲ್ಲರೂ ಮಾದಕದ್ರವ್ಯ ವ್ಯಸನಿಗಳಾಗಿದ್ದಾರೆ. ಇವರಿಗೆ ಬೆಂಗಳೂರಿನಿಂದ ಎಂಡಿಎಂಎ ಮತ್ತು ಇತರೆ ಮಾದಕದ್ರವ್ಯಗಳು ಸರಬರಾಜಾಗಿವೆ. ಇದೇ ಬಗೆಯಲ್ಲಿ ಮಾದಕದ್ರವ್ಯಗಳು ವೈದ್ಯರು ಮತ್ತು ವೈದ್ಯಕೀಯ ವಿದ್ಯಾರ್ಥಿಗಳಿಗೆ ಹಾಗೂ ಐಟಿ ಉದ್ಯೋಗಿಗಳಿಗೆ ಸರಬರಾಜು ಆಗುತ್ತಿರುವ ಬಗ್ಗೆ ಮಾಹಿತಿ ಇದೆ ಎಂದು ಪೊಲೀಸರು ಸುದ್ದಿಗಾರರಿಗೆ ತಿಳಿಸಿದ್ದಾರೆ. ಮಾಹಿತಿ ತಂತ್ರಜ್ಞಾನ(ಐಟಿ) ಕಂಪನಿ ಉದ್ಯೋಗಿಯಾಗಿರುವ ಅವಿನಾಶ್ ಮತ್ತು ಅಸೀಮ್, ಅಜಿತ್ ಮತ್ತು ಅನ್ಸಿಯಾ ಈ ಹಿಂದೆಯೂ ಮಾದಕ ದ್ರವ್ಯದ ಹಲವು ಪ್ರಕರಣಗಳಲ್ಲಿ ಆರೋಪಿಗಳಾಗಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಆರೋಪಿಗಳ ಬಳಿ ಬಗೆ ಬಗೆ ಮಾದಕ ದ್ರವ್ಯ

ಏಳು ಮಂದಿಯ ಬಳಿಯಿಂದ 4 ಗ್ರಾಂ ಎಂಡಿ ಎಂಎ, 1 ಗ್ರಾಂ ಹೈಬ್ರಿಡ್ ಕೆನ್ನಬೀಸ್, 100 ಗ್ರಾಂ ಗಾಂಜಾ ಮತ್ತು ಇತರೆ ಮಾದಕ ದ್ರವ್ಯದ ಸಾಮಗ್ರಿಗಳನ್ನು ವಶಪಡಿಸಿಕೊಳ್ಳಲಾಗಿದೆ. ಜತೆಗೆ ಆರೋಪಿಗಳಿಗೆ ಸೇರಿದ 2 ಕಾರುಗಳು, 2 ಮೋಟಾರ್ ಬೈಕ್‌ಗಳು ಮತ್ತು 10 ಸ್ಮಾರ್ಟ್ ಫೋನ್‌ಗಳನ್ನೂ ವಶಕ್ಕೆ ತೆಗೆದುಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಇದೇ ಮೊದಲಲ್ಲ: ಆರೋಪಿಗಳು ಮಾದಕದ್ರವ್ಯದ ಸಾಗಣೆ, ಸಂಗ್ರಹಣೆ, ವಿತರಣೆಯಲ್ಲಿಯೂ ನುರಿತಿರುವ ಒಂದು ತಂಡವಾಗಿದ್ದಾರೆ. ಬಹಳ ವರ್ಷಗಳಿಂದ ಮಾದಕ ದ್ರವ್ಯ ಜಾಲದಲ್ಲಿದ್ದಾರೆ. ಈ ಹಿಂದೆಯೂ ಒಮ್ಮೆ ಈ ತಂಡವನ್ನು ಭೇದಿಸುವ ಕಾರ್ಯಾಚರಣೆಯನ್ನು ಪೊಲೀಸರು ನಡೆಸಿದ್ದರು. ಆಗ ಆರೋಪಿಗಳು ತಮ್ಮ ಕಾರಿನಿಂದ ಪೊಲೀಸ್ ಜೀಪ್‌ಗೆ ಬಲವಾಗಿ ಗುದ್ದಿಸಿ ಜಖಂಗೊಳಿಸಿ ಸ್ಥಳದಿಂದ ಪರಾರಿಯಾಗಿದ್ದರು ಎಂದು ಅಧಿಕಾರಿಗಳು ನೆನಪಿಸಿಕೊಂಡಿದ್ದಾರೆ.

ಢಾಕಾದಲ್ಲಿ ಪಾಕ್ ಸ್ಪೀಕರ್ ಕೈಕುಲುಕಿದ ಜೈಶಂಕರ್

ಢಾಕಾ: ಕೀಡಾಂಗಣದಲ್ಲಿ ಪಾಕಿಸ್ತಾನದ ಕ್ರೀಡಾಪಟುಗಳ ಕೈಕುಲುಕಲು ಭಾರತ ಕ್ರಿಕೆಟ ಪಟುಗಳು ನಿರಾಕರಿಸಿದ ಸುದ್ದಿ-ವಿಡಿಯೊ ಭಾರೀ ಸದ್ದು ಮಾಡಿತ್ತು. ಎರಡೂ ದೇಶಗಳಲ್ಲಿಯೂ ಭಾರೀ ಚರ್ಚೆ ಹುಟ್ಟು ಹಾಕಿತ್ತು. ಆದರೆ, ಭಾರತದ ವಿದೇಶಾಂಗ ಸಚಿವ ಎಸ್.ಜೈಶಂಕರ್ ಢಾಕಾದಲ್ಲಿ ಪಾಕ್‌ನ ಸಂಸತ್ತಿನ ಸ್ಪೀಕರ್ ಸರ್ದಾರ್ ಅಯಾಜ್ ಸಾದಿಕ್ ಅವರ ಕೈಕುಲುಕಿದ್ದಾರೆ. ಇಬ್ಬರೂ ಕೆಲ ಕಾಲ ಸ್ನೇಹಪೂರ್ಣವಾಗಿ ಮಾತನಾಡಿದ್ದಾರೆ.

ಮೊನ್ನೆ ಬಾಂಗ್ಲಾದೇಶಕ್ಕೆ ತೆರಳಿ ಢಾಕಾದಲ್ಲಿ ಮಾಜಿ ಪ್ರಧಾನಿ ಖಲೀದಾ ಜಿಯಾ ಅವರ ಅಂತ್ಯಕ್ರಿಯೆಯಲ್ಲಿ ಭಾರತ ಸರಕಾರದ ಪ್ರತಿನಿಧಿಯಾಗಿ ತೆರಳಿದ್ದರು. ಆಗ ಪಾಕ್ ಪ್ರತಿನಿಧಿಯಾಗಿ ಸಂಸತ್ ಸ್ಪೀಕರ್ ಸಾದಿಕ್ ಬಂದಿದ್ದರು. ಇಬ್ಬರೂ ಅಚಾನಕ್ಕಾಗಿ ಎದುರುಬ ದುರಾದಾಗ ಅಯಾಚಿತವಾಗಿ ಹಸ್ತಲಾಘವ ಮಾಡಿದ್ದಾರೆ. ಉಭಯ ಕುಶಲೋಪರಿ ನಡೆಸಿ ದ್ದಾರೆ. ಆದರೆ, ಈ ಸಂದರ್ಭದ ಫೋಟೊ ಮಾಧ್ಯಮ ಲೋಕ ಮತ್ತು ಜಾಲತಾಣದಲ್ಲಿ ದೊಡ್ಡ ಸದ್ದು ಮಾಡುತ್ತಿದೆ. ಚರ್ಚೆಗೂ ಕಾರಣವಾಗಿದೆ.

ಪಹಲ್ಗಾಮ್ ಭಯೋತ್ಪಾದಕ ದಾಳಿಗೆ ಪ್ರತಿಕಾರವಾಗಿ ಭಾರತ 'ಆಪರೇಷನ್ ಸಿಂಧೂರ್' ಸೇನಾ ಕಾರ್ಯಾಚರಣೆ ನಡೆಸಿದ ಬಳಿಕ ಎರಡೂ ದೇಶಗಳ ನಡುವಿನ ಎಲ್ಲಾ ಸ್ತರದ ಮಾತುಕತೆಗಳು, ವ್ಯಾಪಾರ, ಕೊಡು- ಕೊಳ್ಳುವಿಕೆ, ವಿಮಾನ ಹಾರಾಟ ಪ್ರದೇಶಕ್ಕೆ ಅನುಮತಿ ಎಲ್ಲವೂ ಕಡಿತಗೊಂಡಿದ್ದವು. ಅದರ ಪ್ರತಿಧ್ವನಿಯೆಂಬಂತೆ ಭಾರತದ ಕ್ರಿಕೆಟಿಗರು ಮೈದಾನದಲ್ಲಿ ಶತ್ರುದೇಶದ ಕ್ರಿಕೆಟಿಗರ ಕೈ ಕುಲುಕಲು ನಿರಾಕರಿಸಿದ್ದರು. ಈಗ ಪ್ರಮುಖ ರಾಜಕೀಯ ನೇತಾರರೇ ಕೈಕೈ ಜೋಡಿಸಿರುವುದರಿಂದ ಮುಂದೇನಾಗಲಿದೆ ಎಂಬುದೇ ಸದ್ಯದ ಕುತೂಹಲ.

ಪುಣೆ ಸ್ಫೋಟ ಆರೋಪಿ ಜಹಗೀರ್‌ದಾರ್ ಕೊಲೆ

ಪುಣೆ: 2012ರ ಆ1ರಂದು ಪುಣೆಯ ಹೃದಯಭಾಗ ಬಾಲಗಂಧರ್ವ ಚಿತ್ರಮಂದಿರ, ದೇನಾ ಬ್ಯಾಂಕ್ ಶಾಖೆ, ಮೆಕ್‌ಡೊನಾಲ್ಡ್ ಮಳಿಗೆ ಮತ್ತು ಗರ್ವಾರೆ ಸೇತುವೆ ಬಳಿ ಒಟ್ಟು 4 ಸ್ಫೋಟಗಳು ಸಂಭವಿಸಿ ನಗರದ ನಾಗರಿಕರಲ್ಲಿ ಭಾರೀ ಭಯ ಉಂಟು ಮಾಡಿದ್ದವು. ಈ ಸ್ಫೋಟದ ಆರೋಪಿಗಳಲ್ಲೊಬ್ಬನಾದ ಬಂಟಿ ಜಹಗೀರ್‌ದಾರ್(50) ಎಂಬವನನ್ನು ಮಹಾರಾಷ್ಟ್ರದ ಅಹಲ್ಯಾನಗರ ಜಿಲ್ಲೆಯ ಶ್ರೀರಾಂಪುರ ಪಟ್ಟಣದಲ್ಲಿ ಅನಾಮಿಕರು ಬುಧವಾರ ಗುಂಡಿಕ್ಕಿ ಕೊಂದಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಜಹಗೀರ್‌ದಾರ್ ಮಧ್ಯಾಹ್ನ 2 ಗಂಟೆಗೆ ಬೊರಾವಕೆ ಕಾಲೇಜು ರಸ್ತೆಯಲ್ಲಿರುವ ಸ್ಮಶಾನದಿಂದ ದ್ವಿಚಕ್ರ ವಾಹನದಲ್ಲಿ ಹಿಂತಿರುಗುತ್ತಿದ್ದಾಗ ಮೋಟಾರ್ ಬೈಕ್‌ನಲ್ಲಿ ಬಂದ ಇಬ್ಬರು ದುಷ್ಕರ್ಮಿಗಳು ಗುಂಡಿನ ದಾಳಿ ನಡೆಸಿ ಪರಾರಿಯಾಗಿದ್ದಾರೆ. ದಾಳಿ ಹಿಂದಿನ ಉದ್ದೇಶ ತಿಳಿದುಬಂದಿಲ್ಲ. ತನಿಖೆಗೆ ಹಲವು ತಂಡ ರಚಿಸಲಾಗಿದೆ ಎಂದು ಅಹಲ್ಯಾನಗರ ಪೊಲೀಸ್ ವರಿಷ್ಠಾಧಿಕಾರಿ ಸೋಮನಾಥ್ ಘರ್ಗೆ ತಿಳಿಸಿದ್ದಾರೆ. ಜಹಗೀರ್‌ದಾರ್‌ನನ್ನು ಮಹಾರಾಷ್ಟ್ರ ಭಯೋತ್ಪಾದನಾ ನಿಗ್ರಹ ದಳ (ಎಟಿಎಸ್) ಬಂಧಿಸಿತ್ತು. ಬಳಿಕ ಜಾಮೀನು ಪಡೆದಿದ್ದ.



ಹೊಸ ವರ್ಷಕ್ಕೆ ಜನತೆಗೆ ಶುಭ ಕೋರಿದ ಗಣ್ಯರು

ದೆಹಲಿ: ರಾಷ್ಟ್ರಪತಿ ದ್ರೌಪದಿ ಮುರ್ಮು, ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ಅನೇಕ ಗಣ್ಯರು ದೇಶದ ಜನತೆಗೆ 'ಎಕ್ಸ್' ಖಾತೆಗಳ ಮೂಲಕ ಹೊಸ ವರ್ಷದ ಶುಭಾಶಯ ತಿಳಿಸಿದ್ದಾರೆ. 'ಹೊಸ ವರ್ಷದ ಸಂಭ್ರಮದ ಸಂದರ್ಭ ದೇಶ-ವಿದೇಶಗಳಲ್ಲಿನ ಭಾರತೀಯರಿಗೆ ಶುಭಾಶಯ' ಎಂದು ಮುರ್ಮು ಪೋಸ್ಟ್ ಮಾಡಿದ್ದಾರೆ. 'ಎಲ್ಲರಿಗೂ 2026ರ ಹೊಸ ವರ್ಷದ ಶುಭಾಶಯಗಳು. ಎಲ್ಲರಿಗೂ ಆರೋಗ್ಯ-ಸಮೃದ್ಧಿ ತರಲಿ. ನಿಮ್ಮ ಪ್ರಯತ್ನಗಳಲ್ಲಿ ಯಶಸ್ಸು ಸಿಗಲಿ ಎಂದು ಹಾರೈಸುವೆ. ಸಮಾಜದಲ್ಲಿ ಶಾಂತಿ ಮತ್ತು ಸಂತೋಷ ನೆಲೆಸಲಿ ಎಂದು ಪ್ರಾರ್ಥಿಸುವೆ' ಎಂದು ಮೋದಿ ಸಂದೇಶ ಬರೆದಿದ್ದಾರೆ. 'ಹೊಸ ವರ್ಷ ಎಲ್ಲರಿಗೂ ಶಾಂತಿ, ಆರೋಗ್ಯ, ಸಂತೋಷ ಮತ್ತು ಸಮೃದ್ಧಿ ತರಲಿ ಎಂದು ಹಾರೈಸುವೆ. ಬಲಿಷ್ಠ ಮತ್ತು ಅಭಿವೃದ್ಧಿ ಹೊಂದಿದ ಭಾರತ ನಿರ್ಮಿಸುವ ಸಾಮೂಹಿಕ ಸಂಕಲ್ಪ ಈ ವರ್ಷ ಇನ್ನಷ್ಟು ಗಟ್ಟಿಯಾಗಲಿ' ಎಂದು ಉಪ ರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಶುಭ ಕೋರಿದ್ದಾರೆ. ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ 'ದೇಶದ ಜನತೆಗೆ ಸಂತೋಷ, ಆರೋಗ್ಯ ಮತ್ತು ಯಶಸ್ಸನ್ನು ಹಾರೈಸುವೆ' ಎಂದಿದ್ದಾರೆ. 'ಸಂವಿಧಾನ-ಪ್ರಜಾಪ್ರಭುತ್ವ ಮೌಲ್ಯಗಳ ರಕ್ಷಿಸೋಣ, ಸಮಾಜದಲ್ಲಿ ಸಾಮರಸ್ಯ ಬಲಪಡಿಸೋಣ. ಹೊಸ ವರ್ಷದ ಶುಭಾಶಯ' ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ತಿಳಿಸಿದ್ದಾರೆ.

ಎಸ್.ಕುಮಾರ್ ಸಿಎಂಡಿ ಲಂಡನ್ ಆಸ್ತಿ ಇ.ಡಿ ಜಪ್ತಿ

ದೆಹಲಿ: 'ಕಾನೂನಿನ ಕೈಗಳು ಬಹಳ ಉದ್ದವಾಗಿರುತ್ತವೆ' ಎಂಬ ಮಾತು ಭಾರತದ ಹೆಸರಾಂತ ಜವಳಿ ಉದ್ಯಮ 'ಎಸ್. ಕುಮಾರ್ಸ್ ನೇಷನ್‌ವೈಡ್ ಲಿ.' ಕಂಪನಿಯ ಮಾಲೀಕರ ವಿಚಾರದಲ್ಲಿ ನಿಜವಾಗಿದೆ. ಕಂಪನಿಯ ಅಧ್ಯಕ್ಷ-ವ್ಯವಸ್ಥಾಪಕ ನಿರ್ದೇಶಕ (ಸಿಎಂಡಿ) ನಿತಿನ್ ಶಂಭುಕುಮಾರ್ ಕಸ್ಲಿವಾಲ್, ಭಾರತದಲ್ಲಿನ ವಿವಿಧ ಬ್ಯಾಂಕ್‌ಗಳಿಗೆ 1400 ಕೋಟಿ ರು.ಗೂ ಅಧಿಕ ಪ್ರಮಾಣದ ವಂಚನೆ ಮಾಡಿರುವ ಮತ್ತು ಅದರಿಂದ ಬಂದ ಹಣವನ್ನು ಅಕ್ರಮವಾಗಿ ವಿದೇಶಕ್ಕೆ ಸಾಗಿಸಿರುವ ಪ್ರಕರಣದಲ್ಲಿ ಜಾರಿ ನಿರ್ದೇಶನಾಲ ಯ(ಇ.ಡಿ) ದಿಂದ ತನಿಖೆಗೆ ಒಳಗಾಗಿದ್ದಾರೆ. ನಿತಿನ್ ಮತ್ತು ಕುಟುಂಬದ ಒಡೆತನಕ್ಕೆ ಸೇರಿದ ಗ್ರೇಟ್ ಬ್ರಿಟನ್‌ನ ಲಂಡನ್ ನಗರದಲ್ಲಿ, ಅದೂ ಬಂಕಿಂಗ್‌ಹ್ಯಾಮ್ ಅರಮನೆ ಸಮೀಪದಲ್ಲಿಯೇ ಇರುವ 150 ಕೋಟಿ ರು. ಬೆಲೆ ಬಾಳುವ ದೊಡ್ಡ ಬಂಗಲೆಯನ್ನು ಜಾರಿ ನಿರ್ದೇಶನಾಲಯ 'ಅಕ್ರಮ ಹಣ ವರ್ಗಾವಣೆ ತಡೆ ಕಾಯಿದೆ'(ಪಿಎಂಎಲ್‌ಎ) ಅಡಿಯಲ್ಲಿ ಮಂಗಳವಾರ ಜಪ್ತಿ ಮಾಡಿದೆ. ಇದಕ್ಕೂ ಮುನ್ನ ಇ.ಡಿ. ಅಧಿಕಾರಿಗಳ ತಂಡ ಮುಂಬೈ ಸೇರಿದಂತೆ ದೇಶದ ವಿವಿಧೆಡೆ ಇರುವ ಎಸ್.ಕುಮಾರ್ ಕಂಪನಿ ಸಮೂಹಕ್ಕೆ ಸೇರಿದ ಕಚೇರಿ-ಮನೆ ಸೇರಿದಂತೆ ವಿವಿಧ ಆಸ್ತಿಗಳ ಮೇಲೆ ದಾಳಿ ನಡೆಸಿ ಪರಿಶೋಧನೆ ಕೈಗೊಂಡಿತ್ತು. ಮಹತ್ವದ ಹಲವು ದಾಖಲೆಗಳನ್ನೂ ವಶಪಡಿಸಿಕೊಂಡಿತ್ತು.

ತಿರುವನಂತಪುರಂ ಬಿಜೆಪಿ ಮೇಯರ್‌ಗೆ ಮೋದಿ ಪತ್ರ

ತಿರುವನಂತಪುರಂ: ಕೇರಳ ರಾಜ್ಯದ ರಾಜಧಾನಿ ನಗರ ತಿರುವನಂತಪುರಂನ ಮಹಾನಗರ ಪಾಲಿಕೆ ಚುನಾವಣೆಯಲ್ಲಿ ಇದೇ ಮೊದಲ ಬಾರಿಗೆ ಬಿಜೆಪಿ ಅಧಿಕಾರ ಗಳಿಸಿದ್ದು, ಮೇಯರ್ ಹುದ್ದೆಗೇರಿದ ಬಿಜೆಪಿ ಮುಖಂಡ ವಿ.ವಿ.ರಾಜೇಶ್, ಉಪ ಮೇಯರ್ ಆಶಾನಾಥ್ ಅವರಿಗೆ ಪ್ರಧಾನಿ ನರೇಂದ್ರ ಮೋದಿ ಹೊಸ ವರ್ಷಾಚರಣೆ ಸಂದರ್ಭ ಭಾವನಾತ್ಮಕ ಪತ್ರ ಬರೆದು ಅಭಿನಂದನೆ ಸಲ್ಲಿಸಿದ್ದಾರೆ. ಬಿಜೆಪಿಯ ಅಭೂತಪೂರ್ವ ಗೆಲುವಿಗೆ ಕಾರಣವಾದ ಸ್ಥಳೀಯ ಬಿಜೆಪಿ ನಾಯಕರು, ಕಾರ್ಯಕರ್ತರಿಗೂ ಧನ್ಯವಾದ ಹೇಳಿದ್ದಾರೆ. ನಿರಂತರ ಹಿಂಸಾಚಾರದ ನಡುವೆಯೂ ಬಿಜೆಪಿ ಕಾರ್ಯಕರ್ತರು ಪಕ್ಷಕ್ಕಾಗಿ ಧೈರ್ಯದಿಂದ ಸೆಣಸಿದ್ದಾರೆ. ಜನರ ಧ್ವನಿಯಾಗಿ ಪಕ್ಷದ ಬಾವುಟ ಹಿಡಿದು ಧೈರ್ಯದಿಂದ ನಿಂತಿದ್ದಾರೆ ಎಂದು ಮೋದಿ ಕೊಂಡಾಡಿದ್ದಾರೆ. ಸಂತರು, ಸಮಾಜ ಸುಧಾರಕರು, ಕಲಾವಿದರು, ಕವಿಗಳು, ಸಂಗೀತಗಾರರು, ಸಾಂಸ್ಕೃತಿಕ ದಿಗ್ಗಜರ ನಾಡಾಗಿರುವ ತಿರುವನಂತಪುರಂ ನಗರವು ಬಿಜೆಪಿಗೆ ಆಶೀರ್ವಾದ ಮಾಡಿರುವುದು ಹೆಮ್ಮೆಯ ವಿಚಾರ ಎಂದಿದ್ದಾರೆ. ಪದ್ಮನಾಭ ಸ್ವಾಮಿಯ ಅನುಗ್ರಹ ಪಡೆದಿರುವ ನನಗೆ ಕೇರಳದ ಈ ನಗರದ ಮೇಲೆ ವಿಶೇಷ ಅಭಿಮಾನವಿದೆ ಎಂದಿದ್ದಾರೆ.

ತಿರುವನಂತಪುರಂ ನಗರದ ಜತೆಗಿನ ತಮ್ಮ ನಂಟು ಮತ್ತು ನೆನಪುಗಳನ್ನು ಹಂಚಿಕೊಂಡಿದ್ದಾರೆ. ಮೋದಿ ಅವರ ಪತ್ರವನ್ನು ರಾಜೇಶ್ 'ಎಕ್ಸ್' ಖಾತೆಯಲ್ಲಿ ಹಂಚಿಕೊಂಡಿದ್ದಾರೆ.



2,500 ಎನ್‌ಕೌಂಟರ್, ಉ.ಪ್ರ.ದಲ್ಲಿ 48 ಸಾವು

ಲಖನೌ: ಉತ್ತರ ಪ್ರದೇಶ ಪೊಲೀಸರು 2025ನೇ ಸಾಲಿನಲ್ಲಿ ಹೊಸ ದಾಖಲೆಯನ್ನೇ ನಿರ್ಮಿಸಿದ್ದಾರೆ. 48 ಆರೋಪಿ ಅಪರಾಧಿಗಳನ್ನು ಎನ್‌ಕೌಂಟರ್‌ಗಳಲ್ಲಿ ಇಲ್ಲವಾಗಿಸಿದ್ದಾರೆ.

ಅಪರಾಧ ಲೋಕವನ್ನು ಮಟ್ಟ ಹಾಕುವ ಸಲುವಾಗಿ 2025ನೇ ಸಾಲಿನಲ್ಲಿ ಒಟ್ಟು 2,739 ಎನ್ ಕೌಂಟ್)ಕಾರ್ಯಾಚರಣೆ) ನಡೆಸಿ 48 ರೌಡಿಗಳನ್ನು ಇಲ್ಲವಾಗಿಸಿದ್ದಾರೆ. ಅಲ್ಲದೇ, 3,153 ಆರೋ ಪಿಗಳನ್ನು ಗಾಯಗೊಳಿಸಿದ್ದಾರೆ. ಇದೇ ಕಾರ್ಯಾಚರ ಣೆಗಳಲ್ಲಿ ಒಬ್ಬ ಪೊಲೀಸ್ ಕೂಡ ಹುತಾತ್ಮರಾಗಿದ್ದಾರೆ ಎಂದು ರಾಜ್ಯದ ಅಪರಾಧಿಕ ಅಂಕಿ ಅಂಶಗಳಿಂದ ತಿಳಿದುಬಂದಿದೆ.

ಯೋಗಿ ಆದಿತ್ಯನಾಥ್ ಉತ್ತರ ಪ್ರದೇಶದ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ನಂತರ 2017ರ ಮಾ.20ರಿಂದ 2025ರ ಡಿ.29ರವರೆಗಿನ ರಾಜ್ಯ ಪೊಲೀಸ್ ಕಾರ್ಯಾಚರಣೆಗಳ ಅಂಕಿ ಅಂಶವನ್ನು ಡಿಜಿಪಿ ರಾಜೀವ್ ಕೃಷ್ಣ ಹಂಚಿಕೊಂಡಿದ್ದಾರೆ. 2017ನೇ ಸಾಲಿನಲ್ಲಿ ಅತ್ಯಧಿಕ ಆರೋಪಿಗಳು(266) ಪೊಲೀಸ್ ಎನ್‌ಕೌಂಟರ್‌ಗಳಲ್ಲಿ ಸಾವನ್ನಪ್ಪಿದ್ದಾರೆ. ಈ ಕಾರ್ಯಾಚರಣೆಗಳ ಸಂದರ್ಭದಲ್ಲಿ 1,783 ಪೊಲೀಸ್ ಸಿಬ್ಬಂದಿ ಗಾಯಗೊಂಡಿದ್ದಾರೆ ಮತ್ತು 18 ಮಂದಿ ಪ್ರಾಣ ಕಳೆದುಕೊಂಡಿದ್ದಾರೆ ಎಂದು ದತ್ತಾಂಶ ತೋರಿಸಿದೆ.

ಜನವರಿ 3ನೇ ವಾರ ವಂದೇಭಾರತ್ ಸ್ಲೀಪರ್ ಎಕ್ಸ್‌ಪ್ರೆಸ್‌ಗೆ ಮೋದಿ ಚಾಲನೆ

2027ರ ಆ.15ಕ್ಕೆ ಭಾರತದ ಮೊದಲ ಬುಲೆಟ್ ಟ್ರೇನ್

ದೆಹಲಿ: ದೇಶದ ಮೊದಲ ಬುಲೆಟ್ ರೈಲು 2027ರ ಆ.15ರಂದು ಸಂಚಾರ ಆರಂಭಿಸಲಿದೆ ಎಂದು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಗುರುವಾರ ಸುದ್ದಿಗೋಷ್ಠಿಯಲ್ಲಿ ಪ್ರಕಟಿಸಿದರು.

ಅತಿವೇಗದ ಬುಲೆಟ್ ಟ್ರೇನ್‌ನ ಪ್ರಥಮ ಸಂಚಾರ ಗುಜರಾತ್‌ನ ಸೂರತ್ ನಗರದಿಂದ ಬಿಲಿಮೋರಾವರೆಗೆ ನಡೆಯಲಿದೆ. ನಂತರದಲ್ಲಿ ವಾಪಿಯಿಂದ ಸೂರತ್ ನಗರದವರೆಗೆ ವಿಸ್ತರಣೆ ಆಗಲಿದೆ. ಬಳಿಕ ಹಂತ ಹಂತವಾಗಿ ಅಹಮದಾಬಾದ್, ಥಾಣೆವರೆಗೂ ಬುಲೆಟ್ ಟ್ರೇನ್ ಸಂಚಾರ ನಡೆಯಲಿದೆ. ಅಂತಿಮ ಹಂತದಲ್ಲಿ ಮುಂಬೈ-ಅಹಮದಾಬಾದ್ ನಗರಗಳ ನಡುವೆ ಪೂರ್ಣ ಪ್ರಮಾಣದಲ್ಲಿ ಸಂಚಾರ ನಡೆಸಲಿದೆ ಎಂದು ವಿವರಿಸಿದರು.

12 ನಿಲ್ದಾಣ: ಬುಲೆಟ್ ರೈಲು ಮಾರ್ಗದಲ್ಲಿ 12 ನಿಲ್ದಾಣಗಳು ಬರಲಿವೆ. ಗುಜರಾತ್‌ನಲ್ಲಿ 9, ಮಹಾರಾಷ್ಟ್ರದಲ್ಲಿ 3 ನಿಲ್ದಾಣಗಳಿರಲಿವೆ. ಸಬರಮತಿ, ಅಹಮದಾಬಾದ್, ಆನಂದ್, ವಡೋದರ, ಭರೂಚ್, ಸೂರತ್, ಬಿಲಿಮೋರಾ, ವಾಪಿ, ಬೋಯಿಸರ್, ವಿರಾರ್, ಥಾಣೆ ಹಾಗೂ ಮುಂಬೈ.

ಇನ್ನೊಂದೆಡೆ, ಮೊದಲ ವಂದೇ ಭಾರತ್ 'ಸ್ಲೀಪರ್ ರೈಲು' ಗುವಾಹಟಿ-ಕೋಲ್ಕತ್ತಾ ಮಾರ್ಗದಲ್ಲಿ ಸಂಚಾರ ಆರಂಭಿಸಲಿದ್ದು, ಪ್ರಧಾನಿ ನರೇಂದ್ರ ಮೋದಿ ಸದ್ಯದಲ್ಲೇ (ಜ.17 ಅಥವಾ 19) ಚಾಲನೆ ನೀಡಲಿದ್ದಾರೆ ಎಂದು ವೈಷ್ಣವ್ ವಿವರಿಸಿದರು. ಸ್ಥಳೀಯವಾಗಿ ನಿರ್ಮಿಸಲಾದ ವಂದೇ ಭಾರತ್ ಸ್ಲೀಪರ್ ರೈಲಿನ ಅಂತಿಮ ಹೈಸ್ಪೀಡ್ ಪರೀಕ್ಷಾರ್ಥ ಸಂಚಾರವು ಇತ್ತೀಚೆಗೆ ಕೋಟಾ-ನಾಗ್ಡಾ ವಿಭಾಗದಲ್ಲಿ ಪೂರ್ಣಗೊಂಡಿದೆ. ಪರೀಕ್ಷಾರ್ಥ ಸಂಚಾರ ವೇಳೆ ರೈಲು ಗಂಟೆಗೆ 182 ಕಿ.ಮೀ.ವರೆಗೂ ವೇಗವನ್ನು ವರ್ಧಿಸಿಕೊಂಡಿತ್ತು. ಲೋಟದಲ್ಲಿ ತುಂಬಿಸಿಟ್ಟಿದ್ದ ನೀರು ಹೊರಚೆಲ್ಲದಂತೆ ರೈಲು ಹೆಚ್ಚು ಕಂಪನವಿಲ್ಲದೇ ಚಲಿಸಿದೆ ಎಂದು ವಿವರಿಸಿದರು.

ಹೊಸ ವಂದೇಭಾರತ್ ಸ್ಲೀಪರ್ ರೈಲಿನ ಸೇವೆಯು ಕುಟುಂಬಗಳು, ವಿದ್ಯಾರ್ಥಿಗಳು ಮತ್ತು ಎರಡು ಪ್ರಮುಖ ನಗರಗಳ ನಡುವೆ ವೇಗವಾಗಿ ಮತ್ತು ಹೆಚ್ಚು ವಿಶ್ವಾಸಾರ್ಹ ರಾತ್ರಿ ಪ್ರಯಾಣವನ್ನು ಬಯಸುವ ಪ್ರವಾಸಿಗರಿಗೆ ಪ್ರಯೋಜನ ಸಿಗಲಿದೆ ಎಂದರು.

ವಂದೇಭಾರತ್ ಸ್ಲೀಪರ್ ಪ್ರಯಾಣ ದರ

16 ಬೋಗಿಗಳ ವಂದೇ ಭಾರತ್ ಸ್ಲೀಪರ್ ರೈಲಿನಲ್ಲಿ 11 ಬೋಗಿ 3 ಟಯರ್ ಎಸಿ, 4 2 ಟಯರ್ ಎಸಿ ಮತ್ತು 1 ಬೋಗಿಯು 1ನೇ ದರ್ಜೆ ಎಸಿ ಸೌಲಭ್ಯ ಹೊಂದಿರುತ್ತದೆ. ರೈಲಿನಲ್ಲಿ ಒಟ್ಟು 823 ಪ್ರಯಾಣಿಕರಿಗೆ ಅವಕಾಶವಿರಲಿದೆ. 3 ಟಯರ್ ಎಸಿಯಲ್ಲಿ 611 ಮಂದಿಗೆ 2 ಟಯರ್ ಎಸಿಯಲ್ಲಿ 188 ಮತ್ತು ಪ್ರಥಮ ದರ್ಜೆ ಎಸಿ ಬೋಗಿಯಲ್ಲಿ 24 ಪ್ರಯಾಣಿಕರಿಗೆ ಸ್ಥಳಾವಕಾಶವಿರುತ್ತದೆ ಎಂದರು. 3 ಟಯರ್ ಎಸಿ ದರ ಆಹಾರ ಸೇರಿ 2,300 ರು. 2 ಟಯರ್ ಎಸಿ ದರ 3,000 ರು. ಮತ್ತು ಪ್ರಥಮ ಶ್ರೇಣಿ (ಸಿಂಗಲ್ ಟಯರ್) ಎಸಿ ಬೋಗಿ ಪ್ರಯಾಣ ದರ 3,600 ರು. ಇರುವ ಸಾಧ್ಯತೆ ಇದೆ ಎಂದು ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ.

ಕಾಶ್ಮೀರ ಹೊಸ ವರ್ಷಾಚರಣೆ

ಶ್ರೀನಗರದ ಲಾಲ್ ಚೌಕದಲ್ಲಿ ಬುಧವಾರ ತಡರಾತ್ರಿ ವರೆಗೂ ಸಂಭ್ರಮಿ ಸಿದ ಜನ ಜಂಗುಳಿ.

ಶ್ರೀನಗರ: ಜಮ್ಮು-ಕಾಶ್ಮೀರದ ಅನಂತನಾಗ್ ಜಿಲ್ಲೆಯ ಪಹಲ್ಗಾಮ್‌ನಲ್ಲಿ ಏ.22ರಂದು 25 ಪ್ರವಾಸಿಗರು ಮತ್ತು ಒಬ್ಬ ಸ್ಥಳೀಯನನ್ನು ಪಾಕ್ ಮೂಲದ ಉಗ್ರರು ಬರ್ಬರವಾಗಿ ಹತ್ಯೆ ಮಾಡಿದ ಬಳಿಕ ಇಲ್ಲಿನ ಪ್ರವಾಸೋದ್ಯಮಕ್ಕೆ ಮಂಕುಬಡಿದಿತ್ತು. ಅದೀಗ ಬದಲಾವಣೆಗೊಂಡಿದ್ದು, ಬುಧವಾರ ಜಮ್ಮು-ಕಾಶ್ಮೀರ ಎಂದಿನಂತಿರಲಿಲ್ಲ.

ಶ್ರೀನಗರದ ಲಾಲ್ ಚೌಕ. ಗುಲ್‌ಮೊಹರ್, ಸೋನ್ಮಾರ್ಗ್, ಪಹಲ್ಗಾಮ್ ಸೇರಿದಂತೆ ಜಮ್ಮು-ಕಾಶ್ಮೀರದ ವಿವಿಧೆಡೆಯೂ ಬುಧವಾರ ತಡರಾತ್ರಿವರೆಗೂ ಹೊಸ ವರ್ಷದ ಸಂಭ್ರಮ ಮನೆ ಮಾಡಿತ್ತು. ದೀಪಗಳ ಝುಗಮುಗ ಬೆಳಕು, ಸಂಗೀತ, ನರ್ತನ, ಹರ್ಷದ ಕೂಗು ಮಾರ್ಧನಿಸಿತು. ಶ್ರೀನಗರ ಹೆಸರಾಂತ ಲಾಲ್ ಚೌಕ್ ಪ್ರವಾಸಿಗರು, ಸ್ಥಳೀಯ ಜನರಿಂದ ಕಿಕ್ಕಿರಿದಿತ್ತು. ಸರೋವರ್ ಪ್ರೀಮಿಯರ್ ಹೋಟೆಲ್ ಸೇರಿದಂತೆ ಶ್ರೀನಗರದಲ್ಲಿನ ಕೆಲ ಹೋಟೆಲ್‌ಗಳು ಪ್ರವಾಸಿಗರನ್ನು ಆಕರ್ಷಿಸುವ ಸಲುವಾಗಿ ಹೆಸರಾಂತ ಸ್ಥಳೀಯ ಗಾಯಕರನ್ನು ಕರೆಸಿ ಸಂಗೀತಗೋಷ್ಠಿ ಆಯೋಜಿಸಿದ್ದವು. ಕಳೆದೆರಡು ತಿಂಗಳಿಂದ ಕೊರೆಯುವ ಚಳಿ, ಧಾರಾಕಾರ ಸುರಿಯುವ ಮಂಜಿನಲ್ಲಿ ಮುಳುಗಿ ಮೈನಸ್ ಡಿಗ್ರಿ ಸೆಲ್ಸಿಯಸ್‌ನಲ್ಲಿದ್ದ ಜಮ್ಮು-ಕಾಶ್ಮೀರ ಹೊಸ ವರ್ಷದ ಹರ್ಷದಲ್ಲಿ ಪ್ರವಾಸಿಗರ ಉತ್ಸಾಹದಲ್ಲಿ ಬುಧವಾರ ಇಡೀ ದಿನ-ರಾತ್ರಿ ಮುಳುಗೆದ್ದಿತು.

ಸಮಾಚಾರ ಸಣ್ಣದಲ್ಲ

ಮಹಡಿಯಿಂದ ಬಿದ್ದು ಯುವಕ ಸಾವು

ಪುಂಜಾಲಕಟ್ಟೆ: ಮನೆಯ ಮಹಡಿಯಿಂದ ಕೆಳಕ್ಕೆ ಬಿದ್ದು ಯುನ್ನೊಬ್ಬ ಸಾವನಪ್ಪಿದ ಘಟನೆ ಬಂಟ್ವಾಳ ತಾಲೂಕು ಮೂಡನಡುಗೋಡು ಗ್ರಾಮದ ನಡುದಂಡೆ ಮನೆ ಎಂಬಲ್ಲಿ ನಡೆದಿದೆ. ಮೃತರನ್ನು ಚಂದ್ರ ಪೂಜಾರಿ ಎಂಬವರ ಪುತ್ರ ಪ್ರವೀಣ (26) ಎಂದು ಗುರುತಿಸಲಾಗಿದೆ. ಪ್ರವೀಣ ಪ್ರತಿ ನಿತ್ಯ ತನ್ನ ಅಣ್ಣ ಪ್ರಸಾದ್ ಜೊತೆ ರಾತ್ರಿ ಊಟದ ಬಳಿಕ ಮನೆಯ ಮಹಡಿಯ ಮೇಲೆ ಹೋಗಿ ಮಾತುಕತೆ ನಡೆಸಿ ಬರುತ್ತಿದ್ದು, ಎಂದಿನಂತೆ ಮಂಗಳವಾರ ರಾತ್ರಿ ಇಬ್ಬರೂ ಮಾತುಕತೆ ನಡೆಸಲು ಅವರ ಮನೆಯ ಮಹಡಿ ಮೇಲೆ ರಾತ್ರಿ 9 ಗಂಟೆ ಸುಮಾರಿಗೆ ಹೋಗಿ ಮಾತು ಕತೆ ನಡೆಸಿ, ಪ್ರಸಾದ್ ಅವರು ಬರುತ್ತಿರುವಾಗ ಪ್ರವೀಣ್ ತಮ್ಮ ಮೊಬೈಲ್ ನಲ್ಲಿ ಮಾತನಾಡುತ್ತಿದ್ದರು. ಆದ್ದರಿಂದ ರಾತ್ರಿ 10 ಗಂಟೆಗೆ ತಮ್ಮ ಪ್ರವೀಣನನ್ನು ಅಲ್ಲಿಯೇ ಬಿಟ್ಟು ಬಂದಿರುತ್ತಾರೆ. ಪ್ರಸಾದ್ ಮನೆಯೊಳಗೆ ಬಂದ ನಂತರ ಮೇಲಿಂದ ಏನೋ ಬಿದ್ದ ಹಾಗೆ ಜೋರಾಗಿ ಶಬ್ದ ಕೇಳಿಸಿದ್ದು,ಆಗ ಪ್ರಸಾದ್ ಮತ್ತು ಅವರ ತಾಯಿ, ತಂಗಿ ತತ್‌ಕ್ಷಣ ಮನೆಯ ಹೊರಗೆ ಹೋಗಿ ನೋಡಿದಾಗ ಪ್ರವೀಣ್ ಕೆಳಗೆ ಬಿದ್ದು ಪ್ರಜ್ಞಾಹೀನ ಸ್ಥಿತಿಯಲ್ಲಿದ್ದವನನ್ನು ಬಂಟ್ವಾಳ ಸರಕಾರಿ ಆಸ್ಪತ್ರೆಗೆ ದಾಖಲಿಸಿರೂ ಬದುಕುಳಿಯಲಿಲ್ಲ. ಈ ಬಗ್ಗೆ ಬಂಟ್ವಾಳ ಗ್ರಾಮಾಂತರ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ. ಪ್ರವೀಣ್ ಅವರು ಬಾರ್‌ನಲ್ಲಿ ವೈಟರ್‌ಆಗಿ ಕಾರ್ಯ ನಿರ್ವಹಿಸುತ್ತಿದ್ದರು.

ಸ್ವಚ್ಛತಾ ಪಾಕ್ಷಿಕ ಅಭಿಯಾನ

ಮಂಗಳೂರು: ಕೇಂದ್ರೀಯ ಸಮುದ್ರ ಮೀನುಗಾರಿಕೆ ಸಂಶೋಧನಾ ಸಂಸ್ಥೆಯ ಪ್ರಾದೇಶಿಕ ಕೇಂದ್ರದ ವತಿಯಿಂದ ರಾಷ್ಟ್ರವ್ಯಾಪಿ ''ಸ್ವಚ್ಛತಾ ಪಖ್ವಾಡ'' ಅಭಿಯಾನ ನಡೆಯಿತು. ಸಂಸ್ಥೆಯ ಆವರಣ ಹಾಗೂ ತಣ್ಣೀರುಬಾವಿ ಬೀಚ್ನಲ್ಲಿ ಸ್ವಚ್ಛತೆ, ಪರಿಸರ ಜಾಗೃತಿ ಮತ್ತು ಸುಸ್ಥಿರ ತ್ಯಾಜ್ಯ ನಿರ್ವಹಣೆ ಕುರಿತು ಸಮುದಾಯ ಸಂಪರ್ಕ ಕಾರ್ಯಕ್ರಮಗಳು ನಡೆದವು. ವಿಡಿಯೋ ಕಾನ್ಫರೆನ್ಸ್ ಮೂಲಕ ಸಂಸ್ಥೆಯ ನಿರ್ದೇಶಕರು ಸ್ವಚ್ಛತಾ ಪ್ರತಿಜ್ಞೆ ಬೋಧಿಸಿದರು. ತಣ್ಣೀರುಬಾವಿ ಕಡಲತೀರದಲ್ಲಿ ಶ್ರಮದಾನ ನಡೆಸಿ, ಪ್ಲಾಸ್ಟಿಕ್ ಮಾಲಿನ್ಯದಿಂದ ಸಮುದ್ರ ಜೀವಿಗಳ ಮೇಲಾಗುವ ದುಷ್ಪರಿಣಾಮಗಳ ಬಗ್ಗೆ ಸಾರ್ವಜನಿಕರಿಗೆ ಮಾಹಿತಿ ನೀಡಲಾಯಿತು. ಕೇಂದ್ರದ ಮುಖ್ಯಸ್ಥೆ ಡಾ. ಸುಜಿತಾ ಥಾಮಸ್ ನೇತೃತ್ವದಲ್ಲಿ ನಡೆದ ಈ ಅಭಿಯಾನದಲ್ಲಿ ವಿಜ್ಞಾನಿಗಳಾದ ಡಾ. ಜಿ.ಬಿ. ಪುರುಷೋತ್ತಮ, ಡಾ. ಕೆ.ಎಂ. ರಾಜೇಶ್ ಭಾಗವಹಿಸಿದ್ದರು.

ವಾಹನ ಚಾಲಕರ ಸಂಘದ ಮಹಾಸಭೆ

ಮಂಗಳೂರು: ಜಿಲ್ಲಾ ಸರಕಾರಿ ವಾಹನ ಚಾಲಕರ ಕೇಂದ್ರ ಸಂಘದ ವಾರ್ಷಿಕ ಮಹಾಸಭೆಯು ಜಿಲ್ಲಾ ಸರಕಾರಿ ನೌಕರರ ಸಂಘದ ಸಮುದಾಯ ಭವನದಲ್ಲಿ ಜರುಗಿತು. ಸರಕಾರಿ ನೌಕರರ ಸಂಘದ ಮಾಜಿ ಜಿಲ್ಲಾಧ್ಯಕ್ಷ ಪ್ರಕಾಶ ನಾಯಕ್ ಅವರು, ಚಾಲಕರು ದೃಢಚಿತ್ತ ಮತ್ತು ಸೇವಾ ಮನೋಭಾವನೆಯಿಂದ ಒಗ್ಗಟ್ಟಾಗಿ ಕೆಲಸ ಮಾಡಿದರೆ ಸಂಘಟನೆ ಬಲಗೊಳ್ಳಲು ಸಾಧ್ಯ ಎಂದರು. ನಿವೃತ್ತ ಚಾಲಕ ಮಾಧವ ಕೆ. ಮತ್ತು ಲೆಕ್ಕ ತಪಾಸಣೆಗಾರ ಬಿ. ಮನಮೋಹನ್ ರಾವ್ ಅವರನ್ನು ಸನ್ಮಾನಿಸಲಾಯಿತು. ಸಂಘದ ಅಧ್ಯಕ್ಷ ತಿಲಕ್ ಪ್ರಶಾಂತ್ ಕುಮಾರ್‌ಅಧ್ಯಕ್ಷತೆ ವಹಿಸಿದ್ದರು.

ಹೆಗ್ಡೆ ನಿಧನ:ಖಾದರ್, ದಿನೇಶ್ ಸಂತಾಪ

ಮಂಗಳೂರು: ಹಿರಿಯ ಉದ್ಯಮಿ ಹಾಗೂ ಶಿಕ್ಷಣ ತಜ್ಞ ನಿಟ್ಟೆ ವಿನಯ್ ಹೆಗ್ಡೆ ಅವರ ನಿಧನಕ್ಕೆ ವಿಧಾನಸಭಾ ಸ್ಪೀಕರ್‌ಯು.ಟಿ. ಖಾದರ್‌ಮತ್ತು ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ. ವಿನಯ್ ಹೆಗ್ಡೆಯವರ ಅಗಲಿಕೆಯು ರಾಜ್ಯದ ಶೈಕ್ಷಣಿಕ ಮತ್ತು ಕೈಗಾರಿಕಾ ಕ್ಷೇತ್ರಕ್ಕೆ ತುಂಬಲಾರದ ನಷ್ಟವಾಗಿದೆ. 'ಕರಾವಳಿಯ ಸೌಹಾರ್ದದ ಕೊಂಡಿಯಾಗಿದ್ದ ಅವರು, ಯಾವುದೇ ಜಟಿಲ ಸಮಸ್ಯೆಗಳನ್ನು ತಾಳ್ಮೆಯಿಂದ ಬಗೆಹರಿಸುವ ವ್ಯಕ್ತಿತ್ವ ಹೊಂದಿದ್ದರು' ಎಂದು ಸ್ಪೀಕರ್‌ಬಣ್ಣಿಸಿದ್ದಾರೆ. ಸಚಿವ ದಿನೇಶ್ ಗುಂಡೂರಾವ್ ಮಾತನಾಡಿ, 'ಕರಾವಳಿ ಕರ್ನಾಟಕವನ್ನು ದೇಶದ ಪ್ರಮುಖ ಶಿಕ್ಷಣ ಕೇಂದ್ರವನ್ನಾಗಿಸುವಲ್ಲಿ ಅವರ ಪರಿಶ್ರಮ ಅದ್ವಿತೀಯ. ಲಕ್ಷಾಂತರ ವಿದ್ಯಾರ್ಥಿಗಳ ಜ್ಞಾನಾರ್ಜನೆಗೆ ಅವರು ಕಾರಣರಾಗಿದ್ದಾರೆ' ಎಂದು ಸ್ಮರಿಸಿದ್ದಾರೆ.

ವಿರಾಮ
ಪ್ರತಿ ಭಾನುವಾರ

{ವಿ. ಸುನಿಲ್ ಕುಮಾರ್ } ಶಾಸಕ

ವಿನಯ ಹೆಗ್ಡೆ ಅವರು ನಿಟ್ಟೆ ವಿದ್ಯಾ ಸಂಸ್ಥೆಯ ಅಧ್ಯಕ್ಷರು, ನಿಟ್ಟೆ ಯೂನಿವರ್ಸಿಟಿಯ ಕುಲಪತಿಗಳು, ಲೆಮಿನಾ ಇಂಡಸ್ಟ್ರಿಯ ಸ್ಥಾಪಕರಾಗಿ ಸಾವಿರಾರು ಮಂದಿಗೆ ಅನ್ನ ನೀಡಿದ ಅನ್ನದಾತ, ಆರೋಗ್ಯ, ಧಾರ್ಮಿಕ , ಸಮಾಜ ಸೇವಾ ಕ್ಷೇತ್ರಗಳಿಗೆ ಅಪಾರ ಕೊಡುಗೆ ನೀಡಿದ ಧೀಮಂತ ವ್ಯಕ್ತಿಯಾಗಿದ್ದರು. ಅವರ ಸೇವೆ, ಸಾಧನೆಗಳು ಸದಾ ಸ್ಮರಣೀಯ.

ಹೆಗ್ಡೆಯವರ ಸಾಧನೆಗಳು ಸದಾ ಸ್ಮರಣೀಯ | ಶೈಕ್ಷಣಿಕ ಕ್ಷೇತ್ರಕ್ಕೆ ತುಂಬಲಾರದ ನಷ್ಟ | ಗಣ್ಯ ಮಾನ್ಯರ ಸಂತಾಪ

ನಿಟ್ಟೆ ಶಿಕ್ಷಣ ಸಂಸ್ಥೆಗಳ ಸಾರಥಿ ವಿನಯ ಹೆಗ್ಡೆ ಇನ್ನಿಲ್ಲ

ಮಂಗಳೂರು: ಕರಾವಳಿಯ ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರದ ಧ್ರುವತಾರೆ, ನಿಟ್ಟೆ ಪರಿಗಣಿತ ವಿಶ್ವವಿದ್ಯಾಲಯದ ಕುಲಪತಿ ಹಾಗೂ ಹಿರಿಯ ಉದ್ಯಮಿ ಎನ್. ವಿನಯ ಹೆಗ್ಡೆ (86) ಅವರು ವಿಧಿವಶರಾಗಿದ್ದಾರೆ.

ವಯೋಸಹಜ ಅನಾರೋಗ್ಯದಿಂದ ಬಳಲುತ್ತಿದ್ದ ಅವರು ಗುರುವಾರ ಇಹಲೋಕ ತ್ಯಜಿಸಿದ್ದು, ಶಿಕ್ಷಣ ಕ್ಷೇತ್ರದ ಒಂದು ಸುದೀರ್ಘ ಪರ್ವ ಅಂತ್ಯಗೊಂಡಂತಾಗಿದೆ. ಮೃತದೇಹದ ಸಾರ್ವಜನಿಕ ದರ್ಶನಕ್ಕೆ ಇಲ್ಲಿನ ಶಿವಭಾಗ್ನಲ್ಲಿರುವ ಅವರ ನಿವಾಸದಲ್ಲಿ ಬೆಳಿಗ್ಗೆ 8.30ರಿಂದ ಮಧ್ಯಾಹ್ನ 3 ಗಂಟೆಯವರೆಗೆ ಹಾಗೂ ದೇರಳಕಟ್ಟೆಯ ನಿಟ್ಟೆ ಕ್ಯಾಂಪಸ್ನಲ್ಲಿ ಸಂಜೆ 4.30ರಿಂದ 6 ರವರೆಗೆ ಅವಕಾಶ ಕಲ್ಪಿಸಲಾಗಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸುಪ್ರೀಂ ಕೋರ್ಟ್ ಮಾಜಿ ನ್ಯಾಯಮೂರ್ತಿ ದಿ. ಕೆ.ಎಸ್. ಹೆಗ್ಡೆ ಅವರ ಎರಡನೇ ಪುತ್ರ ವಿನಯ್ ಹೆಗ್ಡೆ ಅವರು ದಕ್ಷಿಣ ಕನ್ನಡ ಜಿಲ್ಲೆಯ ಶೈಕ್ಷಣಿಕ ಕ್ಷೇತ್ರಕ್ಕೆ ನೀಡಿರುವ ಕೊಡುಗೆ ದೊಡ್ಡದು. ಅವರು ಸ್ಥಾಪಿಸಿರುವ ನಿಟ್ಟೆ ಶಿಕ್ಷಣ ಸಂಸ್ಥೆಯಲ್ಲಿ ವೈದ್ಯಕೀಯ, ಎಂಜಿನಿಯರಿಂಗ್ ಹಾಗೂ ಇನ್ನಿತರ ಕೋರ್ಸ್ ಗಳು ಇವೆ. ಇತ್ತೀಚೆಗೆ ನಿಟ್ಟೆ ಶಿಕ್ಷಣ ಸಂಸ್ಥೆಗೆ ಪರಿಗಣಿತ ವಿವಿ ಮಾನ್ಯತೆ ದೊರೆತಿದೆ. ರಾಜ್ಯೋತ್ಸವ ಪ್ರಶಸ್ತಿ ಸೇರಿದಂತೆ ಹತ್ತಾರು ಗೌರವಗಳಿಗೆ ಭಾಜನರಾಗಿದ್ದಾರೆ.

ಕರಾವಳಿಯಲ್ಲಿ ಟಿಎಂಎ ಪೈ ಬಳಿಕ ಅದೇ ಹಾದಿಯಲ್ಲಿ ವಿದ್ಯಾಸಂಸ್ಥೆ, ಆರೋಗ್ಯ ಕೇಂದ್ರಗಳನ್ನು ಕಟ್ಟಿರುವ ವಿನಯ ಹೆಗ್ಡೆ ಅವರು ಅತ್ಯಂತ ಶಿಸ್ತು, ನಿಷ್ಠೆ, ಪ್ರಾಮಾಣಿಕತೆ ಯೊಂದಿಗೆ ಉನ್ನತ ಸ್ಥಾನಕ್ಕೇರಿದವರು. ಗ್ರಾಮೀಣ ಭಾಗವಾಗಿರುವ ನಿಟ್ಟೆಯಲ್ಲೇ ಇಂಜಿನಿಯರಿಂಗ್ ಸ್ಥಾಪಿಸಿದ ಕಾರ್ಕಳದ ಹೆಮ್ಮೆಯ ಪುತ್ರ ವಿನಯ ಹೆಗ್ಡೆ ಅವರು ಸಾವಿರಾರು ಬಡ ವಿದ್ಯಾರ್ಥಿಗಳ ಬದುಕಿಗೂ, ಆರೋಗ್ಯವಂಚಿತ ಅಸಹಾಯರಿಗೂ ಬೆಳಕಾದವರು.-

-ಡಾ. ಸುಧಾಕರ್‌ಶೆಟ್ಟಿ

ಕಾರ್ಕಳ ಶಾಸಕ ವಿ.ಸುನಿಲ್ ಸಂತಾಪ

ಉಡುಪಿ: ಶಿಕ್ಷಣವೆಂಬ ಯಜ್ಞದಲ್ಲಿ ಸಮಿದೆಯಂತೆ ಉರಿದು ಸಾವಿರಾರು ಮಂದಿಯ ಬಾಳಲ್ಲಿ ಬೆಳಕಾದವರು, ಕಾರ್ಕಳದ ನಿಟ್ಟೆ ಗ್ರಾಮದ ಹೆಸರನ್ನು ವಿಶ್ವದಾದ್ಯಂತ ಪಸರಿಸಿದ ಎನ್. ವಿನಯ್ ಹೆಗ್ಡೆ ಅವರು ಇನ್ನಿಲ್ಲ ಎಂಬ ಸುದ್ದಿ ತಿಳಿದು ಅತ್ಯಂತ ಆಘಾತವಾಯಿತು. ನಿಟ್ಟೆ ವಿದ್ಯಾ ಸಂಸ್ಥೆಯ ಅಧ್ಯಕ್ಷರು, ನಿಟ್ಟೆ ಯೂನಿವರ್ಸಿಟಿಯ ಕುಲಪತಿಗಳು, ಲೆಮಿನಾ ಇಂಡಸ್ಟ್ರಿಯ ಸ್ಥಾಪಕರಾಗಿ ಸಾವಿರಾರು ಮಂದಿಗೆ ಅನ್ನ ನೀಡಿದ ಅನ್ನದಾತ, ಆರೋಗ್ಯ, ಧಾರ್ಮಿಕ ಹಾಗೂ ಸಮಾಜ ಸೇವಾ ಕ್ಷೇತ್ರಗಳಲ್ಲಿ ಅಪಾರ ಕೊಡುಗೆ ನೀಡಿರುವ ಧೀಮಂತ ವ್ಯಕ್ತಿ ಶ್ರೀಯುತರು. ವಿನಯ ಹೆಗ್ಡೆ ಅವರ ನಿಧನವು ಶಿಕ್ಷಣ, ಆರೋಗ್ಯ, ಸಮಾಜ ಸೇವೆ ಸೇರಿದಂತೆ ಎಲ್ಲಾ ಕ್ಷೇತ್ರಗಳಿಗೆ ತುಂಬಲಾರದ ನಷ್ಟವಾಗಿದ್ದು, ಅವರ ಸೇವೆ ಮತ್ತು ಸಾಧನೆಗಳು ಸದಾ ಸ್ಮರಣೀಯವಾಗಿವೆ. ಅವರ ಆದರ್ಶ ಜೀವನ ಮುಂದಿನ ಪೀಳಿಗೆಗೆ ಪ್ರೇರಣೆಯಾಗಿ ಉಳಿಯಲಿದೆ. ಅಗಲಿದ ಅವರ ಆತ್ಮಕ್ಕೆ ಚಿರಶಾಂತಿ ದೊರಕಲಿ, ಕುಟುಂಬವರ್ಗ ಹಾಗೂ ಅಪಾರ ಅಭಿಮಾನಿಗಳಿಗೆ ದುಃಖ ಭರಿಸುವ ಶಕ್ತಿ ಭಗವಂತ ಕರುಣಿಸಲಿ ಎಂದು ಕಾರ್ಕಳ ಶಾಸಕ ವಿ. ಸುನಿಲ್ ಕುಮಾರ್‌ಸಂತಾಪ ವ್ಯಕ್ತಪಡಿಸಿದ್ದಾರೆ.

ಸುಧಾಕರ್ ಶೆಟ್ಟಿ ಕಂಬನಿ:

ಶಿಕ್ಷಣ, ಆರೋಗ್ಯ ಕ್ಷೇತ್ರಕ್ಕೆ ಅನನ್ಯ ಕೊಡುಗೆ ನೀಡಿರುವ ಎನ್. ವಿನಯ ಹೆಗ್ಡೆ ಅವರ ವ್ಯಕ್ತಿತ್ವವನ್ನು ವರ್ಣಿಸಲಸಾಧ್ಯ. ಅವರಲ್ಲಿದ್ದ ಸಾಮಾಜಿಕ ಕಾಳಜಿ, ತನ್ನೂರಿನ ಕಳಕಳಿ, ಧಾರ್ಮಿಕ ಶ್ರದ್ಧೆ, ಶಿಕ್ಷಣ ಪ್ರೇಮ, ಕ್ರೀಡೆ, ಕಲೆಗೆ ನೀಡಿದ ಉತ್ತೇಜನ, ಸಮಾಜಕ್ಕೆ ಅರ್ಪಿಸಿಕೊಂಡ ಬಗೆ ಅನುಕರಣೀಯ. ಅಂತಹ ಮೇರು ವ್ಯಕ್ತಿಯನ್ನು ನಾವಿಂದು ಕಳೆದುಕೊಂಡಿದ್ದೇವೆ ಎಂದು ಜ್ಞಾನಸುಧಾ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಡಾ. ಸುಧಾಕರ್ ಶೆಟ್ಟಿ ಕಂಬನಿ ಮಿಡಿದರು.

ಸುಪ್ರೀಂ ಕೋರ್ಟ್ನ ನಿವೃತ್ತ ನ್ಯಾಯಮೂರ್ತಿ ಕೆ.ಎಸ್. ಹೆಗ್ಡೆ ಅವರ ಪುತ್ರ ಅನ್ನುವುದಕ್ಕೆ ನ್ಯಾಯಕೊಟ್ಟ ವ್ಯಕ್ತಿ ವಿನಯ ಹೆಗ್ಡೆ. ತನ್ನ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿ, ಕಸ ಗುಡಿಸುವ ವ್ಯಕ್ತಿಯ ಮಕ್ಕಳಿಗೂ ಉಚಿತ ಶಿಕ್ಷಣದ ಮೂಲಕ ಎಂಬಿಬಿಎಸ್, ಎಂಡಿ ಓದಿಸಿ ಕಾಳಜಿ ಮೆರೆದವರು. ತಾನು ಕಾರ್ಯನಿಮಿತ್ತ ಅಮೇರಿಕಾ ತೆರಳಿದ್ದ ಸಂದರ್ಭ ಕ್ರೀಡೆಯಲ್ಲಿ ತೊಡಗಿಸಿಕೊಂಡಿದ್ದ ತನ್ನ ವಿದ್ಯಾರ್ಥಿಗಳಿಗೆ ಕ್ರೀಡಾ ಸಾಮಗ್ರಿ ತಂದುಕೊಟ್ಟಿರುವ ಅಪೂರ್ವ ವ್ಯಕ್ತಿತ್ವದ ವಿನಯ ಹೆಗ್ಡೆ ಹೆಸರಿನಂತೆಯೇ ವಿನಯವಂತರಾಗಿದ್ದರು. ಎನ್‌ಐಟಿಕೆ ಸಂಸ್ಥೆಯನ್ನೂ ತನ್ನದೇ ಸಂಸ್ಥೆ ಎಂಬ ಪ್ರೀತಿಯಿಂದಲೇ ಕಂಡಿರುವ ವಿನಯ ಹೆಗ್ಡೆ ಅವರು ಒಬ್ಬ ಆದರ್ಶ ವ್ಯಕ್ತಿಯಾಗಿ, ಆದರ್ಶ ತಂದೆಯಾಗಿದ್ದವರು ಎಂದು ಡಾ. ಸುಧಾಕರ್‌ಶೆಟ್ಟಿ ಸಂತಾಪದಲ್ಲಿ ತಿಳಿಸಿದ್ದಾರೆ. ಎಂದು ತಿಳಿಸಿದ್ದಾರೆ.

ಶಿಕ್ಷಣ ಕಾಶಿಯ ಹರಿಕಾರ:

ಕೇವಲ ಒಂದು ಸಣ್ಣ ಶಿಕ್ಷಣ ಸಂಸ್ಥೆಯಿಂದ ಆರಂಭಿಸಿ, ಇಂದು ದೇಶ ವಿದೇಶಗಳಲ್ಲಿ ಹೆಸರು ಮಾಡಿರುವ ''ನಿಟ್ಟೆ ಸಮೂಹ ಸಂಸ್ಥೆ''ಯನ್ನು ಕಟ್ಟಿ ಬೆಳೆಸಿದ ಕೀರ್ತಿ ವಿನಯ ಹೆಗ್ಡೆ ಅವರಿಗೆ ಸಲ್ಲುತ್ತದೆ. ಎಂಜಿನಿಯರಿಂಗ್, ವೈದ್ಯಕೀಯ ಸೇರಿದಂತೆ ಹತ್ತಾರು ಶೈಕ್ಷಣಿಕ ವಿಭಾಗಗಳನ್ನು ಗ್ರಾಮೀಣ ಭಾಗಕ್ಕೂ ವಿಸ್ತರಿಸಿದ ಇವರು, ಸಾವಿರಾರು ವಿದ್ಯಾರ್ಥಿಗಳ ಬದುಕಿಗೆ ಬೆಳಕಾದವರು. ಶಿಕ್ಷಣದ ಜೊತೆಗೆ ಆರೋಗ್ಯ ಸೇವೆಯನ್ನೂ ಬಡವರಿಗೆ ತಲುಪಿಸಿದ

ಅಸಂಖ್ಯಾತ ಸಂಸ್ಥೆಗಳ ಒಡೆಯರಾಗಿದ್ದರೂ, ವಿನಯ ಹೆಗ್ಡೆ ಅವರು ತಮ್ಮ ಹೆಸರಿನಂತೆಯೇ ಸರಳತೆ ಮತ್ತು ವಿನಯವಂತಿಕೆಗೆ ಹೆಸರಾಗಿದ್ದರು. ಉದ್ಯಮ ರಂಗದ ಜೊತೆಗೆ ಕರಾವಳಿಯ ಸಾಂಸ್ಕೃತಿಕ ಮತ್ತು ಧಾರ್ಮಿಕ ಚಟುವಟಿಕೆಗಳಿಗೆ ಇವರು ನೀಡುತ್ತಿದ್ದ ಬೆಂಬಲ ಅಪಾರ. ಇವರ ನಿಧನಕ್ಕೆ ರಾಜಕೀಯ, ಶೈಕ್ಷಣಿಕ ಹಾಗೂ ಉದ್ಯಮ ರಂಗದ ಗಣ್ಯರು ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ.

ವಿನಯ ಹೆಗ್ಡೆ ಅವರ ಅಗಲಿಕೆ ಕೇವಲ ಕರಾವಳಿಗಷ್ಟೇ ಅಲ್ಲ, ಇಡೀ ರಾಜ್ಯದ ಶೈಕ್ಷಣಿಕ ಕ್ಷೇತ್ರಕ್ಕೆ ತುಂಬಲಾರದ ನಷ್ಟ. ಅವರೊಬ್ಬ ವಿಚಕ್ಷಣಾ ಶಕ್ತಿಯುಳ್ಳ ದೂರದೃಷ್ಟಿಯ ವ್ಯಕ್ತಿ ಎಂದು ಶೋಕಿಸಿದ್ದಾರೆ.

ನಾಯಿಮರಿಗಳ ರಕ್ಷಣೆಗೆ ದೈವದ ಮೊರೆ

ಕಡಬ: ಗ್ರಾಮದ ಬಸ್ ಸ್ಟ್ಯಾಂಡಿನಲ್ಲಿ ಪುಟ್ಟ ನಾಯಿಮರಿಗಳನ್ನು ಅನಾಥವಾಗಿ ಬಿಟ್ಟು ಹೋದ ದುರುಳರನ್ನು ಶಿಕ್ಷಿಸಲು ಗ್ರಾಮಸ್ಥರು ದೈವದ ಮೊರೆ ಹೋದ ಪ್ರಸಂಗ ದಕ್ಷಿಣ ಕನ್ನಡ ಜಿಲ್ಲೆಯ ಕಡಬದ ಎಡಮಂಗಲ ಗ್ರಾಮದಲ್ಲಿ ನಡೆದಿದೆ.

ಎಡಮಂಗಲ ಗ್ರಾಮದ ನಿಂತಿಕಲ್ ರಸ್ತೆ ಸಮೀಪವಿರುವ ಮಹಾಕಾಳಿ ಬಸ್ ನಿಲ್ದಾಣದಲ್ಲಿ ಇನ್ನೂ ಕಣ್ಣು ಬಿಟ್ಟು ಪ್ರಪಂಚ ನೋಡುದ ಪುಟ್ಟ ಎರಡು ನಾಯಿ ಮರಿಗಳನ್ನು ಇಲ್ಲಿ ಬಸ್ ಸ್ಟ್ಯಾಂಡಿನಲ್ಲಿ ಬಿಟ್ಟು ಹೋಗಿದ್ದಾರೆ. ಈ ಪುಟ್ಟ ಮರಿಗಳು ಬಸ್ ಸ್ಟ್ಯಾಂಡಿನ ಮೂಲೆಯಲ್ಲಿ ತಾಯಿ ಇಲ್ಲದ ರೋಧನೆಯಿಂದ ನಡುಗುತ್ತಿದ್ದವು. ಗ್ರಾಮಸ್ಥರು ಈ ಕೃತ್ಯ ಎಸಗಿದವರಿಗೆ ತಕ್ಕ ಪಾಠ ಕಲಿಸಲು ಮುಂದಾಗಿದ್ದಾರೆ. ಪುಟ್ಟ ನಾಯಿಮರಿಗಳನ್ನು ಅನಾಥವಾಗಿ ಬಿಟ್ಟು ಹೋದ ದುರುಳರನ್ನು ಶಿಕ್ಷಿಸಲು ದೈವದ ಮೊರೆ ಹೋಗಿದ್ದಾರೆ. 'ನಾಯಿ ಮರಿಗಳನ್ನು ತಂದು

ಬಿಟ್ಟವರಿಗೆ ಕೊರಗಜ್ಜನಿಗೆ ಮತ್ತು ಕಾನತ್ತೂರಿಗೆ ಹರಕೆ ಹೇಳುತ್ತೇವೆ. ತೆಗೆದುಕೊಂಡಿ ಹೋಗಿ ಇಲ್ಲದಿದ್ದರ್' ಬಸ್ ಸ್ಟ್ಯಾಂಡಿನಲ್ಲಿ ದೈವದ ಎಚ್ಚರಿಕೆ ಸಂದೇಶದೊಂದಿಗೆ ಆಳವಡಿಸಿದ್ದ ಬೋರ್ಡ್ ಇದೀಗ ಸಾರ್ವಜನಿಕರ ಗಮನ ಸೆಳೆಯುತ್ತಿದೆ.

ಮಾದಕ ವಸ್ತು ಸೇವನೆ: 52 ಮಂದಿ ವಶಕ್ಕೆ

ಮಂಗಳೂರು: ನಗರದಲ್ಲಿ ಹಬ್ಬದ ಸಂಭ್ರಮದ ನಡುವೆಯೇ ಮಾದಕ ಮುಕ್ತ ಪರಿಸರ ನಿರ್ಮಿಸಲು ಮುಂದಾಗಿರುವ ನಗರ ಪೊಲೀಸರು ಹಮ್ಮಿಕೊಂಡಿದ್ದ ಬೃಹತ್ ಕಾರ್ಯಾಚರಣೆಯಲ್ಲಿ ಡ್ರಗ್ಸ್ ಸೇವಿಸಿದ್ದ 52 ಮಂದಿಯನ್ನು ಪತ್ತೆಹಚ್ಚಿ ಕಾನೂನು ಕ್ರಮ ಜರುಗಿಸಿದ್ದಾರೆ.

ನಗರದಾದ್ಯಂತ ಎಲ್ಲಾ ಪೊಲೀಸ್ ಠಾಣಾ ವ್ಯಾಪ್ತಿಗಳಲ್ಲಿ ನಡೆಸಿದ ಈ ವಿಶೇಷ ತಪಾಸಣಾ ಕಾರ್ಯದಲ್ಲಿ, ನಂಬಲರ್ಹ ಮಾಹಿತಿ ಹಾಗೂ ಅನುಮಾನಾಸ್ಪದ ನಡವಳಿಕೆಯ ಆಧಾರದ ಮೇಲೆ ಸುಮಾರು 1,000 ಜನರನ್ನು ತಪಾಸಣೆಗೆ ಒಳಪಡಿಸಲಾಗಿತ್ತು. ಈ ಪೈಕಿ 52 ಮಂದಿ ಮಾದಕ ವಸ್ತು ಸೇವಿಸಿರುವುದು ವೈದ್ಯಕೀಯ ಪರೀಕ್ಷೆಯಲ್ಲಿ ದೃಢಪಟ್ಟಿದೆ. ಮಾದಕ ವ್ಯಸನಿಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಿರುವುದು ಆತಂಕಕಾರಿ ವಿಷಯವಾಗಿದೆ. ಒಟ್ಟು 25 ಮಂದಿ (ಇದರಲ್ಲಿ ಇಬ್ಬರು ಸ್ಥಳೀಯರು ಹಾಗೂ 23 ಮಂದಿ ಹೊರಜಿಲ್ಲೆಯವರು). ಸಿಕ್ಕಿಬಿದ್ದಿರುವ ವ್ಯಕ್ತಿಗಳಿಗೆ ಆಪ್ತ ಸಮಾಲೋಚನೆ ನಡೆಸಲಾಗುತ್ತಿದ್ದು, ಕಾನೂನಿನ ಚೌಕಟ್ಟಿನಲ್ಲಿ ಸೂಕ್ತ ಕ್ರಮ ಕೈಗೊಳ್ಳಲಾಗುತ್ತಿದೆ

ನಗರದಲ್ಲಿ ಮಾದಕ ವಸ್ತುಗಳ ಬಳಕೆ ಮತ್ತು ಪೂರೈಕೆ ಜಾಲವನ್ನು ಹತ್ತಿಕ್ಕಲು ಈ ಕಾರ್ಯಾಚರಣೆ ಸಹಕಾರಿಯಾಗಿದೆ. ಸಾರ್ವಜನಿಕರ ಸಹಕಾರದೊಂದಿಗೆ ಮಂಗಳೂರನ್ನು ಡ್ರಗ್ ಮುಕ್ತ ನಗರವನ್ನಾಗಿ ಮಾಡಲು ನಾವು ಬದ್ಧರಾಗಿದ್ದೇವೆ.

-ಸುಧೀರ್‌ಕುಮಾರ್ ರೆಡ್ಡಿ, ಪೊಲೀಸ್ ಕಮಿಷನರ್

ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಎಂಡಿಎಂಎ ವಶ: ಇದೇ ವೇಳೆ ಮಾದಕ ವಸ್ತು ಮಾರಾಟ ಜಾಲದ ವಿರುದ್ಧವೂ ಕಾರ್ಯಾಚರಣೆ ತೀವ್ರಗೊಳಿಸಿರುವ ಪೊಲೀಸರು, ಎರಡು ಪ್ರತ್ಯೇಕ ಪ್ರಕರಣಗಳಲ್ಲಿ ಮೂವರು ಡ್ರಗ್ ಪೆಡ್ಲರ್ಗಳನ್ನು ಬಂಧಿಸಿದ್ದಾರೆ. ಮೊದಲ ಪ್ರಕರಣದಲ್ಲಿ ಡಿ. 30ರಂದು ಆರೋಪಿಯಿಂದ 50 ಗ್ರಾಂ ಎಂಡಿಎಂಎ ವಶಪಡಿಸಿಕೊಳ್ಳಲಾಗಿದೆ. ಎರಡನೇ ಪ್ರಕರಣದಲ್ಲಿ ಇಬ್ಬರು ಆರೋಪಿಗಳಿಂದ 200 ಗ್ರಾಂ ಎಂಡಿಎಂಎ ಜಪ್ತಿ ಮಾಡಲಾಗಿದೆ.

ವಿನಯ ಹೆಗ್ಡೆ ನಿಧನಕ್ಕೆ ಎಂಎನ್ ಆರ್ ಸಂತಾಪ

ಮಂಗಳೂರು: ಶಿಕ್ಷಣ ಕ್ಷೇತ್ರಕ್ಕೆ ಅಪಾರ ಕೊಡುಗೆ ನೀಡಿದ ನಿಟ್ಟೆ ಸಮೂಹ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷರು ಹಾಗೂ ನಿಟ್ಟೆ ಪರಿಗಣಿತ ವಿಶ್ವವಿದ್ಯಾಲಯದ ಕುಲಪತಿ ಡಾ. ಎನ್. ವಿನಯ ಹೆಗ್ಡೆ ಅವರ ನಿಧನಕ್ಕೆ ಎಸ್ಸಿಡಿಸಿಸಿ ಬ್ಯಾಂಕಿನ ಅಧ್ಯಕ್ಷರಾದ ಡಾ.ಎಂ.ಎನ್. ರಾಜೇಂದ್ರಕುಮಾರ್‌ಸಂತಾಪ ವ್ಯಕ್ತಪಡಿಸಿದ್ದಾರೆ. ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರಕ್ಕೆ ಅಪಾರ ಕೊಡುಗೆಯನ್ನು ನೀಡಿದ ಡಾ.ಎನ್. ವಿನಯ್ ಹೆಗ್ಡೆ ಅವರು ಗ್ರಾಮೀಣ ಪ್ರದೇಶವಾಗಿದ್ದ ನಿಟ್ಟೆಯನ್ನು ಅಂತಾರಾಷ್ಟ್ರೀಯ ಮಟ್ಟದ ಶೈಕ್ಷಣಿಕ ಕೇಂದ್ರವಾಗಿ ಪರಿವರ್ತಿಸಿದ ಶಿಕ್ಷಣ ತಜ್ಞರಾಗಿದ್ದಾರೆ. ನಿಟ್ಟೆ ಯೂನಿವರ್ಸಿಟಿ ರೂವಾರಿಯಾಗಿದ್ದ ಅವರು ದಕ್ಷ ಆಡಳಿತಗಾರರಾಗಿದ್ದು, ಆತ್ಮೀಯರಾಗಿದ್ದವರು. ಅವರ ನಿಧನ ಅತೀವ ದುಃಖವನ್ನು ತಂದಿದೆ ಎಂದು ರಾಜೇಂದ್ರಕುಮಾರ್ ತಮ್ಮ ಸಂತಾಪದಲ್ಲಿ ತಿಳಿಸಿದ್ದಾರೆ.

ಎಸ್.ಡಿ.ಎಂ ಸಂಸ್ಥೆಗಳ ಉಪಾಧ್ಯಕ್ಷ ಪ್ರೊ. ಎಸ್. ಪ್ರಭಾಕರ್ ನುಡಿ ನಮನ: ಡಾ. ಡಿ. ವೀರೇಂದ್ರ ಹೆಗ್ಗಡೆ

ವಜ್ರ ಕುಮಾರ್, ಪ್ರಭಾಕರ್ ನನ್ನೆರಡು ಕಣ್ಣುಗಳಿದ್ದಂತೆ

ಉಜಿರೆ: ಪ್ರೊ.ಎಸ್. ಪ್ರಭಾಕರ್‌ರವರು ಶ್ರೀ ಕ್ಷೇತ್ರ ಧರ್ಮಸ್ಥಳ ಮತ್ತು ತಂದೆಯವರ ಮೇಲೆ ಅಪಾರ ಪ್ರೀತಿ, ಗೌರವ ಹೊಂದಿದ್ದವರು. ಈ ಕಾರಣಕ್ಕಾಗಿ ತಂದೆಯವರು ಆಗತಾನೆ ಆರಂಭ ವಾಗುತ್ತಿದ್ದ ಉಜಿರೆಯ ಕಾಲೇಜಿಗೆ ಬರಬೇಕು ಎಂದಾಗ ಸರ್ಕಾರಿ ಹುದ್ದೆಯನ್ನು ಬಿಟ್ಟು ಪ್ರೀತಿಯಿಂದ ಉಜಿರೆಗೆ ಬಂದರು. ಕಾಲೇಜಿನ ಸ್ಥಾಪಕ ಪ್ರಾಚಾರ್ಯರಾಗಿ ಸೇವೆಯನ್ನು ಆರಂಭಿಸಿ ಸುದೀರ್ಘ ವರ್ಷಗಳ ಕಾಲ ಎಸ್.ಡಿ.ಎಂ ಶಿಕ್ಷಣ ಸಂಸ್ಥೆಗಳ ಕಾರ್ಯದರ್ಶಿಯಾಗಿ, ಉಪಾಧ್ಯಕ್ಷರಾಗಿ ಸಂಸ್ಥೆಯ ಯಶಸ್ಸಿಗೆ ಕಾರಣೀಭೂತರಾಗಿದ್ದಾರೆ ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ಮತ್ತು ಎಸ್.ಡಿ.ಎಂ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಡಾ.ಡಿ. ವೀರೇಂದ್ರ ಹೆಗ್ಗಡೆ ಅಭಿಪ್ರಾಯ ಪಟ್ಟರು.

ಉಜಿರೆಯ ಶ್ರೀ ಸಿದ್ಧವನ ಗುರುಕುಲದಲ್ಲಿ ನಡೆದ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಶಿಕ್ಷಣ ಸಂಸ್ಥೆಗಳಿಂದ ನಡೆದ ಪ್ರೊ. ಎಸ್. ಪ್ರಭಾಕರ ಅವರಿಗೆ ಭಾವಪೂರ್ಣ ನುಡಿನಮನ ಕಾರ್ಯಕ್ರಮದಲ್ಲಿ ಮಾತನಾಡಿದರು.

ನನ್ನ ಪಟ್ಟದ ಆರಂಭದ ದಿನಗಳಲ್ಲಿ ಅನೇಕ ರೀತಿಯಲ್ಲಿ ಸಹಕಾರವನ್ನು ನೀಡಿದ್ದಾರೆ. ಎಸ್.ಡಿ.ಎಂ ಶಿಕ್ಷಣ ಸಂಸ್ಥೆಗಳ ಯಶಸ್ಸಿನಲ್ಲಿ ಪ್ರೊ. ಎನ್. ವಜ್ರ ಕುಮಾರ್‌ಮತ್ತು ಪ್ರೊ. ಎಸ್ ಪ್ರಭಾಕರ್‌ನನ್ನೆರಡು ಕಣ್ಣುಗಳಿದ್ದಂತೆ. ಸಾವಿರಾರು ಉನ್ನತ ಮಟ್ಟದಲ್ಲಿರುವ ಶಿಷ್ಯವರ್ಗವನ್ನು ಹೊಂದಿದ್ದ ಪ್ರೊ. ಎಸ್. ಪ್ರಭಾಕರ್‌ಇಂದು ಸಂಸ್ಥೆಯನ್ನು ಬಿಟ್ಟು ಅಗಲಿರುವುದು ತುಂಬಲಾರದ ನಷ್ಟವಾಗಿದೆ.

ಇವರ ಆತ್ಮಕ್ಕೆ ನನ್ನ ಕುಟುಂಬ ಮತ್ತು ಎಸ್.ಡಿ.ಎಂ ಶಿಕ್ಷಣ ಸಂಸ್ಥೆಗಳ ವತಿಯಿಂದ ಕೃತಜ್ಞತೆ ತಿಳಿಸುತ್ತೇನೆ ಎಂದು ಭಾವುಕವಾಗಿ ನುಡಿದರು.

ಕಾರ್ಯಕ್ರಮದಲ್ಲಿ ಪ್ರಭಾಕರವರಿಗೆ ಒಂದು ನಿಮಿಷದ ಮೌನದ ಮೂಲಕ ಸಂತಾಪ ಸೂಚಿಸಲಾಯಿತು. ಧರ್ಮಸ್ಥಳದ ಸುಪ್ರೀಯಾ ಹರ್ಷೇಂದ್ರ ಕುಮಾರ್‌ಪ್ರೊ. ಎಸ್. ಪ್ರಭಾಕರ ಕುರಿತ ಅನಿಸಿಕೆಯ ಪತ್ರವನ್ನು ವೇದಿಕೆಯಲ್ಲಿ ಎಸ್.ಡಿ.ಎಂ ಪದವಿ ಕಾಲೇಜಿನ ಸಂಸ್ಕೃತ ವಿಭಾಗದ ಮುಖ್ಯಸ್ಥ ಡಾ. ಶ್ರೀಧರ ಭಟ್ ವಾಚಿಸಿದರು.

ವಿಧಾನ ಪರಿಷತ್ ಸದಸ್ಯ ಪ್ರತಾಪ್ ಸಿಂಹ ನಾಯಕ್ ಮಾತನಾಡಿ, ರತ್ನವರ್ಮ ಹೆಗಡೆಯವರ ಸಂಕಲ್ಪ ಮತ್ತು



ಉಜಿರೆಯ ಶ್ರೀ ಸಿದ್ಧವನ ಗುರುಕುಲದಲ್ಲಿ ನಡೆದ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಶಿಕ್ಷಣ ಸಂಸ್ಥೆಗಳಿಂದ ನಡೆದ ಪ್ರೊ. ಎಸ್. ಪ್ರಭಾಕರ ಅವರಿಗೆ ಭಾವಪೂರ್ಣ ನುಡಿನಮನ ಕಾರ್ಯಕ್ರಮದಲ್ಲಿ ಡಾ.ಡಿ. ವೀರೇಂದ್ರ ಹೆಗ್ಗಡೆ ಮಾತನಾಡಿದರು.

ಉಜಿರೆಯ ಎಸ್.ಡಿ.ಎಂ ಶಿಕ್ಷಣಗಳ ಬೆಳವಣಿಗೆಗೆ ಪ್ರೊ. ಎಸ್. ಪ್ರಭಾಕರ ಕೊಡುಗೆ ಅಪಾರ. ಅವರ ಮನೆಯಲ್ಲಿ ಇದ್ದುಕ್ಕೊಂಡು ಉಜಿರೆಯಲ್ಲಿ ಶಿಕ್ಷಣವನ್ನು ಪಡೆದುಕೊಂಡವಳು ನಾನು. ಅವರ ಮನೆ ಹಲವಾರು ಕುಟುಂಬ ಸದಸ್ಯರಿಂದ ಸದಾ ತುಂಬಿರುತಿತ್ತು. ತನ್ನ ಬದುಕಿನುದ್ದಕ್ಕೂ ಅತ್ಯಂತ ಸರಳವಾಗಿ ನಮ್ಮೆಲ್ಲರಿಗೂ ಮಾರ್ಗದರ್ಶಕರಾಗಿ ಬದುಕಿದ ಜೀವ. ವೃತ್ತಿಯ ಜೊತೆ ಹವ್ಯಾಸವಾಗಿ ಕೃಷಿಯಲ್ಲಿ ತೊಡಗಿಸಿಕೊಂಡಿದ್ದರು. ಅವರ ಬದುಕು ನಮಗೆ ಮಾದರಿಯಾಗಬೇಕು.''

-ಡಾ. ಹೇಮಾವತಿ ವಿ ಹೆಗ್ಗಡೆ, ಧರ್ಮಸ್ಥಳ

ಡಾ. ಡಿ. ವೀರೇಂದ್ರ ಹೆಗ್ಗಡೆಯವರ ಗ್ರಾಮೀಣ ಭಾಗದಲ್ಲಿ ಶಿಕ್ಷಣ ಸಂಸ್ಥೆಗಳ ಕನಸನ್ನು ಸಾಕಾರಗೊಳಿಸಿದವರು. ಸಮಾಜದಲ್ಲಿ ಹಲವರಿಗೆ ಸ್ಥಾನಮಾನದ ಮೇಲೆ ಗೌರವ ಸನ್ಮಾನ ಲಭಿಸುತ್ತದೆ. ಆದರೆ ತನ್ನ ವ್ಯಕ್ತಿತ್ವದ ಮೇಲೆ ಈ ಸಮಾಜದಲ್ಲಿ ಗೌರವಕ್ಕೆ ಪಾತ್ರರಾದವರು ಪ್ರಭಾರ್ಕ. ವಿದ್ಯಾರ್ಥಿಗಳ ಶೈಕ್ಷಣಿಕ ಬೆಳವಣಿಗೆ ಮತ್ತು ವ್ಯಕ್ತಿತ್ವ ವಿಕಸನದ ಮೇಲೆ ಅಪಾರ ಕಾಳಜಿಯನ್ನು ಹೊಂದಿದ್ದ ಪ್ರಾಭಾಕರ್‌ರವರ ಅನುಪಸ್ಥಿತಿ ಇಂದು ಅತೀವ ದುಃಖ ತಂದಿದೆ ಎಂದರು.

ವೇದಿಕೆಯಲ್ಲಿ ಮಂಗಳೂರು ಮೆಸ್ಕಾಂ ವಿಭಾಗದ ಅಧ್ಯಕ್ಷ ಹರೀಶ್ ಕುಮಾರ್, ಹಿರಿಯ ವಕೀಲ ಬಿ. ಕೆ ಧನಂಜಯ್ ರಾವ್ ಮಾತನಾಡಿದರು.

ಪ್ರೊ. ಎಸ್. ಪ್ರಭಾಕರ್‌ಅವರ ಅಳಿಯ, ಲಂಡನ್ ನ ವೈದ್ಯ ಡಾ. ನರೇಂದ್ರ ಅಳದಂಗಡಿ ಮಾತನಾಡಿ, ಪ್ರಭಾಕರ್ ಅವರೊಂದಿಗಿನ ಒಡನಾಟದ ಭಾವಪೂರ್ಣ ನೆನಪುಗಳನ್ನು ಹಂಚಿಕೊಂಡರು.

ವೇದಿಕೆಯಲ್ಲಿ ಧರ್ಮಸ್ಥಳದ ಡಾ. ಹೇಮಾವತಿ ವಿ ಹೆಗ್ಗಡೆ, ಎಸ್.ಡಿ.ಎಂ ಶಿಕ್ಷಣ ಸಂಸ್ಥೆಗಳ ಉಪಾಧ್ಯಕ್ಷ ಡಿ. ಸುರೇಂದ್ರ ಕುಮಾರ್, ಕಾರ್ಯದರ್ಶಿ ಹರ್ಷೇಂದ್ರ ಕುಮಾರ್,ಡಾ. ಸತೀಶ್ಚಂದ್ರ.ಎಸ್, ಉಜಿರೆಯ ಜನಾರ್ದನ ಸ್ವಾಮಿ ದೇವಸ್ಥಾನದ ಅನುವಂಶಿಕ ಆಡಳಿತ ಮೊಕ್ತೇಸರ ಶರತ್ ಕೃಷ್ಣ ಪಡುವೆಟ್ನಾಯರ್ ಉಪಸ್ಥಿತರಿದ್ದರು.

ಸೋನಿಯಾ ಯಶೋವರ್ಮ, ಬೆಂಗಳೂರಿನ ಕ್ಷೇಮವನದ ಕಾರ್ಯನಿರ್ವಾಹಕ ನಿರ್ದೇಶಕಿ ಶ್ರದ್ಧಾ ಅಮಿತ್, ಎಸ್.ಡಿ.ಎಂ ಐಟಿ ಮತ್ತು ಹಾಸ್ಟೆಲ್ ಆಡಳಿತ ವಿಭಾಗದ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಪೂರನ್ ವರ್ಮ, ಶಾಲೆಯ ಸಂಚಾಲಕಿ ಶ್ರುತ ಜಿತೇಶ್, ನಂದೀಶ್ ಇದ್ದರು. ನುಡಿ ನಮನ ಕಾರ್ಯಕ್ರಮದಲ್ಲಿ ಎಸ್.ಡಿ.ಎಂ ಶಿಕ್ಷಣ ಸಂಸ್ಥೆಗಳ ವಿವಿಧ ಶಾಲಾ ಕಾಲೇಜುಗಳ ಮುಖ್ಯಸ್ಥರು, ಉಪನ್ಯಾಸಕರು, ಸಿಬ್ಬಂದಿವರ್ಗದವರು, ಟ್ರಸ್ಟ್ ಸದಸ್ಯರು, ಗಣ್ಯರು ಭಾಗಿಯಾಗಿದ್ದರು.

ನುಡಿನಮನದ ಬಳಿಕ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದ ಸರ್ವಸದಸ್ಯರು ಭಾವ ಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿದರು.

ಧರ್ಮಸ್ಥಳ ಸಂಸ್ಥೆಯಿಂದ 418 ಶಾಲೆಗಳಿಗೆ ಡೆಸ್ಕ್-ಬೆಂಚ್

ಧರ್ಮಸ್ಥಳದ ಧರ್ಮಾಧಿಕಾರಿ ಡಿ. ವೀರೇಂದ್ರ ಹೆಗ್ಗಡೆಯವರು ಶಾಲೆಗಳಿಗೆ ಡೆಸ್ಕ್-ಬೆಂಚ್ ವಿತರಣೆಗೆ ಚಾಲನೆ ನೀಡಿ ಶುಭ ಹಾರೈಸಿದರು.

ಉಜಿರೆ: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಜ್ಞಾನದೀಪ ಶಿಕ್ಷಣ ಕಾರ್ಯಕ್ರಮದಡಿಯಲ್ಲಿ ಶಾಲಾಕೊಠಡಿ, ಆಟದಮೈದಾನ, ಕುಡಿಯುವನೀರು, ಶೌಚಾಲಯ, ರಂಗಮಂದಿರ, ಬೋಧನಾ ಸಾಮಗ್ರಿ ಸೌಕರ್ಯ ಒದಗಿಸಿ ಪ್ರೋತ್ಸಾಹ ನೀಡಲಾಗುತ್ತದೆ ಎಂದು ಧರ್ಮಸ್ಥಳದ ಧರ್ಮಾಧಿಕಾರಿ ಡಿ. ವೀರೇಂದ್ರ ಹೆಗ್ಗಡೆ ಹೇಳಿದರು. ಅವರು ಗುರುವಾರ ಧರ್ಮಸ್ಥಳದಲ್ಲಿ ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ, ತುಮಕೂರು ಮತ್ತು ಕೋಲಾರ ಜಿಲ್ಲೆಗಳ 418 ಶಾಲೆಗಳಿಗೆ 3,472 ಜೊತೆ ಡೆಸ್ಕ್-ಬೆಂಚ್ಗಳ ವಿತರಣೆಗೆ ಚಾಲನೆ ನೀಡಿ ಮಾತನಾಡಿದರು.

ಇದಕ್ಕಾಗಿ ಈವರೆಗೆ 47.69 ಕೋಟಿ ರು. ವಿನಿಯೋಗಿಸಲಾಗಿದೆ. ಶೈಕ್ಷಣಿಕ ವರ್ಷದಲ್ಲಿ ಶಾಲೆಗಳಿಗೆ 1074 ಗೌರವ ಶಿಕ್ಷಕರನ್ನು ನೇಮಿಸಲಾಗಿದೆ.ರಾಜ್ಯದ 11,621 ಶಾಲೆಗಳಿಗೆ 75,518 ಜೊತೆ ಡೆಸ್ಕ್-ಬೆಂಚ್ಗಳನ್ನು ಈ ವರೆಗೆ ವಿತರಿಸಿದ್ದು ಇದಕ್ಕಾಗಿ 28.55 ಕೋಟಿ ರೂ. ವಿನಿಯೋಗಿಸಲಾಗಿದೆ ಎಂದು ಅವರು ತಿಳಿಸಿದರು.

ಹೇಮಾವತಿ ವೀ. ಹೆಗ್ಗಡೆ, ಡಿ. ಸುರೇಂದ್ರ ಕುಮಾರ್, ಶ್ರದ್ಧಾಅಮಿತ್, ಅಮಿತ್, ಕುಮಾರಿ ಮಾನ್ಯ ಉಪಸ್ಥಿತರಿದ್ದರು. ಗ್ರಾಮಾಭಿವೃದ್ಧಿ ಸಂಸ್ಥೆಯ ಎಂಡಿ ಅನಿಲ್ಕುಮಾರ್ ಮಾಹಿತಿ ನೀಡಿದರು.

ಬೆಂಗಳೂರು- ಮಂಗಳೂರು ವಂದೇ ಭಾರತ್: ಸೋಮಣ್ಣ

ಮಂಗಳೂರು: ದೇಶದ ಅತ್ಯಂತ ಕಠಿಣ ರೈಲ್ವೆ ಜಾಲಗಳಲ್ಲಿ ಒಂದಾದ ಸಂಕಲೇಶಪುರ ಮತ್ತು ಸುಬ್ರಹ್ಮಣ್ಯ ಘಾಟ್ ರೈಲು ಮಾರ್ಗದ ವಿದ್ಯುಧೀಕರಣ ಸಂಪೂರ್ಣಗೊಂಡಿದೆ. ಅಲ್ಲದೆ ಪ್ರಾಯೋಗಿಕ ರೈಲು ಸಂಚಾರ ಕೂಡ ಸಕ್ಸಸ್ ಆಗಿದೆ. ಇದರ ಬೆನ್ನಲ್ಲೇ ಇದೀಗ ವಂದೇಭಾರತ್ ರೈಲನ್ನು ಈ ಮಾರ್ಗದಲ್ಲಿ ಓಡಿಸಲು ಕುರಿತು ಹಲವಾರು ಮನವಿಗಳು ಬಂದಿದ್ದು, ಈ ಕುರಿತಂತೆ ಕೇಂದ್ರ ರೈಲ್ವೆ ಖಾತೆ ರಾಜ್ಯ ಸಚಿವ ವಿ ಸೋಮಣ್ಣ ಸಿಹಿ ಸುದ್ದಿಯನ್ನು ನೀಡಿದ್ದಾರೆ. ದೇಶದ ಅತ್ಯಂತ ಕಠಿಣ ರೈಲ್ವೆ ಮಾರ್ಗಗಳಲ್ಲಿ ಒಂದಾದ ತಾಂತ್ರಿಕವಾಗಿ ಸವಾಲಿಂದ ಕೂಡಿದ್ದ ಸಕಲೇಶಪುರ-ಸುಬ್ರಹ್ಮಣ್ಯ ರೈಲು ಮಾರ್ಗದ ವಿದ್ಯುದೀಕರಣ ಪೂರ್ಣಗೊಂಡಿದ್ದು, ಇದರಿಂದ ಬೆಂಗಳೂರು ಮತ್ತು ಮಂಗಳೂರು ನಡುವೆ ವಂದೇ ಭಾರತ್ ರೈಲು ಸಂಚಾರ ಸಾಧ್ಯವಾಗಲಿದೆ ಎಂದು ಕೇಂದ್ರ ರೈಲ್ವೆ ರಾಜ್ಯ ಸಚಿವ ವಿ. ಸೋಮಣ್ಣ ತಿಳಿಸಿದ್ದಾರೆ ಬಗ್ಗೆ ಪತ್ರಿಕಾ ಪ್ರಕಟಣೆ ನೀಡಿರುವ ಅವರು, ವಿದ್ಯುದೀಕರಣ ಡಿಸೆಂಬರ್28ರಂದು ಪೂರ್ಣಗೊಂಡಿದ್ದು ವಿದ್ಯುತ್ ಲೋಕೋಮೋಟಿವ್ ಪರೀಕ್ಷಾರ್ಥ ಸಂಚಾರ ನಡೆದಿದೆ. ಕಡಿದಾದ ಇಳಿಜಾರು, 57 ಸುರಂಗಗಳು, 226 ಸೇತುವೆ ಮತ್ತು 108 ತಿರುವು ಹೊಂದಿರುವ ಈ ಪ್ರದೇಶ ಮಳೆಗಾಲದಲ್ಲಿ ಭೂಕುಸಿತಕ್ಕೆ ಹೆಚ್ಚು ತುತ್ತಾಗುವ ಪ್ರದೇಶವಾಗಿದೆ. ಇಲ್ಲಿ ಸುರಂಗಗಳ ವಿದ್ಯುದೀಕರಣಕ್ಕಾಗಿ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ರಾಕ್ ಮೆಕ್ಯಾನಿಕ್ಸ್ ಮತ್ತು ಬೆಂಗಳೂರು ವಿಶ್ವವಿದ್ಯಾಲಯದ ಸಹಯೋಗದಲ್ಲಿ ವಿವರವಾದ ಭೂವೈಜ್ಞಾನಿಕ ಅಧ್ಯಯನ ನಡೆಸಲಾಗಿತ್ತು.

ವೈಕುಂಠ ಏಕಾದಶಿ: ಶ್ರೀನಿವಾಸ ಕಲ್ಯಾಣ ಮಹೋತ್ಸವ

ಉಡುಪಿ: ವೈಕುಂಠ ಏಕಾದಶಿಯಂದು ಉಡುಪಿ ಶ್ರೀಕೃಷ್ಣ ಮಠದ ರಾಜಾಂಗಣದಲ್ಲಿ ಜರುಗಿದ ಶ್ರೀನಿವಾಸ ಕಲ್ಯಾಣ ಮಹೋತ್ಸವ ಭಕ್ತಿಭಾವ, ಶ್ರದ್ಧೆ ಹಾಗೂ ಆಧ್ಯಾತ್ಮಿಕ ಉಲ್ಲಾಸದ ಅಪರೂಪದ ಸಂಗಮವಾಗಿ ಮೂಡಿಬಂತು. ಪರ್ಯಾಯ ಪುತ್ತಿಗೆ ಮಠದ ಆಶ್ರಯದಲ್ಲಿ ಸಂಪ್ರದಾಯಬದ್ಧವಾಗಿ ನೆರವೇರಿದ ಈ ಮಹೋತ್ಸವವು ವೈಕುಂಠದ್ವಾರ ತೆರೆದ ಕ್ಷಣಗಳ ಜೀವಂತ ಅನುಭವವನ್ನು ಭಕ್ತರಿಗೆ ನೀಡಿತು.

ವೇದಮಂತ್ರಗಳ ಘೋಷ, ಮಂಗಳವಾದ್ಯಗಳ ನಾದ ಹಾಗೂ ಭಜನೆ-ಕೀರ್ತನೆಗಳ ಸೌಮ್ಯ ಲಯದ ನಡುವೆ ರಾಜಾಂಗಣವು ಆಧ್ಯಾತ್ಮಿಕ ತಪೋಭೂಮಿಯಾಗಿ ಪರಿವರ್ತನೆಯಾಯಿತು. ಬೆಂಗಳೂರಿನ ಎಸ್. ವೆಂಕಟೇಶಮೂರ್ತಿ ಅವರ ನೇತೃತ್ವದ ಶ್ರೀವಾರಿ ಫೌಂಡೇಶನ್ ಆಯೋಜಿಸಿದ್ದ ಈ ಧಾರ್ಮಿಕ ಉತ್ಸವವು ಆಗಮಶಾಸ್ತ್ರ ಅನುಸಾರ ಪೂಜಾಕ್ರಿಯೆಗಳು, ಸಂಪ್ರದಾಯಬದ್ಧ ವಿಧಿವಿಧಾನಗಳು ಮತ್ತು ಶಿಸ್ತಿನ ಆಚರಣೆಗಳೊಂದಿಗೆ ವಿಜೃಂಭಣೆಯಿಂದ ನೆರವೇರಿತು.

ಉಡುಪಿ ಶ್ರೀಕೃಷ್ಣ ಮಠದ ರಾಜಾಂಗಣದಲ್ಲಿ ಜರುಗಿದ ಶ್ರೀನಿವಾಸ ಕಲ್ಯಾಣ ಮಹೋತ್ಸವ ಕಾರ್ಯಕ್ರಮದಲ್ಲಿ ಪರ್ಯಾಯ ಪುತ್ತಿಗೆ ಸುಗುಣೇಂದ್ರತೀರ್ಥ ಶ್ರೀಪಾದರು ಹಾಗೂ ಕಿರಿಯ ಪಟ್ಟದ ಸುಶ್ರೀಂದ್ರತೀರ್ಥ ಶ್ರೀಪಾದರು, ದಿವಾನರಾದ ನಾಗರಾಜಾಚಾರ್ಯ, ಅಂತಾರಾಷ್ಟ್ರೀಯ ಕಾರ್ಯದರ್ಶಿ ಪ್ರಸನ್ನಾಚಾರ್ಯ, ಟಿಟಿಡಿ ದಾಸ ಸಾಹಿತ್ಯ ಪ್ರಾಜೆಕ್ಟ್ ವಿಶೇಷಾಧಿಕಾರಿ ಪಂಡಿತ ಆನಂದತೀರ್ಥಚಾರ್ಯ ಪಗಡಾಲ್ ಉಪಸ್ಥಿತರಿದ್ದರು.

ವೈಕುಂಠ ಏಕಾದಶಿಯ ಮಹತ್ವವನ್ನು ಸಾರುವ ಧಾರ್ಮಿಕ ಸಂದೇಶಗಳು ಭಕ್ತರನ್ನು ಆತ್ಮಪರಿಶೀಲನೆ ಹಾಗೂ ಭಕ್ತಿಪಥದತ್ತ ಕರೆದೊಯ್ದವು. ಅಪಾರ ಸಂಖ್ಯೆಯಲ್ಲಿ ಸೇರಿದ್ದ ಆಸ್ತಿಕರು ಶ್ರೀನಿವಾಸನ ದಿವ್ಯ ದರ್ಶನ ಪಡೆದರು. ಶಾಂತಿ, ಶ್ರದ್ಧೆ ಮತ್ತು ಭಕ್ತಿಭಾವ ಒಂದೇ ವೇದಿಕೆಯಲ್ಲಿ ಬೆರೆತು ವೈಷ್ಣವ ಪರಂಪರೆಯ ಜೀವಂತ ಚಿತ್ರಣವನ್ನು ಮೂಡಿಸಿತು. ಶ್ರೀಕ್ಷೇತ್ರ ತಿರುಮಲದಲ್ಲಿ ಅನುಸರಿಸಲಾಗುವ ಆಗಮ ಪದ್ಧತಿಯಂತೆ ನೆರವೇರಿದ ಶ್ರೀನಿವಾಸ ಕಲ್ಯಾಣವು ಸರ್ವಪಾಪ ಪರಿಹಾರಕ ಹಾಗೂ ಸರ್ವಮಂಗಲಕರ ಆಧ್ಯಾತ್ಮಿಕ ಶಕ್ತಿಯ ಸಂಕೇತವೆಂಬ ನಂಬಿಕೆಯಿದೆ. ಕಲ್ಯಾಣೋತ್ಸವದ ಪ್ರತಿಕ್ಷಣವೂ ಭಕ್ತರ ಹೃದಯದಲ್ಲಿ ಧರ್ಮ,ಸಂಪ್ರದಾಯ ಮತ್ತು ಆತ್ಮಶಾಂತಿಯ ಬೀಜವನ್ನು ಬಿತ್ತುವಂತಾಯಿತು.

ಈ ವೇಳೆ ಪರ್ಯಾಯ ಪುತ್ತಿಗೆ ಸುಗುಣೇಂದ್ರತೀರ್ಥ ಶ್ರೀಪಾದರು ಹಾಗೂ ಕಿರಿಯ ಪಟ್ಟದ ಸುಶ್ರೀಂದ್ರತೀರ್ಥ ಶ್ರೀಪಾದರು, ದಿವಾನರಾದ ನಾಗರಾಜಾಚಾರ್ಯ,ಅಂತಾರಾಷ್ಟ್ರೀಯ ಕಾರ್ಯದರ್ಶಿ ಪ್ರಸನ್ನಾಚಾರ್ಯ,ಟಿಟಿಡಿ ದಾಸ ಸಾಹಿತ್ಯ ಪ್ರಾಜೆಕ್ಟ್ ವಿಶೇಷಾಧಿಕಾರಿ ಪಂಡಿತ ಆನಂದತೀರ್ಥಚಾರ್ಯ ಪಗಡಾಲ್, ವಾದಿರಾಜ ಸಂಶೋಧನಾ ಪ್ರತಿಷ್ಠಾನದ ನಿರ್ದೇಶಕ ಡಾ. ಬಿ. ಗೋಪಾಲಚಾರ್ಯ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಸಮಾಚಾರ ಸಣ್ಣದಲ್ಲ

ರೋಕೋ ಜೋಡಿಗೆ 18 ಪಂದ್ಯ ಆಡಲು ಅವಕಾಶ

ಬೆಂಗಳೂರು: ಅಂತಾರಾಷ್ಟ್ರೀಯ ಟಿ20 ಹಾಗೂ ಟೆಸ್ಟ್ ಕ್ರಿಕೆಟ್‌ಗೆ ವಿದಾಯ ಘೋಷಿಸಿರುವ ಭಾರತದ ದಿಗ್ಗಜ ಕ್ರಿಕೆಟಿಗರಾದ ವಿರಾಟ್ ಕೊಹ್ಲಿ ಹಾಗೂ ರೋಹಿತ್ ಶರ್ಮಾ 2027ರ ಐಸಿಸಿ ಏಕದಿನ ವಿಶ್ವಕಪ್ ಟೂರ್ನಿಯ ಮೇಲೆ ಕಣ್ಣಿಟ್ಟಿದ್ದಾರೆ. ಈ ನಡುವೆ 2026ರಲ್ಲಿ ಈ ಜೋಡಿ ಬರೋಬ್ಬರಿ 18 ಏಕದಿನ ಪಂದ್ಯಗಳನ್ನು ಆಡಲು ಅವಕಾಶವಿದೆ. ಜನವರಿ 11ರಿಂದ ನ್ಯೂಜಿಲೆಂಡ್ ಎದುರು ಭಾರತದಲ್ಲಿ ಆರಂಭವಾಗಲಿರುವ ಮೂರು ಏಕದಿನ ಪಂದ್ಯಗಳಲ್ಲಿ ಈ ಜೋಡಿ ಭಾಗಿಯಾಗಲಿದೆ. ಬಳಿಕ ಆಫ್ಘಾನಿಸ್ತಾನ ತಂಡವು ಭಾರತ ಪ್ರವಾಸ ಕೈಗೊಳ್ಳಲಿದ್ದು, ಈ ವೇಳೆ ಉಭಯ ದೇಶಗಳ ನಡುವೆ ಮೂರು ಪಂದ್ಯಗಳ ಏಕದಿನ ಸರಣಿ ನಡೆಯಲಿದೆ. ಈ ಟೂರ್ನಿಯ ವೇಳಾಪಟ್ಟಿ ಇನ್ನೂ ಅಧಿಕೃತವಾಗಿ ಘೋಷಣೆಯಾಗಿಲ್ಲ. ಜುಲೈನಲ್ಲಿ ಟೀಮ್ ಇಂಡಿಯಾ ಇಂಗ್ಲೆಂಡ್ ಪ್ರವಾಸ ಕೈಗೊಳ್ಳಲಿದೆ. ಅಲ್ಲಿ ನಡೆಯುವ ಮೂರು ಏಕದಿನ ಪಂದ್ಯಗಳಲ್ಲಿ ಇಬ್ಬರೂ ಆಡುವ ಸಾಧ್ಯತೆ ಇದೆ. ಸೆಪ್ಟೆಂಬರ್ ಹಾಗೂ ಅಕ್ಟೋಬರ್ ವೇಳೆಗೆ ವೆಸ್ಟ್ ಇಂಡೀಸ್ ತಂಡ ಭಾರತ ಪ್ರವಾಸ ಕೈಗೊಳ್ಳಲಿದ್ದು ಈ ಸರಣಿಗೆ ದಿನಾಂಕ ಅಧಿಕೃತವಾಗಿಲ್ಲ. ಅಕ್ಟೋಬರ್‌ನಲ್ಲಿ ಭಾರತ ತಂಡವು ಕಿವೀಸ್ ಪ್ರವಾಸ ಮಾಡಲಿದ್ದು, ಮೂರು ಪಂದ್ಯಗಳ ಸರಣಿಯಲ್ಲಿ ರೋಕೋ ತಂಡ ಆಡುವ ಅವಕಾಶವಿದೆ. ಡಿಸೆಂಬರ್‌ನಲ್ಲಿ ಭಾರತ ಹಾಗೂ ಶ್ರೀಲಂಕಾ ನಡುವೆ ಮೂರು ಪಂದ್ಯಗಳ ಏಕದಿನ ಸರಣಿ ನಡೆಯಲಿದೆ. ಈ ಎಲ್ಲಾ ಸರಣಿಗಳಲ್ಲಿ ರೋ-ಕೋ ಜೋಡಿ ಆಡುವ ಅವಕಾಶ ಪಡೆದರೆ 18 ಏಕದಿನ ಪಂದ್ಯಗಳನ್ನು ಆಡಬಹುದು.

ಟಿ20: ಸಿಕ್ಸರ್ ಸುರಿಮಳೆ ಪ್ರಿಟೋರಿಯಾಗೆ ಜಯ

ಕೇಪ್ ಟೌನ್: ದಕ್ಷಿಣ ಆಫ್ರಿಕಾ ಟ್ವೆಂಟಿ-20 ಕ್ರಿಕೆಟ್ ಟೂರ್ನಿಯಲ್ಲಿ ಆರು ಎಸೆತಗಳಲ್ಲಿ ಸತತ ಆರು ಸಿಕ್ಸರ್ ದಾಖಲಾಗಿದೆ. ಮುಂಬೈ ಇಂಡಿಯನ್ಸ್ ಕೇಪ್ ಟೌನ್ ವಿರುದ್ಧ ನಡೆದ ಪಂದ್ಯದಲ್ಲಿ ಪ್ರಿಟೋರಿಯಾ ಕ್ಯಾಪಿಟಲ್ಸ್ ತಂಡದ ಬ್ಯಾಟರ್‌ಗಳಾದ ಡೆವಾಲ್ಡ್ ಬ್ರೆವಿಸ್ ಹಾಗೂ ಶೆರ್ಫೇನ್ ರುದರ್‌ಫರ್ಡ್ ಸ್ಫೋಟಕ ಬ್ಯಾಟಿಂಗ್ ಪ್ರದರ್ಶಿಸಿದ್ದಾರೆ. ಮೊದಲು ಬ್ಯಾಟಿಂಗ್ ನಡೆಸಿದ ಪ್ರಿಟೋರಿಯಾ ಐದು ವಿಕೆಟ್ ನಷ್ಟಕ್ಕೆ 220 ರನ್‌ಗಳ ಬೃಹತ್ ಮೊತ್ತ ಪೇರಿಸಿತ್ತು. 17ನೇ ಓವರ್‌ನ ಮೊದಲ ಎಸೆತವನ್ನು ಸಿಕ್ಸರ್‌ಗೆ ಅಟ್ಟಿದ ಬ್ರೆವಿಸ್, ಅಂತಿಮ ಎರಡು ಎಸೆತಗಳಲ್ಲೂ ಸಿಕ್ಸರ್ ಗಳಿಸಿದರು. ನಂತರ 18ನೇ ಓವರ್‌ನ ಮೊದಲ ನಾಲ್ಕು ಎಸೆತಗಳಲ್ಲಿ ರುದರ್‌ಫರ್ಡ್ ಸಿಕ್ಸರ್ ಬಾರಿಸಿದರು. ಆ ಮೂಲಕ ಸತತ ಆರು ಎಸೆತಗಳಲ್ಲಿ ಸಿಕ್ಸರ್ ದಾಖಲಾದವು. ರುದರ್‌ಫರ್ಡ್ 15 ಎಸೆತಗಳಲ್ಲಿ ಅಜೇಯ 47 ರನ್ ಗಳಿಸಿದರೆ ಬ್ರೆವಿಸ್ 13 ಎಸೆತಗಳಲ್ಲಿ 36 ರನ್ ಗಳಿಸಿ ಔಟಾಗದೆ ಉಳಿದರು. ಇವರಿಬ್ಬರು ಮುರಿಯದ ಆರನೇ ವಿಕೆಟ್‌ಗೆ 27 ಎಸೆತಗಳಲ್ಲಿ 86 ರನ್‌ಗಳ ಜತೆಯಾಟದಲ್ಲಿ ಭಾಗಿಯಾದರು. ಈ ಗುರಿ ಬೆನ್ನಟ್ಟಿದ ಕೇಪ್ ಟೌನ್, 14.2 ಓವರ್‌ಗಳಲ್ಲಿ 135 ರನ್‌ಗಳಿಗೆ ತನ್ನೆಲ್ಲ ವಿಕೆಟ್‌ಗಳನ್ನು ಕಳೆದುಕೊಂಡಿತು. ಆ ಮೂಲಕ ಪ್ರಿಟೋರಿಯಾ 85 ರನ್‌ಗಳ ಭರ್ಜರಿ ಜಯ ದಾಖಲಿಸಿದೆ.

3 ವಿಶ್ವಕಪ್ ಸವಾಲು, ಪುರುಷರ ತಂಡಕ್ಕೆ 18 ಟಿ20, 21 ಏಕದಿನ, 5 ಟೆಸ್ಟ್ ದ್ವಿಪಕ್ಷೀಯ ಪಂದ್ಯ

2026: ಟೀಮ್ ಇಂಡಿಯಾಗೆ ಬಿಡುವಿಲ್ಲದ ವರ್ಷ

ದೆಹಲಿ: ಟೀಮ್ ಇಂಡಿಯಾಕ್ಕೆ 2026 ಬಿಡುವಿಲ್ಲದ ಅತಿ ಹೆಚ್ಚು ಟೂರ್ನಿಗಳನ್ನು ಹೊಂದಿರುವ ವರ್ಷವಾಗಿದೆ. ಪುರುಷರ ಮತ್ತು ಮಹಿಳಾ ಟಿ 20 ವಿಶ್ವಕಪ್ ಸೇರಿ ಭಾರತ ಹಲವು ಮಹತ್ವದ ಸರಣಿಗಳನ್ನು ಆಡಲಿದೆ. ವರ್ಷದ ಮೊದಲ ತಿಂಗಳೇ ಭಾರತ ಪುರುಷರ ತಂಡ ತವರಿನಲ್ಲಿ ನ್ಯೂಜಿಲೆಂಡ್ ವಿರುದ್ಧ ಏಕದಿನ ಮತ್ತು ಟಿ20 ಸರಣಿಯನ್ನಾಡುವ ಮೂಲಕ ಕ್ರಿಕೆಟ್ ಅಭಿಯಾನ ಆರಂಭಿಸಲಿದೆ. ಜನವರಿ 15ರಿಂದ 19 ವರ್ಷದೊಳಗಿನವರ ಐಸಿಸಿ ಏಕದಿನ ವಿಶ್ವಕಪ್ ಕೂಡ ನಡೆಯಲಿದೆ. ಒಟ್ಟಾರೆ ಈ ವರ್ಷ ಭಾರತ ಪುರುಷರ ತಂಡ 18 ಅಂತಾರಾಷ್ಟ್ರೀಯ ಟಿ ಪಂದ್ಯ, 21 ಏಕದಿನ ಪಂದ್ಯ, ಆಡಲಿದೆ. ಭಾರತ ತಂಡ ಈ ವರ್ಷ ಆಡಲಿರುವ ಸರಣಿಗಳ ಸಂಪೂರ್ಣ ವೇಳಾಪಟ್ಟಿ ಇಲ್ಲಿದೆ.

2026 ರ ಪ್ರಮುಖ ಕ್ರಿಕೆಟ್ ಟೂರ್ನಿಗಳು

- ಮಹಿಳಾ ಪ್ರೀಮಿಯರ್ ಲೀಗ್ (ಡಬ್ಲ್ಯುಪಿಎಲ್) : ಜನವರಿ 9 ರಿಂದ ಫೆಬ್ರವರಿ 5 (ನವಿ ಮುಂಬೈ ಮತ್ತು ವಡೋದರ)
- ಟಿ19 ಪುರುಷರ ವಿಶ್ವಕಪ್: ಜನವರಿ 15 ರಿಂದ ಫೆಬ್ರವರಿ 6 (ಜಿಂಬಾಬ್ವೆ ಮತ್ತು ನಮೀಬಿಯಾ)
- ಐಸಿಸಿ ಪುರುಷರ ಟಿ20 ವಿಶ್ವಕಪ್: ಫೆಬ್ರವರಿ 7 ರಿಂದ ಮಾರ್ಚ್ 8 (ಭಾರತ ಮತ್ತು ಶ್ರೀಲಂಕಾ)
- ಐಪಿಎಲ್: ಮಾರ್ಚ್ 26 ರಿಂದ ಮೇ 31
- ಐಸಿಸಿ ಮಹಿಳಾ ಟಿ20 ವಿಶ್ವಕಪ್ : ಜೂನ್ 12 ರಿಂದ ಜುಲೈ 5 (ಇಂಗ್ಲೆಂಡ್)

ಭಾರತ ಪುರುಷರ ಕ್ರಿಕೆಟ್ ವೇಳಾಪಟ್ಟಿ

ಜನವರಿ:ನ್ಯೂಜಿಲೆಂಡ್ ಭಾರತ ಪ್ರವಾಸ
1 ಟೆಸ್ಟ್ ಪಂದ್ಯ 3 ಏಕದಿನ ಪಂದ್ಯಗಳು

ಜುಲೈ । ಭಾರತದ ಇಂಗ್ಲೆಂಡ್ ಪ್ರವಾಸ
5 ಟಿ20 ಪಂದ್ಯಗಳು
ಜುಲೈ 1 - ಮೊದಲ ಟಿ20, ಚೆಸ್ಟರ್-ಲೆ-ಸ್ಟ್ರೀಟ್
ಜುಲೈ 4 - ಎರಡನೇ ಟಿ20, ಮ್ಯಾಂಚೆಸ್ಟರ್
ಜುಲೈ 7 - ಮೂರನೇ ಟಿ20, ನಾಟಿಂಗ್‌ಹ್ಯಾಮ್
ಜುಲೈ 9 - ನಾಲ್ಕನೇ ಟಿ20, ಬ್ರಿಸ್ಟಲ್
ಜುಲೈ 11 - 5ನೇ ಟಿ20, ಸೌತಾಂಪ್ಟನ್

ಏಕದಿನ ಪಂದ್ಯಗಳು
ಜುಲೈ 14 - ಮೊದಲ ಏಕದಿನ ಪಂದ್ಯ, ಬರ್ಮಿಂಗ್‌ಹ್ಯಾಮ್
ಜುಲೈ 16 - ಎರಡನೇ ಏಕದಿನ ಪಂದ್ಯ, ಕಾರ್ಡಿಫ್
ಜುಲೈ 19 - ಮೂರನೇ ಏಕದಿನ ಪಂದ್ಯ, ಲಾರ್ಡ್ಸ್

ಆಗಸ್ಟ್ । ಭಾರತದ ಶ್ರೀಲಂಕಾ ಪ್ರವಾಸ
2 ಟೆಸ್ಟ್‌ಗಳು

ಸೆಪ್ಟೆಂಬರ್ । ಭಾರತದ ಬಾಂಗ್ಲಾದೇಶ ಪ್ರವಾಸ
3 ಏಕದಿನ ಪಂದ್ಯಗಳು, 3 ಟಿ20ಗಳು

ಸೆಪ್ಟೆಂಬರ್-ಅಕ್ಟೋಬರ್ । ಭಾರತದ ಅಫ್ಘಾನಿಸ್ತಾನ ಪ್ರವಾಸ
3 ಟಿ20ಗಳು

ವಿಂಡೀಸ್ ಭಾರತ ಪ್ರವಾಸ
3 ಏಕದಿನ ಪಂದ್ಯಗಳು, 5 ಟಿ20

ಅಕ್ಟೋಬರ್- ನವೆಂಬರ್ । ಭಾರತ ನ್ಯೂಜಿಲೆಂಡ್ ಪ್ರವಾಸ
2 ಟೆಸ್ಟ್‌ಗಳು, 3 ಏಕದಿನ ಪಂದ್ಯಗಳು

ಟೀಮ್ ಇಂಡಿಯಾದ ಕದ ತಟ್ಟಿದ ಪಡಿಕ್ಕಲ್

ಬೆಂಗಳೂರು: ವಿಜಯ್ ಹಜಾರೆ ಟ್ರೋಫಿಯಲ್ಲಿ ಮೂರು ಶತಕಗಳನ್ನು ಬಾರಿಸಿ ಅದ್ಭುತ ಫಾರ್ಮ್‌ನಲ್ಲಿರುವ ಕರ್ನಾಟಕ ತಂಡದ ಎಡಗೈ ಬ್ಯಾಟರ್ ದೇವದತ್ ಪಡಿಕ್ಕಲ್ ನ್ಯೂಜಿಲೆಂಡ್ ಎದುರಿನ ಏಕದಿನ ಟೂರ್ನಿಗೆ ಮತ್ತೊಮ್ಮೆ ಆಯ್ಕೆದಾರರ ಕದ ತಟ್ಟಿದ್ದಾರೆ.

ಇದುವರೆಗೆ ಆಡಿರುವ 35 ಲಿಸ್ಟ್ 'ಎ' ಪಂದ್ಯಗಳಲ್ಲಿ ಪಡಿಕ್ಕಲ್, 11 ಶತಕ ಮತ್ತು 12 ಅರ್ಧಶತಕಗಳನ್ನ ಸಿಡಿಸಿದ್ದಾರೆ. ಪಡಿಕ್ಕಲ್ ಬ್ಯಾಟಿಂಗ್ ಸರಾಸರಿ ಬರೋಬ್ಬರಿ 84 ಆಗಿದ್ದು ಯಾವುದೇ ಸ್ಟಾರ್ ಆಟಗಾರರು ಈ ಸರಾಸರಿ ಹೊಂದಿಲ್ಲ. ಮುಂಬರುವ ಟಿ-20 ಕ್ರಿಕೆಟ್ ವಿಶ್ವಕಪ್‌ಗೆ ಸ್ಥಾನ ಗಿಟ್ಟಿಸಲು ವಿಫಲರಾದ ಪಡಿಕ್ಕಲ್ ದೇಶಿಯ ಕ್ರಿಕೆಟ್‌ನಲ್ಲಿ ತಮ್ಮ ಪರಾಕ್ರಮ ಮುಂದುವರಿಸಿದ್ದಾರೆ. ಆರಂಭಿಕನಾಗಿ ಇಲ್ಲವೇ ಮೂರನೇ ನಂಬರ್‌ನಲ್ಲಿ ಆಡುವ ಪಡಿಕ್ಕಲ್, ಕೊಹ್ಲಿ ಮತ್ತು ರೋಹಿತ್ ನಿವೃತ್ತಿ ಬಳಿಕದ ಕೊರತೆ ತುಂಬಲು ಸೂಕ್ತ ಆಟಗಾರ. ಆಯ್ಕೆದಾರರು ಅವರ ಪ್ರತಿಭೆಗೆ ಮನ್ನಣೆ ನೀಡಬೇಕೆಂಬ ಮಾತುಗಳು ಕೇಳಿ ಬರುತ್ತಿವೆ. ವಿಜಯ್ ಹಜಾರೆ ಎದುರಿನ ಪಂದ್ಯದಲ್ಲಿ ಜಾರ್ಖಂಡ್



ಎದುರು 147 ರನ್, ಕೇರಳ ತಂಡದ ವಿರುದ್ಧ 124 ರನ್, ಪುದುಚೇರಿ ಎದುರು 113 ರನ್ ಬಾರಿಸಿರು ಪಡಿಕ್ಕಲ್ ಕೇವಲ ನಾಲ್ಕು ಪಂದ್ಯಗಳಿಂದ 101.50 ಸರಾಸರಿ ಹಾಗೂ 147 ಸ್ಟ್ರೈಕ್ ರೇಟ್‌ನಲ್ಲಿ 406 ರನ್‌ಗಳನ್ನು ಗಳಿಸಿದ್ದಾರೆ. ಈ ಮೂಲಕ ಈ ಟ್ರೋಫಿಯಲ್ಲಿ ಅತಿ ಹೆಚ್ಚು ರನ್ ಗಳಿಸಿದ ಬ್ಯಾಟರ್ ಎನಿಸಿಕೊಂಡಿದ್ದಾರೆ.

ಇಬ್ಬರು ಸ್ಪಿನ್ನರ್‌ಗಳ ಸೇರ್ಪಡೆ, ಕಮ್ಮಿನ್ಸ್, ಹೇಜಲ್‌ವುಡ್‌ಗೆ ಸ್ಥಾನ

ಟಿ20 ವಿಶ್ವಕಪ್‌ಗೆ ಆಸೀಸ್ ಟೀಮ್ ರೆಡಿ

ಸಿಡ್ನಿ: ಭಾರತ ಹಾಗೂ ಲಂಕಾದಲ್ಲಿ ಇದೇ ಫೆಬ್ರವರಿ 7ರಿಂದ ನಡೆಯಲಿರುವ ಐಸಿಸಿ ಟಿ20 ವಿಶ್ವಕಪ್ ಟೂರ್ನಿಗೆ ಆಸ್ಟ್ರೇಲಿಯಾ ಕ್ರಿಕೆಟ್ ಮಂಡಳಿ ತನ್ನ ಪ್ರಾಥಮಿಕ ತಂಡವನ್ನು ಪ್ರಕಟಿಸಿದೆ. ಗಾಯ ದಿಂದ ಚೇತರಿಸಿಕೊಂಡು ತಂಡಕ್ಕೆ ಮರಳಿರುವ ಪ್ಯಾಟ್ ಕಮ್ಮಿನ್ಸ್ ಜೋಶ್ ಹೇಜಲ್‌ವುಡ್ ಮತ್ತು ಟಿಮ್ ಡೇವಿಡ್‌ಗೂ ಅವಕಾಶ ನೀಡಲಾಗಿದೆ. ಮಿಚೆಲ್ ಮಾರ್ಷ್ ತಂಡದ ನಾಯಕನಾಗಿದ್ದಾರೆ.

ಜೂನ್ 2024 ರಿಂದ ಯಾವುದೇ ಟಿ20 ಅಂತರರಾಷ್ಟ್ರೀಯ ಪಂದ್ಯವನ್ನು ಆಡದ ಕಮ್ಮಿನ್ಸ್ , ಬೆನ್ನುನೋವನ್ನು ನಿಭಾಯಿಸಲು ಇಂಗ್ಲೆಂಡ್ ವಿರುದ್ಧದ ಕೊನೆಯ ಎರಡು ಆ್ಯಶಸ್ ಪಂದ್ಯಗಳಿಂದ ವಿಶ್ರಾಂತಿ ಪಡೆದಿದ್ದಾರೆ. ಕಮಿನ್ಸ್ ಸರಣಿಯ ಮೂರನೇ ಟೆಸ್ಟ್‌ನಲ್ಲಿ ಮಾತ್ರ ಆಡಿದ್ದಾರೆ. ವಿಶ್ವಕಪ್‌ನಲ್ಲಿ ಅವರ ಭಾಗವಹಿಸುವಿಕೆಯನ್ನು ನಿರ್ಧರಿಸಲು ವೇಗಿ ಈ ತಿಂಗಳ ಕೊನೆಯಲ್ಲಿ ಅಂತಿಮ ಸ್ಕ್ಯಾನ್‌ಗೆ ಒಳಗಾಗಲಿದ್ದಾರೆ ಎಂದು ಕ್ರಿಕೆಟ್ ಆಸ್ಟ್ರೇಲಿಯಾ ತಿಳಿಸಿದೆ. ತಂಡಗಳು ತಮ್ಮ ಅಂತಿಮ ತಂಡಗಳನ್ನು ಹೆಸರಿಸಲು ಜನವರಿ 31 ರವರೆಗೆ ಸಮಯಾವಕಾಶವಿದೆ. ಆಸ್ಟ್ರೇಲಿಯಾ ಎಡಗೈ ಸ್ಪಿನ್ನರ್‌ಗಳಾದ ಮ್ಯಾಟ್ ಕುಹ್ನೆಮನ್ ಮತ್ತು ಕೂಪರ್ ಕಾನೊಲಿ ಅವರಿಗೆ ಅನಿರೀಕ್ಷಿತ ಕರೆ ನೀಡಿದೆ.

2024ರ ಟಿ20 ವಿಶ್ವಕಪ್‌ನಲ್ಲಿ ನಾಕೌಟ್‌ಗೆ ಅರ್ಹತೆ ಪಡೆಯುವಲ್ಲಿ ವಿಫಲರಾದ ಆಸ್ಟ್ರೇಲಿಯಾ, ಫೆಬ್ರವರಿ 11 ರಂದು ಕೊಲಂಬೊದ ಆರ್. ಪ್ರೇಮದಾಸ ಕ್ರೀಡಾಂಗಣದಲ್ಲಿ ಐರ್ಲೆಂಡ್ ವಿರುದ್ಧ ಟಿ20 ವಿಶ್ವಕಪ್ 2026 ರಲ್ಲಿ ತನ್ನ ಅಭಿಯಾನವನ್ನು ಆರಂಭಿಸಲಿದೆ. ಆಸೀಸ್ ಎಲ್ಲ ಲೀಗ್

ಪಂದ್ಯವನ್ನು ಲಂಕಾದಲ್ಲಿ ಆಡಲಿದೆ.

ಆಸ್ಟ್ರೇಲಿಯಾ ತಂಡ: ಮಿಚೆಲ್ ಮಾರ್ಷ್ (ನಾಯಕ), ಕ್ಸೇವಿಯರ್ ಬಾರ್ಟ್ಲೆಟ್, ಕೂಪರ್ ಕಾನೊಲಿ, ಪ್ಯಾಟ್ ಕಮ್ಮಿನ್ಸ್ , ಟಿಮ್ ಡೇವಿಡ್, ಕ್ಯಾಮರೂನ್ ಗ್ರೀನ್, ನಾಥನ್ ಎಲ್ಲಿಸ್,ಜೋಶ್ ಹೇಜಲ್‌ವುಡ್, ಟ್ರಾವಿಸ್ ಹೆಡ್, ಜೋಶ್ ಇಂಗ್ಲಿಸ್, ಮ್ಯಾಥ್ಯೂ ಕುಹ್ನೆಮನ್, ಗ್ಲೆನ್ ಮ್ಯಾಕ್ಸ್‌ವೆಲ್, ಮ್ಯಾಥ್ಯೂ ಶಾರ್ಟ್, ಮಾರ್ಕಸ್ ಸ್ಟೊಯಿನಿಸ್ , ಆಡಮ್ ಜಂಪಾ.

ಸಿಡ್ನಿ ಟೆಸ್ಟ್‌ಗೆ ಆಸೀಸ್ ತಂಡ ಪ್ರಕಟ

ಸಿಡ್ನಿ: ಜನವರಿ 4ರಿಂದ ಸಿಡ್ನಿಯಲ್ಲಿ ಆರಂಭವಾಗಲಿರುವ 2025-26ರ ಆಶಸ್ ಸರಣಿಯ ಐದನೇ ಮತ್ತು ಅಂತಿಮ ಟೆಸ್ಟ್ ಪಂದ್ಯಕ್ಕೆ ಆಸ್ಟ್ರೇಲಿಯಾ ತನ್ನ 15 ಸದಸ್ಯರ ತಂಡವನ್ನು ಪ್ರಕಟಿಸಿದೆ. ಈಗಾಗಲೇ ಸರಣಿಯನ್ನು 31 ಮುನ್ನಡೆಯೊಂದಿಗೆ ವಶಪಡಿಸಿಕೊಂಡಿರುವ ಆತಿಥೇಯರು, ಅಂತಿಮ ಟೆಸ್ಟ್‌ಗೆ ತಂಡದಲ್ಲಿ ಯಾವುದೇ ಬದಲಾವಣೆ ಮಾಡಿಲ್ಲ. ಆಶಸ್ ಸರಣಿಯ ಉಳಿದ ಪಂದ್ಯಗಳಿಗೆ ನಿಯಮಿತ ನಾಯಕ ಪ್ಯಾಟ್ ಕಮ್ಮಿನ್ಸ್‌ಗೆ ವಿಶ್ರಾಂತಿ ನೀಡಲಾಗಿರುವುದರಿಂದ, ಸ್ಟೀವ್ ಸ್ಮಿತ್ ತಂಡವನ್ನು ಮುನ್ನಡೆಸಲಿದ್ದಾರೆ. ಕಮ್ಮಿನ್ಸ್ ಅವರ ಕೆಲಸದ ಹೊರೆಯನ್ನು ನಿರ್ವಹಿಸಲು ಮತ್ತು ಭಾರತ ಮತ್ತು ಲಂಕಾದಲ್ಲಿ ನಡೆಯಲಿರುವ ಮುಂಬರುವ ಐಸಿಸಿ ಟಿ20 ವಿಶ್ವಕಪ್ 2026 ಕ್ಕೆ ಅವರು ಫಿಟ್ ಆಗಿರುವುದನ್ನು ಖಚಿತಪಡಿಸಿಕೊಳ್ಳಲು ಆಡಳಿತ ಮಂಡಳಿಯು ಈಗ ಅವರಿಗೆ ವಿಶ್ರಾಂತಿ ನೀಡಲು ನಿರ್ಧರಿಸಿದೆ. ಅನುಭವಿ ಬ್ಯಾಟ್ಸ್‌ಮನ್ ಉಸ್ಮಾನ್ ಖವಾಜಾ ಅವರ ಟೆಸ್ಟ್ ಭವಿಷ್ಯದ ಬಗ್ಗೆ ಊಹಾಪೋಹಗಳ ಹೊರತಾಗಿಯೂ ಅವರು ತಂಡದಲ್ಲಿ ತಮ್ಮ ಸ್ಥಾನವನ್ನು ಉಳಿಸಿಕೊಂಡಿದ್ದಾರೆ. 15 ವರ್ಷಗಳ ನಂತರ ಮೊದಲ ಬಾರಿಗೆ ಇಂಗ್ಲೆಂಡ್ ವಿರುದ್ಧ ಅಪರೂಪದ ಸೋಲನ್ನು ಅನುಭವಿಸಿದ ನಂತರ ಆಸ್ಟ್ರೇಲಿಯಾ ಸರಣಿಯನ್ನು 4-1 ಅಂತರದೊಂದಿಗೆ ಮುಗಿಸುವ ಗುರಿ ಹೊಂದಿದೆ.

ಹೊಸ ವರುಷ ಚಂದನವನದಲ್ಲಿ ಹರುಷ

ಕನ್ನಡ ಚಿತ್ರರಂಗದಲ್ಲಿ ಹೊಸ ವರ್ಷಕ್ಕೆ ಹೊಸ ಭರವಸೆ ಮೂಡಿದೆ. ಹೊಸ ಹೊಸ ಸಿನಿಮಾಗಳು ತೆರೆಗೆ ಬರಲು ಸಿದ್ಧವಾಗಿದೆ. ಮಾರ್ಕ್, ಡೆವಿಲ್, 45, ಕಾಂತಾರದಂತಹ ಸಿನಿಮಾಗಳ ಯಶಸ್ಸು ಚಂದನವನದಲ್ಲಿ ಖುಷಿ ತಂದಿದ್ದು, ಈ ವರ್ಷ ಹೊಸ ಹುರುಪು ಮೂಡಿಸಿದೆ. ತೀರ್ಥರೂಪ ತಂದೆಯವರಿಗೆ ಈ ವರ್ಷದ ಮೊದಲ ಸಿನಿಮಾವಾಗಿ ಬಿಡುಗಡೆಯಾಗಿದೆ. ಮುಂದೆ ಸ್ಟಾರ್ ನಟರ ಹೈಬಜೆಟ್ ಸಿನಿಮಾಗಳು ಅದ್ದೂರಿಯಾಗಿ ತೆರೆಗೆ ಬರಲಿವೆ. ಈ ವರ್ಷದಲ್ಲಿ ಹಲವು ಸಿನಿಮಾಗಳು ಅಪಾರ ನಿರೀಕ್ಷೆ ಮೂಡಿಸಿವೆ.

ಲ್ಯಾಂಡ್‌ಲಾರ್ಡ್

ಕಾಟೇರ ಸಿನಿಮಾಗೆ ಕಥೆ ಬರೆದಿದ್ದ ಜಡೇಶ್ ಕುಮಾರ್ ಹಂಪಿ ಲ್ಯಾಂಡ್‌ಲಾರ್ಡ್ ಸಿನಿಮಾವನ್ನು ನಿರ್ಮಿಸಿದ್ದು ತೆರೆಗೆ ತರುವ ತಯಾರಿಯಲ್ಲಿದ್ದಾರೆ. ಇದೇ 23ರಂದು ಲ್ಯಾಂಡ್‌ಲಾರ್ಡ್ ಬಿಡುಗಡೆಯಾಗಲಿದೆ. ಎಪ್ಪತ್ತರ ಕಾಲಘಟ್ಟದ ಕಥೆ ಚಿತ್ರದಲ್ಲಿದ್ದು, ಧಮನಿತರ ಹೋರಾಟದ ಸ್ಟೋರಿ ಹಾಸು ಹೊಕ್ಕಾಗಿದೆ. ಹಾಗಾಗಿಯೇ ಚಿತ್ರಕ್ಕೆ ಇದು ಅಳಿದವರ ಕಥೆಯಲ್ಲ ಅಳಿದು ಉಳಿದವರ ಕಥೆ ಎಂಬ ಅಡಿಬರಹವೂ ಇದೆ. ದುನಿಯಾ ವಿಜಯ್ ನಾಯಕನಾಗಿ ನಟಿಸಿದ್ದು, ರಚಿತಾ ರಾಮ್ ನಾಯಕಿಯಾಗಿ ಕಾಣಿಸಿಕೊಂಡಿದ್ದಾರೆ. ರಾಜ್ ಶೆಟ್ಟಿ ಸಿನಿಮಾದಲ್ಲಿ ಖಳನಾಗಿ ಅಬ್ಬರಿಸಲಿದ್ದಾರೆ. ವಿಜಯ್ ಪುತ್ರಿ ರಿತನ್ಯಾ ಈ ಚಿತ್ರದ ಮೂಲಕ ಚಂದನವನಕ್ಕೆ ಎಂಟ್ರಿಕೊಡುತ್ತಿದ್ದಾರೆ.

ಟಾಕ್ಸಿಕ್

ರಾಕಿಂಗ್ ಸ್ಟಾರ್ ಯಶ್ ಕೆಜಿಎಫ್ ಬಳಿಕ ಟಾಕ್ಸಿಕ್ ಚಿತ್ರದ ಮೂಲಕ ಅಬ್ಬರಿಸಲು ಸಿದ್ಧವಾಗುತ್ತಿದ್ದಾರೆ. ಈಗಾಗಲೇ ಶೂಟಿಂಗ್

ಮುಗಿಸಿರುವ ಟಾಕ್ಸಿಕ್ ಪೋಸ್ಟರ್‌ನಲ್ಲಿ ಸದ್ದು ಮಾಡುತ್ತಿದೆ. ಮಲೆಯಾಳಂ ಖ್ಯಾತ ನಿರ್ದೇಶಕಿ ಗೀತು ಮೋಹನ್ ದಾಸ್ ಚಿತ್ರದ ಕಥೆ ಬರೆದು ನಿರ್ದೇಶನ ಮಾಡುತ್ತಿದ್ದಾರೆ. ಯಶ್ ಜತೆಗೆ ಬಾಲಿವುಡ್ ಬ್ಯೂಟಿ ಕಿಯಾರಾ ಅಡ್ವಾಣಿ ನಾಯಕಿಯಾಗಿ ನಟಿಸಿದ್ದಾರೆ. ಬಹು ಭಾಷಾ ನಟಿ ನಯನತಾರಾ, ಹುಮಾ ಖುರೇಷಿ ಸೇರಿದಂತೆ ಮಹಿಳಾ ಮಣಿಯರ ಬಳಗವೇ ಇದೆ. ಡ್ರಗ್ಸ್ ಮಾಫಿಯಾದ ಜತೆಗೆ

ಭೂಗತ ಲೋಕದ ಕಥೆಯನ್ನು ಹೊತ್ತ ಈ ಚಿತ್ರದಲ್ಲಿ ಬಾಲಿವುಡ್, ಹಾಲಿವುಡ್ ತಂತ್ರಜ್ಞರು ಕಾರ್ಯನಿರ್ವಹಿಸಿದ್ದಾರೆ. ಟಾಕ್ಸಿಕ್ ಪ್ಯಾನ್ ವರ್ಲ್ಡ್ ಸಿನಿಮಾವಾಗಿ ನಿರ್ಮಾಣವಾಗುತ್ತಿದೆ.

ಕೆಡಿ

ನಟ ಧ್ರುವ ಸರ್ಜಾ ಹಿಂದೆ ಮಾರ್ಟಿನ್ ಅವತಾರದಲ್ಲಿ ತೆರೆಯಲ್ಲಿ ಮಿಂಚಿದ್ದರು. ಈ ಬಾರಿ ಕೆಡಿಯಾಗಿ ಬರಲಿದ್ದಾರೆ. ಹೌದು

ಜೋಗಿ ಪ್ರೇಮ್ ನಿರ್ದೇಶನದ ಕೆಡಿ ಸ್ಯಾಂಡಲ್‌ವುಡ್‌ನ ಬಹು ನಿರೀಕ್ಷಿತ ಸಿನಿಮಾಗಳಲ್ಲಿ ಒಂದಾಗಿದ್ದು, ಏಪ್ರಿಲ್ 30ರಂದು ರಿಲೀಸ್ ಆಗಲಿದೆ. ಕೆಡಿ ಅರವತ್ತರ ದಶಕದ ಕಥೆಯನ್ನು ಒಳಗೊಂಡಿದ್ದು, ಪ್ಯಾನ್ ಇಂಡಿಯಾ ಸಿನಿಮಾವಾಗಿ ನಿರ್ಮಾಣವಾಗಿದೆ. ಬಾಲಿವುಡ್ ನಟ ಸಂಜಯ್ ದತ್ ಖಳನಾಯಕನಾಗಿ ಅಭಿನಯಿಸಿದ್ದು. ಕ್ರೇಜಿಸ್ಟಾರ್ ರವಿಚಂದ್ರನ್, ರಮೇಶ್ ಅರವಿಂದ್, ಶಿಲ್ಪಾ ಶೆಟ್ಟಿ ಸೇರಿದಂತೆ ದೊಡ್ಡ ತಾರಾಬಳಗವೇ ಚಿತ್ರದಲ್ಲಿದೆ. ಈಗಾಗಲೇ ಕೆಡಿಯ ಹಾಡುಗಳು ಸಖತ್ ಸದ್ದು ಮಾಡುತ್ತಿದ್ದು, ಸಿನಿಮಾದ ಬಗ್ಗೆಯೂ ನಿರೀಕ್ಷೆ ಹೆಚ್ಚಿಸಿದೆ. ಹಾಗಾಗಿ ಎಲ್ಲರೂ ಕೆಡಿಯನ್ನು ಕಣ್ತುಂಬಿಕೊಳ್ಳಲು ಕಾತರರಾಗಿದ್ದಾರೆ.

ರಾಮ್

ಕನ್ನಡ ಚಿತ್ರರಂಗದಲ್ಲಿ ತ್ಯಾಗರಾಜರು ಅಂತಲೇ ಪ್ರಸಿದ್ಧಿ ಪಡೆದಿರುವ ರಮೇಶ್ ಅರವಿಂದ್ ಹಾಗೂ ಗಣೇಶ್ ಒಟ್ಟಿಗೆ ಅಭಿನಯಿಸಿರುವ ಯೂವರ್ ಸಿನ್ಸಿಯರ್ಲಿ ರಾಮ್ ಚಂದನವನದ ಬಹುನಿರೀಕ್ಷಿತ ಸಿನಿಮಾಗಳಲ್ಲಿ ಒಂದಾಗಿದೆ. ಈ ಚಿತ್ರದ ಚಿತ್ರೀಕರಣ ಬಹುತೇಕ ಮುಕ್ತಾಯವಾಗಿದ್ದು, ಏಪ್ರಿಲ್‌ನಲ್ಲಿ ತೆರೆಗೆ ಬರುವ ಸಾಧ್ಯತೆ ಇದೆ. ಈ ಹಿಂದೆ ಪುಷ್ಪಕ ವಿಮಾಮ ಚಿತ್ರವನ್ನು ನಿರ್ಮಾಣ ಮಾಡಿದ್ದ ವಿಖ್ಯಾತ್ ಈ ಚಿತ್ರವನ್ನು ನಿರ್ದೇಶಿಸುತ್ತಿದ್ದಾರೆ. ರಾಮ್, ಪೋಸ್ಟರ್ ಮೂಲಕ ಗಮನಸೆಳೆದಿತ್ತು. ಅದನ್ನು ಗಮನಿಸಿದರೆ ಚಿತ್ರದಲ್ಲಿ ಎಮೋಷನಲ್ ಸ್ಟೋರಿಯ ಜತೆಗೆ ನವಿರಾದ ಪ್ರೇಮಕಥೆಯೂ ಬೆರೆತಿದೆ ಎಂಬುದು ತಿಳಿಯುತ್ತದೆ.

ಬಲರಾಮನ ದಿನಗಳು

ನಿರ್ದೇಶಕ ಚೈತನ್ಯ ಬಹುದಿನಗಳ ಬಳಿಕ

ಬಲರಾಮನ ದಿನಗಳು ಶೀರ್ಷಿಕೆಯಲ್ಲಿ ಮತ್ತೊಂದು ಭೂಗತ ಲೋಕದ ಕಥೆಯನ್ನು ಹೊತ್ತು ಬರುತ್ತಿದ್ದಾರೆ. ವಿನೋದ್ ಪ್ರಭಾಕರ್ ಅಭಿನಯದ ಈ ಚಿತ್ರ ಎಂಬತ್ತು, ತೊಂಬತ್ತರ ದಶಕದ ಕಥೆಯನ್ನು ಒಳಗೊಂಡಿದ್ದು ರೆಟ್ರೋ ಲುಕ್‌ನಲ್ಲಿ ಸಾಗಲಿದೆ. ಪ್ರಿಯಾ ಆನಂದ್ ನಾಯಕಿಯಾಗಿ ಅಭಿನಯಿಸಿದ್ದಾರೆ. ಈಗಾಗಲೇ ಸಿನಿಮಾದ ಹಾಡುಗಳು ಬಿಡುಗಡೆಯಾಗಿದ್ದು ಸಿನಿಪ್ರಿಯರ ಮನಗೆದ್ದಿವೆ. ಮಾರ್ಚ್ ಹೊತ್ತಿಗೆ ತೆರೆಯಲ್ಲಿ ಬಲರಾಮನ ದರ್ಶನವಾಗಲಿದೆ. ಈ ಚಿತ್ರದಲ್ಲಿ ವಿನೋದ್ ಪ್ರಭಾಕರ್ ಹೊಸ ಲುಕ್‌ನಲ್ಲಿ ಕಂಗೊಳಿಸಿದ್ದಾರೆ.

ಮುಧೋಳ್

ಕ್ರೇಜಿಸ್ಟಾರ್ ರವಿಚಂದ್ರನ್ ಪುತ್ರ ವಿಕ್ರಮ್ ರವಿಚಂದ್ರನ್, ಮುಧೋಳ್ ಚಿತ್ರದಲ್ಲಿ ನಟಿಸಿದ್ದು, ಹೊಸ ಅವತಾರದಲ್ಲಿ ತೆರೆಯಲ್ಲಿ ಮಿಂಚಲಿದ್ದಾರೆ. ಈ ತಿಂಗಳಾಂತ್ಯಕ್ಕೆ ಮುದೋಳ್ ಅಬ್ಬರ ಆರಂಭವಾಗಲಿದೆ. ಇದು ಥ್ರಿಲ್ಲರ್ ಜತೆಗೆ ಆ್ಯಕ್ಷನ್ ಬೆರೆತ ಸಿನಿಮಾವಾಗಿದ್ದು, ಅದ್ದೂರಿಯಾಗಿ ಮೂಡಿಬಂದಿದೆ. ವಿಕ್ರಮ್ ಗ್ಯಾಂಗ್‌ಸ್ಟರ್ ಆಗಿ ಕಾಣಿಸಿಕೊಂಡಿದ್ದು ರಗಡ್ ಅವತಾರದಲ್ಲಿ

ಕಂಗೊಳಿಸಿದ್ದಾರೆ. ಕಾರ್ತಿಕ್ ರಾಜನ್ ನಿರ್ದೇಶನದ ಈ ಚಿತ್ರದಲ್ಲಿ ಸಂಜನಾ ಆನಂದ್ ನಾಯಕಿಯಾಗಿ ನಟಿಸಿದ್ದಾರೆ.

ಆಪರೇಷನ್ ಡ್ರೀಮ್ ಥಿಯೇಟರ್

ಹ್ಯಾಟ್ರಿಕ್ ಹೀರೊ ಶಿವರಾಜ್ ಕುಮಾರ್, ಸಾಲು ಸಾಲು ಸಿನಿಮಾಗಳಲ್ಲಿ ನಟಿಸುತ್ತಿದ್ದು ಅವುಗಳಲ್ಲಿ ಈ ವರ್ಷ ಹಲವು ಸಿನಿಮಾಗಳು ತೆರೆಗೆ ಬರಲಿವೆ. ಅದರಲ್ಲಿ 666 ಆಪರೇಷನ್ ಡ್ರೀಮ್ ಥಿಯೇಟರ್ ಚಿತ್ರವೂ ಒಂದು. ಸಸ್ಪೆನ್ಸ್, ಥ್ರಿಲ್ಲರ್ ಸ್ಟೋರಿ ಬೆರೆತ ಈ ಚಿತ್ರದಲ್ಲಿ ಶಿವಣ್ಣ ಅವರ ಜತೆಗೆ ಡಾಲಿ ಧನಂಜಯ ಕೂಡ ಅಭಿನಯಿಸಿದ್ದಾರೆ. ಸಪ್ತ ಸಾಗರಾದಾಚೆ ಎಲ್ಲೋ ಕಥೆ ಹೇಳಿದ್ದ ನಿರ್ದೇಶಕ ಹೇಮಂತ್ ರಾವ್ ಈ ಚಿತ್ರಕ್ಕೆ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡುತ್ತಿದ್ದಾರೆ. ಆಪರೇಷನ್

ಡ್ರೀಮ್ ಥಿಯೇಟರ್ ಫಸ್ಟ್ ಲುಕ್ ಟೀಸರ್‌ನಲ್ಲಿ ಮನಗೆಲ್ಲುತ್ತಿದೆ. ಅಕ್ಟೋಬರ್ ವೇಳೆಗೆ ಚಿತ್ರ ತೆರೆಗೆ ಬರುವ ನಿರೀಕ್ಷೆ ಇದೆ. ಇದರ ಜತೆಗೆ ಶಿವಣ್ಣ ಅಭಿನಯದ ಡ್ಯಾಡ್, ಎ ಫಾರ್ ಆನಂದ್ ಸಿನಿಮಾಗಳೂ ಕೂಡ ರಿಲೀಸ್ ಆಗಲಿವೆ.

ವರ್ಷಾಂತ್ಯಕ್ಕೆ ಕಿಚ್ಚನ ಉಡುಗೊರೆ

ಕಿಚ್ಚ ಸುದೀಪ್ ಅಭಿನಯದ ಮ್ಯಾಕ್ಸ್ 2024ರ ಕ್ರಿಸ್‌ಮಸ್ ಹಬ್ಬದಂದು ಬಿಡುಗಡೆಯಾಗಿತ್ತು. ಕಳೆದ ವರ್ಷ ಕಿಚ್ಚ ಮಾರ್ಕ್ ಅವತಾರದಲ್ಲಿ ತೆರೆಗೆ ಎಂಟ್ರಿಕೊಟ್ಟಿದ್ದರು. ಅಂತೆಯೇ ಈ ವರ್ಷಾಂತ್ಯಕ್ಕೆ ಸುದೀಪ್ ಅಭಿನಯದ ಮತ್ತೊಂದು ಚಿತ್ರ ಬಿಡುಗಡೆಯಾಗುವುದು ಖಚಿತವಾಗಿದೆ. ಹಾಗಾಗಿ ವರ್ಷಾಂತ್ಯಕ್ಕೆ ಕಿಚ್ಚನ ಕಡೆಯಿಂದ ಉಡುಗೊರೆಯನ್ನು ನಿರೀಕ್ಷಿಸಬಹುದಾಗಿದೆ. ಬಿಲ್ಲರಂಗ ಭಾಷಾ ಚಿತ್ರದ ಶೂಟಿಂಗ್ ನಡೆಯುತ್ತಿದ್ದು, ಈ ಸಿನಿಮಾ ಇದೇ ವರ್ಷವೇ ತೆರೆಗೆ ಬರಬಹುದೆ ಎಂಬ ನಿರೀಕ್ಷೆ ಇದೆ. ಅದರ ನಡುವೆ ಕಿಚ್ಚ ಸುದೀಪ್ ಹೊಸ ಸಿನಿಮಾ ಘೋಷಿಸಲಿದ್ದಾರಾ ಎಂಬ ಕುತೂಹಲವು ಕಾಡುತ್ತಿದೆ.

ಇನ್ನು ಈ ಸಿನಿಮಾಗಳ ಜತೆಗೆ ಝೈದ್ ಖಾನ್ ಅಭಿನಯದ ಕಲ್ಟ್, ರಾಜ್ ಶೆಟ್ಟಿ ಪೊಲೀಸ್ ಅಧಿಕಾರಿಯಾಗಿ ನಟಿಸಿರುವ ರಕ್ಕಸಪುರದೋಳ್, ಹಲ್ಕ ಡಾನ್, ಮ್ಯಾಂಗೋ ಪಚ್ಚ, ದೈಜಿ, ಫಾದರ್ ಹೀಗೆ ಹಲವು ಸಿನಿಮಾಗಳು ರಿಲೀಸ್ ಆಗಲಿವೆ. ಇದರ ಜತೆಗೆ ಹೊಸಬರ ಹೊಸ ಸಿನಿಮಾಗಳು ಕೂಡ ಬಿಡುಗಡೆಯಾಗಲಿವೆ. ಹಾಗಾಗಿ ಈ ವರ್ಷ ಚಂದನವನಕ್ಕೆ ಹರುಷ ತರಲಿದೆ ಎಂಬ ಆಶಾಭಾವವಿದೆ.

ವಿಟಾಕೀಸ್

ತೆರೆಗೆ ಸಿದ್ಧವಾದ ವಿಕಲ್ಪ

ಕನ್ನಡ ಚಿತ್ರರಂಗದಲ್ಲಿ ಕೆಲವು ಸಿನಿಮಾಗಳು ತಾರಾಗಣ ಮತ್ತು ಅದ್ದೂರಿತನದಿಂದಲೇ ಸದ್ದು ಮಾಡುತ್ತಿವೆ. ಇನ್ನು ಕೆಲವು ಸಿನಿಮಾಗಳು ತಮ್ಮ ಕಂಟೆಂಟ್, ಟೈಟಲ್ ಮೂಲಕವೇ ಸಿನಿಪ್ರಿಯರನ್ನು ಸೆಳೆಯುತ್ತಿವೆ. ಅಂತೆಯೇ ಕಂಟೆಂಟ್ ಮತ್ತು ಟೈಟಲ್ ಮೂಲಕವೇ ಸ್ಯಾಂಡಲ್‌ವುಡ್ ಸಿನಿಪ್ರಿಯರನ್ನು ಸೆಳೆಯುತ್ತಿರುವ ಚಿತ್ರ ವಿಕಲ್ಪ. ಬಹುತೇಕ ಹೊಸ ಪ್ರತಿಭೆಗಳೇ ಸೇರಿ ನಿರ್ಮಿಸಿರುವ ವಿಕಲ್ಪ ಸೈಕಾಲಜಿಕಲ್, ಥ್ರಿಲ್ಲರ್ ಕಥಾಹಂದರವನ್ನು ಒಳಗೊಂಡಿದೆ. ಮನುಷ್ಯನ ಮನಸ್ಸಿನ ಸುಪ್ತ ಭಾವನೆಗಳು, ತುಮುಲ-ತಲ್ಲಣಗಳು ಈ ಚಿತ್ರದಲ್ಲಿ ಕಟ್ಟಿಕೊಡಲಾಗುತ್ತಿದೆ. ಪೃಥ್ವಿರಾಜ್ ಪಾಟೀಲ್ ಚಿತ್ರಕಥೆ ಬರೆದು ನಿರ್ದೇಶನ ಮಾಡಿದ್ದಾರೆ.

ವಿಕಲ್ಪ ಎಂದರೆ ವಾಸ್ತವ ಮತ್ತು ಕಲ್ಪನೆಗಳ ನಡುವಿನ ಒಂದು ಸ್ಥಿತಿ ಎಂದರ್ಥ. ಇದೊಂದು ಮಾನಸಿಕ ಆರೋಗ್ಯಕ್ಕೆ ಸಂಬಂಧಿಸಿದ ಕಥೆ ಅನಿಸಿದರೂ ಇದು ಒಂದು ಸಂಪೂರ್ಣ ಥ್ರಿಲ್ಲರ್ ಚಿತ್ರ ಎನ್ನುವುದು ವಿಶೇಷ. ಸೈಕಾಲಜಿಕಲ್-ಥ್ರಿಲ್ಲರ್ ಅಂಶಗಳ ಜತೆಗೆ ನವಿರಾದ ಹಾಸ್ಯ ಮತ್ತು ಮನರಂಜನೆಗೆ ಹೆಚ್ಚಿನ ಒತ್ತು ನೀಡಲಾಗಿದೆ ಎನ್ನುತ್ತಾರೆ ನಿರ್ದೇಶಕ ಪೃಥ್ವಿರಾಜ್ ಪಾಟೀಲ್. ನಿರ್ದೇಶಕ ಪೃಥ್ವಿರಾಜ್ ಪ್ರಮುಖ ಪಾತ್ರದಲ್ಲಿ ಅಭಿನಯಿಸಿದ್ದು, ನಾಗಶ್ರೀ ಹೆಬ್ಬಾರ್, ಸಂಧ್ಯಾ ವಿನಾಯಕ್, ಗಣಪತಿ ವಡ್ಡಿನಗದ್ದೆ, ಸ್ವರೂಪ್ ಬಚ್ಚ್, ಪೂಜಾ ಬಚ್ಚ್, ಜಯಂತ್ ಡೇವಿಡ್, ಗೋಡೆ ನಾರಾಯಣ ಹೆಗಡೆ, ಡಾ.ಪ್ರಕೃತಿ, ಮಾಸ್ಟರ್ ಆಯುಷ್ ಸಂತೋಷ್, ಹರಿಣಿ ಶ್ರೀಕಾಂತ್ ಸೇರಿದಂತೆ ಹಲವರು ತಾರಾಗಣದಲ್ಲಿದ್ದಾರೆ.ಸುರೂಸ್ ಟಾಕೀಸ್ ಸಂಸ್ಥೆ ಬ್ಯಾನರ್‌ನಲ್ಲಿ ಇಂದಿರಾ ಶಿವಸ್ವಾಮಿ ನಿರ್ಮಾಣ ಮಾಡಿದ್ದಾರೆ. ಬೆಂಗಳೂರು, ತೀರ್ಥಹಳ್ಳಿ, ಸಾಗರ, ಶಿರಸಿ, ಕುಂದಾಪುರ, ಯಲ್ಲಾಪುರ, ಸಿಂಗಪುರ, ನೆದರ್ಲ್ಯಾಂಡ್‌ನಲ್ಲಿ ಚಿತ್ರೀಕರಣ ನಡೆಸಲಾಗಿದೆ. ಶೂಟಿಂಗ್ ಮುಗಿಸಿ ಪೋಸ್ಟ್ ಪ್ರೊಡಕ್ಷನ್ ಕೆಲಸಗಳನ್ನು ಪೂರ್ಣಗೊಳಿಸಿರುವ ವಿಕಲ್ಪ ಶೀಘ್ರದಲ್ಲಿಯೇ ತೆರೆಗೆ ಬರಲಿದೆ.

ಶೂಟಿಂಗ್ ಮುಗಿಸಿದ ಶ್ರೀಮತಿ ಸಿಂಧೂರ

ವಿಜಯ ರಾಘವೇಂದ್ರ ನಾಯಕನಾಗಿ ಅಭಿನಯಿಸಿರುವ ಶ್ರೀಮತಿ ಸಿಂಧೂರ ಚಿತ್ರದ ಚಿತ್ರೀಕರಣ ಮುಕ್ತಾಯವಾಗಿದ್ದು ಚಿತ್ರತಂಡ ಕುಂಬಳಕಾಯಿ ಒಡೆದಿದೆ. ಆರ್ ಅಂಡ್ ಆರ್ ಎಂಟರ್‌ಪ್ರೈಸಸ್ ಬ್ಯಾನರ್‌ನಲ್ಲಿ ಡಿ.ಎನ್.ನಾಗೀರೆಡ್ಡಿ ನಿರ್ಮಾಣ ಮಾಡಿರುವ ಈ ಚಿತ್ರವನ್ನು ಆರ್.ಅನಂತರಾಜು ನಿರ್ದೇಶನ ಮಾಡುತ್ತಿದ್ದಾರೆ. ಶ್ರೀಮತಿ ಸಿಂಧೂರ ಸಿನಿಮಾದ ಶೀರ್ಷಿಕೆಯೇ ಹೇಳುವಂತೆ ಇದು ಕೌಟಂಬಿಕ ಕಥೆಯ ಜತೆಗೆ ದೈವಭಕ್ತಿಯ ಸ್ಟೋರಿಯನ್ನು ಒಳಗೊಂಡಿದೆ. ಪ್ರಿಯಾ ಹೆಗಡೆ, ರೇಷ್ಮಾ.ಎ.ಗೌಡ, ಪ್ರಸನ್ನ ಬಾಗೀನ, ಗಣೇಶ್‌ರಾವ್ ಕೇಸರ್‌ಕರ್, ಮಾನಸಾ ಸುಧೀರ್, ಮನೋಜ್, ರಿತೇಶ್, ಸ್ನೇಹಾ ಜಾಧವ್, ಮೈಸೂರು ರಮಾನಂದ್, ರೋಹಿತ್, ಅನುಪಮಾ, ನವನೀತ ಸೇರಿದಂತೆ ದೊಡ್ಡ ಕಲಾವಿದರ ಬಳಗವೇ ಇಲ್ಲಿದೆ. ಅಲ್ಲದೆ ಬೀದರ್ ಮೂಲದ ವಿಶ್ವ ದೇಹದಾರ್ಢ್ಯ ಪಟು ಮಾರುತಿ, ಆಂಜನೇಯನ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಚಿತ್ರದ ಹಾಡುಗಳಿಗೆ ಕವಿರಾಜ್, ಕೆ.ಕಲ್ಯಾಣ್ ಮತ್ತು ಅನಂತರಾಜು ಸಾಹಿತ್ಯ ಬರೆದಿದ್ದು, ರಾಜೇಶ್ ರಾಮನಾಥ್ ಸಂಗೀತ ಸಂಯೋಜಿಸಿದ್ದಾರೆ. ಛಾಯಾಗ್ರಹಣ ಪಿ.ಕೆ.ಹೆಚ್.ದಾಸ್, ನೃತ್ಯ ನಿರ್ದೇಶನ ಫೈವ್‌ಸ್ಟಾರ್ ಗಣೇಶ್ ಅವರದಾಗಿದೆ. ಮೂಡಿಗೆರೆ, ಸಕಲೇಶಪುರ, ಕುಂದಾಪುರ ಸುಂದರ ತಾಣಗಳಲ್ಲಿ ಒಂದೇ ಹಂತದಲ್ಲಿ ಶೂಟಿಂಗ್ ನಡೆಸಲಾಗಿದೆ. ಸದ್ಯ ಚಿತ್ರವು ಪೋಸ್ಟ್ ಪ್ರೊಡಕ್ಷನ್ ಕೆಲಸದಲ್ಲಿ ಬ್ಯುಸಿಯಾಗಿದೆ.



ಆರಾಮ

ವಿಶ್ವವಾಣಿ
@vishwavaninews
02-01-2026
ಶುಕ್ರವಾರ

ಚಿತ್ತವಿಹಾರ

ಗಝಲ್

• ಶಂಕರಾನಂದ ಹೆಬ್ಬಾಳ

ಸುಟ್ಟು ಸಾಗಿಬಿಡು ಹಳೆಯ ನೆನಪುಗಳನು
ಒಟ್ಟಿ ಬೀಗಿಬಿಡು ಹೊಸತು ಕನಸುಗಳನು...

ಕಟ್ಟಿ ಹೊರಟುಬಿಡು ಕಷ್ಟದ ಮೂಟೆಯನು
ತಟ್ಟಿ ಹೇಳಿಬಿಡು ಕಹಿಯಾದ ಮನಸುಗಳನು...

ದಿಟ್ಟಿಸುತ ನಡೆದಿರುವೆ ವರುಷಗಳ ಕಾಲ
ಅಟ್ಟಿಸಿ ಹೊಡೆದುಬಿಡು ಉದ್ವಿಗ್ನ ಗಳಿಗೆಗಳನು...

ಪಟ್ಟು ಹಿಡಿಯುತ ಕಾಡಿರುವೆ ಹೃದಯವನು
ಸಿಟ್ಟಿನಲಿ ದಹಿಸಿಬಿಡು ಘಾತಿಸುವ ದುಃ
ಸ್ವಪ್ನಗಳನು...

ನೆಟ್ಟಿರುವ ನೋಟದಲಿ ಅಭಿನವನ ಬದುಕು
ಕಟ್ಟಕಡೆಗೆ ಸ್ಮರಿಸದಿರು ಗತಿಸಿಹೋದ
ಕೆಡಕುಗಳನು...

• ವೆಂಕಟೇಶ ಚಾಗಿ, ಕೊಪ್ಪಳ

ಉಡುಗೊರೆ

ವರುಷದ ಕೊನೆಯ ದಿನ
ಸಂಭ್ರಮದಿಂದ ತುಂಬಿತ್ತು
ಮನೆ ಮುಂದಿನ ಓಣಿ..
ಬೆಳಗ್ಗೆ ನಿಶೆಯಲ್ಲಿ ಎದ್ದಾಗ
ಹೊಸ ವರ್ಷದ ಉಡುಗೊರೆ
ಮಡದಿಯ ಬೈಗುಳವೇ ಬೋಣಿ..!

ದ್ರೋಹ

ಈ ಚಳಿಗಾಲದಲ್ಲಿ
ಪತ್ನಿಯಿಂದಲೇ ದ್ರೋಹ
ಮಲಗಿ ಪತಿಯ ಬಳಿ;
ಬೆಳಗಿನ ಜಾವದಲ್ಲಿ
ನಡುಗುತ್ತಾ ಇದ್ದಾಗ
ಕದ್ದಿದ್ದಳು ಹೊದ್ದ ಕಂಬಳಿ!

ಹೊಸ ವರ್ಷ

ಹೊಸ ವರ್ಷ ಬಂದರೂ
ನಾವೇ ಬದಲಿಸಬೇಕು
ಗೋಡೆ ಮೇಲಿನ ಕ್ಯಾಲೆಂಡರ್ರು,
ತಾನೇ ಬದಲಾಗದು ಜೀವನ
ಬದಲಾಯಿಸಬೇಕು ನಾವೇ
ಬದುಕಿನ ಕಲರ್ರು..!

ಭಾವೈಕ್ಯತೆಯ ಬನಶಂಕರಿ ಜಾತ್ರೆ

• ಡಾ. ಕರವೀರಪ್ರಭು ಕ್ಯಾಲಕೊಂಡ.

ಬನದ ಹುಣ್ಣಿಮೆ ಮುಂದ ಬನವೆಲ್ಲಾ ನಡುಗೇತಿ
ಬನಶಂಕ್ರಿ ಜಾತ್ರಿ ಬಂದೈತಿ! ತವರಿಂದ
ಕರಿಯಾಕ ಬಂಡಿ ಬರತೈತಿ

ಜನಪದರ ಮನದಿಂದ ಮೂಡಿಬಂದ ಈ ತ್ರಿಪದಿಯು ಜನರೊಂದಿಗೆ ಜಾತ್ರೆಯ ನಂಟು ಎಷ್ಟಿದೆ ಎಂಬುದನ್ನು ಸ್ಪಷ್ಟಪಡಿಸುತ್ತದೆ. ಉತ್ತರ ವಾಹಿನಿಯಾಗಿ ಹರಿಯುವ ಮಲಪಹಾರಿಯ ಸಮೀಪದ ತುಳಸೀಗುಡ್ಡದ ಕೆಳಗೆ ತಿಲಕವನದಲ್ಲಿ ತೆಂಗಿನ ತೋಪು, ಬಾಳೆಯ ಬನಗಳು, ಹಚ್ಚ ಹಸುರಿನ ಹಾಸಿಗೆ, ತಂಪು ಹವೆ, ತಿಳಿಯಾಗಿ ಹರಿಯುವ ಹಸುರಿಗೆ ಉಸಿರಾಗಿರುವ ಸರಸ್ವತಿ ಹಳ್ಳ, ಹರಿದ್ರಾ ತೀರ್ಥ, ತೈಲತೀರ್ಥ, ಹಕ್ಕಿಗಳ ಕಲರವ, ಬರಗಾಲದ ಬಿಸಿಲಿನ ಬೇಗೆಯ ಬಯಲುಸೀಮೆಯಲ್ಲಿ ಬನವಾಸಿಯ ನೆನಪು. ಇದೇ ಬನಶಂಕರಿ ದೇವಿಯ ತಾಣ. ಬನದೇವಿಯ ಸಂಪದದಲ್ಲಿ ಎದ್ದು ಕಾಣುವ ಧವಳ ಶಿಖರವನ್ನು ಹೊಂದಿದ ಬನಶಂಕರಿ ದೇವಿಯ ಗುಡಿಯು ದೂರದಿಂದಲೇ ಮನವನ್ನಾಕರ್ಷಿಸುತ್ತದೆ.

ಚತುರಸ್ತ ಕಲ್ಲು ಮಂಟಪಗಳಿಂದ ಆವೃತವಾದ ಹರಿದ್ರಾತೀರ್ಥದ ಪಶ್ಚಿಮಕ್ಕೆ ಪೂರ್ವ ಮಹಾದ್ವಾರದಿಂದ ಒಳಗೂಡಿನ ಪ್ರಾಕಾರದ ಮಧ್ಯದಲ್ಲಿ ಈ ಶಕ್ತಿದೇವತೆಯ ಗುಡಿ ಇದೆ. ಮಹಾದ್ವಾರದ ಒಳಗಡೆ ಎತ್ತರವಾದ ಕಲ್ಲಿನ ದೀಪ ಸ್ತಂಭಗಳಿದ್ದು, ಬಲಿಪೀಠ ಮತ್ತು ಧ್ವಜ ಸ್ತಂಭಗಳಿವೆ. ವಾಸ್ತು ವಿನ್ಯಾಸ ದೃಷ್ಟಿಯಿಂದ ಮುಖಮಂಟಪ, ಸಭಾಮಂಟಪ ಮತ್ತು ಗರ್ಭಗುಡಿ ಎಂದು ವಿಂಗಡಿಸಬಹುದು. ಸಭಾಮಂಟಪದ ಕೊನೆಯ ಎಡ ಮತ್ತು ಬಲ ಬದಿಗಳಿಂದ ಪ್ರದಕ್ಷಿಣೆ ಪಥದ ಪರಿತಳಿಯಿಂದ ಮೇಲೇರಿ ಬರಲು ಮೆಟ್ಟಿಲುಗಳಿವೆ.

ಶಕ್ತಿದೇವತೆ ಬನಶಂಕರಿ

ಗರ್ಭಗುಡಿಯಲ್ಲಿ ಕಪ್ಪು ಶಿಲೆಯಲ್ಲಿ ಕಲಾಪೂರ್ಣವಾಗಿ ಕೆತ್ತಿದ ಸಿಂಹವಾಹಿನಿಯಾದ ಎಂಟು ಕೈಗಳುಳ್ಳ ದೇವಿಯ ಸುಂದರ ವಿಗ್ರಹ ಭವ್ಯವಾಗಿದೆ. ಬನಶಂಕರಿ ದೇವಿ ನವದುರ್ಗೆಯರಲ್ಲಿ ಒಬ್ಬಳಾಗಿದ್ದು 'ವನದುರ್ಗೆ' ಎಂಬ ಪ್ರಭೇದದಲ್ಲಿಯ ಪ್ರಮುಖ ಲಕ್ಷಣಗಳು ಮೂರ್ತಿಶಾಸ್ತ್ರದ ದೃಷ್ಟಿಯಿಂದ ನೋಡಿದಾಗ ಸ್ಪಷ್ಟವಾಗುವುವು. ಬನಶಂಕರಿ ದೇವಿಯ ಪ್ರತಿಷ್ಠಾಪನೆ ಶಾಲಿವಾಹನ ಶಕೆ 603ರಲ್ಲಿ ಆಯಿತೆಂಬುದು ಬನದೇವಿಯ ಪೀಠದಲ್ಲಿನ ಶಾಸನದಿಂದ ತಿಳಿಯುವುದು. ಸ್ಕಂದ ಮತ್ತು ಪದ್ಮ ಪುರಾಣಗಳಲ್ಲಿ, ದೇವೀ ಭಾಗವತದಲ್ಲಿ ಈ ಶಕ್ತಿದೇವತೆಯ ಬಗ್ಗೆ ಉಲ್ಲೇಖಗಳಿವೆ. ಒಮ್ಮೆ ಬೆಳವಲದ ಈ ಭಾಗದಲ್ಲಿ ಭೀಕರ ಬರಗಾಲ ಬಿತ್ತು. ಬರಗಾಲದ ಬಾಹುಬಂಧನದಲ್ಲಿ ಜನತೆ ತತ್ತರಿಸಿ ಹೋಯಿತು. ಹಸಿವಿನ ಹಾಹಾಕಾರ ಎಲ್ಲೆಡೆ ಎದ್ದಿತು. ಭಕ್ತರಿಗೆ ಬಂದೊದಗಿದ ಕುತ್ತನ್ನು ಕಡಿದುಹಾಕಲು ಈ ದೇವಿ ತನ್ನ ತನುವಿನಿಂದಲೇ ಕಾಯಿಪಲ್ಲೆ ಸೃಷ್ಟಿಸಿ ನೀಡಿದಳು. ಅದಕ್ಕಾಗಿ ಸ್ಥಳೀಯರು ಈ ದೇವಿಯನ್ನು 'ಶಾಕಂಬರಿ' ಎಂದು ಭಕ್ತಿಭಾವದಿಂದ ಕರೆಯುವರು.

ಬನಶಂಕರಿ ಜಾತ್ರೆಯ ಬಾಬುದಾರರು

ಬಾದಾಮಿಯ ಬಡಿಗೇರು ಬನಶಂಕರಿ ತೇರು ಕಟ್ಟುವರು. ಚೋಳಚಗುಡ್ಡದ ಕಂಬಾರರು ತೇರಿಗೆ ಬೇಕಾದ ಕಬ್ಬಿಣದ ಬಳೆಗಳನ್ನು ತಯಾರಿಸಿ ಜೋಡಿಸುವರು. ಬಾದಾಮಿಯ ಭಾಗವಾಗಿರುವ ತಟಕೋಟೆಯ ಭಕ್ತರು ತೇರಿಗೆ ಎಣ್ಣೆ ಉಣಿಸಿ, ಸುರುಮಾ ಹಚ್ಚಿ ಸಜ್ಜುಗೊಳಿಸುವರು. ಬೇಲೂರಿನ ಕುಂಬಾರರು ನಂದಾದೀಪಕ್ಕೆ ಬೇಕಾಗುವ ಪಣತಿಗಳನ್ನ ಪೂರೈಸುವರು, ರೋಣ ತಾಲೂಕಿನ ಮೂಡ್ಲಗೇರಿ ಗ್ರಾಮದವರು ತೇರು ಎಳೆಯಲು ಬೇಕಾಗುವ ಹಗ್ಗವನ್ನು ವಿಶೇಷ ಬಂಡಿಯ ಮೇಲೆ ಮೋಜು ಮಜಲುಗಳೊಂದಿಗೆ ಮೆರವಣಿಗೆ ಮಾಡುತ್ತಾ ತರುವರು.

ಘಟಸ್ಥಾಪನೆಯಿಂದ ರಥೋತ್ಸವದ ದಿನದವರೆಗೆ ಚತುರ್ವೇದ ಪಾರಾಯಣ ಮಾಡುವರು. ಇದು ಅಷ್ಟಮಿ ಆರಾಭ್ಯ, ಪೂರ್ಣಿಮಾ ರ್ಯಂತವಾಗುವುದು. ರಥೋತ್ಸವದ ಮುನ್ನ ನಡೆಯುವ 'ಪಲ್ಲೇದ ಹಬ್ಬ' ತುಂಬಾ ವೈಶಿಷ್ಟ್ಯಪೂರ್ಣ. 108 ಪಲ್ಲೆಗಳನ್ನು ಮಾಡಿ ದೇವಿಗೆ ಅರ್ಪಿಸುವರು. ಬಹುಶಃ ಸುತ್ತಮುತ್ತಲಿನ ಗ್ರಾಮಸ್ಥರಿಗೆ ಸದಾ ಹಸಿರನ್ನೇ ನೀಡಿದುದರ ಫಲ ಇದಾಗಿರಬಹುದು! ಬನದ ಹುಣ್ಣಿಮೆಯಂದು ಬೆಳಗ್ಗೆ 'ರಥಾಂಗಹೋಮ' ಮಾಡುವರು. ಅಂದು ಸಾಯಂಕಾಲ 5 ಗಂಟೆಗೆ ಸಾರ್ವಜನಿಕ ರಥೋತ್ಸವ ಜರಗುವುದು. ಬಾದಾಮಿ ವಡ್ಡರು ತೇರಿನ ಗಾಲಿಗೆ ರಥೋತ್ಸವದ ವೇಳೆ ಸನ್ನಿ ಹಾಕುವುದನ್ನ, ಕಲ್ಲು ಇಡುವುದನ್ನ ಮಾಡುವರು. ಚೋಳಚಗುಡ್ಡದ ಕಮಾಟಿಗರು ಪಲ್ಲಕ್ಕಿ ಹೊರುವರು, ದೀವಟಿಗೆ ಹಿಡಿಯುವರು. ಭಜಂತ್ರಿಯವರು ಚೌಡಕಿ ಬಾರಿಸುವರು, ಶಹನಾಯಿ ವಾದನ ಮಾಡುವರು. ಇವರೆಲ್ಲರ ಜತೆಗೆ ಸುತ್ತಮುತ್ತಲಿನ ಗ್ರಾಮಗಳಿಂದ ಬರುವ ಡೊಳ್ಳಿನ ಮೇಳ, ಭಜನೆಮೇಳ, ನಂದಿಕೋಲು, ಹೆಜ್ಜೆ ಕುಣಿತ ತಂಡಗಳು ಜಾನಪದ ಸೊಗಡಿನ ಸಿರಿಯನ್ನು ಅನಾವರಣಗೊಳಿಸುವುವು.

ರಥೋತ್ಸವದ ವೇಳೆ ಲಕ್ಷಾಂತರ ಜನರು, ಮೈ ಮನ ಮರೆತು 'ಬಾದಾಮಿ ಬನಶಂಕರಿ ಶಂಭುಕೊ' ಎನ್ನುತ್ತಾ ಉತ್ತತ್ತಿ, ಬಾಳೆಹಣ್ಣುಗಳನ್ನು ಎಸೆಯುವ ದೃಶ್ಯ ಹೃದಯಂಗಮ. ಭಕ್ತಿಯ ಮಹಾಪೂರವನ್ನೇ ತಾಯಿಯ ಮೇಲೆ ಇಲ್ಲಿಯ ಭಕ್ತರು ಹರಿಸುವರು. ಜಾತಿ, ಮತ, ಪಂಥಗಳ ಭೇದಭಾವದ ಬಾಹುಗಳ ಬಂಧನದಲ್ಲಿ ಬಂಧಿತರಾಗದೇ ಸರ್ವ ಸಮಾಜಗಳ ಜನರು, ಭಾವೈಕ್ಯತೆಯಿಂದ ಆಚರಿಸುವ ಜಾತ್ರೆ ಇದಾಗಿದೆ. ದೇವಾಲಯದಲ್ಲಿ ಎಲ್ಲರಿಗೂ ಮುಕ್ತ ಪ್ರವೇಶವಿದೆ.

ನೋಡಬನ್ನಿ ಬೆಡಗಿನ ಜಾತ್ರೆ

ಮುಂಗಾರು ಸುಗ್ಗಿ ಮುಗಿದು, ಹಿಂಗಾರು ಮಾಗಿ ಶೃಂಗಾರವಾಗಿರುವಾಗ ಸಂಭ್ರಮ-ಸಡಗರಗಳಿಂದ ಬರುವ ಬನಶಂಕರಿ ಜಾತ್ರೆ ಬಯಲುಸೀಮೆಯ ಅತಿದೊಡ್ಡ ಜಾತ್ರೆಗಳಲ್ಲೊಂದಾಗಿದೆ. ತಿಂಗಳುಗಟ್ಟಲೆ ನಡೆಯುವ ಅಪರೂಪದ ಜಾತ್ರೆಯಿದು.

ವರ್ಷವಿಡೀ 'ವನಪುರಿ'ಯಾಗಿರುವ ಈ ಕ್ಷೇತ್ರದಲ್ಲಿ ಜಾತ್ರೆ ವೇಳೆಗೆ ಹೊಚ್ಚಹೊಸ 'ಮಾಯಾನಗರಿ' ನಿರ್ಮಾಣಗೊಳ್ಳುವುದು. ಈ ಮಾಯಾನಗರಿಯಲ್ಲಿ ರಸ್ತೆಗಳು, ಕ್ರಾಸುಗಳು, ಕೂಟಗಳು, ಕಾಲುದಾರಿಗಳು ಇರುವವು. ಚಿತ್ರಮಂದಿರಗಳು, ನಾಟಕ ರಂಗಮಂದಿರಗಳು, ಸರ್ಕಸ್ ಕಂಪನಿಗಳು, ಕಟ್ಟಿಗೆಯ ಅಡ್ಡೆಗಳು, ಅಂದದ ಮನೆಗೆ ಬೇಕಾಗುವ ಚೆಂದದ ಬಾಗಿಲುಗಳು, ಹೋಟೆಲ್‌ಗಳು, ಪಾನ್ ಶಾಪ್‌ಗಳು, ಬೆಂಡು-ಬತ್ತಾಸು, ಲಡ್ಡು, ಚುರುಮರಿ ಸಾಲು ಅಂಗಡಿಗಳು, ಅಮ್ಮಿನಗಡದ ಕರದಂಟು, ಧಾರವಾಡ ಪೇಡೆ, ಬೆಳಗಾಂವ್ ಕುಂದಾ ಮಾರುವ ಮಳಿಗೆಗಳು, ತಂದೆ-ತಾಯಿಗಳ ಕಿಸೆ ಖಾಲಿಮಾಡಿಸುವ ಗೊಂಬೆ ಅಂಗಡಿಗಳು, ಬಾಂಡೆ ಅಂಗಡಿಗಳು, ತೊಟ್ಟಿಲು ಬಟ್ಟಲು, ಟ್ರಂಕು ಮಾರುವ ಮಳಿಗೆಗಳು, ಬಣ್ಣ ಬಣ್ಣದ ಬಾರುಕೋಲು, ಗೆಜ್ಜೆಸರ, ಗಂಟೆ ಬಾಸಿಂಗ, ಜುಲಾ, ಕೋಡೆನು, ಕರ್ಣಿ ಹಣೆಗೆಜ್ಜೆ ಗೊಂಡೆ ಇರುವ ರೈತಾಪಿ ಜನರ ಅಂಗಡಿಗಳು, ವಿಭಿನ್ನ ಬಗೆಯ ಬಳೆಗಳನ್ನು ಮಾರಾಟ ಮಾಡುವ ಬಳೆಗಾರ ಚನ್ನಯ್ಯರು, ಉಡದಾರ, ಶಿವದಾರ, ಕಾಶಿದಾರ, ಲಿಂಗು, ಪೀಠಕ, ವಿಭೂತಿ, ರುದ್ರಾಕ್ಷಿ, ಕ್ರಿಯಾಗಟ್ಟಿ ಮಾರಾಟದ ಮಳಿಗೆಗಳು, ಭಂಡಾರ, ಕುಂಕುಮ ಮಾರುವ ನೂಕುಬಂಡಿ ಅಂಗಡಿಗಳು, ಸಂಜೆಯ ರಂಗಿಗೆ ಜೋಲಿ ಹೊಡೆಸುವ 'ಗುಂಡಿನ ಅಂಗಡಿಗಳು', ಮಸ್ತರಾಮ ಮರಾಠಿ ಖಾನಾವಳಿಗಳು, ಬರ್ಮಾ ಬಜಾರುಗಳು, ಕಿವಿ ಕೊರೆಯುವ ರಿಕಾರ್ಡುಗಳು... ಒಂದೇ ಎರಡೇ ಎಲ್ಲಾ! ಇಂಥದ್ದನ್ನು ಮತ್ತಾವ ಜಾತ್ರೆಯಲ್ಲೂ ನೋಡಲು ಸಾಧ್ಯವಿಲ್ಲ. ಅದಕ್ಕೆ ಬನಶಂಕರಿ ಜಾತ್ರೆ ಕುರಿತು ಹೀಗೊಂದು ನಾಣ್ಣುಡಿ ಪ್ರಚಲಿತದಲ್ಲಿದೆ- 'ಬನಶಂಕರಿ ಜಾತ್ರ್ಯಾಗ ಅಪ್ಪ-ಅವ್ವನ ಬಿಟ್ಟು ಎಲ್ಲಾ ಸಿಗತೈತಿ...'. ಇದು ಅಕ್ಷರಶಃ ಸತ್ಯ.

ದಂಗುಗೊಳಿಸುವ ದನದ ಜಾತ್ರೆ

ಕಳಸ ಇಳಿಯುವ ದಿನದಂದು ದನದ ಜಾತ್ರೆಗೆ ನಾಂದಿ ಹಾಡಲಾಗುತ್ತದೆ. ಬಾದಾಮಿ ಬಂಡೆಗಳ ಮುಂದೆ ಎಪಿಎಂಸಿ ಎದುರಿನ ಬಯಲಿನಲ್ಲಿ ಸೇರುವ ದನಗಳ ದೃಶ್ಯ ನಯನ ಮನೋಹರ. ದೂರ ದೂರದ ಊರಿಂದ ಭಿನ್ನ ಭಿನ್ನ ಜಾತಿಯ ದನಗಳು ಜಾತ್ರೆಗೆ ಬರುತ್ತವೆ. ಮಸ್ತ ಮೇಸಿದ ಹರೆಯದ ಹೋರಿಗಳು ಜಾತ್ರೆಯ ಆಕರ್ಷಣೆ. ಕೊರೆಯುವ ಚಳಿಯಲ್ಲೂ ಅವುಗಳ ಮೈತಿಕ್ಕಿ ಮಿಂಚುವಂತೆ ಮಾಡುವ, ರೈತರು ಮತ್ತು ನೋಡುಗರನ್ನು ಆಯಸ್ಕಾಂತದಂತೆ ಆಕರ್ಷಿಸುವ ಕೇಂದ್ರಗಳು, ಲಕ್ಷ ಲಕ್ಷ ಕಿಮ್ಮತ್ತಿನ ಜೋಡಿಗಳು. ದನದ ಜಾತ್ರಾ ಸಮಿತಿ ನೀಡುವ ಬಹುಮಾನಗಳು, ನಂತರ ನಡೆಯುವ ವ್ಯಾಪಾರ ವಹಿವಾಟುಗಳು- ಇವು ದನದ ಜಾತ್ರೆಯ ವೈಶಿಷ್ಟ್ಯಗಳು.

ಬಾಗಲಕೋಟೆ ಜಿಲ್ಲೆ ಬಾದಾಮಿ ತಾಲೂಕಿನ ಬನಶಂಕರಿಯಲ್ಲಿರುವ ಈ ಬನದತಾಯಿಗೆ ನೂರೆಂಟು ಹೆಸರು. ವನದುರ್ಗೆ, ಬನಶಂಕರಿ ಬಾಳವ್ವ, ಬನದವ್ವ, ಸುಂಕವ್ವ, ಶಾಕಂಬರಿ, ಶಿರಿವಂತಿ, ಹೂವಕ್ಕ. ಚೌಡಮ್ಮ ಮುಂತಾದ ಹೆಸರುಗಳಿಂದ ತಾಯಿಯನ್ನು ಕರೆಯುತ್ತಾರೆ. ರೈತರ ಆರಾಧ್ಯ ದೈವವಾಗಿರುವ ಈ ದೇವಿಯ ಜಾತ್ರೆಯಲ್ಲಿ ಮಣ್ಣಿನ ಮಕ್ಕಳ ಸಂಭ್ರಮ ಮುಗಿಲು ಮುಟ್ಟುತ್ತದೆ.

ಅಂದಹಾಗೆ ನೀವೂ ಒಂದ್ಸಾರಿ ಬನ್ರಲಾ... ಈ ಬೆಡಗಿನ ಜಾತ್ರೆಗೆ...!

ಕುಂಬಾರನಿಗೆ ವರುಷ, ದೊಣ್ಣೆಗೆ ನಿಮಿಷ...

ಈ ಮಾತು ನೂರಕ್ಕೆ ನೂರರಷ್ಟು ಸತ್ಯ..!

• ಪುರುಷೋತ್ತಮ್ ವೆಂಕಿ, ಚಿತ್ರದುರ್ಗ

ಮಣ್ಣಿನ ಮಡಕೆ ಕೊಂಡುಕೊಳ್ಳಲು ಇತ್ತೀಚೆಗೆ ಪೇಟೆಗೆ ಹೋಗಿದ್ದೆ. ಕುಂಬಾರರ ಓಣಿ ಹೊಕ್ಕಿದ ತಕ್ಷಣ ಅಲ್ಲಿದ್ದವರು ಎದ್ದು ಬಂದು, ''ನಮ್ಮ ಹತ್ತಿರ ಬನ್ನಿ, ನಮ್ಮಲ್ಲಿಗೆ ಬನ್ನಿ'' ಅಂತ ಪುಸಲಾಯಿಸತೊಡಗಿದರು. ನನಗಂತೂ ತಲೆ ಕೆಟ್ಟಂತಾಯ್ತು. ಆಮೇಲೆ ಅರ್ಥವಾಗಿದ್ದೇನೆಂದರೆ, ಅಲ್ಲಿರುವ ಯಾರಿಗೂ ಸರಿಯಾಗಿ ವ್ಯಾಪಾರವೇ ಆಗುತ್ತಿರಲಿಲ್ಲ. ''ಇತ್ತೀಚಿನ ದಿನಗಳಲ್ಲಿ ಬಹುತೇಕ ಜನರು ಪ್ಲಾಸ್ಟಿಕ್, ಅಲ್ಯುಮಿನಿಯಂ, ಸ್ಟೀಲ್ ಪಾತ್ರೆಗಳಿಗೆ ಮಾರುಹೋಗಿದ್ದು, ಮಣ್ಣಿನಿಂದ ತಯಾರಿಸಿದ ಮಡಕೆ-ಕುಡಿಕೆ ಇನ್ನಿತರೆ ವಸ್ತುಗಳಿಗೆ ಬೇಡಿಕೆಯೇ ಕುಸಿದುಹೋಗಿದೆ'' ಎಂದು ವ್ಯಾಪಾರಿಗಳು ಅಲವತ್ತುಕೊಂಡರು.

ದೀಪಾವಳಿಯ ಸಮಯದಲ್ಲಿ ಪ್ರತಿ ಮನೆಯಲ್ಲೂ ಮಣ್ಣಿನ ಹಣತೆಗಳು ಝಗಮಗಿಸುತ್ತವೆ; ಆದರೆ ಆ ಹಣತೆಗಳನ್ನು ತಯಾರಿಸುವ ಕುಂಬಾರರ ಬದುಕು ಮಾತ್ರ ಇನ್ನೂ ಅಂಧಕಾರದಲ್ಲೇ ಇದೆ. ತಲೆ ತಲಾಂತರದಿಂದ ಮಣ್ಣನ್ನೇ ನಂಬಿ ಜೀವನ ಸಾಗಿಸುತ್ತಿರುವ ಬಹುತೇಕ ಕುಂಬಾರರ ಕಥೆಯಿದು. ಒಂದು ಮಡಕೆ ತಯಾರಿಸಲು ಕನಿಷ್ಠ 10 ದಿನ ಬೇಕು. 2 ಕೊಡ ನೀರು ಹಿಡಿಯುವ ಮಡಕೆಯ ತಯಾರಿಗೆ 4 ಕೆ.ಜಿ. ಮಣ್ಣು ಬೇಕು. ಇದು ಒಬ್ಬರೇ ಮಾಡುವ ಕೆಲಸವಲ್ಲ, ಇಡೀ ಕುಟುಂಬದವರು ಕೈಜೋಡಿಸಬೇಕಾಗುವ ಬಾಬತ್ತು. ಮೊದಲು ಮಣ್ಣನ್ನು ಜರಡಿ ಹಿಡಿಯಬೇಕು, ಬಳಿಕ ರಾಡಿ ಮಾಡಿ ಸೋಸಿ, ಕಲ್ಲಿನ ಚೂರು, ಕಸ-ಕಡ್ಡಿ ಇತ್ಯಾದಿಗಳನ್ನು ಬೇರ್ಪಡಿಸಬೇಕು. ಅದು ಕೆಸರಾದ ನಂತರ ಬೂದಿ ಕಲೆಸಿ ಮಡಕೆ ಮಾಡಬೇಕು. ನೆರಳಲ್ಲೇ 8 ದಿನ ಒಣಗಿಸಿ, 9ನೇ ದಿನ ಬಿಸಿಲಲ್ಲಿ ಒಣಗಿಸಬೇಕು. ಬಳಿಕ ಭಟ್ಟಿಯಲ್ಲಿ ಹದವಾಗಿ ಸುಡಬೇಕು. ಆಗ ಅದು ಬಳಕೆಗೆ ಯೋಗ್ಯವಾಗುತ್ತದೆ. ಇಷ್ಟೆಲ್ಲ ಪರಿಶ್ರಮದೊಂದಿಗೆ ತಯಾರಾಗುವ ಮಡಕೆಗೆ ದಕ್ಕುವ ಬೆಲೆ ಮಾತ್ರ ಏನೇನೂ ಸಾಲದು!

ಮಡಕೆ ಮಾಡುವ ಕುಂಬಾರ ಸಮುದಾಯಕ್ಕೆ ರಾಜಧಾನಿ ಬೆಂಗಳೂರು, ಕರಾವಳಿಯ ಮಂಗಳೂರು ಭಾಗಗಳಲ್ಲಿ 'ಕುಲಾಲ' ಎಂದೂ, ಧಾರವಾಡ, ಬಾಗಲಕೋಟೆ ಭಾಗಗಳಲ್ಲಿ 'ಚಕ್ರಸಾಲಿ' ಎಂದೂ ಕರೆಯಲಾಗುತ್ತದೆ. ಗುಜರಾತ್‌ನಲ್ಲಿ 'ಪ್ರಜಾಪತಿ', ರಾಜಸ್ಥಾನದಲ್ಲಿ 'ಕುಮಾರ್' ಎಂದೂ ಹೆಸರಾಗಿರುವ ಈ ಸಮುದಾಯಕ್ಕೆ 17 ಉಪನಾಮಗಳಿವೆ. ಈ ಸಮುದಾಯದವರ ಸಾಕ್ಷರತೆ ಪ್ರಮಾಣ ಕೇವಲ ಶೇ.15ರಷ್ಟಿದ್ದರೆ, ನಿರುದ್ಯೋಗ ಪ್ರಮಾಣ ಶೇ.30ರಷ್ಟಿದೆ. ಶೇ.10ರಷ್ಟು ಮಂದಿ ಕೂಲಿ ಕೆಲಸ ಮಾಡಿಕೊಂಡು ಬದುಕುತ್ತಿದ್ದಾರೆ. ಸರಕಾರಿ ಮತ್ತು ಅರೆ-ಸರಕಾರಿ ನೌಕರಿ ಹಿಡಿದವರು ಶೇ.2ರಷ್ಟು ಜನ ಮಾತ್ರ.

ರಾಜ್ಯದೆಲ್ಲೆಡೆಯ ಭೂಪ್ರದೇಶವು ವಿಭಿನ್ನವಾಗಿರುವುದರಿಂದ, ಕುಂಬಾರಿಕೆಗೆ ಒಂದೇ ರೀತಿಯ ಮಣ್ಣು ಸಿಗುವುದು ಸವಾಲಿನ ಕೆಲಸವಾಗಿದೆ. ಆದರೆ, ಬೆಳಗಾವಿ ಜಿಲ್ಲೆಯ ಖಾನಾಪುರ ಪ್ರದೇಶದ ಮಣ್ಣು ಜಿಗುಟಿನಿಂದ ಕೂಡಿರುವುದರಿಂದ ಕಸುಬಿಗೆ ಅದು ಯೋಗ್ಯ ಎನ್ನುವುದು ಬಹುತೇಕ ಕುಂಬಾರರ ಮಾತು. ಹೀಗಾಗಿ, ಬೆಳಗಾವಿ, ಬಾಗಲಕೋಟೆ, ಹಾವೇರಿ, ಗದಗ, ಹುಬ್ಬಳ್ಳಿ-ಧಾರವಾಡ, ಉತ್ತರ ಕನ್ನಡ ಪ್ರದೇಶಗಳ ಬಹುತೇಕ ಕುಂಬಾರರು ಖಾನಾಪುರದ ಮಣ್ಣನ್ನೇ ತರಿಸುತ್ತಾರೆ. ಆದರೆ, ಗಣಿನಿಯಮಗಳು ಮತ್ತು ಸಾಗಣೆ ವೆಚ್ಚದ ಕಾರಣದಿಂದಾಗಿ ಅಲ್ಲಿಂದ ಮಣ್ಣು ತರಿಸೋದು ತ್ರಾಸದಾಯಕ; ಹೀಗಾಗಿ ಕಲಬುರ್ಗಿ, ಬೀದರ್ ಪ್ರದೇಶದ ಕುಂಬಾರರು ಜಮೀನಿನ ಕರಿಮಣ್ಣು, ಕೆರೆಮಣ್ಣನ್ನು ಬಳಸುತ್ತಾರೆ.

ಕುಲಕಸುಬನ್ನೇ ಮುಂದುವರಿಸಲು ಈ ಸಮುದಾಯಕ್ಕೆ ಉತ್ಪಾದನೆ ಮತ್ತು ಮಾರುಕಟ್ಟೆ ವ್ಯವಸ್ಥೆಗಳೆರಡಕ್ಕೂ ಸಮಸ್ಯೆ ಇದೆ. ಸ್ವಂತ ಜಮೀನನ್ನೇ ಹೊಂದಿರದ ಈ ಸಮುದಾಯದವರು ಮಣ್ಣನ್ನೂ ಕೊಂಡು ತರಬೇಕು, ಬೆಲೆ ಒಂದು ಟಿಪ್ಪರ್‌ಗೆ 15 ಸಾವಿರ ರುಪಾಯಿ. ತಯಾರಿಸಿದ ಮಡಕೆ-ಕುಡಿಕೆಗಳನ್ನು ಸುಡಲು ಬೇಕಾದ ಕಟ್ಟಿಗೆಯನ್ನೂ ಕೊಳ್ಳಲೇಬೇಕು. ಹೀಗಾಗಿ, ಎಲ್ಲ ಖರ್ಚುಗಳನ್ನು ಕಳೆದು ಇವರ ಪರಿಶ್ರಮಕ್ಕೆ ಸಿಗುವ ಪ್ರತಿಫಲವು ಪುಡಿಗಾಸಿನ ಪ್ರಮಾಣದಲ್ಲಿರುತ್ತದೆ. ಮತ್ತೊಂದೆಡೆ, ಜನರ ಬದಲಾದ ಅಭಿರುಚಿಗೆ ಅನಿವಾರ್ಯವಾಗಿ ತಲೆಬಾಗುವ ವ್ಯಾಪಾರಿಗಳು ಸ್ಥಳೀಯ ಕುಂಬಾರರನ್ನು ಕೈಬಿಟ್ಟು, ಹೊರರಾಜ್ಯಗಳಿಂದ ಕುಂಬಾರಿಕೆ ಉತ್ಪನ್ನಗಳನ್ನು ತರಿಸಿ ಮಾರುವುದೂ ಇದೆ. ಈ ಎಲ್ಲ ಕಾರಣಗಳಿಂದಾಗಿ ಕುಂಬಾರರು ತಮ್ಮ ಕುಲಕಸುಬಿನ ಮೇಲಿನ ಭರವಸೆಯನ್ನು ಕಳೆದುಕೊಳ್ಳುತ್ತಿದ್ದಾರೆ.

ರಾಜ್ಯದಲ್ಲಿ ಸುಮಾರು 20 ಲಕ್ಷದಷ್ಟಿರುವ ಕುಂಬಾರರಿಗೆ ಮಣ್ಣೇ ಬದುಕಿನ ಜೀವಾಳ. ಕುಂಬಾರಿಕೆಯು ಕಸುಬಷ್ಟೇ ಅಲ್ಲ, ಕಲೆಯೂ ಹೌದು. ಹೀಗಾಗಿ ಶೇ.20ರಷ್ಟು ಜನ ಈ ಕುಲಕಸುಬನ್ನೇ ನೆಚ್ಚಬೇಕಾಗಿದೆ. ದಸರಾ ಮುಗಿಯುತ್ತಿದ್ದಂತೆ ಹಣತೆಗಳ ತಯಾರಿಕೆಗೆ ಮುಂದಾಗುವ ಇವರು, ದೀಪಾವಳಿ ಬಳಿಕ ಮೇ ತಿಂಗಳವರೆಗೂ ಮಡಕೆ-ಕುಡಿಕೆ, ಗಡಿಗೆಗಳನ್ನು ತಯಾರಿಸುತ್ತಾರೆ. ಆದರೆ, ಮಳೆಗಾಲದ ಭರ್ತಿ 4 ತಿಂಗಳು ಇವರಿಗೆ ನಿರುದ್ಯೋಗ ಕಟ್ಟಿಟ್ಟಬುತ್ತಿ. ಅದುವೇ ವಿಷಾದದ ಸಂಗತಿ...

ಪದಬಂಧ

• ಸಿ.ರವಿಶಂಕರ ಶಾಸ್ತ್ರಿ, ದಂಬೆ

1		2	■	3	■	4		5
	■	6					■	
7	8		■		■	9	10	
■		■	11			■		■
12			■	■	■	13		
■		■	14	15		■		■
16		17	■		■	18		19
	■	20					■	
21			■		■	22		

ಎಡದಿಂದ ಬಲಕ್ಕೆ

1. ಏನಾಗುವುದೋ ಎಂಬ ಹೆದರಿಕೆ (3)
4. ಸ್ಲೇಟಿನ ಮೇಲೆ ಬರೆಯುವ ಮೃದು ಕಲ್ಲಿನ ಲೇಖನ ಸಾಧನ (3)
6. ನೆಲಕ್ಕೆ ಹಾಸಿರುವ ಬೆಲೆಬಾಳುವ ಕಂಬಳಿ (5)
7. ಮಡಿಯಲ್ಲಿ ಮುಟ್ಟದ ಬಿಡಿಗಾಸು (3)
9. ಉದ್ದವಾಗಿ ಬಾಗಿರುವ ತುತ್ತೂರಿ (3)
11. ಊಳಿಗ ಅಥವಾ ನೌಕರಿ (3)
12. ತೊಂದರೆ ಅಥವಾ ಕೇಡು (3)
13. ಮುನ್ನಡೆಸುವ ಮುಖಂಡ (3)
14. ವಿಶೇಷ ಸಂದರ್ಭಗಳಲ್ಲಿ ಕೇಳುವ ಚಂದಾ ಹಣ (3)
16. ಭಾರವಲ್ಲದ್ದು ಹರನ ನಡುವೆಇದೆ (3)
18. ಮುಪ್ಪು ಅಥವಾ ನರೆತಕೂದಲು (3)
20. ಅನ್ಯರ ಮೇಲೆ ಅವನು ತೋರುವ ದಯೆ, ಅನುಕಂಪ (5)
21. ಮುಸಲ್ಮಾನರ ಪ್ರಾರ್ಥನೆ ತಿರುಗಿ ಬಂದಿದೆ (3)
22. ಬಾಗಿಲಿಗೆ ತೋರಣ ಕಟ್ಟುವ ಚಿಗುರು (3)

ಮೇಲಿಂದ ಕೆಳಕ್ಕೆ

1. ಮುದ ನೀಡುವ ಸಂತೋಷಕ್ಕೆ ಮತ್ತೊಂದು ಹೆಸರು (3)
2. ಅಪಾಯಕಾರಿಯೂ ಆಗಬಲ್ಲ ಭಲ್ಲೂಕ (3)
3. ನಿರೀಕ್ಷೆಯಿಲ್ಲದೆ ಬಂದವನು (4)
4. ಅನಂತರ ಅಥವಾ ತರುವಾಯ ಎಂದರ್ಥ (3)
5. ಹೂವಿನ ಎಸಳು (3)
8. ಹಾಳಾಗು ಎನ್ನುವ ನುಡಿಕಟ್ಟು (5)
10. ತುಂಬಾ ಅನುಭವಿ ಎನ್ನುವ ನುಡಿಗಟ್ಟು (5)
15. ಅವನು ನೀಡಿದ ಒಪ್ಪಿಗೆ ತಲೆಕೆಳಗಾಗಿದೆ (4)
16. ವಸ್ತುಗಳ ಏಲಂ (3)
17. ನಾಲಗೆ ಮತ್ತೊಂದು ಹೆಸರು (3)
18. ಕೆಳಕ್ಕೆ ಬಿದ್ದ ಎಂದರ್ಥ (3)
19. ಹೆಂಗಳೆಯರಿಗೆ ಭಾವನಾತ್ಮಕವಾಗಿ ಬೆಸೆದಿರುವ ಹುಟ್ಟಿದ ಮನೆ (3)

ಸರಿಯುತ್ತರಗಳು

ಭಗವದ್ಗೀತಾ ಪಠಣದ ಮಹತ್ವ

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಒಂದೊಳ್ಳೆ ಮಾತು
Vishwavani TV Special ಯೂಟ್ಯೂಬ್ ಚಾನೆಲ್‌ನಲ್ಲಿ

ದುಃಖದಲ್ಲಿದ್ದ ಜನಸಾಮಾನ್ಯರಿಗೆ ಭಗವದ್ಗೀತೆಯ ಸಂದೇಶವನ್ನು ಸಾರಲು ಸಂತರೊಬ್ಬರು ವಿವಿಧ ಊರುಗಳಿಗೆ ಸಂಚರಿಸುತ್ತಿದ್ದರು. ಅವರೊಂದಿಗೆ ಕೆಲ ಶಿಷ್ಯರು ಕೂಡ ಹೋಗುತ್ತಿದ್ದರು. ಒಂದು ಹಳ್ಳಿಯಲ್ಲಿ, ಆ ಸಂತರ ಉಪದೇಶಗಳಲ್ಲಿ ಅಲ್ಲಿನ ಯಾರಿಗೂ ಆಸಕ್ತಿ ಇಲ್ಲವೆಂದು ಶಿಷ್ಯರು ಗಮನಿಸಿದರು. ಹಳ್ಳಿಯವರ ಆಧ್ಯಾತ್ಮಿಕ ಆಸಕ್ತಿಯನ್ನು ಪರೀಕ್ಷಿಸಲು, ಶಿಷ್ಯರು ಭಗವದ್ಗೀತೆಯ ಕೆಲವು ಪ್ರತಿಗಳೊಳಗೆ 500 ರುಪಾಯಿಯ ನೋಟನ್ನು ಇಟ್ಟು, ಅವುಗಳನ್ನು ಪುಸ್ತಕಗಳ ಮೇಜಿನ ಮೇಲೆ ಇಟ್ಟುಬಂದರು. ಒಂದು ವಾರದ ನಂತರವೂ ಆ ಪುಸ್ತಕಗಳನ್ನು ಯಾರೂ ತೆಗೆಯದೇ ಹಾಗೇ ಇದ್ದವು. ನೋಟುಗಳೂ ಅದರೊಳಗೇ ಇದ್ದವು. ಇದನ್ನು ಕಂಡ ಶಿಷ್ಯರು, 'ಈ ಹಳ್ಳಿಯವರಿಗೆ ಅಧ್ಯಾತ್ಮದಲ್ಲಿ ಆಸಕ್ತಿ ಇಲ್ಲ, ಇವರು ಪುಸ್ತಕಗಳನ್ನು ಮುಟ್ಟಲೂ ಇಲ್ಲ' ಎಂದು ತೀರ್ಮಾನಿಸಿ, ಗುರುಗಳಿಗೆ ಹಳ್ಳಿಯವರ ನಿರ್ಲಕ್ಷ್ಯದ ಬಗ್ಗೆ ದೂರು ನೀಡಿದರು

ಇದನ್ನು ಕೇಳಿದ ಸಂತರು ಶಿಷ್ಯರನ್ನು ಗದರಿಸುತ್ತಾ, ''ಅಯ್ಯೋ ಮೂರ್ಖರೇ! ಭಗವದ್ಗೀತೆ ಎಷ್ಟೊಂದು ಮಹಿಮೆಯುಳ್ಳ ಗ್ರಂಥ ಎಂದರೆ ಅದನ್ನು ಕೇವಲ ನೋಡುವುದರಿಂದಲೂ, ಮುಟ್ಟುವುದರಿಂದಲೂ, ಓದುವುದರಿಂದಲೂ ಮನುಷ್ಯರ ಹೃದಯ ಶುದ್ಧಗೊಳ್ಳುತ್ತದೆ. ಗೀತೆಯನ್ನು ಓದಿದವರು ಅದರೊಳಗಿನ ಹಣವನ್ನು ಕದಿಯುವ ಪ್ರೇರಣೆಗೆ ಒಳಗಾಗುವುದಿಲ್ಲ. ಏಕೆಂದರೆ ಭಗವದ್ಗೀತೆಯ ಜ್ಞಾನ ಇದ್ದವರು ಹಣವು ಸಾಮಾನ್ಯ ಕಾಗದದಷ್ಟೇ ಮೌಲ್ಯವುಳ್ಳದ್ದು ಎಂಬ ಸತ್ಯವನ್ನೂ ಅರಿತಿರುತ್ತಾರೆ. ವಿಷಯ ಸರಿಯಾಗಿ ತಿಳಿದುಕೊಳ್ಳದೆ ಇತರರನ್ನು ಸಂಶಯಿಸುವ ನಿಮ್ಮಂಥ ಶಿಷ್ಯರು, ಬುದ್ಧಿವಂತರಂತೆ ನಟಿಸುವ ಬದಲು, ನಿಮ್ಮ ನಾಲಗೆಯನ್ನು ನಿಯಂತ್ರಿಸಬೇಕು. ಅನಗತ್ಯ ಮಾತುಗಳನ್ನು ಬಿಡಬೇಕು ಮತ್ತು ಭಗವದ್ಗೀತೆಯ ಪುಟಗಳಲ್ಲಿ ಸಂಪೂರ್ಣವಾಗಿ ಲೀನರಾಗಬೇಕು'' ಎಂದರು. ಗುರುಗಳ ಮಾತುಗಳನ್ನು ಕೇಳಿ ಶಿಷ್ಯರು ತಮ್ಮ ತಪ್ಪನ್ನು ಅರಿತು ಪಶ್ಚಾತ್ತಾಪಪಟ್ಟರು ಮತ್ತು ಅವರ ಉಪದೇಶಗಳನ್ನು ಗಂಭೀರವಾಗಿ ಅನುಸರಿಸಲು ಆರಂಭಿಸಿದರು.

ಭಗವದ್ಗೀತೆಯನ್ನು ಭಕ್ತಿ ಶ್ರದ್ಧೆಯಿಂದ ಅಧ್ಯಯನ ಮಾಡಿದರೆ, ಅದು ಹೃದಯವನ್ನು ಶುದ್ಧಗೊಳಿಸಿ ನಮ್ಮ ಸ್ವಭಾವವನ್ನು ಪರಿವರ್ತಿಸುತ್ತದೆ. ಭಗವದ್ಗೀತೆಯ ಮಹಿಮೆಯನ್ನು ಗೀತಾ ಮಹಾತ್ಮ್ಯದಲ್ಲಿ ಈ ಕೆಳಗಿನ ಶ್ಲೋಕಗಳಲ್ಲಿ ಸುಂದರವಾಗಿ ವರ್ಣಿಸಲಾಗಿದೆ: 'ಗೀತಾಧ್ಯಾಯನ-ಶೀಲಸ್ಯ ಪ್ರಾಣಾಯಾಮ-ಪರಸ್ಯ ಚ ನೈವ ಸಂತಿ ಹಿ ಪಾಪಾನಿ ಪೂರ್ವಜನ್ಮಕೃತಾನಿ ಚ'- ಅಂದರೆ, ಯಾರು ಭಗವದ್ಗೀತೆಯನ್ನು ಸಂಪೂರ್ಣ ನಿಷ್ಠೆಯೊಂದಿಗೆ ಮತ್ತು ಗಂಭೀರತೆಯಿಂದ ಓದುತ್ತಾರೋ, ಅವರು ಹಿಂದಿನ ಜನ್ಮಗಳಲ್ಲಿ ಮಾಡಿದ ಪಾಪಕರ್ಮಗಳ ಫಲಗಳು ಭಗವಂತನ ಕೃಪೆಯಿಂದ ಅವರ ಮೇಲೆ ಪರಿಣಾಮ ಬೀರುವುದಿಲ್ಲ.

'ಮಲಿನೇ ಮೋಚನಂ ಪುಂಸಾಂ ಜಲಸ್ನಾನಂ ದಿನೇ ದಿನೇ ಸಕೃದ್ಗೀತಾಮೃತ-ಸ್ನಾನಂ ಸಂಸಾರ-ಮಲ-ನಾಶನಂ'- ಅಂದರೆ, ಪ್ರತಿದಿನ ನೀರಿನಲ್ಲಿ ಸ್ನಾನ ಮಾಡುವುದರಿಂದ ದೇಹ ಶುದ್ಧವಾಗುತ್ತದೆ; ಆದರೆ ಭಗವದ್ಗೀತೆಯ ಅಮೃತದಲ್ಲಿ ಒಮ್ಮೆ ಸ್ನಾನ ಮಾಡಿದರೆ, ಸಂಸಾರದ ಎಲ್ಲಾ ಮಲಿನತೆ ಸಂಪೂರ್ಣವಾಗಿ ನಾಶವಾಗುತ್ತದೆ.

ಇಂಥ ಅದ್ಭುತ ಧರ್ಮಗ್ರಂಥಗಳನ್ನು ನಮ್ಮ ಹಿರಿಯರು ನಮಗಾಗಿ ನೀಡಿಹೋಗಿದ್ದಾರೆ. ಭಾರತೀಯ ಸನಾತನ ಧರ್ಮದ ಬೇರುಗಳಾದ ಈ ಮಹಾಗ್ರಂಥಗಳಲ್ಲಿ ಜೀವನಕ್ಕೆ ಬೇಕಾದ ಮುಕ್ತಿಮಾರ್ಗ, ಮೌಲ್ಯಗಳು, ಕಷ್ಟಕ್ಕೆ ಬೇಕಾದ ಸಾಂತ್ವನ, ಮನಸ್ಸಿಗೆ ಬೇಕಾದ ನೆಮ್ಮದಿ-ಆತ್ಮವಿಶ್ವಾಸ ಬದುಕಿಗೆ ಬೇಕಾದ ಭರವಸೆ ಎಲ್ಲವೂ ಹಂತಹಂತವಾಗಿ ನಮಗೆ ದಕ್ಕುತ್ತಾ ಹೋಗುತ್ತವೆ. ಆದ್ದರಿಂದಲೇ ಬಾಲ್ಯದಿಂದಲೇ ನಮ್ಮ ಮಕ್ಕಳಿಗೆ ಇವುಗಳನ್ನು ಪರಿಚಯಿಸುತ್ತಾ, ಇವುಗಳ ವಾಚನ, ವ್ಯಾಖ್ಯಾನ, ಕಥೆ-ಉಪಕಥೆಗಳ ಚರ್ಚೆ ಇವೆಲ್ಲವನ್ನೂ ಮನೆಯಲ್ಲಿ ನಡೆಸುತ್ತಿದ್ದರೆ, ಅವುಗಳ ಸಾರ ತಾನೇತಾನಾಗಿ ಬದುಕಿನಲ್ಲಿ ದಾರಿ ತೋರುತ್ತ ಹೋಗುತ್ತದೆ.

ಇಂಥ ಸತ್ಸಂಪ್ರದಾಯವು ನೂರಾರು ವರ್ಷಗಳಿಂದ ನಡೆದುಕೊಂಡು ಬಂದಿದೆ. ಆದರೆ ಕಳೆದ ಒಂದಷ್ಟು ದಶಕಗಳಿಂದ ನಾವೆಲ್ಲರೂ ಪಾಶ್ಚಾತ್ಯರ ಪ್ರಭಾವದಿಂದ ನಮ್ಮ ಈ ಬೇರುಗಳ ಕೊಂಡಿಗಳನ್ನು ಕಳಚಿಕೊಂಡಿದ್ದೇವೆ. ಆದ್ದರಿಂದಲೇ ಇಂದು ಪ್ರತಿ ಮನೆಯಲ್ಲೂ ಅಸಹನೆ, ಕ್ಲೇಶ, ಮಾನಸಿಕ ಖಿನ್ನತೆ, ತಂದೆ-ಮಕ್ಕಳಲ್ಲಿ ಭಿನ್ನಾಭಿಪ್ರಾಯಗಳು, ಕುಟುಂಬದಲ್ಲಿ ಒಡಕು, ಅಣ್ಣ-ತಮ್ಮಂದಿರು, ಅಕ್ಕ-ತಂಗಿಯರಲ್ಲಿ ವೈಮನುಷ್ಯ, ಇವೆಲ್ಲಕ್ಕಿಂತ ಮಿಗಿಲಾಗಿ ಮನೆಯವರು ಮನೆಯವರನ್ನೇ ಹಾಳುಮಾಡಲು ಸಂಚುಮಾಡುವ ಅತಿರೇಕಗಳನ್ನು ದಿನವೂ ನೋಡುತ್ತಿದ್ದೇವೆ.

'ಮರಳಿ ಮಣ್ಣಿಗೆ' ಎನ್ನುವಂತೆ ಇನ್ನು ಮುಂದಾದರೂ ನಮ್ಮ ಸನಾತನ ಸಂಸ್ಕೃತಿ, ಧರ್ಮ ಇವುಗಳ ಸಾರವನ್ನು ಜನಮಾನಸದಲ್ಲಿ ಮತ್ತೆ ಹರಿಸುವ ಪ್ರಯತ್ನ ಮಾಡುತ್ತಾ ಬದುಕಿಗೆ ಬೇಕಾದ ಜೀವನ ಮೌಲ್ಯಗಳನ್ನು ಮತ್ತೆ ರೂಪಿಸಿಕೊಳ್ಳುವ ಕೆಲಸವನ್ನು ನಾವು ಪ್ರಾಮಾಣಿಕವಾಗಿ ಮಾಡಬೇಕು. ಆಗ ಮಾತ್ರವೇ ಜೀವನಕ್ಕೊಂದು ಅರ್ಥ...

ಒನಕೆ ತೂಬು: ಪುರಾತನ ಭಾರತದ ಜಲವಿಜ್ಞಾನದ ಅದ್ಭುತ

• ಹೊಸ್ಮನೆ ಮುತ್ತು

ನೂರಾರು ವರ್ಷಗಳ ಹಿಂದೆ ನಿರ್ಮಾಣಗೊಂಡ ರಾಜ್ಯದ ಹಲವಾರು ಪುರಾತನ ಕೆರೆಗಳಲ್ಲಿ ಕಲ್ಲಿನ ಚೌಕಟ್ಟಿನ ವಿಶೇಷ ರಚನೆಯೊಂದನ್ನು ಕಾಣಬಹುದು. ಇವು ಕೆರೆಯ ಒಡಲಿನಲ್ಲಿರುವ ನೀರನ್ನು ಅತ್ಯಂತ ಜಾಣ್ಮೆಯಿಂದ ಕೃಷಿ ಭೂಮಿಗೆ ಹರಿಸುವ ಪ್ರಮುಖ ಅಂಗಗಳಾಗಿದ್ದು, ಇವುಗಳನ್ನು 'ಒನಕೆ ತೂಬು' ಎನ್ನಲಾಗುತ್ತದೆ. ಈ ಕಲ್ಲಿನ ತೂಬುಗಳು ನೀರಾವರಿ ವ್ಯವಸ್ಥೆಯಲ್ಲಿನ ಅತ್ಯಂತ ಪ್ರಾಚೀನ ಹಾಗೂ ಪರಿಣಾಮಕಾರಿ ತಂತ್ರಜ್ಞಾನ. ಕೆರೆಯ ಏರಿಯನ್ನು ಕೊರೆಯದೆಯೇ ನೀರನ್ನು ಸುರಕ್ಷಿತವಾಗಿ ಹೊರಬಿಡಲು ಬಳಸುವ ಈ ವ್ಯವಸ್ಥೆಯು ಸಿವಿಲ್ ಎಂಜಿನಿಯರಿಂಗ್‌ನ ಅದ್ಭುತಗಳಲ್ಲಿ ಒಂದು. ಅತಿ ಹೆಚ್ಚು ಮಳೆ ಬೀಳುವ ಮಲೆನಾಡು ಭಾಗದಲ್ಲಿ ಸಂಗ್ರಹವಾಗುವ ಕೆರೆಯ ನೀರನ್ನು ಅಗತ್ಯವಿದ್ದಾಗ ಗದ್ದೆಗಳಿಗೆ ಹರಿಸಲು ಇಂಥ ಬಲಿಷ್ಠವಾದ ಕಲ್ಲಿನ ಚೌಕಟ್ಟು ಹೊಂದಿರುವ ಗೇಟ್‌ಗಳು (Sluice gates) ಬಳಕೆಯಾಗುತ್ತಿದ್ದವು. ಇವುಗಳ ವಿನ್ಯಾಸ ಮತ್ತು ನೀರಿನ ಒತ್ತಡವನ್ನು ನಿಭಾಯಿಸುವ ರೀತಿ ಇಂದಿಗೂ ಕುತೂಹಲಕಾರಿ ಸಂಗತಿಯಾಗಿದೆ.

ರಚನೆ ಮತ್ತು ಕಾರ್ಯವಿಧಾನ: ಕೆರೆಯ ಏರಿಯ ಒಳಭಾಗದಲ್ಲಿ ಒಂದು ಕಲ್ಲಿನ ಮಂಟಪದಂಥ ರಚನೆ ಇರುತ್ತದೆ. ಇಲ್ಲಿರುವ ಕಂಬಗಳ ನಡುವೆ, ಮೇಲೆ ಮತ್ತು ಕೆಳಕ್ಕೆ ರಂಧ್ರಗಳಿರುವ ಕಲ್ಲಿನ ಪಟ್ಟಿಗಳನ್ನು ಅಳವಡಿಸಲಾಗಿರುತ್ತದೆ. ಈ ರಂಧ್ರಕ್ಕೆ ಸರಿಯಾಗಿ ಹೊಂದುವಂತೆ, ತುದಿಯಲ್ಲಿ ಬಿರಟೆಯಂಥ ಆಕಾರವಿರುವ ಉದ್ದನೆಯ ಮರದ ಕಂಬವೊಂದನ್ನು (ಒನಕೆ ಮಾದರಿಯ ಕಂಬ) ಮೇಲಿಂದ ಇಳಿಸಲಾಗಿರುತ್ತದೆ. ನೀರು ಬೇಕಾದಾಗ ಈ ಕಂಬವನ್ನು ಮೇಲೆ ತ್ತಲಾಗುತ್ತಿತ್ತು. ಆಗ ನೀರು ಕೆರೆಯ ಕೆಳಭಾಗದ ಕಾಲುವೆಗಳ ಮೂಲಕ ಗದ್ದೆ-ತೋಟಗಳಿಗೆ ಹರಿಯುತ್ತಿತ್ತು. ನೀರನ್ನು ನಿಲ್ಲಿಸಬೇಕಾದಾಗ ಕಂಬವನ್ನು ರಂಧ್ರದೊಳಗೆ ಭದ್ರವಾಗಿ ಇರಿಸಲಾಗುತ್ತಿತ್ತು. ಇದರ ನಿರ್ವಹಣೆಯನ್ನು 'ನೀರುಗಂಟಿ' ಎನ್ನುವವರು ಮಾಡುತ್ತಿದ್ದರು. ಅವರು ಮಳೆ ಮತ್ತು ಬೆಳೆಯ ಅಗತ್ಯಕ್ಕೆ ಅನುಗುಣವಾಗಿ ನೀರನ್ನು ಹರಿಸುವ ತೀರ್ಮಾನ ಕೈಗೊಳ್ಳುತ್ತಿದ್ದರು. ಇದು ಅಂದಿನ ಕಾಲದ ಸಮುದಾಯ ಆಧಾರಿತ ಜಲ ನಿರ್ವಹಣೆ ಹಾಗೂ ನೀರಾವರಿ ವ್ಯವಸ್ಥೆಯ ಮೇಲಿದ್ದ ಕಾಳಜಿಗೆ ಸಾಕ್ಷಿಯಾಗಿದೆ.

ಇಂದಿನ ಸಿಮೆಂಟ್ ಮತ್ತು ಕಬ್ಬಿಣದ ಗೇಟುಗಳು 40-50 ವರ್ಷಗಳಲ್ಲೇ ತುಕ್ಕು ಹಿಡಿದು ಹಾಳಾಗುತ್ತವೆ. ಆದರೆ, ನೂರಾರು ವರ್ಷಗಳ ಹಿಂದೆ ಕಲ್ಲಿನಿಂದ ನಿರ್ಮಿಸಿದ ಈ ತೂಬುಗಳು ಇಂದಿಗೂ ಭದ್ರವಾಗಿದ್ದು ಸುಗಮವಾಗಿ ಕಾರ್ಯನಿರ್ವಹಿಸುತ್ತಿವೆ. ಈ ತೂಬುಗಳು ಕೇವಲ ಎಂಜಿನಿಯರಿಂಗ್ ಮಾದರಿಗಳಲ್ಲದೆ, ಕಲಾತ್ಮಕವಾಗಿಯೂ ಮೌಲ್ಯಯುತವಾಗಿವೆ. ಇವುಗಳ ಮೇಲೆ ಜಲದೇವತೆಗಳ ಸುಂದರ ಕೆತ್ತನೆಗಳನ್ನು ನಾವು ಕಾಣಬಹುದು. ಇದು ನಮ್ಮ ಪೂರ್ವಜರ ತಾಂತ್ರಿಕ ನೈಪುಣ್ಯ ಮತ್ತು ಪ್ರಕೃತಿಯ ಮೇಲಿದ್ದ ಭಕ್ತಿಗೆ ಹಿಡಿದ ಕೈಗನ್ನಡಿಯಾಗಿದೆ.

ನೀವೂ ಬರೆಯಬಹುದು

ನಮ್ಮ ವಿಳಾಸ
ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098

e-mail: vishwavanimagazine@gmail.com